ಗುರುವಾರ, ಏಪ್ರಿಲ್ 9, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಆಯುಷ್ ಶುಭಾರಂಭ

ಭಾರತದ ಆಯುಷ್ ಶೆಟ್ಟಿ ಅವರು ಬುಧವಾರ ಆರಂಭವಾದ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಆತಿಥೇಯ ಚೀನಾದ ಲಿನ್ ಶಿ ಫೆಂಗ್ ಅವರಿಗೆ ಆಘಾತ ನೀಡಿದರು

ಯುದ್ಧಕ್ಕೆ ವಿರೋಧ

ಸಮಾನ ಮನಸ್ಕರ ವೇದಿಕೆ ಸದಸ್ಯರು ಯುದ್ಧ ನಿಲ್ಲಿಸಿ' ಶಾಂತಿ ಸ್ಥಾಪಿಸಿ–ಭೂಮಿ ರಕ್ಷಿಸಿ ಎಂದು ಆಗ್ರಹಿಸಿ ಬೆಂಗಳೂರಿನ ಪುರಭವನದ ಮುಂದೆ ಬುಧವಾರ ಶಾಂತಿಯುತ ಪ್ರತಿಭಟನೆ ಮಾಡಿದರು



2.5 acres dedicated to luxurious amenities, featuring a 25,000 sq. ft. clubhouse designed for an elevated lifestyle.

Book in your **Wife's name**
Save ₹12 Lakhs
~~₹53.75 Lakhs~~
41.75 (2BHK) Lakhs
All Inclusive (only GST extra)
₹6424 per sq ft.

Book in your **Daughter's name**
Save ₹11 Lakhs
~~₹53.75 Lakhs~~
42.75 (2BHK) Lakhs
All Inclusive (only GST extra)
₹6576 per sq ft.

Book in your **Mother's name**
Save ₹10 Lakhs
~~₹53.75 Lakhs~~
43.75 (2BHK) Lakhs
All Inclusive (only GST extra)
₹6730 per sq ft.





Plan 1
Pay 50% and own the flat with ready possession and pay the balance in 72 interest free monthly installments
- No bank loan needed
- Save 10 lakhs on interest
- No age limit

Plan 2
Smart Finance Option
20% Down payment
80% Home Loan from Leading Banks

Ready for Handover*
Move in today. Grow tomorrow.
High appreciation. Strong rental returns.

Location advantages (Walkable distance from following)
- Akash Medical College and International First Grade College of Management
- Multi Speciality Hospital

Just 7 Min from the International Airport

Contact: - 080-35492970

Book a FREE Site Visit | Reserve Your Dream Home Today

Limited Units. Assured Delivery. Prime Location.

Project office: Bychapura, Behind Akash International School, Devanahalli Town, Bangalore.

For Interiors I Partial OC to be Obtained*

www.skyviewdevanahalli.com

Developed and Marketed by
MAHAKARA DEVELOPERS
AGARWAL GROUP
REAL ESTATE & CONSTRUCTION

Scan for project location

2.5 acres dedicated to luxurious amenities, featuring a 25,000 sq. ft. clubhouse designed for an elevated lifestyle.

Book in your **Wife's name**	Book in your **Daughter's name**	Book in your **Mother's name**
Save ₹12 Lakhs	Save ₹11 Lakhs	Save ₹10 Lakhs
~~₹53.75 Lakhs~~	~~₹53.75 Lakhs~~	~~₹53.75 Lakhs~~
41.75 Lakhs (2BHK)	**42.75** Lakhs (2BHK)	**43.75** Lakhs (2BHK)
All Inclusive (only GST extra)	All Inclusive (only GST extra)	All Inclusive (only GST extra)
₹6424 per sq ft.	**₹6576 per sq ft.**	**₹6730 per sq ft.**

Ready for Handover*

Move in today. Grow tomorrow.
High appreciation. Strong rental returns.

Just 7 Min from the Kempegowda International Airport

Location advantages
Walkable distance from following:

- Multi Speciality Hospital
- Akash Medical College and International First Grade College of Management

Plan 1

Pay 50% and own the flat with ready possession and pay the balance in 72 interest free monthly installments

- ✓ No bank loan needed
- ✓ Save 10 lakhs on interest
- ✓ No age limit

Plan 2

Smart Finance Option

20% Down payment

80% Home Loan from Leading Banks

Contact: - 080-35492970

Book a FREE Site Visit | Reserve Your Dream Home Today

Limited Units. Assured Delivery. Prime Location.

Project office: Bychapura, Behind Akash International School, Devanahalli Town, Bangalore.

For Interiors I Partial OC to be Obtained*

www.skyviewdevanahalli.com

T&C apply. Price applicable on select inventory. Images are for representation purposes only.

Developed and Marketed by

MAHAKARA DEVELOPERS
AGARWAL GROUP

Scan for project location

prajavani.net prajavani
ಗುರುವಾರ, ಏಪ್ರಿಲ್ 9, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 98 | ಪುಟ 16
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಶುಭಮನ್ ಅಬ್ಬರ
ನವದೆಹಲಿಯಲ್ಲಿ ಬುಧವಾರ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್ (70; 45ಎಸೆತ, 4X4, 6X5) ಡೆಲ್ಲಿ ಕ್ಯಾಪಿಟಲ್ಸ್ ಎದುರು ಅರ್ಧಶತಕ ದಾಖಲಿಸಿದರು

ಸೆನ್ಸೆಕ್ಸ್ 77,562 | ನಿಫ್ಟಿ 23,997 | $/₹ 92.54 | ಚಿನ್ನ (Std. 10g) ₹1,58,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,57,500 (ಬೆಂಗಳೂರು)

‘ಮೂಢನಂಬಿಕೆ ನಿರ್ಧರಿಸುವ ಹಕ್ಕಿದೆ’

ನವದೆಹಲಿ: ಧಾರ್ಮಿಕ ಆಚರಣೆಯು ಮೂಢನಂಬಿಕೆಯೋ, ಅಲ್ಲವೋ ಎಂಬುದನ್ನು ಪರಿಗಣಿಸುವ ಹಕ್ಕನ್ನು ತಾನು ಹೊಂದಿರುವುದಾಗಿ ಹೇಳಿದ ಸುಪ್ರೀಂ ಕೋರ್ಟ್, ‘ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಾಲಯದ ಭಕ್ತ-ರಲ್ಲದವರು ದೇಗುಲದ ಪದ್ಧತಿಯನ್ನು ಪ್ರಶ್ನಿಸಿ ಪಿಐಎಲ್ ಸಲ್ಲಿಸಬಹುದೇ’ ಎಂದು ಬುಧವಾರ ಪ್ರಶ್ನಿಸಿದೆ. 6

ರಸಗೊಬ್ಬರ ಸಬ್ಸಿಡಿಗೆ ₹41,534 ಕೋಟಿ

ನವದೆಹಲಿ: ಮುಂಗಾರು ಹಂಗಾಮಿನಲ್ಲಿ ಫಾಸ್ಫೇಟ್ ಹಾಗೂ ಪೊಟ್ಯಾಸಿಕ್ ರಸಗೊಬ್ಬರಗಳಿಗೆ ₹41,534 ಕೋಟಿ ಸಬ್ಸಿಡಿ ನೀಡಲು ಕೇಂದ್ರ ಬುಧವಾರ ಅನುಮೋದನೆ ನೀಡಿದೆ. 10

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕದನ ವಿರಾಮ: ತಾತ್ಕಾಲಿಕ ಸಮಾಧಾನ

ಪಾಕ್ ಮಧ್ಯಸ್ಥಿಕೆಯಲ್ಲಿ ಅಮೆರಿಕ–ಇಸ್ರೇಲ್, ಇರಾನ್ ಸಮ್ಮತಿ ● ಲೆಬನಾನ್ ಮೇಲೆ ನಿಲ್ಲದ ದಾಳಿ ● ನಾಳೆ ಇಸ್ಲಾಮಾಬಾದ್‌ನಲ್ಲಿ ಸಭೆ

ದುಬೈ/ವಾಷಿಂಗ್ಟನ್ (ಎಪಿ/ಪಿಟಿಐ): ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಎರಡು ವಾರಗಳ ತಾತ್ಕಾಲಿಕ ಕದನ ವಿರಾಮಕ್ಕೆ ಬುಧವಾರ ಸಮ್ಮತಿಸಿವೆ. ಇದರೊಂದಿಗೆ ಕಳೆದ 40 ದಿನಗಳಿಂದ ನಡೆಯುತ್ತಿರುವ ಯುದ್ಧದಿಂದ ನಲುಗಿದ್ದ ಪಶ್ಚಿಮ ಏಷ್ಯಾ ಸೇರಿ ವಿಶ್ವವೇ ಸದ್ಯದ ಮಟ್ಟಿಗೆ ನಿಟ್ಟುಸಿರು ಬಿಡುವಂತಾಗಿದೆ.

ಈ ತಾತ್ಕಾಲಿಕ ಕದನ ವಿರಾಮಕ್ಕೆ ಸಂಬಂಧಿಸಿ 10 ಅಂಶಗಳನ್ನು ಒಳಗೊಂಡ ಪ್ರಸ್ತಾವ ಮುಂದಿಟ್ಟಿರುವ ಇರಾನ್, ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಶುಕ್ರವಾರ ನಡೆಯಲಿರುವ ಸಭೆಯಲ್ಲಿ ಈ ಕುರಿತು ವಿಸ್ತೃತ ಮಾತುಕತೆ ನಡೆಸುವುದಾಗಿ ಹೇಳಿದೆ.

ಒಪ್ಪಂದದ ಘೋಷಣೆ ಹೊರಬಿದ್ದ ಮೇಲೆ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ಕಂಡುಬಂದ ಸಂಭ್ರಮ —ಪಿಟಿಐ ಚಿತ್ರ

‘ಇರಾನ್ ಮುಂದಿಟ್ಟಿರುವ ಷರತ್ತುಗಳು ‘ಕಾರ್ಯಸಾಧ್ಯವಾದವುಗಳು’ ಎಂದು ಈ ಮೊದಲು ಹೇಳಿದ್ದ ಟ್ರಂಪ್ ಈಗ ತಮ್ಮ ನಿಲುವು ಬದಲಾಯಿಸಿದ್ದಾರೆ. ‘ಈ ಅಂಶಗಳ ಕುರಿತು ವಿಸ್ತೃತವಾದ ವಿವರಣೆ ನೀಡದಿದ್ದಲ್ಲಿ ಕದನ ವಿರಾಮ ಕುರಿತ ಇರಾನ್ ಯೋಜನೆಯೇ ವಂಚನೆ ಎನಿಸಲಿದೆ’ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಈ ಕುರಿತು ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ‘ಟ್ರೂಥ್ ಸೋಷಿಯಲ್’ನಲ್ಲಿ ಬರೆದುಕೊಂಡಿದ್ದಾರೆ. ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸಿರುವುದನ್ನು ಖಚಿತಪಡಿಸಿ ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಗ್ಚಿ ನೀಡಿರುವ ಹೇಳಿಕೆಯನ್ನು ಕೂಡ ಟ್ರಂಪ್ ಹಂಚಿಕೊಂಡಿದ್ದಾರೆ.

ಇರಾನ್ ಕೂಡ ಇದಕ್ಕೆ ಪ್ರತಿಕ್ರಿಯಿಸಿದೆ. ‘ಅಮೆರಿಕ ಮುಂದಿಟ್ಟಿರುವ ಎರಡು ವಾರಗಳ ಕದನ ವಿರಾಮ ಪ್ರಸ್ತಾವವನ್ನು ಒಪ್ಪಿಕೊಂಡಿದ್ದೇವೆ. ಇಸ್ಲಾಮಾಬಾದ್‌ನಲ್ಲಿ ನಡೆಯುವ ಸಭೆಯಲ್ಲಿ ಅಮೆರಿಕದೊಂದಿಗೆ ಮಾತುಕತೆ ನಡೆಸಲಾಗುವುದು’ ಎಂದು ಇರಾನ್‌ನ ರಾಷ್ಟ್ರೀಯ ಭದ್ರತಾ ಪರಿಷತ್ತು ಟೆಹರಾನ್‌ನಲ್ಲಿ ಪ್ರತಿಕ್ರಿಯಿಸಿದೆ. 10

ಅಮೆರಿಕದ ನಿಲುವೇನು?

- ಅಣ್ವಸ್ತ್ರ ತಯಾರಿಕೆಗೆ ಬೇಕಾದ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಇರಾನ್ ತಾನಾಗಿಯೇ ಅಮೆರಿಕಕ್ಕೆ ಒಪ್ಪಿಸಬೇಕು. ಶುದ್ಧಗೊಳಿಸಿದ ಯುರೇನಿಯಂ ಅನ್ನು ಒಪ್ಪಿಸದಿದ್ದಲ್ಲಿ ಇರಾನ್‌ನ ಪರಮಾಣು ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗುವುದು
- ಕದನ ವಿರಾಮವು ತಾತ್ಕಾಲಿಕ ತಡೆಯಷ್ಟೆ. ದಾಳಿ ನಡೆಸಲು ಅಮೆರಿಕ ಪಡೆಗಳು ಸದಾ ಸನ್ನದ್ಧವಾಗಿವೆ. ಅಗತ್ಯ ಎನಿಸಿದರೆ ತಕ್ಷಣ ಇರಾನ್ ಮೇಲೆ ದಾಳಿ ಆರಂಭಿಸಲಾಗುವುದು
- ಇರಾನ್ ಪ್ರಕಟಿಸಿರುವ ಕದನ ವಿರಾಮ ಪ್ರಸ್ತಾವವು ಯುದ್ಧ ನಿಲ್ಲಿಸುವುದಕ್ಕೆ ಅಮೆರಿಕ ವಿಧಿಸಿದ್ದ ಷರತ್ತುಗಳಿಗಿಂತ ಭಿನ್ನ. ಮಾಧ್ಯಮಗಳಲ್ಲಿ ಪ್ರಕಟಿಸಿರುವ ದಾಖಲೆಗಳೇ ಕದನ ವಿರಾಮಕ್ಕೆ ಸಂಬಂಧಿಸಿದ ಕಾರ್ಯಕಾರಿ ಚೌಕಟ್ಟು ಅಲ್ಲ

ಸಂಘರ್ಷಪೀಡಿತ ಪಶ್ಚಿಮ ಏಷ್ಯಾ

ಇರಾನ್‌ನ ಪ್ರಸ್ತಾವಗಳು

1. ಇರಾನ್ ಮೇಲೆ ದಾಳಿ ಮಾಡುವುದಿಲ್ಲ ಎಂಬ ಬಗ್ಗೆ ಅಮೆರಿಕ ತಾತ್ವಿಕವಾಗಿ ಒಪ್ಪಿಗೆ ಸೂಚಿಸಬೇಕು ಹಾಗೂ ಬದ್ಧತೆ ಪ್ರದರ್ಶಿಸಬೇಕು
2. ಹೊರ್ಮುಜ್ ಜಲಸಂಧಿ ಮೇಲೆ ಇರಾನ್ ನಿಯಂತ್ರಣ ಮುಂದುವರಿಯಲಿದೆ
3. ಯುರೇನಿಯಂ ಸಮೃದ್ಧಗೊಳಿಸುವಿಕೆ ಕುರಿತು ಇರಾನ್ ಹೊಂದಿರುವ ಹಕ್ಕನ್ನು ಒಪ್ಪಿಕೊಳ್ಳಬೇಕು
4. ಇರಾನ್ ಜೊತೆಗಿನ ನೇರ ವ್ಯವಹಾರದ ಮೇಲೆ ಅಮೆರಿಕ ವಿಧಿಸಿರುವ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕಬೇಕು
5. ಇರಾನ್ ಜೊತೆಗಿನ ಪರೋಕ್ಷ ವ್ಯವಹಾರದ ಮೇಲೆ ಅಮೆರಿಕ ವಿಧಿಸಿರುವ ಎಲ್ಲ ನಿರ್ಬಂಧಗಳನ್ನು ತೆರವು ಮಾಡಬೇಕು 10

ನಾವು ಅಂದುಕೊಂಡಿದ್ದ ಗುರಿಯನ್ನು ಸಾಧಿಸಿದ್ದೇವೆ. ಇರಾನ್ ಮತ್ತು ಪಶ್ಚಿಮ ಏಷ್ಯಾದಲ್ಲಿ ಶಾಶ್ವತವಾಗಿ ಶಾಂತಿ ನೆಲಸಬೇಕು ಎಂಬುದು ನಮ್ಮ ಆಶಯ. ಕದನ ವಿರಾಮಕ್ಕೆ ಅಮೆರಿಕ ಒಪ್ಪಲು ಇದೇ ಮುಖ್ಯ ಕಾರಣ
ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಕದನ ವಿರಾಮ ಸ್ವಾಗತಾರ್ಹ. ಇನ್ನು ಮುಂದೆ ಇರಾನ್ ಅಣ್ವಸ್ತ್ರ ಅಥವಾ ಕ್ಷಿಪಣಿ ದಾಳಿಯ ಬೆದರಿಕೆ ಒಡ್ಡುವುದಿಲ್ಲ ಎಂಬುದನ್ನು ಖಾತ್ರಿಪಡಿಸುವ ಅಮೆರಿಕದ ಯತ್ನ ಬೆಂಬಲಿಸುತ್ತೇವೆ
ಇಸ್ರೇಲ್

ಪಾಕಿಸ್ತಾನ ನಿರ್ಣಾಯಕ ಪಾತ್ರ

- ಅಮೆರಿಕ ಹಾಗೂ ಇರಾನ್ ಕದನ ವಿರಾಮಕ್ಕೆ ಒಪ್ಪಿಗೆ ನೀಡಿದ್ದಾಗಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ‘ಎಕ್ಸ್’ನಲ್ಲಿ ಘೋಷಣೆ
- ಇರಾನ್ ಮತ್ತು ಅಮೆರಿಕ ಪ್ರಸ್ತಾವಗಳ ಉಲ್ಲೇಖ ಮಾಡದ ಶರೀಫ್
- ಕದನ ವಿರಾಮಕ್ಕೆ ಇಸ್ರೇಲ್ ಸಮ್ಮತಿಸಿರುವ ಬಗ್ಗೆಯೂ ಉಲ್ಲೇಖಿಸದ ಪಾಕಿಸ್ತಾನ ಪ್ರಧಾನಿ
- ಮಾತುಕತೆ ನಡೆಸುವುದಕ್ಕಾಗಿ ಇಸ್ಲಾಮಾಬಾದ್‌ನಲ್ಲಿ ಶುಕ್ರವಾರ ಆಯೋಜಿಸಿರುವ ಸಭೆಯಲ್ಲಿ ಪಾಲ್ಗೊಳ್ಳುವಂತೆ ಅಮೆರಿಕ ಹಾಗೂ ಇರಾನ್ ನಿಯೋಗಗಳಿಗೆ ಶರೀಫ್ ಆಹ್ವಾನ

ಪರಿಣಾಮಗಳು, ನಿರೀಕ್ಷೆಗಳು

- ಕದನ ವಿರಾಮದ ಹಿನ್ನೆಲೆಯಲ್ಲಿ ಭಾರತಕ್ಕೆ ಇಂಧನ ಪೂರೈಕೆ ಸ್ಥಿತಿ ಸುಧಾರಿಸಬಹುದು ಎಂದು ನಿರೀಕ್ಷಿಸಲಾಗಿದೆ
- ರಸಗೊಬ್ಬರ ಉತ್ಪಾದನಾ ಘಟಕಗಳಿಗೆ ಅನಿಲ ಪೂರೈಕೆಯನ್ನು ಬುಧವಾರದಿಂದ ಅವುಗಳ ಬೇಡಿಕೆಯ ಶೇ 95ರಷ್ಟು ಮಟ್ಟಕ್ಕೆ ಹೆಚ್ಚಿಸಲಾಗಿದೆ
- ಬ್ರೆಂಟ್ ಕಚ್ಚಾ ತೈಲದ ಬೆಲೆಯು ಮಾರುಕಟ್ಟೆಯಲ್ಲಿ ಶೇ 15ರಷ್ಟು ಇಳಿಕೆ ಆಗಿದೆ
- ಹೊರ್ಮುಜ್ ಜಲಸಂಧಿಯ ಮೂಲಕ ಹಡಗು ಸಂಚಾರ ಸುಗಮವಾಗಿ ಆಗುತ್ತದೆ, ಕೊಲ್ಲಿ ರಾಷ್ಟ್ರಗಳಿಗೆ ರಫ್ತು ಚಟುವಟಿಕೆ ಮತ್ತೆ ಸಹಜ ಸ್ಥಿತಿಗೆ ಬರಬಹುದು

ಮತ್ತೆ ಹೊರ್ಮುಜ್ ಮುಚ್ಚಿದ ಇರಾನ್

ಟೆಹರಾನ್ (ಎಪಿ): ತಾತ್ಕಾಲಿಕ ಕದನ ವಿರಾಮದ ಬೆನ್ನಲ್ಲೇ, ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ ಪ್ರತಿಯಾಗಿ ಇರಾನ್ ಬುಧವಾರ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದೆ. ಜಲಸಂಧಿಯನ್ನು ತಕ್ಷಣವೇ ಹಡಗುಗಳ ಸಾಗಾಟಕ್ಕೆ ಮುಕ್ತಗೊಳಿಸಬೇಕು ಎಂದು ಅಮೆರಿಕ ಒತ್ತಾಯಿಸಿದೆ.

ಜಲಸಂಧಿಯನ್ನು ಮತ್ತೆ ಮುಚ್ಚಿರುವ ಇರಾನ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ನಡೆಯು, ತಾತ್ಕಾಲಿಕ ಕದನ ವಿರಾಮ ಮುಂದುವರಿಯುತ್ತದೆಯೇ ಎಂಬ ಅನುಮಾನ ಹುಟ್ಟುಹಾಕಿದೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ‘ಈ ಒಪ್ಪಂದವು ಲೆಬನಾನ್ ಅನ್ನು ಒಳಗೊಂಡಿಲ್ಲ’ ಎಂದು ಹೇಳಿದ್ದಾರೆ. ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಲೆಬನಾನ್ ಮೇಲೆ ಇಸ್ರೇಲ್ ದಾಳಿ ತೀವ್ರಗೊಳಿಸಿದ್ದು 112 ಜನರು ಮೃತಪಟ್ಟಿದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ. 10

ಕೆಎಸ್‌ಒಯು ವಿರುದ್ಧ ಕ್ರಮ ರಾಜ್ಯಪಾಲರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) ಕುಲಪತಿ ವಿರುದ್ಧ ಕ್ರಮ ಹಾಗೂ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ ರಾಜ್ಯ ಸರ್ಕಾರದ ನಿರ್ಧಾರಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರಿಗೆ ರಾಜ್ಯಪಾಲರು ಪತ್ರ ಬರೆದಿದ್ದಾರೆ. ಮಾರ್ಚ್ 24ರಂದು ಕೆಎಸ್‌ಒಯು ಖಾತೆಗಳನ್ನು ಸ್ಥಗಿತಗೊಳಿಸಲು ಕೆಲ ಬ್ಯಾಂಕ್‌ಗಳಿಗೆ ಕಳುಹಿಸಿದ್ದ ಪತ್ರವನ್ನು ತಕ್ಷಣ ಹಿಂಪಡೆಯಬೇಕು. ವಿಶ್ವವಿದ್ಯಾಲಯದ ಕಾನೂನುಬದ್ಧ ಕಾರ್ಯನಿರ್ವಹಣೆಗೆ ಅಡ್ಡಿಯಾಗುವ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಸೂಚಿಸಿದ್ದಾರೆ.

ವಿಶ್ವವಿದ್ಯಾಲಯದ ಅಕ್ರಮಗಳ ಬಗ್ಗೆ ಮಾಹಿತಿ ಇದ್ದರೆ ಕಾನೂನು ಪ್ರಕಾರ ಕ್ರಮಕೈಗೊಳ್ಳಬೇಕು. ಕಾನೂನುಬದ್ಧ ವ್ಯವಸ್ಥೆ ಮತ್ತು ಸಂವಿಧಾನಾತ್ಮಕ ಮಿತಿಗಳ ಒಳಗೆ ಕಾರ್ಯನಿರ್ವಹಿಸಬೇಕು. ವಿಶ್ವವಿದ್ಯಾಲಯ ಮತ್ತು ಕುಲಪತಿ ಮೇಲೆ ಪರೋಕ್ಷ ಒತ್ತಡ ಹೇರುವ ಪ್ರಯತ್ನ ಮಾಡಬಾರದು. ಇಂತಹ ಕ್ರಮಗಳಿಂದ ವಿಶ್ವವಿದ್ಯಾಲಯ ಹಾಗೂ ನೌಕರರ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ. ಇದೇ ಧೋರಣೆ ಮುಂದುವರಿದರೆ ಉದ್ದೇಶಪೂರ್ವಕ ಹಸ್ತಕ್ಷೇಪ ಎಂದು ಪರಿಗಣಿಸಲಾಗುವುದು. ಈ ಕುರಿತು ಕೈಗೊಂಡ ಕ್ರಮಗಳ ವರದಿ ಸಲ್ಲಿಸಬೇಕು ಎಂದು ಪತ್ರದಲ್ಲಿ ಹೇಳಿದ್ದಾರೆ.

ಮಾರ್ಚ್ 25ರಿಂದ 27ರವರೆಗೆ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಕೆಎಸ್‌ಒಯು ಆವರಣದಲ್ಲಿ ‘ಏಕಾತ್ಮ ಮಾನವ ದರ್ಶನ’ ಎಂಬ ಅಂತರ ರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ ನಡೆದಿತ್ತು. ರಾಜ್ಯಪಾಲರು ಹಾಗೂ ಕೇಂದ್ರ ಸಚಿವರನ್ನು ಆಹ್ವಾನಿಸಲಾಗಿತ್ತು. ಆದರೆ, ಉನ್ನತ ಶಿಕ್ಷಣ ಸಚಿವರನ್ನು ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿದ ಕಾರಣಕ್ಕೆ ಕಾರ್ಯಕ್ರಮ ರದ್ದುಗೊಳಿಸಲು ರಾಜ್ಯ ಸರ್ಕಾರ ಆದೇಶಿಸಿತ್ತು. ಅದನ್ನು ಧಿಕ್ಕರಿಸಿದ್ದ ಕುಲಪತಿ ಶರಣಪ್ಪ ಹಲಸೆ ಕಾರ್ಯಕ್ರಮಕ್ಕೆ ಸಹಕಾರ ನೀಡಿದ್ದರು. ನಂತರ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ‘ವಿಶ್ವವಿದ್ಯಾಲಯವು ಸ್ಥಳವನ್ನು ಬಾಡಿಗೆ ಆಧಾರದಲ್ಲಿ ನೀಡಿದೆ’ ಎಂದು ಕುಲಪತಿ ಉತ್ತರ ನೀಡಿದ್ದರು. ನಂತರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಇಲಾಖೆ ಪತ್ರ ಬರೆದಿತ್ತು.

ಕಾಯ್ದೆಗೆ ತಿದ್ದುಪಡಿ: ಸುಧಾಕರ್

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ತಿದ್ದುಪಡಿ ತಂದು ಕೆಎಸ್‌ಒಯು ಸೇರಿದಂತೆ ಎಲ್ಲ ವಿಶ್ವವಿದ್ಯಾಲಯಗಳಿಗೂ ಒಂದೇ ಮಾದರಿ ನಿಯಮ ಅನ್ವಯಿಸುವ ಪ್ರಯತ್ನ ನಡೆದಿದೆ ಎಂದು ಉನ್ನತ ಶಿಕ್ಷಣ ಸಚಿವ ಸುಧಾಕರ್ ಹೇಳಿದರು.

ಕೆಎಸ್‌ಒಯು ಸೇರಿದಂತೆ ಕೆಲವು ವಿಶ್ವವಿದ್ಯಾಲಯಗಳಿಗೆ ಪ್ರತ್ಯೇಕ ಕಾಯ್ದೆಗಳಿದ್ದು, ಎಲ್ಲವನ್ನೂ ಒಂದೇ ಕಾಯ್ದೆಯಡಿ ತರಲು ತಿದ್ದುಪಡಿ ತರಲಾಗುತ್ತಿದೆ. ಮುಕ್ತ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕೆಎಎಸ್ ಅಧಿಕಾರಿ ಎಸ್.ಕುಸುಮಾ ಕುಮಾರಿ ಅವರನ್ನು ನೇಮಿಸಿದ್ದ ಆದೇಶವನ್ನು ತಾಂತ್ರಿಕ ಕಾರಣಗಳಿಂದ ಹಿಂಪಡೆಯಲಾಗಿದೆ ಎಂದರು.

ದ್ವಿತೀಯ ಪಿಯು ಇಂದು ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶ ಏ.9ರ ಗುರುವಾರ ಮಧ್ಯಾಹ್ನ 3ಕ್ಕೆ ಪ್ರಕಟವಾಗಲಿದೆ. ಇದೇ ಮೊದಲ ಬಾರಿ ಫಲಿತಾಂಶದ ಜತೆಗೇ ಅಂಕಪಟ್ಟಿಯೂ ಲಭ್ಯವಿದ್ದು, ಡಿಜಿಲಾಕರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಫಲಿತಾಂಶವನ್ನು https://karresults.nic.in ಜಾಲತಾಣ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್ ಮೂಲಕ ಪಡೆಯಬಹುದು. ವಿದ್ಯಾರ್ಥಿಗಳ ನೋಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸ್ ಆ್ಯಪ್, ಎಸ್‌ಎಂಎಸ್ ಮೂಲಕವೂ ಫಲಿತಾಂಶವನ್ನು ರವಾನಿಸಲಾಗುವುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅಧ್ಯಕ್ಷ ಪ್ರಕಾಶ್ ನಿಟ್ಟಾಲಿ ಮಾಹಿತಿ ನೀಡಿದ್ದಾರೆ.

2025–26ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆ–1 ಫೆ.28ರಿಂದ ಆರಂಭವಾಗಿ ಮಾರ್ಚ್ 17ರವರೆಗೆ 1,217 ಪರೀಕ್ಷಾ ಕೇಂದ್ರಗಳಲ್ಲಿ ನಡೆದಿದ್ದವು. 5,174 ಕಾಲೇಜುಗಳ 7.10 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದರು. ವಿಜ್ಞಾನ ವಿಷಯದಲ್ಲಿ 2.92 ಲಕ್ಷ, ವಾಣಿಜ್ಯದಲ್ಲಿ 2.11 ಲಕ್ಷ ಹಾಗೂ ಕಲಾ ವಿಭಾಗದಲ್ಲಿ 1.42 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದರು.

‘ಸಭೆಯಿಂದ ತೊಲಗಿ ಎಂದ ಸಿಇಸಿ’ – ಟಿಎಂಸಿ ಆಕ್ರೋಶ; ಕೂಗಾಡಿದ ನಾಯಕರು– ಆಯೋಗ

ಟಿಎಂಸಿ– ಆಯೋಗ ವಾಗ್ವಾದ

ಎಸ್‌ಐಆರ್

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಕುರಿತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಿಯೋಗ ಮತ್ತು ಚುನಾವಣಾ ಆಯೋಗದ ಜತೆ ಬುಧವಾರ ನಡೆದ ಸಭೆಯು ತೀವ್ರ ವಾಗ್ವಾದದೊಂದಿಗೆ ಕೊನೆಗೊಂಡಿತು.

‘ಮುಖ್ಯ ಚುನಾವಣಾ ಆಯುಕ್ತರು, ಸಭೆಯಿಂದ ತೊಲಗಿ ಎಂದು ಹೇಳಿ ನಮ್ಮ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು’ ಎಂದು ಟಿಎಂಸಿ ಆರೋಪಿಸಿದ್ದರೆ, ‘ಟಿಎಂಸಿ ನಾಯಕರು ಏರಿದ ಧ್ವನಿಯಲ್ಲಿ ಕೂಗಾಡಿದರು’ ಎಂದು ಚುನಾವಣಾ ಆಯೋಗ ದೂರಿದೆ.

ಟಿಎಂಸಿ ನಾಯಕ, ರಾಜ್ಯಸಭಾ ಸದಸ್ಯ ಡೆರಿಕ್ ಓಬ್ರಯಾನ್, ಉಪನಾಯಕಿ ಸಾಗರಿಕಾ ಘೋಷ್, ಸಂಸದರಾದ ಸಾಕೇತ್ ಗೋಖಲೆ, ಮೇನಕಾ ಗುರುಸ್ವಾಮಿ ಅವರನ್ನು ಒಳಗೊಂಡ ನಿಯೋಗವು ಆಯೋಗದ ಪೂರ್ಣ ಪೀಠವನ್ನು ಭೇಟಿ ಮಾಡಿ ಮಾತುಕತೆ ನಡೆಸಿತು.

‘ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬರೆದ ಒಂಬತ್ತು ಪತ್ರಗಳನ್ನು ಸಭೆಯಲ್ಲಿ ಸಿಇಸಿ ಜ್ಞಾನೇಶ್ ಕುಮಾರ್ ಅವರಿಗೆ ಹಸ್ತಾಂತರಿಸಿದ್ದೇವೆ. ಆದರೆ ಅದಕ್ಕೆ ಸ್ವೀಕೃತಿ ನೀಡಲಿಲ್ಲ’ ಎಂದು ಸಭೆಯ ಬಳಿಕ ಓಬ್ರಯಾನ್ ಅವರು ಸುದ್ದಿಗಾರರಿಗೆ ತಿಳಿಸಿದರು.

‘ಚುನಾವಣಾ ಅಧಿಕಾರಿಗಳಿಗೆ ಬಿಜೆಪಿ ಸಖ್ಯ’: ‘ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಕೆಲ ಚುನಾವಣಾ ಅಧಿಕಾರಿಗಳು ಬಿಜೆಪಿ ಜತೆ ಸಖ್ಯ ಹೊಂದಿದ್ದಾರೆ. ಆ ಕುರಿತ ಆರು ನಿದರ್ಶನಗಳ ಬಗ್ಗೆ ಆಯೋಗಕ್ಕೆ ಮಾಹಿತಿ ನೀಡಿದ್ದೇವೆ. ಅಲ್ಲದೆ ಆ ಅಧಿಕಾರಿಗಳನ್ನು ವರ್ಗಾಯಿಸುವಂತೆ ಒತ್ತಾಯಿಸಿದೆವು’ ಎಂದು ಅವರು ಮಾಹಿತಿ ನೀಡಿದರು.

ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯು (ಸಿಇಸಿ), ‘ನಂದಿಗ್ರಾಮದ ಸ್ಥಳೀಯ ಬಿಜೆಪಿ ನಾಯಕರ ಜತೆಗಿನ ಸಂಬಂಧದ ಕುರಿತ ಮಾಹಿತಿಯನ್ನೂ ಆಯೋಗಕ್ಕೆ ತಿಳಿಸಿದ್ದೇವೆ’ ಎಂದರು.

‘ಈ ರೀತಿಯ ಕಳಂಕಿತ ಅಧಿಕಾರಿಗಳಿರುವಾಗ ಬಂಗಾಳದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಹೇಗೆ ನಡೆಸುತ್ತೀರಿ ಎಂದು ನಾವು ಸಿಇಸಿ ಅನ್ನು ಪ್ರಶ್ನಿಸಿದೆವು’ ಎಂದು ಡೆರಿಕ್ ಹೇಳಿದರು. 6

ಮತ್ತೆ ನ್ಯಾಯಾಲಯದ ಮೊರೆ: ಮಮತಾ

ಕೋಲ್ಕತ್ತ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ವೇಳೆ ಪಟ್ಟಿಯಿಂದ ಅಳಿಸಿರುವ ಮತದಾರರ ಪರವಾಗಿ ಮತ್ತೆ ನ್ಯಾಯಾಲಯದ ಮೊರೆಹೋಗುವುದಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ತಿಳಿಸಿದರು.

ಎಸ್‌ಐಆರ್ ಪೂರ್ಣಗೊಂಡ ಬಳಿಕ ರಾಜ್ಯದಲ್ಲಿ ಸುಮಾರು 91 ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಅಳಿಸಿಹಾಕಿರುವ ಕುರಿತು ಆಯೋಗ ಮಾಹಿತಿ ನೀಡಿದ ಬೆನ್ನಲ್ಲೇ ಮಮತಾ ಅವರಿಂದ ಈ ಹೇಳಿಕೆ ಬಂದಿದೆ.

ಬಿಜೆಪಿ ಮತ್ತು ಚುನಾವಣಾ ಆಯೋಗವನ್ನು ತರಾಟೆಗೆ ತೆಗೆದುಕೊಂಡ ಅವರು, ‘ಪಟ್ಟಿಯಿಂದ ಮತದಾರರ ಹೆಸರುಗಳನ್ನು ಅಳಿಸುವ ಮೂಲಕ ಟಿಎಂಸಿಯನ್ನು ಸೋಲಿಸಲು ಸಾಧ್ಯವಿಲ್ಲ. ಆಯೋಗದ ಈ ಕ್ರಮವನ್ನು ಪ್ರಶ್ನಿಸಿ ಮತ್ತೆ ನಾವು ನ್ಯಾಯಾಲಯದ ಮೊರೆ ಹೋಗುತ್ತೇವೆ’ ಎಂದು ಹೇಳಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ಉಪ ಚುನಾವಣೆ: ಇಂದು ಮತದಾನ

ದಾವಣಗೆರೆ/ಬಾಗಲಕೋಟೆ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಗುರುವಾರ (ಏ.9) ಮತದಾನ ನಡೆಯಲಿದ್ದು, ಸಕಲ ಸಿದ್ಧತೆ ಆಗಿದೆ.

ದಾವಣಗೆರೆ ಕ್ಷೇತ್ರದಲ್ಲಿ 2,31,072 ಲಕ್ಷ ಮತದಾರರಿದ್ದು, ಬಾಗಲಕೋಟೆ ಕ್ಷೇತ್ರದಲ್ಲಿ 2,59,797 ಮತದಾರರಿದ್ದು, ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧರಿಸಲಿದ್ದಾರೆ.

ಚುನಾವಣಾ ಸಿಬ್ಬಂದಿ ದಾವಣಗೆರೆಯ ಡಿಆರ್‌ಆರ್ ಶಾಲಾ ಆವರಣದಲ್ಲಿನ ಮಸ್ಟರಿಂಗ್ ಕೇಂದ್ರದಿಂದ ಮತಯಂತ್ರ, ಇತರ ಸಾಮಗ್ರಿ ಪಡೆದು ಮತಗಟ್ಟೆಗಳತ್ತ ಹೆಜ್ಜೆಹಾಕಿದರು.

ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾದ ಕ್ಷೇತ್ರಕ್ಕೆ ಉಪಚುನಾವಣೆ ನಡೆಯುತ್ತಿದೆ. ಕಾಂಗ್ರೆಸ್, ಬಿಜೆಪಿ, ಎಎಪಿ, ಎಸ್‌ಡಿಪಿಐ ಸೇರಿ 25 ಅಭ್ಯರ್ಥಿಗಳಿದ್ದಾರೆ. ಕ್ಷೇತ್ರದಲ್ಲಿ 284 ಮತಗಟ್ಟೆ ತೆರೆಯಲಾಗಿದೆ.

ಕ್ಷೇತ್ರದಲ್ಲಿ ಒಟ್ಟು 2,31,072 ಮತದಾರರಿದ್ದಾರೆ. ಆ ಪೈಕಿ 1,13,399 ಪುರುಷರು, 1,17,690 ಮಹಿಳೆಯರು ಹಾಗೂ 43 ಲಿಂಗತ್ವ ಅಲ್ಪಸಂಖ್ಯಾತರಿದ್ದಾರೆ.

ಬಾಗಲಕೋಟೆ ವರದಿ: ಬಾಗಲಕೋಟೆ ಕ್ಷೇತ್ರದ ಕಣದಲ್ಲಿ ಒಂಬತ್ತು ಅಭ್ಯರ್ಥಿಗಳು ಇದ್ದಾರೆ. ನವನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಮಸ್ಟರಿಂಗ್ ಕಾರ್ಯ ನಡೆಯಿತು.

ಕ್ಷೇತ್ರದಲ್ಲಿ ಐದು ವಿಶೇಷ ಮತಗಟ್ಟೆಗಳು ಸೇರಿ 322 ಮತಗಟ್ಟೆ ಸ್ಥಾಪನೆಯಾಗಿವೆ. ಚುನಾವಣಾ ಕಾರ್ಯಕ್ಕೆ 1,564 ಸಿಬ್ಬಂದಿ, ಭದ್ರತೆಗೆ 2,500 ಪೊಲೀಸ್ ಸಿಬ್ಬಂದಿ ನೇಮಿಸಲಾಗಿದೆ.

ಎನ್‌ಪಿಎಸ್ ಸ್ವಾಸ್ಥ್ಯ ಅಡಿ ಮತ್ತಷ್ಟು ಸೇವೆ

ಸೌಲಭ್ಯಗಳ ಕೈಪಿಡಿ ಬಿಡುಗಡೆ ಮಾಡಿದ ಪ್ರಾಧಿಕಾರ; ಸುಧಾರಣಾ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ಅಡಿ ವಿವಿಧ ಕಂಪನಿಗಳ ಸಹಯೋಗದಲ್ಲಿ ರೂಪಿಸಿರುವ ಎನ್‌ಪಿಎಸ್ ಸ್ವಾಸ್ಥ್ಯ ಯೋಜನೆಯ ಸೇವೆಗಳನ್ನು ವಿಸ್ತರಿಸಿದೆ.

ನಿವೃತ್ತ ನೌಕರರ ಆರೋಗ್ಯ ಸೇವೆಗಾಗಿ ಹಣ ಹಾಗೂ ಆರೋಗ್ಯ ಸೇವೆಗಳನ್ನು ಒಂದೆಡೆ ಬಳಸಿಕೊಳ್ಳಲು ಸಹಕಾರಿಯಾಗುವಂತೆ ಪ್ರಾಧಿಕಾರ ಹಲವು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿದೆ. ಈ ಯೋಜನೆಯಡಿ ಪ್ರಮುಖ ಆರೋಗ್ಯ ವಿಮಾ ಸೇವಾ ಕಂಪನಿಗಳು ನೌಕರರಿಗೆ ಸೇವೆಗಳನ್ನು ಒದಗಿಸಲಿವೆ.

ಎನ್‌ಪಿಎಸ್ ಸ್ವಾಸ್ಥ್ಯ ಯೋಜನೆಯಡಿ ಹೊರ ರೋಗಿಗಳಿಗೆ ಸೇವೆ ಒದಗಿಸುವ ಕುರಿತು ಮೂರು ತಿಂಗಳ ಹಿಂದೆಯೇ ಮಾರ್ಗಸೂಚಿ ಬಿಡುಗಡೆ ಮಾಡಲಾಗಿತ್ತು. ಈಗ ಒಳ ರೋಗಿಗಳು ಹಾಗೂ ಆಸ್ಪತ್ರೆಗೆ ದಾಖಲಾಗುವವರಿಗೆ ನೀಡುವ ಸೌಲಭ್ಯಗಳ ಕೈಪಿಡಿಯನ್ನು ಬುಧವಾರ ಬಿಡುಗಡೆ ಮಾಡಲಾಯಿತು.

ಎನ್‌ಪಿಎಸ್ ಸೌಲಭ್ಯವನ್ನು ಪಡೆದ ನೌಕರರು ನಿವೃತ್ತಿಯವರೆಗೂ ಉಳಿತಾಯವನ್ನು ಬಳಸಲು ಅವಕಾಶವಿರಲಿಲ್ಲ. ಆದರೆ ಎನ್‌ಪಿಎಸ್ ಸ್ವಾಸ್ಥ್ಯ ಅಡಿಯಲ್ಲಿ ಗ್ರಾಹಕರು ಉಳಿತಾಯದ ಶೇಕಡ 25ರಷ್ಟು ಮೊತ್ತವನ್ನು ಬಳಸಿಕೊಳ್ಳಲು ಅವಕಾಶವಿದೆ. ಇದನ್ನು ವೈದ್ಯಕೀಯ ವೆಚ್ಚಗಳಿಗೆ ಉಪಯೋಗಿಸಬಹುದು. ಮೆಡಿ ಅಸಿಸ್ಟ್ ಹೆಲ್ತ್ ಕೇರ್ ಸರ್ವೀಸಸ್ ರೂಪಿಸಿರುವ ಮಾವೆನ್ ಆ್ಯಪ್ ಬಳಸಿ ಸೇವೆ ಪಡೆಯಬಹುದು.

ನಗರದಲ್ಲಿ ನಡೆದ ಸಮಾರಂಭದಲ್ಲಿ ಎನ್‌ಪಿಎಸ್ ಸ್ವಾಸ್ಥ್ಯ ಮಿಷನ್ ಯೋಜನೆಯ ಫಲಾನುಭವಿಗಳಿಗೆ ಪತ್ರಗಳನ್ನು ವಿತರಣೆ ಮಾಡಲಾಯಿತು.

ಈ ವೇಳೆ ಮಾತನಾಡಿದ ಪ್ರಾಧಿಕಾರದ ಅಧ್ಯಕ್ಷ ಶಿವಸುಬ್ರಮಣಿಯನ್ ರಾಮನ್, 'ದೇಶದ ಜನಸಂಖ್ಯೆಯಲ್ಲಿ ಹಿರಿಯ ನಾಗರಿಕರ ಪ್ರಮಾಣ ಶೇ 10ರಷ್ಟಿದೆ. 2045-50ರ ಹೊತ್ತಿಗೆ ಶೇ 20ಕ್ಕೆ ಏರಿಕೆಯಾಗುವ ಅಂದಾಜಿದ್ದು, ಹಲವು ಹಿರಿಯರು ಆರೋಗ್ಯ ವಿಮಾ ಸೇವೆಗಳಿಂದ ಹೊರಗುಳಿಯುವ ಸಾಧ್ಯತೆಯಿದೆ. ಈ ಕಾರಣದಿಂದಲೇ ಎನ್‌ಪಿಎಸ್ ಸ್ವಾಸ್ಥ್ಯ ಅಡಿ ವೈದ್ಯಕೀಯ ತುರ್ತು ಇದ್ದಾಗ ಹೊರ ಹಾಗೂ ಒಳರೋಗಿಗಳಿಗೆ ಸೇವೆಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ' ಎಂದರು.

ಮೆಡಿ ಅಸಿಸ್ಟ್ ಅಧ್ಯಕ್ಷ ವಿಕ್ರಂ ಭಟ್ವಾಲ್, ಟಾಟಾ ಪೆನ್ಷನ್ ಫಂಡ್ ಮ್ಯಾನೇಜ್‌ಮೆಂಟ್ ಸಿಇಒ ಕುರಿಯನ್ ಜೋಸ್, ಆಕ್ಸಿಸ್ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕ ಸುಬ್ರತ್ ಮೊಹಂತಿ, ಆಕ್ಸಿಸ್ ಪೆನ್ಷನ್ ಫಂಡ್‌ನ ಸುಮಿತ್ ಶುಕ್ಲಾ, ಮೆಡಿ ಅಸಿಸ್ಟ್ ಹೆಲ್ತ್ ಕೇರ್ ಸರ್ವೀಸಸ್‌ನ ಸತೀಶ್ ಗಿಡುಗು ಉಪಸ್ಥಿತರಿದ್ದರು.

ಪಿಎಫ್‌ಆರ್‌ಡಿಎ ಬುಧವಾರ ನಗರದಲ್ಲಿ ಆಯೋಜಿಸಿದ್ದ ಎನ್‌ಪಿಎಸ್ ಸ್ವಾಸ್ಥ್ಯ ಕಾರ್ಯಕ್ರಮದಲ್ಲಿ ಮೊದಲ ಚಂದಾದಾರರಾದ ಜಿ.ರಾಣಿ ಅವರಿಗೆ ಶಿವಸುಬ್ರಮಣಿಯನ್ ರಾಮನ್ ಮತ್ತು ವಿಕ್ರಂ ಭಟ್ವಾಲ್ ಪತ್ರ ಹಸ್ತಾಂತರಿಸಿದರು. ಸುಬ್ರತ್ ಮೊಹಂತಿ ಉಪಸ್ಥಿತರಿದ್ದರು / ಪ್ರಜಾವಾಣಿ ಚಿತ್ರ

ಆಟೊ ಚಾಲಕರಿಗೆ ₹15 ಸಾವಿರ ಪರಿಹಾರ ಘೋಷಿಸಿ: ಎಎಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಕಾರಣ ಆಟೊ ಚಾಲಕರಿಗೆ ತೊಂದರೆ ಆಗಿದೆ. ಹೀಗಾಗಿ ರಾಜ್ಯ ಸರ್ಕಾರ ಕೂಡಲೇ ಆಟೊ ಚಾಲಕರ ಕುಟುಂಬಗಳಿಗೆ ಭದ್ರತೆ ಒದಗಿಸಲು ₹15 ಸಾವಿರ ಪರಿಹಾರ ಧನ ನೀಡಬೇಕು' ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಆಟೊ ಘಟಕದ ರಾಜ್ಯ ಅಧ್ಯಕ್ಷ ಅಯೂಬ್ ಖಾನ್, 'ಕೇಂದ್ರ ಸರ್ಕಾರವು ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ನೇರ ಪರಿಣಾಮಗಳನ್ನು ಅರಿಯುವಲ್ಲಿ ವಿಫಲಗೊಂಡಿದೆ. ಇದರಿಂದಾಗಿ ಸಾರ್ವಜನಿಕರು ಮತ್ತು ಆಟೊ ಚಾಲಕರು ಪರಿತಪಿಸುವಂತಾಗಿದೆ. ಎಲ್‌ಪಿಜಿ ಸ್ಟೇಷನ್‌ಗಳಲ್ಲಿ ಹೆಚ್ಚುವರಿ ದರ ನೀಡಿ ಎಲ್‌ಪಿಜಿ ಖರೀದಿಸುವ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಇಲಾಖೆಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ' ಎಂದು ಆರೋಪಿಸಿದರು.

'ಎಲ್‌ಪಿಜಿ ಪೂರೈಕೆಯಲ್ಲಿನ ವ್ಯತ್ಯಯ ಹಾಗೂ ದರ ಏರಿಕೆಯಿಂದಾಗಿ 15 ದಿನಗಳಿಂದ ಆಟೊಗಳನ್ನು ರಸ್ತೆಗೆ ಇಳಿಸಿಲ್ಲ. ಇದರಿಂದ ನಮ್ಮ ಆದಾಯದ ಮೇಲೆ ಪರಿಣಾಮ ಬೀರಿದ್ದು, ಜೀವನ ನಿರ್ವಹಣೆ ಮಾಡುವುದೇ ಸವಾಲಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಆಟೊ ಚಾಲಕರು, ಸಣ್ಣ ಹೋಟೆಲ್ ಮಾಲೀಕರು, ಗಿಗ್ ಕಾರ್ಮಿಕರಿಗೆ ಭದ್ರತೆ ಒದಗಿಸಬೇಕು' ಎಂದರು.

ಎಎಪಿ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ, ಸಂಘಟನಾ ಕಾರ್ಯದರ್ಶಿ ಸತೀಶ್ ಕುಮಾರ್, ಆಟೊ ಘಟಕದ ಬೆಂಗಳೂರು ನಗರ ಅಧ್ಯಕ್ಷ ಅನಿಲ್ ಕುಮಾರ್, ಸಾಮಾಜಿಕ ಹೋರಾಟಗಾರ ಎ.ಜೆ. ಖಾನ್ ಸುದ್ದಿಗೋಷ್ಠಿಯಲ್ಲಿ ಇದ್ದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/180/2026

ದಿನಾಂಕ : 30-03-2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಯಲಹಂಕ ಮೆಗಾ ಕೋಚಿಂಗ್ ಟರ್ಮಿನಲ್‌ಗಾಗಿ ವಿವರವಾದ ಮಾಸ್ಟರ್ ಪ್ಲಾನಿಂಗ್, ಅರ್ಬನ್ ವಿನ್ಯಾಸ, ಇಂಜಿನಿಯರಿಂಗ್ ಮತ್ತು ವಿವರವಾದ ಯೋಜನಾ ವರದಿಯ ತಯಾರಿಕೆ – ರೈಲು ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು ಇಲ್ಲಿ ಕೋಚಿಂಗ್ ನಿರ್ವಹಣೆ ಮತ್ತು ಪ್ಲಾಟ್‌ಫಾರಂ ಸೌಲಭ್ಯಗಳ ಉನ್ನತೀಕರಣಕ್ಕಾಗಿ ಸಮಾಲೋಚನಾ ಸೇವೆಗಳು (ಟೆಂಡರ್ ಉಲ್ಲೇಖ ಸಂ. ಟಿಇಸಿಹೆಚ್-ಕನ್ಸಲ್ಟೆಂಟ್ಸ್)	ರೂ. 4,10,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22–05–2026 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/16/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026-27

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ.3ವರೆಗೆ ರಿಯಾತಿಯನ್ನು ಪಡೆದು ಆನಂದಿಸಿ.

South Western Railway-SWR SWRRLY @SWRAILWAYHQ @sw_railways

ಎಜುಕೇಷನ್ ಎಕ್ಸ್‌ಪೊ 12ಕ್ಕೆ

ಬೆಂಗಳೂರು: ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್‌ನಿಂದ ಏ.12ರಂದು ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ಮಲ್ಲೇಶ್ವರ ಮೈದಾನದಲ್ಲಿ ಎಜುಕೇಷನ್ ಎಕ್ಸ್‌ಪೊ–2026 ಹಮ್ಮಿಕೊಳ್ಳಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, '34ಕ್ಕೂ ಹೆಚ್ಚು ಸಂಸ್ಥೆಗಳು ಭಾಗವಹಿಸಲಿದ್ದು, ವಾಣಿಜ್ಯ, ವಿಜ್ಞಾನ, ಎಂಜಿನಿಯರಿಂಗ್, ನಿರ್ವಹಣೆ, ಕಾನೂನು ಮತ್ತು ವೈದ್ಯಕೀಯ ವಿಭಾಗಗಳ ಕುರಿತು ಅಧ್ಯಾಪಕರು ಮಾಹಿತಿ ಹಂಚಿಕೊಳ್ಳಲಿದ್ದಾರೆ' ಎಂದು ತಿಳಿಸಿದರು.

'ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಎಕ್ಸ್‌ಪೊಗೆ ಚಾಲನೆ ನೀಡಲಿದ್ದಾರೆ. ವಿಭು ಅಕಾಡೆಮಿ ಸಂಸ್ಥಾಪಕಿ ವಿ.ಬಿ. ಆರತಿ, ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಅಸೋಸಿಯೇಷನ್ ಅಧ್ಯಕ್ಷ ಎಲ್.ವಿ. ಮುರಳಿಕೃಷ್ಣ ರೆಡ್ಡಿ ಪಾಲ್ಗೊಳ್ಳಲಿದ್ದಾರೆ' ಎಂದರು.

ಸಂಘರ್ಷ ತಡೆ ಬಗ್ಗೆ ಸಾರ್ವಜನಿಕ ಚರ್ಚೆ ಅಗತ್ಯ: ಸಚಿವ ಈಶ್ವರ ಖಂಡ್ರೆ

ವನ್ಯಜೀವಿಗಳ ಸಂತಾನಶಕ್ತಿ ಹರಣಕ್ಕೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವ-ವನ್ಯಜೀವಿ ಸಂಘರ್ಷ ತಡೆಗೆ ಆಯ್ದ ವನ್ಯಜೀವಿಗಳ ಸಂತಾನಶಕ್ತಿ ಹರಣದ ಅಗತ್ಯ ಕುರಿತು ಸಾರ್ವಜನಿಕ ಚರ್ಚೆ ನಡೆಯಬೇಕು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಈಶ್ವರ ಖಂಡ್ರೆ

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆಲವು ಆಯ್ದ ವನ್ಯಜೀವಿಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗುತ್ತಿದ್ದು, ಕಡಿವಾಣ ಹಾಕುವ ಅಗತ್ಯವಿದೆ. ಜತೆಗೆ ವನ್ಯ ಜೀವಿಗಳ ಸಂರಕ್ಷಣೆಯೂ ಆಗಬೇಕು. ಮಾನವರ ಜೀವಹಾನಿಯೂ ತಪ್ಪಬೇಕು. ಅದಕ್ಕಾಗಿ ಸಂತಾನ ಶಕ್ತಿ ಹರಣ ಅಥವಾ ಚುಚ್ಚುಮದ್ದು ನೀಡುವ ಬಗ್ಗೆ ಚಿಂತನೆ ನಡೆಸಬೇಕು' ಎಂದರು.

'ಯಾವ ವನ್ಯಜೀವಿಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗುತ್ತದೋ ಆ ಪ್ರದೇಶದಲ್ಲಿ ಒಂದೆರಡು ವರ್ಷ ಅವುಗಳ ಸಂತಾನ ನಿಯಂತ್ರಣ ಅಗತ್ಯ. ಬೇರೆ ರಾಜ್ಯಗಳಲ್ಲೂ ಇಂತಹ ಚರ್ಚೆಗಳು ನಡೆಯುತ್ತಿವೆ. ಇದು ನನ್ನ ನಿರ್ಧಾರವಲ್ಲ, ಒಂದು ಚಿಂತನೆ ಮಾತ್ರ. ಇಂತಹ ಒಂದು ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದ್ದು, ಈ ಕುರಿತು ಕಾನೂನು ತಜ್ಞರ ಜತೆ ಚರ್ಚಿಸಿ, ನ್ಯಾಯಾಲಯಕ್ಕೆ ಪ್ರಸ್ತಾವ ಸಲ್ಲಿಸಲು ಸಭೆ ಕರೆಯಲಾಗುವುದು' ಎಂದರು.

'ಕಾಡಿನಿಂದ ಹೊರಬರಲು ಇಚ್ಛಿಸುವ ಅರಣ್ಯವಾಸಿಗಳ ಸ್ಥಳಾಂತರದ ಬಗ್ಗೆಯೂ ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ಪಟ್ಟಿ ಸಿದ್ಧವಾದ ಬಳಿಕ ಹಣ ಮೀಸಲಿಡುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಿ, ನಿರ್ಧಾರ ಕೈಗೊಳ್ಳಲಾಗುವುದು. ಅರಣ್ಯವಾಸಿಗಳ ಸ್ಥಳಾಂತರದಿಂದ ವನ್ಯಜೀವಿಗಳ ಆವಾಸಸ್ಥಾನ ವಿಸ್ತರಣೆಯಾಗುತ್ತದೆ. ಮೂಲಸೌಕರ್ಯ ಇರುವ ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಯಾಗುತ್ತಾರೆ' ಎಂದು ಹೇಳಿದರು.

ಆನೆ ಧಾಮಕ್ಕೆ ಸಿಗದ ಅನುಮತಿ

'ಆನೆಗಳ ದಾಳಿಗೆ ಪರಿಹಾರ ಕಂಡುಕೊಳ್ಳಲು 'ಆನೆ ಧಾಮ' ಮಾಡುವ ಬಗ್ಗೆ ಸರ್ಕಾರ ಯೋಜನೆ ರೂಪಿಸಿದೆ. ಆದರೆ, ಕೇಂದ್ರದ ಅನುಮತಿ ಸಿಕ್ಕಿಲ್ಲ. ಅನುಮತಿ ಸಿಕ್ಕ ತಕ್ಷಣ ಧಾಮ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದು ಈಶ್ವರ ಖಂಡ್ರೆ ಹೇಳಿದರು. 'ಕಾಡಾನೆ ದಾಳಿಯಿಂದ ಕಾಫಿ ಬೆಳೆಗಾರರೊಬ್ಬರು ಮೃತಪಟ್ಟಿರುವುದು ನೋವಿನ ಸಂಗತಿ. ಮಾನವ- ಆನೆ ಸಂಘರ್ಷ ತಡೆಯಲು ಸರ್ಕಾರ ಮತ್ತು ಇಲಾಖೆ ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದೆ' ಎಂದರು.



'4 ವರ್ಷದಲ್ಲಿ ಬಮೂಲ್ ದೇಶಕ್ಕೇ ಮೊದಲು'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಬೆಂಗಳೂರು ಹಾಲು ಒಕ್ಕೂಟವು (ಬಮೂಲ್) ಲಾಭದಲ್ಲಿ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದ್ದು, ಮುಂದಿನ ನಾಲ್ಕು ವರ್ಷದಲ್ಲಿ ರಾಷ್ಟ್ರದಲ್ಲಿಯೇ ಅಗ್ರಸ್ಥಾನಕ್ಕೆ ಏರಲಿದೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರು ಹೇಳಿದರು.

ಸಂಘಗಳ ಸದಸ್ಯರು, ಸಿಬ್ಬಂದಿಗೆ ವಿಶೇಷ ಪ್ರೋತ್ಸಾಹಧನದ ಚೆಕ್ ಮತ್ತು ₹40 ಕೋಟಿ ಲಾಭವನ್ನು ನೇರವಾಗಿ ರೈತರ ಖಾತೆಗೆ ಜಮೆ ಮಾಡುವ ಕಾರ್ಯಕ್ರಮದಲ್ಲಿ ಅವರು ಬುಧವಾರ ಮಾತನಾಡಿದರು.

'ನಾನು ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡಾಗ ನಷ್ಟದಲ್ಲಿದ್ದ ಸಂಸ್ಥೆ, ಈಗ ಲಾಭದಲ್ಲಿದೆ. ಮುಂದೆ ವಿದೇಶಿಯರೂ ನಂದಿನಿ ಉತ್ಪನ್ನಗಳನ್ನೇ ಖರೀದಿಸುವ ವಾತಾವರಣ ನಿರ್ಮಾಣಕ್ಕೆ ರೈತರು, ಸಿಬ್ಬಂದಿ ಸಹಕಾರ ನೀಡಬೇಕು' ಎಂದು ಮನವಿ ಮಾಡಿದರು.

ಹಾಲು ಉತ್ಪಾದಕರ ಸಂಘಗಳ ಸದಸ್ಯರು, ಸಿಬ್ಬಂದಿಗೆ ವಿಶೇಷ ಪ್ರೋತ್ಸಾಹಧನದ ಚೆಕ್ ಅನ್ನು ಡಿ.ಕೆ.ಸುರೇಶ್ ವಿತರಿಸಿದರು. ಎಸ್.ರವಿ, ಪಿ.ನಾಗರಾಜ್, ಆರ್.ಕೆ.ರಮೇಶ್, ಲಿಂಗೇಶ್ ಕುಮಾರ್ ಉಪಸ್ಥಿತರಿದ್ದರು

ವಿಧಾನ ಪರಿಷತ್ ಸದಸ್ಯ ಎಸ್.ರವಿ ಮಾತನಾಡಿ, 'ಹೈನುಗಾರಿಕೆಗೆ ಹಸು ಖರೀದಿಗೆ ಬಿಡಿಸಿಸಿ ಬ್ಯಾಂಕ್ ವತಿಯಿಂದ ತಲಾ ₹10 ಲಕ್ಷದಿಂದ ₹15 ಲಕ್ಷದವರೆಗೆ ಸಾಲ ನೀಡಲಾಗುತ್ತಿದೆ' ಎಂದರು.

ಕೆಎಂಎಫ್ ಮಾಜಿ ಅಧ್ಯಕ್ಷ ಪಿ.ನಾಗರಾಜು, ಬಮೂಲ್ ನಿರ್ದೇಶಕರಾದ ಆರ್.ಕೆ.ರಮೇಶ್, ಬಿ.ಸಿ.ಆನಂದ ಕುಮಾರ್, ಉಪಾಧ್ಯಕ್ಷ ರಾಜಣ್ಣ, ಎಚ್.ಎಸ್. ಹರೀಶ್ ಕುಮಾರ್, ಕಡತನಮಲೆ ಸತೀಶ್, ಬಿಎಂಐಸಿಪಿ ಅಧ್ಯಕ್ಷ ರಘುನಂದನ್ ರಾಮಣ್ಣ, ಮಾಜಿ ಶಾಸಕ ಕೆ.ರಾಜು, ಬಮೂಲ್ ವ್ಯವಸ್ಥಾಪಕ ನಿರ್ದೇಶಕ ಎಸ್.ಟಿ.ಸುರೇಶ್ ಉಪಸ್ಥಿತರಿದ್ದರು.

'ಪೃಥ್ವಿ' ಹುಲಿ ಸಾವು

ಮೈಸೂರು: ಇಲ್ಲಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಪ್ರವಾಸಿಗರನ್ನು ಆಕರ್ಷಿಸಿದ್ದ ಹುಲಿ 'ಪೃಥ್ವಿ' ಬುಧವಾರ ಮೃತಪಟ್ಟಿತು.

13 ವರ್ಷ ವಯಸ್ಸಿನ ಗಂಡು ಹುಲಿಯು ಕಳೆದೆರಡು ದಿನಗಳಿಂದ ಆಹಾರ ತ್ಯಜಿಸಿ ವಯೋಸಹಜ ಸ್ನಾಯು ದೌರ್ಬಲ್ಯದಿಂದ (ಕಾಗ್ನಿಟಲ್ ಪೆರೆಸಿಸ್) ಬಳಲುತ್ತಿತ್ತು.

ಮೃಗಾಲಯದ ಪಶುವೈದ್ಯಾಧಿಕಾರಿಗಳು ಸೂಕ್ತ ಚಿಕಿತ್ಸೆ ನೀಡಿದ್ದರೂ ಸ್ಪಂದಿಸಲಿಲ್ಲ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪೃಥ್ವಿ' ಹುಲಿ

ಅಬ್ಬಿಗೆರೆಯ ಸಪ್ತಗಿರಿ ಬಡಾವಣೆಯಲ್ಲಿ ಒತ್ತುವರಿಯಾಗಿರುವ ಸ್ಮಶಾನದ ಜಾಗವನ್ನು ಎಸ್. ಮುನಿರಾಜು ಅವರು ಸ್ಥಳೀಯರೊಂದಿಗೆ ಪರಿಶೀಲಿಸಿದರು

ಸ್ಮಶಾನದ ಒತ್ತುವರಿ ಜಾಗ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಅಬ್ಬಿಗೆರೆಯ ಸಪ್ತಗಿರಿ ಬಡಾವಣೆ ಹತ್ತಿರದ ಸ್ಮಶಾನ ಜಾಗದ ಒತ್ತುವರಿಯನ್ನು ಕೂಡಲೇ ತೆರವುಗೊಳಿಸುವಂತೆ ಶಾಸಕ ಎಸ್. ಮುನಿರಾಜು ಅಧಿಕಾರಿಗಳಿಗೆ ಸೂಚಿಸಿದರು.

'ಸ್ಮಶಾನದ ಜಾಗವನ್ನು ಒತ್ತುವರಿ ಮಾಡಿ, ನಿವೇಶನ ರಚಿಸಿ ಮಾರಾಟ ಮಾಡಿದ್ದಾರೆ. ಕೆಲವರು ಮನೆ ಕಟ್ಟಿದ್ದಾರೆ. ಎಲ್ಲವನ್ನೂ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು' ಎಂದು ಕಂದಾಯ ಅಧಿಕಾರಿಗಳಿಗೆ ನಿರ್ದೇಶಿಸಿದರು. ಸ್ಮಶಾನದ ಪಕ್ಕದ ಮುಖ್ಯರಸ್ತೆಯನ್ನು ಸಂಪರ್ಕ ರಸ್ತೆಯನ್ನಾಗಿ ಬಡಾವಣೆಯ ನಿವಾಸಿಗಳಿಗೆ ನಿರ್ಮಿಸಿಕೊಡಬೇಕು. ಮಕ್ಕಳು ಶಾಲೆಗೆ ಹೋಗಲು ಮತ್ತು ಆಂಬುಲೆನ್ಸ್‌ಗಳಿಗೆ ರಸ್ತೆ ಸಂಪರ್ಕ ಬೇಕಾಗಿದೆ ಎಂದು ಸ್ಥಳೀಯರು ಮನವಿ ಮಾಡಿದರು.

'ಶಾಸಕರು ಈಗಾಗಲೇ ಸ್ಮಶಾನದ ಜಾಗವನ್ನು ಸರ್ವೆ ಮಾಡಿಸಿ, ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿ, ರಸ್ತೆ ಸಂಪರ್ಕ ಉಳಿಸಿ ಕೊಡುತ್ತೇನೆ ಎಂದು ಭರವಸೆ ನೀಡಿದ್ದಾರೆ' ಎಂದು ಸ್ಥಳೀಯರು ತಿಳಿಸಿದರು.

'ಬಂಜಾರ ಸಾಂಸ್ಕೃತಿಕ ಶ್ರೀಮಂತಿಕೆ ದುರ್ಬಳಕೆ ತಡೆಯಿರಿ'

ಬೆಂಗಳೂರು: 'ಕೆಲವರು ಪೇಟೆಂಟ್ ಪಡೆದು ಬಂಜಾರ ಸಮುದಾಯದ ಸಾಂಸ್ಕೃತಿಕ ಶ್ರೀಮಂತಿಕೆಯ ಆರ್ಥಿಕ ಲಾಭ ಪಡೆಯುತ್ತಿರುವುದನ್ನು ಸರ್ಕಾರ ತಡೆಯಬೇಕು' ಎಂದು ಚಲನಚಿತ್ರ ನಿರ್ದೇಶಕ ಕೋಡ್ಲು ರಾಮಕೃಷ್ಣ ಹೇಳಿದರು.

ನಗರದಲ್ಲಿ ನಡೆದ ವಿಶ್ವ ಬಂಜಾರ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಚಲನಚಿತ್ರ ಇತಿಹಾಸಕ್ಕೆ ಬಂಜಾರರ ಕೊಡುಗೆ ಅಪಾರ. ಬಂಜಾರ ಧಾಟಿಯ ಹಾಡುಗಳು, ವಸ್ತ್ರಾಭರಣಗಳು ಶ್ರೀಮಂತಿಕೆಯನ್ನು ಹೆಚ್ಚಿಸಿದ್ದು, ಇದನ್ನು ಸಮುದಾಯದ ಉನ್ನತಿಗೆ ಬಳಸಬೇಕು' ಎಂದು ನುಡಿದರು.

ವಿಶ್ವ ಬಂಜಾರ ದಿನಾಚರಣೆಯಲ್ಲಿ ವಡ್ಡಗೆರೆ ನಾಗರಾಜಯ್ಯ, ಕೂಡ್ಲು ರಾಮಕೃಷ್ಣ, ಎ.ಆರ್.ಗೋವಿಂದಸ್ವಾಮಿ, ಪರಮೇಶ್ವರ ನಾಯ್ಕ್ ಉಪಸ್ಥಿತರಿದ್ದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಮಾಜಿ ಅಧ್ಯಕ್ಷ ಎ.ಆರ್.ಗೋವಿಂದಸ್ವಾಮಿ, 'ಕೋರೆಗಾಂವ್ ಮತ್ತು ಸ್ವಾತಂತ್ರ ಸಂಗ್ರಾಮದಲ್ಲಿ ಸಾವಿರಾರು ಬಂಜಾರರು ವೀರ ಮರಣ ಹೊಂದಿದ್ದಾರೆ. ಆದರೆ, ಇತಿಹಾಸದ ದಾಖಲೆಗಳಲ್ಲಿ ಇದನ್ನು ಕಡೆಗಣಿಸಿದ್ದು, ಬಂಜಾರರಿಗೆ ರಾಜಕೀಯದಲ್ಲಿ ಸೂಕ್ತ ಸ್ಥಾನ ಸಿಗದೇ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿಯುವಂತಾಗಿದೆ. ಸಮುದಾಯವನ್ನು ಕೇವಲ ಮತಬ್ಯಾಂಕ್ ಆಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಿ.ಪರಮೇಶ್ ನಾಯ್ಕ್, ಚಿಂತಕ ವಡ್ಡಗೆರೆ ನಾಗರಾಜಯ್ಯ ಮಾತನಾಡಿದರು. ಬಂಜಾರ ಸಾಮಾಜಿಕ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷರಾದ ಎನ್.ವರಲಕ್ಷ್ಮಿ, ರಾಜಾನಾಯ್ಕ್, ಸೇವಾ ನಾಯ್ಕ್, ಜಿ.ಚಲನ ಉಪಸ್ಥಿತರಿದ್ದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2, ಕೆಐಎಡಿಬಿ(ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೆಲಮಂಗಲ, ನಂ.14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–560001, ದೂ: 080–22236840, ಇ–ಮೇಲ್: slao1bmicp@kiadb.in

ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ಬೆಂ.ಗ್ರಾ.ನೆ/27/2026–27 ದಿನಾಂಕ: 07.04.2026

ಸಾರ್ವಜನಿಕ ನೋಟೀಸು

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(4)ರ ಅನ್ವಯ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಕೆ.ಜಿ.ಶ್ರೀನಿವಾಸಪುರ ಗ್ರಾಮದ ಸ.ನಂ. 7/2ರ ಪೈಕಿ 1–04.08 ಎಕರೆ ಜಮೀನನ್ನು ಕೈಗಾರಿಕಾ ಸ್ಥಾಪನೆಗಾಗಿ ಕೆಐಎಡಿ ಕಾಯ್ದೆ ಕಲಂ 28(4)ರಡಿ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 95 ಎಸ್‌ಪಿಕ್ಯೂ 2025 ದಿ:17.01.2026 ರ ಪ್ರಕಾರ ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆ ದಿನಾಂಕ:27.01.2026 ರಂದು ಹೊರಡಿಸಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28(4)ರ ಪ್ರಕಾರ ಈ ಕೆಳಗೆ ವಿವರಿಸಿರುವ ಸ್ವತ್ತುಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಋಣಭಾರಗಳಿಂದ ವಿಮುಕ್ತಗೊಂಡು ಸರ್ಕಾರಕ್ಕೆ ನಿಹಿತಗೊಂಡಿರುತ್ತದೆ.

ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರ್ ವಿವರಗಳು:–

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಐನ್ ಎ–ಗುಂ	ಖರಾಬು ಎ–ಗುಂ	ಉಳಿಕೆ ಎ–ಗುಂ
1	2	3	4	5	6	7
ಗ್ರಾಮ: ಕೆ.ಜಿ.ಶ್ರೀನಿವಾಸಪುರ; ತಾಲ್ಲೂಕು: ನೆಲಮಂಗಲ				ಹೋಬಳಿ: ಸೋಂಪುರ; ಜಿಲ್ಲೆ:– ಬೆಂಗಳೂರು ಗ್ರಾಮಾಂತರ		
1	ಎಂ. ಶಾಂತಿಲಾಲ್, ಭೂ.ಪ, ಎಂ ಎನ್. ಚಂದ್ರಶೇಖರ್ ಬಿನ್ ಲೇಟ್ ನಂಜಪ್ಪ	ಎಂ. ಶಾಂತಿಲಾಲ್, ಭೂ.ಪ, ಎಂ ಎನ್. ಚಂದ್ರಶೇಖರ್ ಬಿನ್ ಲೇಟ್ ನಂಜಪ್ಪ	7/2ರ ಪೈಕಿ	1–04.08	–	1–04.08
		ಒಟ್ಟು		1–04.08	–	1–04.08

–:: ಘೋಷ್ವಾರೆ ::–

ಕ್ರ.ಸಂ.	ಗ್ರಾಮದ ಹೆಸರು	ವಿಸ್ತೀರ್ಣ ಐನು ಎ–ಗು	ಖರಾಬು ಎ–ಗು	ಉಳಿಕೆ ಎ–ಗು
1	ಕೆ.ಜಿ.ಶ್ರೀನಿವಾಸಪುರ	1–04.08	–	1–04.08
	ಒಟ್ಟು	1–04.08	–	1–04.08

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂ.ಗ್ರಾಂ, ನೆಲಮಂಗಲ ತಾಲ್ಲೂಕು, ಬೆಂಗಳೂರು.

ಸೂಚನಾ ಏವಂ ಪ್ರಸಾರಣ ಮಂತ್ರಾಲಯ MINISTRY OF INFORMATION AND BROADCASTING

MIFF 2026

NFDC cinemas of india

19ನೇ ಎಂಐಎಫ್‌ಎಫ್

ಮುಂಬೈ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ 2026

ಡಾಕ್ಯೂಮೆಂಟರಿ | ಶಾರ್ಟ್ ಫಿಕ್ಷನ್ | ಅನಿಮೇಶನ್

15 ಜೂನ್–21 ಜೂನ್ 2026

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ

ವಿಸ್ತರಿಸಲಾಗಿದೆ

12ನೇ ಏಪ್ರಿಲ್ 2026 ರಂದು ರಾತ್ರಿ 11.30 ಗಂಟೆವರೆಗೆ (ಐಎಸ್‌ಟಿ)

ದಾಖಲಾತಿ ಪ್ರತಿಗಳ ಕರಡು ಪ್ರತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17 ಏಪ್ರಿಲ್ 2026 ರಂದು ಸಂಜೆ 05.30 ಗಂಟೆ (ಐಎಸ್‌ಟಿ)

- ಅತ್ಯುತ್ತಮ ಡಾಕ್ಯೂಮೆಂಟರಿಗೆ ಗೋಲ್ಡನ್ ಕಾಂಚ್ + ರೂ.10 ಲಕ್ಷ (ಅಂತರರಾಷ್ಟ್ರೀಯ ಸ್ಪರ್ಧೆ)
- ಇನ್ನಿತರ ವಿವಿಧ ವಿಭಾಗಗಳಿಗೆ ಒಟ್ಟು ರೂ.45 ಲಕ್ಷ ನಗದು ಬಹುಮಾನಗಳು
- ಅತ್ಯುತ್ತಮ ಶಾರ್ಟ್ ಫಿಕ್ಷನ್ ಫಿಲಂ
- ಅತ್ಯುತ್ತಮ ಅನಿಮೇಶನ್ ಫಿಲಂ
- ಅತ್ಯುತ್ತಮ ಡಿಬಟ್ ಫಿಲಂ
- ಅತ್ಯುತ್ತಮ ವಿದ್ಯಾರ್ಥಿ ಚಿತ್ರ
- ತಾಂತ್ರಿಕ ಪ್ರಶಸ್ತಿಗಳು

ನಿಮ್ಮ ಫಿಲಂ ಸಲ್ಲಿಸಲು ಇಲ್ಲಿ ಸ್ಕ್ಯಾನ್ ಮಾಡಿರಿ

ವೆಬ್‌ಸೈಟ್: miff.in

filmfreeway.com/MumbaiInternationalFilmFestival-MIFF

CBC 22105/15/0003/2627

ಜೆ–17011/658/2025–ಐಸಿ–ಪಾರ್ಟ್(2)

ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ

(ಯುವಜನ ವ್ಯವಹಾರಗಳ ಇಲಾಖೆ)

ಜಿಪಿಒಎ–3, ನೇತಾಜಿ ನಗರ, ನವದೆಹಲಿ–110023

ವೆಬ್‌ಸೈಟ್: https://yas.gov.in

ನೇರ ಸಂದರ್ಶನ

ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ಜಿಪಿಒಎ–3, ನೇತಾಜಿ ನಗರ, ನವದೆಹಲಿ–110023 ವಿಳಾಸದಲ್ಲಿ 13ನೇ ಏಪ್ರಿಲ್, 2026 ರಂದು, ಗುತ್ತಿಗೆ ಆಧಾರದ ಮೇರೆಗೆ ಸಮಾಲೋಚಕರ ಹುದ್ದೆಗಳ ನೇಮಕಾತಿಗಾಗಿ ನೇರ ಸಂದರ್ಶನ ಏರ್ಪಡಿಸಲಾಗಿದೆ.

ಸೂಚನೆ: ಖಾಲಿಹುದ್ದೆಗಳ ವಿವರ, ಇನ್ನಿತರ ಮಾಹಿತಿ ಮತ್ತು ತಿದ್ದುಪಡಿಗಳಿಗಾಗಿ, ದಯವಿಟ್ಟು ಆಗಾಗ್ಗೆ https://yas.gov.in ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ. ಈ ಕುರಿತಾಗಿ ದಿನಪತ್ರಿಕೆಗಳಲ್ಲಿ ಪ್ರತ್ಯೇಕ ಪ್ರಕಟಣೆಯನ್ನು ಪ್ರಕಟಿಸಲಾಗುವುದಿಲ್ಲ.

ಸಹಿ/–

ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ

CBC 47107/11/0001/2627

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಬೆಂಗಳೂರು

ಸಂ: ಕರಾಸಾ/ಕಾನಿಅ/ಬೆಂ/ಕಿಅ/13/2026–27 ದಿನಾಂಕ: 07.04.2026

ಹರಾಜು ಪ್ರಕಟಣೆ

ಕ.ರಾ.ರ.ಸಾ.ನಿಗಮ, ಬೆಂಗಳೂರಿನ ಶಾಂತಿನಗರದಲ್ಲಿರುವ ಹಳೆಯ ಸಿಬ್ಬಂದಿ ವಸತಿ ಗೃಹ ಬ್ಲಾಕ್ ನಂ: 10A. ಬ್ಲಾಕ್ ಸಂ: 13. ಬ್ಲಾಕ್ ಸಂ: ESI-9, ಬ್ಲಾಕ್ ಸಂ: 9, (04 ಬ್ಲಾಕ್ X 12=48 ವಸತಿ ಗೃಹ) ಹಾಗೂ ಕ.ರಾ.ರ.ಸಾ. ನಿಗಮದ ಧರ್ಜೆ–02 ಅಧಿಕಾರಿಗಳ ಬ್ಲಾಕ್–01 & ಬ್ಲಾಕ್–02 (02 ಬ್ಲಾಕ್ X 04=08 ವಸತಿ ಗೃಹ) ವಸತಿ ಗೃಹ ಕಟ್ಟಡಗಳನ್ನು ನಿಯಮಾನುಸಾರ **"ಎಲ್ಲಿದೆಯೋ ಹೇಗಿದೆಯೋ ಹಾಗೆಯೇ"** (As is where is basis) ಹರಾಜು ಪ್ರಕ್ರಿಯೆಯನ್ನು ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕ.ರಾ.ರ.ಸಾ.ನಿಗಮ. ಕಾಮಗಾರಿ ವಿಭಾಗ, ಬೆಂಗಳೂರು ಇಲ್ಲಿ **ದಿನಾಂಕ 24.04.2026 ರಂದು 12.00 ಗಂಟೆಗೆ** ನಡೆಸಲಾಗುವುದು. ಆಸಕ್ತ ಬಿಡ್‌ದಾರರು ಹೆಚ್ಚಿನ ವಿವರಗಳಿಗಾಗಿ **ಕಾರ್ಯನಿರ್ವಾಹಕ ಅಭಿಯಂತರರು, ಕರಾರಸಾ ನಿಗಮ, ಹಳೆ ಸಿಟಿಐ ಕಟ್ಟಡ, ಶಾಂತಿನಗರ, ಬೆಂಗಳೂರು** ನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ ಬೆಂಗಳೂರು.

ವಾಸಾಸಂಇ/ಉನಿ–ಸಿ.ಪಿ/101/ಕೆಎಸ್‌ಎಂಸಿಎ/2026–27

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರಾದ, ಶ್ರೀ ಎಚ್ ಡಿ ಬಾಲಕೃಷ್ಣೇಗೌಡ ಅವರ ಪುತ್ರ ಶ್ರೀ ಕುನಾಲ್ ಬಾಲಕೃಷ್ಣೇಗೌಡ (ಮಾಲೀಕರು), ಇಲ್ಲಿ ವಿವರ ಪಟ್ಟಿಯಲ್ಲಿ ಹೆಚ್ಚು ವಿವರಿಸಿರುವ ಸ್ಥಿರ ಆಸ್ತಿಗಳ ಕಾನೂನು ಬದ್ಧ ಮತ್ತು ಇವರ ಸ್ವಾಧೀನದಲ್ಲಿ ಇವರೇ ಇದರ ಸಂಪೂರ್ಣ ಮಾಲೀಕರಾಗಿದ್ದಾರೆ ಮತ್ತು ಇನ್ನು ಮುಂದೆ ಇದನ್ನು ವಿವರ ಪಟ್ಟಿಯ ಆಸ್ತಿಗಳು ಎಂದು ಕರೆಯಲಾಗುತ್ತದೆ. ಇದನ್ನು ಇದರ ಮಾಲೀಕರು ದಿನಾಂಕ 22.12.2025 ರಂದು ಮಾರಾಟ ಪ್ರಮಾಣ ಪತ್ರದ ಮುಖಾಂತರ ಸ್ವಾಧೀನ ಪಡಿಸಿಕೊಂಡಿರುತ್ತಾರೆ (ಇದನ್ನು ಚಾಮರಾಜನಗರದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ದಿನಾಂಕ 03.03.2026 ರಂದು ನೋಂದಾಯಿಸಲಾಗಿದೆ, ಇದರ ದಾಖಲೆ ಸಂಖ್ಯೆ CRJ-I Part-(III)(a)-00001-2025-26, ಪುಸ್ತಕ–1) ಹಾಗೂ ಇದನ್ನು ನ್ಯಾಯಮೂರ್ತಿ (ನಿವೃತ್ತ) ಆರ್. ಎಂ.ಲೋಧಾ ಸಮಿತಿಯವರು ಕಾರ್ಯಗತಗೊಳಿಸಿರುತ್ತಾರೆ.

ಈ ಮೂಲಕ ಸೂಚನೆಯನ್ನು ನೀಡುವುದೇನೆಂದರೆ, i) ಇದರ ಮಾಲೀಕರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿ / ವ್ಯಕ್ತಿಗಳಿಗೆ ವಿವರ ಪಟ್ಟಿಯ ಆಸ್ತಿಗಳಲ್ಲಿ ಯಾವುದೇ ಹಕ್ಕು, ಶೀರ್ಷಿಕೆ ಅಥವಾ ಆಸಕ್ತಿ ಇರುವುದಿಲ್ಲ ; ii) ಇದರ ಮಾಲೀಕರ ಸ್ಪಷ್ಟ ಅನುಮತಿ ಇಲ್ಲದೆ ವಿವರ ಪಟ್ಟಿಯ ಆಸ್ತಿಗಳ ಪರವಾಗಿ ಯಾವುದೇ ವ್ಯಕ್ತಿ / ವ್ಯಕ್ತಿಗಳು ನಡೆಸುವ ಯಾವುದೇ ವಹಿವಾಟು ಒಪ್ಪಂದ ಅಥವಾ ದಾಖಲೆಯು ಅನೂರ್ಜಿತವಾಗಿರುತ್ತದೆ ಮತ್ತು ; iii) ಇದರ ಮಾಲೀಕರ ಒಪ್ಪಿಗೆ ಇಲ್ಲದೆ ವಿವರ ಪಟ್ಟಿಯ ಆಸ್ತಿಗಳನ್ನು ಪ್ರವೇಶಿಸುವ, ಅತಿಕ್ರಮಿಸುವ ಅಥವಾ ಬಳಸಲು ಪ್ರಯತ್ನಿಸುವ ಯಾವುದೇ ವ್ಯಕ್ತಿ / ವ್ಯಕ್ತಿಗಳನ್ನು ಅತಿಕ್ರಮಣಕಾರರೆಂದು ಪರಿಗಣಿಸಲಾಗುತ್ತದೆ. ವಿವರ ಪಟ್ಟಿಯ ಆಸ್ತಿಗಳ ವಿವಾದವಿಲ್ಲದ ಸ್ವತ್ತಿನ ಒಡೆತನದಲ್ಲಿ, ಯಾವುದೇ ಹಸ್ತಕ್ಷೇಪವು ಕಾನೂನಿನ ಅಡಿಯಲ್ಲಿ ಕ್ರಿಮಿನಲ್ ಮೊಖದ್ದಮೆ ಸೇರಿದಂತೆ ಕಠಿಣ ಕಾನೂನು ಕ್ರಮಕ್ಕೆ ಅನುವು ಮಾಡಿದಂತಾಗುತ್ತದೆ.

ವಿವರ ಪಟ್ಟಿ (ಇದರ ಪಟ್ಟಿಯ ಆಸ್ತಿಗಳ ವಿವರಣೆ)

ಈ ಎಲ್ಲಾ ಸಮಗ್ರ ಸ್ವತ್ತಿನ ಒಟ್ಟು ವಿಸ್ತೀರ್ಣ 22 ಎಕರೆ 23 ಗುಂಟೆಗಳ ಅಳತೆಯದ್ದಾಗಿದ್ದು, ಈ ಎಲ್ಲಾ ಸ್ವತ್ತು ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು, ಹಂಗಳ ಹೋಬಳಿ, ಜಕ್ಕನ ಹಳ್ಳಿ ಗ್ರಾಮದಲ್ಲಿದೆ. ಇದರ ವಿವರಣೆ ಈ ಕೆಳಗಿನಂತಿದೆ.

ಕ್ರ ಸಂ	ಸರ್ವೆ ಸಂಖ್ಯೆ	ವಿಸ್ತೀರ್ಣ ಎಕರೆ	ಗುಂಟೆಗಳು
1	1/1	03	01
2	59/1	00	09
3	55	02	38
4	56	03	19
5	57/2	01	35
6	58/2	02	26
7	59/2	02	15
8	110	04	00
9	57/1	02	00

ಶ್ರೀಮತಿ ಬ್ರಿಜಿತಾ ಪ್ರಕಾಶ್, ಪಾಲುದಾರರು

ಜೆ. ಸಾಗರ್ ಅಸೋಸಿಯೇಟ್ಸ್, ವಕೀಲರು ಮತ್ತು ಸಾಲಿಸಿಟರ್‌ಗಳು,

18ನೇ ಮಹಡಿ, ಎಸ್‌ಕೆಎವಿ 909, ಸಂಖ್ಯೆ. 9/1, ರೆಸಿಡೆನ್ಸಿ ರಸ್ತೆ, ರಿಚ್‌ಮಂಡ್ ವೃತ್ತ, ಬೆಂಗಳೂರು 560025, ಕರ್ನಾಟಕ, ಭಾರತ. ಫೋ. 080 43503600/080 43503676

ಇಮೇಲ್ : brijita.prakash@jsalaw.com ದಿನಾಂಕ : 09.04.2026, ಸ್ಥಳ: ಬೆಂಗಳೂರು.

ಯುದ್ಧ ನಿಲ್ಲಿಸಿ ಶಾಂತಿ ಸ್ಥಾಪಿಸಲು ಆಗ್ರಹ

ಸಮಾನ ಮನಸ್ಕರಿಂದ ಮೊಂಬತ್ತಿ ಹಚ್ಚಿ ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೇಡಿಗಾಗಿ ಹೋರಾಡಿ ಯಾರೂ ಗೆದ್ದಿಲ್ಲ, ಕ್ಷಮಾದಾನದಿಂದ ಯಾರೂ ಸೋತಿಲ್ಲ', 'ನಿಮ್ಮ ಶತ್ರುಗಳಿಗಾಗಿ ಪ್ರಾರ್ಥಿಸಿರಿ, ನಿಮ್ಮನ್ನು ಹಿಂಸಿಸುವವರಿಗಾಗಿ ಪ್ರಾರ್ಥಿಸಿರಿ', 'ದಯೆಯೇ ಧರ್ಮದ ಮೂಲವಯ್ಯ', 'ಕಣ್ಣಿಗೆ ಕಣ್ಣು ಎಂಬ ಸಿದ್ಧಾಂತ ಮುಂದುವರಿದರೆ ಮುಂದೊಂದು ದಿನ ಇಡೀ ಜಗತ್ತೇ ಕುರುಡಾಗಬಹುದು...'

ಸಮಾನ ಮನಸ್ಕರು ಸೇರಿ ಪುರಭವನದ ಮುಂದೆ ಬುಧವಾರ ಹಮ್ಮಿಕೊಂಡಿದ್ದ 'ಯುದ್ಧ ನಿಲ್ಲಿಸಿ, ಶಾಂತಿ ಸ್ಥಾಪಿಸಿ–ಭೂಮಿ ರಕ್ಷಿಸಿ' ಜಾಗೃತಿ ಅಭಿಯಾನದಲ್ಲಿ ಕಂಡುಬಂದ ಬುದ್ಧ, ಯೇಸು, ಬಸವಣ್ಣ, ಮಹಾತ್ಮ ಗಾಂಧೀಜಿ ಮುಂತಾದ ದಾರ್ಶನಿಕರ ಮಾತುಗಳನ್ನು ಒಳಗೊಂಡ ಭಿತ್ತಿಪತ್ರಗಳು ಇವು.

ಯುದ್ಧ ಎಂಬುದೇ ಜೀವವಿರೋಧಿ ಕ್ರಿಯೆ. ಭಾರತ ಎಂದಿಗೂ ಯಾವುದೇ ಯುದ್ಧದ ಪರ ನಿಂತಿರಲಿಲ್ಲ. ಭಾರತದ ವಿದೇಶಾಂಗ ನೀತಿಗೆ ತಿಲಾಂಜಲಿ ಇಡುವ ಮೂಲಕ ದೇಶವು ಜಗತ್ತಿನ ಎದುರು ತಲೆತಗ್ಗಿಸುವಂತೆ ಮೋದಿ ಸರ್ಕಾರ ಮಾಡಿದೆ. ವಿದೇಶಾಂಗ ನೀತಿ ಅಪಮೌಲ್ಯಗೊಂಡಿದೆ ಎಂದು ಸಮಾನ ಮನಸ್ಕರು ದೂರಿದರು.

'ಯುದ್ಧವು ಇಸ್ರೇಲ್–ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರಬಹುದು. ಅದರ ಪರಿಣಾಮವನ್ನು ನಾವೂ ಅನುಭವಿಸುವಂತಾಗಿದೆ. ಎಲ್‌ಪಿಜಿ ಸಿಲಿಂಡರ್ ಇಲ್ಲದೇ ಹೋಟೆಲ್ ನಡೆಸುವವರು ಪರದಾಡುವಂತಾಗಿದೆ. ಆಟೊಗಳು ನಿತ್ಯ ಸಾಲುಗಟ್ಟಿ ನಿಂತು ಗ್ಯಾಸ್ ತುಂಬಿಸಲು ಕಾಯುವಂತಾಗಿದೆ' ಎಂದು ಬೇಸರಪಟ್ಟರು.

'ಭಾರತಕ್ಕೂ ಇರಾನ್‌ಗೂ ನಾಲ್ಕು ಸಾವಿರ ವರ್ಷಗಳಿಂದ ಸಂಬಂಧವಿದೆ. ಸ್ವತಂತ್ರ ಭಾರತ ಮತ್ತು ಇರಾನ್ ನಡುವಿನ ಬಾಂಧವ್ಯವೂ ಚೆನ್ನಾಗಿತ್ತು. ಆದರೆ, ಯುದ್ಧದ ಆರಂಭದ ದಿನಗಳಲ್ಲೇ ಈಗಿನ ಸರ್ಕಾರ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿತ್ತು' ಎಂದು ಆಪಾದಿಸಿದರು.

ಸಮಾನ ಮನಸ್ಕರಾದ ಎಲ್.ಎನ್. ಮುಕುಂದರಾಜ್, ಶಿವಸುಂದರ್, ಮಂಜುನಾಥ್, ಕೆ.ಪ್ರಕಾಶ್, ಮಹಾಂತೇಶ್, ಬಾಲಕೃಷ್ಣ ಶೆಟ್ಟಿ, ಜೆಪಿಜಿ ಚಂದ್ರು, ನಗರಗೆರೆ ರಮೇಶ್, ವಿವೇಕಾನಂದ ಎಚ್.ಕೆ., ರೂಪೇಶ್ ಪುತ್ತೂರು, ಉಮೇಶ್, ಯುವರಾಜ್, ಪ್ರಕಾಶಮೂರ್ತಿ, ಬ್ಯಾಡರಹಳ್ಳಿ ಶಿವರಾಜ್, ಕೆ.ವಿ.ನಾಗರಾಜಮೂರ್ತಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

'ಯುದ್ಧ ನಿಲ್ಲಿಸಿ, ಶಾಂತಿ ಸ್ಥಾಪಿಸಿ–ಭೂಮಿ ರಕ್ಷಿಸಿ' ಎಂದು ಸಮಾನ ಮನಸ್ಕರ ವೇದಿಕೆ ಸದಸ್ಯರು ನಗರದ ಪುರಭವನದ ಮುಂದೆ ಜಾಗೃತ ಅಭಿಯಾನ ನಡೆಸಿದರು ಪ್ರಜಾವಾಣಿ ಚಿತ್ರ

ದ್ವೇಷ, ನಿಂದನೆ ಭಾಷೆ ಬಳಸುವವರು ನಮ್ಮ ಸುತ್ತಮುತ್ತ ಇದ್ದಾರೆ. ಇದು ಯುದ್ಧದ ಭಾಷೆಯೇ ಆಗಿದೆ
ಟಿ.ಆರ್. ಚಂದ್ರಶೇಖರ್, ನಿವೃತ್ತ ಪ್ರಾಧ್ಯಾಪಕ

ಟ್ರಂಪ್ ಮತ್ತು ಮೋದಿ ಈ ಶತಮಾನದ ದೊಡ್ಡ ಬೇಕೂಫರು. ಅಂಥವರ ಕೈಗೆ ಜನರು ಆಡಳಿತ ನೀಡಿರುವುದು ದುರಂತ
ಮೀನಾಕ್ಷಿ ಬಾಳಿ, ಬರಹಗಾರ್ತಿ

ಬಂಡವಾಳಗಾರರು ಹೇಳಿದಂತೆ ಕುಣಿವ ರಾಜಕೀಯ ಪ್ರಭೃತಿಗಳಿಂದಾಗಿ ಯುದ್ಧ ನಡೆಯುತ್ತಿದೆ. ಜಗತ್ತಿನ ಜನರು ಪರಿಣಾಮ ಅನುಭವಿಸುವಂತಾಗಿದೆ.
ಮಾವಳ್ಳಿ ಶಂಕರ್, ಡಿಎಸ್‌ಎಸ್ ನಾಯಕ

ಎಲ್ಲೇ ಯುದ್ಧ ನಡೆದರೂ ಶಾಂತಿ ಸಂಧಾನಕ್ಕೆ ಮುಂದಾಗುತ್ತಿದ್ದ ದೇಶ ಭಾರತ. ಈ ಬಾರಿ ಅಮೆರಿಕದ ಜೊತೆಗೆ ಕೇಂದ್ರ ಸರ್ಕಾರ ಕೈಜೋಡಿಸಿ ಭಾರತಕ್ಕೆ ಕೆಟ್ಟ ಹೆಸರು ತಂದಿದೆ
ರವಿವರ್ಮಕುಮಾರ್, ವಕೀಲರು

ಕೆಆರ್‌ಎಸ್ ಉಪಾಧ್ಯಕ್ಷ ಬಂಧನ

ತುಮಕೂರು: ಜನತಾ ದರ್ಶನ ಕಾರ್ಯಕ್ರಮದಲ್ಲಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇರೆಗೆ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಸೋಮಸುಂದರ್ ಅವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

'ಕಾರ್ಯಕ್ರಮ ಮುಗಿಯುವ ಕೊನೆಯಲ್ಲಿ ಬಂದು ಅಹವಾಲು ಕೊಡಬೇಕು ಎಂದು ಹೇಳಿದರು. ಮೇಲಧಿಕಾರಿಗೆ ಕೇಳಿ ಹೇಳುತ್ತೇನೆ ಎಂದಾಗ ನನ್ನ ಜತೆ ಅನುಚಿತವಾಗಿ ವರ್ತಿಸಿದರು. ಕರ್ತವ್ಯಕ್ಕೆ ಅಡ್ಡಿಪಡಿಸಿದರು' ಎಂದು ಪಿಎಸ್‌ಐ ಮಂಜುಳಾ ನೀಡಿದ ದೂರಿನ ಮೇರೆಗೆ ಸೋಮಸುಂದರ್, ಕೆಆರ್‌ಎಸ್ ಉಪಾಧ್ಯಕ್ಷ ಜ್ಞಾನಸಿಂಧೂ ಸ್ವಾಮಿ, ರಾಜ್ಯ ಘಟಕದ ಕಾರ್ಯದರ್ಶಿ ಮಲ್ಲಿಕಾರ್ಜುನ ಭಟ್ಟರಹಳ್ಳಿ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಾಲ್ವರ ನಿರ್ಧಾರವೇ ಅಂತಿಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ಸೇರಿದಂತೆ ಏನೇ ರಾಜಕೀಯ ಬದಲಾವಣೆಗಳಿದ್ದರೂ ಕಾಂಗ್ರೆಸ್‌ನಲ್ಲಿ ನಾಲ್ವರ ನಿರ್ಧಾರವೇ ಅಂತಿಮ' ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ನಾಯಕತ್ವ ಬದಲಾವಣೆ ವಿಚಾರವಾಗಿ ನಾನು ಅಥವಾ ಬೇರೆ ಯಾರೇ ಆಗಲಿ ಏನೇ ಹೇಳಿಕೆ ನೀಡಿದರೂ ಅದು ಅಪ್ರಸ್ತುತ. ಅದಕ್ಕೆ ಯಾವುದೇ ಮಹತ್ವ ಇರುವುದಿಲ್ಲ' ಎಂದರು.

'ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ನಿರ್ಧರಿಸುತ್ತಾರೆ. ಅವರು ಯಾವ ನಿರ್ಧಾರ ಕೈಗೊಳ್ಳುತ್ತಾರೊ ಅದೇ ಅಂತಿಮ' ಎಂದರು.

ಕೇಂದ್ರ ಸರ್ಕಾರ ಕಾರಣ: 'ಆಟೋ ಚಾಲಕರು, ಸಾಮಾನ್ಯ ಜನರು, ಸಣ್ಣಪುಟ್ಟ ಕಾರ್ಖಾನೆಗಳು ಎಲ್‌ಪಿಜಿ ಸಿಗದೆ ಆತಂಕದಲ್ಲಿದ್ದಾರೆಂದರೆ ಅದಕ್ಕೆ ಕೇಂದ್ರ ಸರ್ಕಾರ ಕಾರಣ. ಪೆಟ್ರೋಲಿಯಂ ಉತ್ಪನ್ನಗಳ ಉತ್ಪಾದನೆ ಹಾಗೂ ಪೂರೈಕೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಬಿಜೆಪಿ ನಾಯಕರು ಸಂಸತ್ತಿನಲ್ಲಿ ಪೆಟ್ರೋಲ್ ಉತ್ಪನ್ನಗಳ ದಾಸ್ತಾನು 75, 100 ದಿನಗಳಿಗೆ ಸಾಕಾಗುವಷ್ಟು ಇದೆಯೆಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ, ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಓಡಿ ಹೋಗಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಎಲ್‌ಪಿಜಿ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ, ಎಲ್ಲವೂ ಸರಿಯಿದೆ ಎಂದಾದರೆ ಏಕಾಏಕಿ ಪ್ರಧಾನಿ ನರೇಂದ್ರ ಮೋದಿ ಯಾಕೆ ಕಾಯ್ದೆಗಳನ್ನು ಜಾರಿಗೆ ತಂದಿದ್ದಾರೆ? ಕೋವಿಡ್ ಮಾದರಿಯಲ್ಲಿ ಯುದ್ಧ ಪರಿಸ್ಥಿತಿಯನ್ನು ನಿರ್ವಹಣೆ ಮಾಡೋಣವೆಂದು ಏಕೆ ಹೇಳುತ್ತಿದ್ದಾರೆ' ಎಂದು ಪ್ರಶ್ನಿಸಿದರು.

ಜಲ ಮರುಪೂರಣ 1,928 ಕೋಟಿ ಘನ ಮೀಟರ್

ಬೆಂಗಳೂರು: ರಾಜ್ಯದಲ್ಲಿ ಉತ್ತಮ ಮಳೆ, ಜನಜಾಗೃತಿ ಅಭಿಯಾನದ ಪರಿಣಾಮ ಅಂತರ್ಜಲ ಬಳಕೆ ಇಳಿಕೆಯಾಗಿದ್ದು, ಅಂತರ್ಜಲ ಮರುಪೂರಣ ಸಾಮರ್ಥ್ಯ 1,928 ಕೋಟಿ ಘನ ಮೀಟರ್ ತಲುಪಿದೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಹೇಳಿದರು.

ಅಂತರ್ಜಲ ಮೌಲ್ಯಮಾಪನ ವರದಿ ಬಿಡುಗಡೆ ಮಾಡಿ ಮಾತನಾಡಿದ ಅವರು, 'ವರದಿಯ ಪ್ರಕಾರ ಅಂತರ್ಜಲಮಟ್ಟದಲ್ಲಿ ಗಣನೀಯ ಸುಧಾರಣೆ ಕಂಡುಬಂದಿದೆ. ಮರುಪೂರಣ ಪ್ರಮಾಣವು 2024ರಲ್ಲಿ 1,874 ಕೋಟಿ ಘನ ಮೀಟರ್ (ಬಿಸಿಎಂ) ಇತ್ತು. ವಾರ್ಷಿಕ ಲಭ್ಯವಿರುವ ಅಂತರ್ಜಲ ಸಂಪನ್ಮೂಲವೂ 1,741 ಕೋಟಿ ಘನ ಮೀಟರ್‌ನಷ್ಟಿದೆ' ಎಂದರು.

ಭದ್ರಾ ಜಲ ಸಂರಕ್ಷಣಾ ನೀತಿಗಳ ಯಶಸ್ವಿನ ಫಲವಾಗಿ ಅಂತರ್ಜಲ ಸೂಚ್ಯಂಕಗಳಲ್ಲಿ ಗಮನಾರ್ಹ ಸುಧಾರಣೆ ದಾಖಲಿಸಿದೆ. ಅಂತರ್ಜಲ ಬಳಕೆಯು ಶೇ 68.44ರಿಂದ ಶೇ 66.49ಕ್ಕೆ ಇಳಿಕೆಯಾಗಿದೆ. ಲಭ್ಯವಿರುವ ವಾರ್ಷಿಕ ಅಂತರ್ಜಲದಲ್ಲಿ ಸರಾಸರಿ ಶೇ 66.5ರಷ್ಟನ್ನು ಬಳಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ವೈಜ್ಞಾನಿಕ ಜಲ ನಿರ್ವಹಣೆ, ಕೆರೆಗಳ ಪುನರುಜ್ಜೀವನ ಯೋಜನೆಗಳು ಮತ್ತು ಕರ್ನಾಟಕದಾದ್ಯಂತ ಜಲ ಸಂರಕ್ಷಣಾ ರಚನೆಗಳ ನಿರ್ಮಾಣ, ಕೆರೆ ತುಂಬಿಸುವ ಯೋಜನೆಗಳು ಅತ್ಯುತ್ತಮ ಫಲಿತಾಂಶ ನೀಡಿವೆ ಎಂದರು.

ನಗರದಲ್ಲಿ ಇಂದು

ಅಂಗವೈಕಲ್ಯ ಒಳಗೊಳ್ಳುವಿಕೆಯ ಮಧ್ಯಸ್ಥಿಕೆ: ವೈವಿಧ್ಯತೆ, ಸಮಾನತೆ, ಸುಸ್ಥಿರತೆ ಕುರಿತ ರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಉಮಾ ಮಹದೇವನ್, ಅಧ್ಯಕ್ಷತೆ: ಬಿ. ರಮೇಶ್, ಭಾಷಣಕಾರ: ಜಿ.ಕೆ. ಮಹಾಂತೇಶ್, ಅತಿಥಿಗಳು: ಎನ್.ಎಸ್. ಸೆಂಥಿಲ್ ಕುಮಾರ್, ವೈ.ಎಸ್. ಸಿದ್ದೇಗೌಡ, ಐ.ಎ. ಷರೀಫ್, ಆಯೋಜನೆ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಎಪಿಡಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10

ಸಿ.ಜಿ. ಶ್ರೀನಿವಾಸನ್ ಅಭಿನಂದನಾ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಎಂ.ಬಿ. ಪಾಟೀಲ, ಕೆ.ಎಚ್. ಮುನಿಯಪ್ಪ, ಶಿವರಾಜ ತಂಗಡಗಿ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಆಯೋಜನೆ: ಸಿ.ಜಿ. ಶ್ರೀನಿವಾಸನ್ ಅಭಿನಂದನಾ ಬಳಗ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11

ಕರ್ನಾಟಕ ಲೇಖಕಿಯರ ಸಂಘದ ವಾರ್ಷಿಕ ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಹೇಮಲತಾ ಮಹಿಷಿ, ಪ್ರಶಸ್ತಿ ಪ್ರದಾನ: ಎಸ್.ಜಿ. ಸಿದ್ಧರಾಮಯ್ಯ, ವೆಬ್‌ಸೈಟ್ ಬಿಡುಗಡೆ: ಬಿ.ಟಿ. ಲಲಿತಾ ನಾಯಕ್, ಉಪಸ್ಥಿತಿ: ಎನ್. ಗಾಯತ್ರಿ, ಜಿ.ಎನ್. ಮೋಹನ್, ಅಧ್ಯಕ್ಷತೆ: ಆರ್. ಸುನಂದಮ್ಮ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2.30



ಎಸ್ ಜಿ.ಸಿದ್ಧರಾಮಯ್ಯ

ದೃಶ್ಯೋತ್ಸವ: ಅತಿಥಿಗಳು: ಕಾಮಕರ್ ದತ್ತ, ವೆಂಕಟಾಚಲಪತಿ, ಉಪಸ್ಥಿತಿ: ಬಿ.ಎಲ್. ಶಂಕರ್, ಗುರುರಾಜ ಕರಜಗಿ, ಶಶಿಧರ್ ಎಸ್.ಎನ್., ಬಿ.ಎಲ್. ಶ್ರೀನಿವಾಸ, ಗೋಮತಿ ಗೌಡ, ಆಯೋಜನೆ: ಚಿತ್ರಕಲಾ ಮಹಾವಿದ್ಯಾಲಯ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11



ಗುರುರಾಜ ಕರಜಗಿ

ದಾಸವಾಣಿ: ಗಾಯನ: ರಾವ್ ಆರ್. ಶರತ್, ಕೀ–ಬೋರ್ಡ್: ವಸಂತ ಕುಂಬ್ಳೆ, ಮೃದಂಗ: ವರದರಾಜ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಐದನೇ ಬಡಾವಣೆ, ಜಯನಗರ, ಸಂಜೆ 5

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಅಪೂರ್ವ ಹೆಮ್ಮಿಗೆ ಅರುಣ್ ಮತ್ತು ತಂಡ, ಪಿಟೀಲು–ನಾದಸ್ವರ ಜುಗಲ್‌ಬಂದಿ: ಎಚ್.ಕೆ. ವೆಂಕಟರಾಮ್, ಮೈಲೈ ಕಾರ್ತಿಕೇಯನ್, ದಿಲ್ಲಿ ಸಾಯಿರಾಮ್, ಓಂಕಾರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5 ರಿಂದ

55ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ–2026, ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸಂತೋಷ್ ಎಸ್. ಲಾಡ್, ಅಧ್ಯಕ್ಷತೆ: ಸಲ್ಮಾ ಕೆ. ಫಹೀಮ್, ಆಯೋಜನೆ: ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆ ಹಾಗೂ ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಹೊಸೂರು ಮುಖ್ಯರಸ್ತೆ, ಸಂಜೆ 6.30

33ನೇ ಶ್ರೀರಾಮನವಮಿ ಸಂಗೀತೋತ್ಸವ: ಪಿಟೀಲು–ವೀಣೆ ವಾದನ: ವೈಭವ್ ರಮಣಿ, ರಕ್ಷಿತಾ ರಮೇಶ್, ಮೃದಂಗ: ಬಿ.ಸಿ. ಮಂಜುನಾಥ್, ಘಟ: ಸ್ಕಂದ ಮಂಜುನಾಥ್, ಕೊನ್ನಕ್ಕೋಲ್: ಸೋಮಶೇಖರ್ ಜೋಯಿಸ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

ಕನ್ನಡ ನಾಟಕೋತ್ಸವ–2026: 'ಧ್ರುವಸ್ವಾಮಿನಿ' ನಾಟಕ ಪ್ರದರ್ಶನ, ಪ್ರಸ್ತುತಿ: ರಂಗ ಪರಂಪರೆ ಟ್ರಸ್ಟ್, ನಿರ್ದೇಶನ: ಗಣಪಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: 'ದಶಮಸ್ಕಂದ ಉತ್ತರಾರ್ಧ' ಉಪನ್ಯಾಸ: ಖೇಡಾ ವೇದವ್ಯಾಸಾಚಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಒಂಬತ್ತನೇ ಬಡಾವಣೆ, ಜಯನಗರ, ಸಂಜೆ 6.30

'ಎಐ ಇನ್ ಲೀಗಲ್ ವರ್ಕ್‌ಫ್ಲೊ ಆ್ಯಂಡ್ ನ್ಯೂರೊ ಜಸ್ಟೀಸ್ ಆ್ಯಪ್' ಪ್ರಾತ್ಯಕ್ಷಿಕೆ ಕಾರ್ಯಕ್ರಮ: ಅತಿಥಿಗಳು: ಅನು ಶಿವರಾಮನ್, ಎ.ವಿ. ಚಂದ್ರಶೇಖರ್, ದ್ವಾರಕಾನಾಥ್ ಶ್ರೀನಿವಾಸ್, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಹಾಲ್ ಸಂಖ್ಯೆ–1, ಹೈಕೋರ್ಟ್ ಯೂನಿಟ್, ಮಧ್ಯಾಹ್ನ 1.30

ಅನು ಶಿವರಾಮನ್

ಸುಗಮ ಸಂಗೀತ ಕಛೇರಿ: ಗಾಯನ: ರಂಜಿತಾ ಪ್ರಸಾದ್, ಭಾವನಾ ಮೂರ್ತಿ, ಕೀ–ಬೋರ್ಡ್: ಎಚ್.ಬಿ. ಜಯರಾಮ್, ತಬಲಾ: ಶ್ರೀನಿವಾಸ ಕಾಖಂಡಕಿ, ಕೊಳಲು: ಬಾಲಸುಬ್ರಹ್ಮಣ್ಯಂ, ಆಯೋಜನೆ: ವೈಯ್ಯಾಲಿಕಾವಲ್ ಎಕ್ಸ್‌ಟೆನ್ಶನ್ ಅಸೋಸಿಯೇಷನ್, ಸ್ಥಳ: ಶ್ರೀ ರಾಮ ಮಂದಿರ, ಒಂಬತ್ತನೇ ಮುಖ್ಯರಸ್ತೆ, 14ನೇ ಅಡ್ಡರಸ್ತೆ, ವೈಯ್ಯಾಲಿಕಾವಲ್, ಸಂಜೆ 6.30

ಎಚ್.ಎಲ್. ನಾಗೇಗೌಡ ಅವರು ರಚಿಸಿರುವ 'ಪ್ರವಾಸಿ ಕಂಡ ಇಂಡಿಯಾ' ಎಂಟು ಸಂಪುಟಗಳ ಕಿರು ಪರಿಚಯ: ಕೆ.ಬಿ. ಮಹದೇವಪ್ಪ, ಉಪಸ್ಥಿತಿ: ಎಂ.ಸಿ. ನರೇಂದ್ರ, ಮಹಾಂತೇಶ ದೇಗಾವಿ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30 nagaradalli_indu@prajavani.co.in

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಆನೇಕಲ್ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 44ರ ಬೆಂಗಳೂರು –ಚಂದಾಪುರ ಅತ್ತಿಬೆಲೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಡಾ.ಸಿ.ಎನ್.ಮಂಜುನಾಥ್ ಪರಿಶೀಲಿಸಿದರು

ಚಂದಾಪುರ ಹೆದ್ದಾರಿ: ಮುಂದಿನ ವರ್ಷ ವಾಹನ ದಟ್ಟಣೆ ಮುಕ್ತ

ಪ್ರಜಾವಾಣಿ ವಾರ್ತೆ

ಚಂದಾಪುರ(ಆನೇಕಲ್): ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 44ರ ಬೆಂಗಳೂರು-ಚಂದಾಪುರ-ಅತ್ತಿಬೆಲೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು ಬುಧವಾರ ಪರಿಶೀಲಿಸಿದರು. ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಂದ ಮಾಹಿತಿ ಪಡೆದರು.

ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಕಾಮಗಾರಿ ಪ್ರಗತಿಯಲ್ಲಿದ್ದು, ಹಲವು ಸಮಸ್ಯೆಗಳಿಗೆ ಇದರಿಂದ ಪರಿಹಾರ ದೊರೆಯಲಿದೆ. ವೀರಸಂದ್ರದಲ್ಲಿ ಮಳೆ ಬಂದಾಗ ಕೊಳಚೆ ನೀರು ರಸ್ತೆಯಲ್ಲಿ ಹರಿಯುತ್ತದೆ. ಹಾಗಾಗಿ ನೀರು ರಸ್ತೆಗೆ ನೀರು ಬಾರದಂತೆ ಕ್ರಮ ವಹಿಸಲು ಚರಂಡಿ ಕಾಮಗಾರಿ ಕೈಗೊಳ್ಳಲಾಗಿದೆ. 45 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ವಿವರಿಸಿದರು.

ಚಂದಾಪುರ ರೈಲ್ವೆ ಸೇತುವೆ ಬಳಿ ರಸ್ತೆ ವಿಸ್ತರಣೆ ಮಾಡಲಾಗುತ್ತಿದೆ ನವೆಂಬರ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಗುಡ್ಡಹಟ್ಟಿ, ಗೆಸ್ಟ್‌ಲೈನ್ ಬಳಿ ಕೆಳಸೇತುವೆ ನಿರ್ಮಾಣ ಮಾಡಲಾಗಿದೆ. ರಸ್ತೆಯಲ್ಲಿ ದಟ್ಟಣೆ ತಪ್ಪಿಸಲು ವಾಹನಗಳಿಗೆ ಅನುಕೂಲವಾಗುವಂತೆ ರಸ್ತೆ ವಿಭಜಕ ನಿರ್ಮಾಣ ಮಾಡಿದ್ದು, ಮೂರು ಪಥಗಳಲ್ಲಿ ವಾಹನಗಳು ಸಾಗಲಿವೆ ಎಂದರು.

ಎಸ್‌ಟಿಆರ್‌ಆರ್ ಪೂರ್ವ ಕಾಮಗಾರಿಯು ಆಗಸ್ಟ್ ವೇಳೆಗೆ ಮುಗಿಯಲಿದ್ದು, ಇದರಿಂದ ಚಂದಾಪುರ, ಅತ್ತಿಬೆಲೆ, ಹೊಸೂರು ರಸ್ತೆಯಲ್ಲಿ ಶೇಕಡ 70ರಷ್ಟು ಲಾರಿಗಳು ಸೇರಿದಂತೆ ಭಾರಿ ವಾಹನಗಳ ಓಡಾಡುವುದಿಲ್ಲ. ಕಾಮಗಾರಿಗಳನ್ನು ತ್ವರಿತವಾಗಿ ಮುಗಿಸುವಂತೆ ಕ್ರಮ ವಹಿಸಲಾಗಿದೆ. ಈ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳು, ಕೆಆರ್‌ಐಡಿಎಲ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ ಎಂದು ಹೇಳಿದರು.

ಚಂದಾಪುರ ಪುರಸಭಾ ಅಧ್ಯಕ್ಷೆ ಶಾರದಾ ವರದರಾಜು, ಮುಖ್ಯಾಧಿಕಾರಿ ರಮೇಶ್ ರಾಜು, ಬಿಜೆಪಿ ಮಂಡಲ ಅಧ್ಯಕ್ಷ ಎಸ್.ಆರ್.ಟಿ.ಅಶೋಕ್, ಮುಖಂಡರಾದ ಲಕ್ಷ್ಮೀಕಾಂತ್, ಮುರಳಿ, ಶಶಿ, ನಾಗೇಶ್ ರೆಡ್ಡಿ, ನಾರಾಯಣರೆಡ್ಡಿ ಇದ್ದರು.

ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭ

ದೊಡ್ಡಬೆಳವಂಗಲ: 2,100 ಎಕರೆ ಕೃಷಿ ಭೂಮಿ ಸ್ವಾಧೀನಕ್ಕೆ ವಿರೋಧ– ಹೋರಾಟಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ದೊಡ್ಡಬೆಳವಂಗಲ (ದೊಡ್ಡಬಳ್ಳಾಪುರ): ತಾಲ್ಲೂಕಿನ ದೊಡ್ಡಬೆಳವಂಗಲ, ಚಿಕ್ಕಬೆಳವಂಗಲ, ರಾಂಪುರ, ಸೊಣ್ಣೇನಹಳ್ಳಿ, ನಾರಾನಹಳ್ಳಿ ಸುತ್ತಮುತ್ತ ಫಲವತ್ತಾದ 2,100 ಎಕರೆ ಕೃಷಿ ಜಮೀನು ಸ್ವಾಧೀನ ವಿರೋಧಿಸಿ ರೈತರು ಬುಧವಾರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಕೆಐಎಡಿಬಿಯಿಂದ 1,777 ಎಕರೆ ಕೃಷಿ ಜಮೀನು ಸ್ವಾಧೀನ ವಿರೋಧಿಸಿ ಮೂರು ವರ್ಷ ಹೋರಾಟ ನಡೆಸಿ ಗೆದ್ದ ಬಳಿಕ ಅಂತಹದ್ದೇ ಹೋರಾಟಕ್ಕೆ ಇಲ್ಲಿನ ರೈತರು ಅಣಿಯಾಗಿದ್ದು, 'ಯಾವ ಕಾರಣಕ್ಕೂ ಕೆಐಎಡಿಬಿಗೆ ಒಂದಿಂಚು ಭೂಮಿ ಬಿಟ್ಟು ಕೊಡುವುದಿಲ್ಲ' ಎಂದು ಒಮ್ಮತದ ತೀರ್ಮಾನಕ್ಕೆ ಬಂದಿದ್ದಾರೆ.

ದೊಡ್ಡಬೆಳವಂಗಲದ ಹಳೆ ನಾಡ ಕಚೇರಿ ಆವರಣದಲ್ಲಿ ಸತ್ಯಾಗ್ರಹಕ್ಕೆ ಚಾಲನೆ ನೀಡಿದ ಹೈಕೋರ್ಟ್ ಹಿರಿಯ ವಕೀಲ, ಸ್ವತಃ ರೈತರೂ ಆಗಿರುವ ಸಿ.ಎಚ್. ಹನುಮಂತರಾಯ, 'ಅಭಿವೃದ್ಧಿಗೆ ನಾವು ವಿರೋಧಿಗಳಲ್ಲ. ಆದರೆ ಎಲ್ಲಾ ಜಮೀನುಗಳನ್ನು ತಾಲ್ಲೂಕಿನ ರೈತರಿಂದಲೇ ಕಸಿದುಕೊಂಡು ಇಲ್ಲಿನ ರೈತರು ಗುಳೆ ಹೋಗುವಂತೆ ಮಾಡುವ ಸರ್ಕಾರದ ಅವೈಜ್ಞಾನಿಕ ಕ್ರಮವನ್ನು ವಿರೋಧಿಸುತ್ತಿದ್ದೇವೆ' ಎಂದು ಹೇಳಿದರು.

ಐದು ಸಾವಿರ ಎಕರೆ ಪ್ರದೇಶದಲ್ಲಿ ಕ್ವಿನ್‌ಸಿಟಿ ಅಭಿವೃದ್ಧಿಗೆ ಶೇಕಡ 80ರಷ್ಟು ಕೃಷಿ ಜಮೀನುಗಳನ್ನು ದೊಡ್ಡಬೆಳವಂಗಲ ಹೋಬಳಿಯಲ್ಲಿ ಸ್ವಾಧೀನಪಡಿಸಿ ಕೊಳ್ಳಲಾಗುತ್ತಿದೆ. ಇದಿಷ್ಟೇ ಸಾಲದೆಂಬಂತೆ ಈಗ ಅಡಿಕೆ, ತೆಂಗು ಇರುವ ಫಲವತ್ತಾದ 2,100 ಎಕರೆ ಜಮೀನನ್ನು ಇದೇ ಹೋಬಳಿಯಲ್ಲಿ ಸ್ವಾಧೀನಪಡಿಸಿ ಕೊಳ್ಳುತ್ತಿರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೃಷಿ ಜಮೀನು ಉದ್ಯಮಿಗಳ ಪಾಲು: ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕನಿಷ್ಠ ನಿಯಮ ಪಾಲಿಸದೇ ಇಲ್ಲಿನ ಕೃಷಿ ಜಮೀನು ಉದ್ಯಮಿಗಳ ಪಾಲಾಗುವಂತೆ ಮಾಡುವ ಹುನ್ನಾರ ರೂಪಿಸಿದೆ. ಸ್ಥಳೀಯ ಜನಪ್ರತಿಧಿಗಳು ರೈತರ ಜಮೀನು ಉಳಿಸಲು ಎದೆಗಾರಿಕೆ ತೋರಬೇಕು. ಇದಕ್ಕೆ ಪೂರಕವಾಗಿ ಸ್ಥಳೀಯ ರೈತರು ಯಾವುದೇ ರೀತಿಯ ಗೊಂದಲಗಳಿಗೆ ಒಳಗಾಗದೇ ಜನಪ್ರತಿನಿಧಿಗಳಿಗೆ ಬೆಂಬಲವಾಗಿ ನಿಂತು ಧರಣಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

'ನಮ್ಮ ಪೂರ್ವಜರ ಕಾಲದಿಂದಲೂ ಬೆಳೆ ಬೆಳೆಯುತ್ತ ಬಂದಿರುವ ಕೃಷಿ ಜಮೀನನ್ನು ಖಾಲಿ ಭೂಮಿ ಎಂದು ಕಂದಾಯ ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಇದರ ವಿರುದ್ಧ ಸೂಕ್ತ ವೇದಿಕೆಯಲ್ಲಿ ಪ್ರಶ್ನಿಸಲಾಗುವುದು. ರೈತರು ಆತಂಕ ಪಡದೆ ಒಗ್ಗಟ್ಟಿನಿಂದ ಮಾನಸಿಕವಾಗಿ ಹೋರಾಟಕ್ಕೆ ಸಜ್ಜಾಗಬೇಕು' ಎಂದರು.

ಬುಧವಾರ ಸಂಜೆಯಿಂದ ಆರಂಭವಾಗಿರುವ ನಿರಂತರ ಧರಣಿ ಸತ್ಯಾಗ್ರಹದಲ್ಲಿ ವಕೀಲರಾದ ರುದ್ರಾರಾಧ್ಯ, ಕೇಶವಕುಮಾರ್, ಸ್ಥಳೀಯ ಮುಖಂಡರಾದ ಪ್ರಭಾ ಬೆಳವಂಗಲ, ಎಂ.ಗೋವಿಂದರಾಜು, ಆರ್. ಚಂದ್ರತೇಜಸ್ವಿ, ಸುನಿಲ್‌ಕುಮಾರ್, ತಿಮ್ಮೇಗೌಡ, ರಂಗನಾಥ್, ಸಿ.ಎಚ್. ರಾಮಕೃಷ್ಣಯ್ಯ, ವಿಜಯ್ ಕುಮಾರ್, ಡಿ.ಸಿ.ರಾಮೇಗೌಡ, ಡಿ.ಸಿ.ನಾಗರಾಜು, ಕಿಶೋರ್‌ಕುಮಾರ್ ಇದ್ದರು.

ರೈತರಿಗೆ ಡ್ರೋನ್ ಆತಂಕ

ತಾಲ್ಲೂಕಿನ ದೊಡ್ಡಬೆಳವಂಗಲ ಸುತ್ತಮುತ್ತ ಕೆಐಎಡಿಬಿ 2,100 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವುದರ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಿರುವ ಸಮಯದಲ್ಲೇ ಮಂಗಳವಾರ ರಾತ್ರಿ ಈ ಭಾಗದಲ್ಲಿ 8 ರಿಂದ 10 ಡ್ರೋನ್‌ಗಳು ಹಾರಾಟ ನಡೆಸಿವೆ. ಇದು ಭೂಸ್ವಾಧೀನಕ್ಕೆ ನಡೆಸುತ್ತಿರುವ ಸರ್ವೆ ಇರಬಹುದು ಎಂದು ಸ್ಥಳೀಯ ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲ ಸುತ್ತಮುತ್ತ ಕೆಐಎಡಿಬಿ ಫಲವತ್ತಾದ 2,100 ಎಕರೆ ಕೃಷಿ ಜಮೀನು ಸ್ವಾಧೀನ ವಿರೋಧಿಸಿ ಬುಧವಾರದಿಂದ ರೈತರು ಪ್ರಾರಂಭಿಸಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹದಲ್ಲಿ ಸಿ.ಎಚ್.ಹನುಮಂತರಾಯ ಮಾತನಾಡಿದರು

ಸುದ್ದಿ 2 ನಿಮಿಷ

ಮುಂಬೈ - ಬೆಂಗಳೂರು ನಡುವೆ ವಿಶೇಷ ರೈಲು ಸಂಚಾರ

ಬೆಂಗಳೂರು: ಬೇಸಿಗೆಯ ದಿನಗಳಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ಮುಂಬೈನ ಲೋಕಮಾನ್ಯ ತಿಲಕ್ ಟರ್ಮಿನಲ್ ಮತ್ತು ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ನಡುವೆ ವಾರಕ್ಕೊಮ್ಮೆ ವಿಶೇಷ ರೈಲುಗಳನ್ನು ಓಡಿಸುವುದಾಗಿ ಕೇಂದ್ರ ರೈಲ್ವೆಯು ತಿಳಿಸಿದೆ.

ಏಪ್ರಿಲ್ 19 ರಿಂದ ಜುಲೈ 12ರವರೆಗೆ ಪ್ರತಿ ಭಾನುವಾರ ಬೆಳಿಗ್ಗೆ 11.50ಕ್ಕೆ ಲೋಕಮಾನ್ಯ ತಿಲಕ್ ಟರ್ಮಿನಲ್‌ನಿಂದ ಹೊರಡುವ ಈ ರೈಲು ಸೋಮವಾರ ಬೆಳಿಗ್ಗೆ 11.45ಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲಿದೆ. ಏ. 20ರಿಂದ ಜುಲೈ 13ರವರೆಗೆ ಪ್ರತಿ ಸೋಮವಾರ ಮಧ್ಯಾಹ್ನ 1.50ಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ರೈಲು ಹೊರಡಲಿದ್ದು, ಮರುದಿನ ಮಧ್ಯಾಹ್ನ 1.30ಕ್ಕೆ ಲೋಕಮಾನ್ಯ ತಿಲಕ್ ಟರ್ಮಿನಲ್ ತಲುಪಲಿದೆ. ಈ ರೈಲುಗಳು ಒಟ್ಟು 13 ಟ್ರಿಪ್‌ಗಳನ್ನು ಹೊಂದಿವೆ.

ಠಾಣೆ, ಕಲ್ಯಾಣ್, ಲೋನಾವಾಲಾ, ಪುಣೆ, ಸತಾರಾ, ಕರಾಡ್, ಸಾಂಗ್ಲಿ, ಮೀರಜ್, ರಾಯಬಾಗ, ಘಟಪ್ರಭಾ, ಬೆಳಗಾವಿ, ಲೋಂಡಾ, ಧಾರವಾಡ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಹಾವೇರಿ, ಹರಿಹರ, ದಾವಣಗೆರೆ, ಚಿಕ್ಕ ಜಾಜೂರು, ಬೀರೂರು, ಅರಸೀಕೆರೆ ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆ ಹೊಂದಲಿವೆ. ಈ ರೈಲು ಎಸಿ, ಸ್ಲೀಪರ್, ಜನರಲ್ ಮತ್ತು ಎಸ್‌ಎಲ್‌ಆರ್‌ಡಿ ಬೋಗಿ ಸೇರಿ ಒಟ್ಟು 22 ಬೋಗಿಗಳನ್ನು ಹೊಂದಿದೆ.

ನೀರಿನ ಮಿತ ಬಳಕೆಗೆ ಸಲಹೆ

ಬೆಂಗಳೂರು: 'ಜನರಿಗೆ ಶುದ್ಧ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಿಕೊಡುವಲ್ಲಿ ಲೋಪವಾಗದಂತೆ ನೋಡಿಕೊಳ್ಳುತ್ತಿದ್ದೇವೆ. ಜನರು ನೀರನ್ನು ಪೋಲು ಮಾಡದೇ ಮಿತವಾಗಿ ಬಳಕೆ ಮಾಡಬೇಕು. ದುರ್ಬಳಕೆ ಮಾಡಿದರೆ ದಂಡ ವಿಧಿಸುತ್ತವೆ' ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ಜಲಮಂಡಳಿ ಎಂಜಿನಿಯರ್‌ಗಳ ಸಂಘ ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿಯಲ್ಲಿ (ಬೇಸ್) ಬುಧವಾರ ಆಯೋಜಿಸಿದ್ದ ವಿಶ್ವ ಜಲ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ನದಿಗಳ ಮಾಲಿನ್ಯ ನಿಲ್ಲಿಸಬೇಕು. ಮಾಲಿನ್ಯ ಮಾಡುವುದು ಸುಲಭ. ಆದರೆ, ನೀರನ್ನು ಸಂಸ್ಕರಿಸಿ ಇತರೆ ಕಾರ್ಯಕ್ಕೆ ಬಳಕೆ ಮಾಡುವುದು ಕಷ್ಟದ ಕೆಲಸ' ಎಂದರು.

ಮ್ಯಾಪಿಂಗ್ ಮಲ್ನಾಡ್ ಸಂಸ್ಥೆಯ ನಿರ್ಮಲಾ ಗೌಡ ಮಾತನಾಡಿ, 'ನಾವೀಗ ಪರಿಸರ ಬದಲಾವಣೆ ನೋಡುತ್ತಿಲ್ಲ. ನಮ್ಮ ಭೂಗರ್ಭಜಲ ವ್ಯವಸ್ಥೆಯನ್ನೇ ಬದಲಾಯಿಸುತ್ತಿದ್ದೇವೆ. ರಾಜ್ಯದ 14 ನದಿಗಳು ಮಾಲಿನ್ಯಕ್ಕೆ ಒಳಗಾಗಿವೆ. ಮಾನವ ಬಳಸಿದ ವಸ್ತುಗಳ ಜತೆಗೆ ಹೊಸ ರಾಸಾಯನಿಕ ಅಂಶಗಳನ್ನು ನೀರಿನ ಮೂಲಗಳಿಗೆ ಸೇರಿಸುವುದರಿಂದ ಪರಿಸ್ಥಿತಿ ಬದಲಾಗುತ್ತಿದ್ದು, ಈ ಕಡೆ ಗಮನ ಹರಿಸಿ' ಎಂದರು.

'ಕಾಳಜಿ ಕೇಂದ್ರ ಸ್ಥಾಪನೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲ, ಪ್ರವಾಹ ಸೇರಿದಂತೆ ಅಪಾಯದ ಪರಿಸ್ಥಿತಿಯಲ್ಲಿ ಸಾರ್ವಜನಿಕರಿಗೆ ನೆರವಾಗಲು ಕಾಳಜಿ ಕೇಂದ್ರಗಳನ್ನು ಸ್ಥಾಪಿಸಬೇಕು ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮುಂಬರುವ ಮಳೆಗಾಲಕ್ಕೆ ಮುನ್ನೆಚ್ಚರಿಕಾ ಸಿದ್ಧತೆ ಹಾಗೂ ಕಾಮಗಾರಿಗಳ ಪ್ರಗತಿ ಕುರಿತು ಇಲಾಖೆಯ ಅಧಿಕಾರಿಗಳೊಂದಿಗೆ ಮಂಗಳವಾರ ಅವರು ಸಭೆ ನಡೆಸಿದರು.

ಅಪಾಯದ ಪರಿಸ್ಥಿತಿಗಳಲ್ಲಿ ಸಾರ್ವಜನಿಕರಿಗೆ ನೆರವಾಗಲು ಕಾಳಜಿ ಕೇಂದ್ರಗಳನ್ನು ಸ್ಥಾಪಿಸಲು ಸ್ಥಳ ಗುರುತಿಸಿ, ಸಜ್ಜುಗೊಳಿಸಬೇಕು. ಪ್ರವಾಹ ಸಂಬಂಧಿತ ಕಾರ್ಯಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳು, ಮಾನವ ಸಂಪನ್ಮೂಲಗಳು ಹಾಗೂ ಇತರ ಸೌಲಭ್ಯಗಳ ಮ್ಯಾಪಿಂಗ್ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಮಳೆಗಾಲದ ಸಮಯದಲ್ಲಿ ಯಾವುದೇ ಲೋಪಗಳಿಲ್ಲದಂತೆ ವಿಭಾಗ ಮಟ್ಟದಲ್ಲಿ ಎಲ್ಲಾ ಎಂಜಿನಿಯರ್‌ಗಳು ಸಮರ್ಪಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಪಾಲಿಕೆ ವ್ಯಾಪ್ತಿಯಲ್ಲಿ ಮಳೆನೀರು ನಿಲ್ಲುವ ಸ್ಥಳಗಳನ್ನು ಮುಂಚಿತವಾಗಿ ಗುರುತಿಸಿ, ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ರಾಜೇಂದ್ರ

ರಾಜಕಾಲುವೆ, ಚರಂಡಿಗಳ ಶುದ್ಧೀಕರಣ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕು. ಜೊತೆಗೆ, ಕಟ್ಟಡ ತ್ಯಾಜ್ಯ ತೆರವುಗೊಳಿಸಬೇಕು. ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಟ್ಟದಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿ, ತ್ವರಿತ ಸಂವಹನಕ್ಕಾಗಿ ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಆದೇಶಿಸಿದರು.

ರಸ್ತೆಗಳಲ್ಲಿರುವ ಗುಂಡಿಗಳನ್ನು ತಕ್ಷಣವೇ ಮುಚ್ಚಬೇಕು. ಅನಧಿಕೃತ ಫ್ಲೆಕ್ಸ್ –ಬ್ಯಾನರ್‌ಗಳನ್ನು ತೆರವುಗೊಳಿಸಲು ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಸೂಚಿಸಿದರು. ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ಉಪಸ್ಥಿತರಿದ್ದರು.

ಸರ್ವಿಸ್ ರಸ್ತೆ: ಸಂಚಾರಯುಕ್ತ ಪರಿಕಲ್ಪನೆಯಡಿ ಕೈಗೊಂಡಿರುವ ಯೋಜನೆಯಡಿ ರಾಜಕಾಲುವೆ ಸರ್ವಿಸ್ ರಸ್ತೆಗಳನ್ನು ಶೀಘ್ರ ನಿರ್ಮಿಸಬೇಕು ಎಂದು ಬಿ–ಸ್ಮೈಲ್ ಅಧಿಕಾರಿಗಳಿಗೆ ಪೂರ್ವ ನಗರ ಪಾಲಿಕೆಯ ಆಯುಕ್ತ ಡಿ.ಎಸ್. ರಮೇಶ್ ಸೂಚಿಸಿದರು.

ಬೆಳ್ಳಂದೂರು ಕೆರೆ ಹೊರಹರಿವಿನಿಂದ ವರ್ತೂರು ಕೆರೆ ಕೋಡಿವರೆಗೆ ರಾಜಕಾಲುವೆ ಬಫರ್ ವಲಯದಲ್ಲಿ ಸುಮಾರು 18 ಕಿ.ಮೀ ಉದ್ದದ ಸರ್ವಿಸ್ ರಸ್ತೆಯನ್ನು ಶೀಘ್ರ ನಿರ್ಮಿಸಬೇಕು. ರಾಜಕಾಲುವೆ ಬಫರ್ ವಲಯಗಳನ್ನು ಗುರುತಿಸಿ, ರಸ್ತೆ ಅಭಿವೃದ್ಧಿಗೆ ಅಗತ್ಯವಾದ ಮಾರ್ಗನಕ್ಷೆ ಸಿದ್ಧಪಡಿಸಬೇಕು ಎಂದರು.

ಎಐ ಕಾರ್ಖಾನೆ: ದಯಾನಂದ ಸಾಗರ್ ವಿ.ವಿ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಮೊದಲ ಎಐ ಕಾರ್ಖಾನೆಯನ್ನು ನಿರ್ಮಿಸಲು ದಯಾನಂದ ಸಾಗರ್ ವಿಶ್ವವಿದ್ಯಾಲಯವು ಎನ್‌ವಿಡಿಯಾದೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ.

ಎನ್‌ವಿಡಿಯಾವು ಮುಂದಿನ ಪೀಳಿಗೆಯ ಎಐ ಸೂಪರ್ ಕಂಪ್ಯೂಟಿಂಗ್ ವೇದಿಕೆಯಾಗಿರುವ 'ಬ್ಲ್ಯಾಕ್‌ವೆಲ್' ಬಳಸಿಕೊಳ್ಳಲಿದೆ. ಕಡಿಮೆ ಸುಸಜ್ಜಿತ ಮೂಲಸೌಕರ್ಯ, ವಿದೇಶಿ ಎಐ ಮಾದರಿಗಳ ಬಳಕೆ, ದೇಶೀಯ ಸೂಪರ್ ಕಂಪ್ಯೂಟಿಂಗ್ ತಂತ್ರಜ್ಞಾನಗಳ ಕೊರತೆ ಮತ್ತು ಶೈಕ್ಷಣಿಕ ತರಬೇತಿ ಮತ್ತು ಉದ್ಯಮ ನಿಯೋಜನೆ ಅಗತ್ಯಗಳ ನಡುವಿನ ನ್ಯೂನತೆಗಳನ್ನು ನಿವಾರಿಸುವ ಉದ್ದೇಶವನ್ನು ಈ ಒಡಂಬಡಿಕೆ ಹೊಂದಿದೆ.

ದಯಾನಂದ ಸಾಗರ್ ವಿಶ್ವವಿದ್ಯಾಲಯವು ₹175 ಕೋಟಿ ಹೂಡಿಕೆ ಮಾಡಲಿದೆ. ಶೈಕ್ಷಣಿಕ ವ್ಯವಸ್ಥೆಯಲ್ಲಿ ಉತ್ತಮ ಗುಣಮಟ್ಟದ ಎಐ ಕಂಪ್ಯೂಟಿಂಗ್ ಬಳಕೆಯಾಗಲಿದೆ.

'ಎನ್‌ವಿಡಿಯಾ ಜೊತೆಗಿನ ಸಹಯೋಗದಿಂದಾಗಿ ನಮ್ಮ ವಿಶ್ವವಿದ್ಯಾಲಯವು ಎಐ ಕ್ಷೇತ್ರದಲ್ಲಿ ನಾವಿನ್ಯತೆಯನ್ನು ಬಳಸಿಕೊಳ್ಳಲಿದೆ. ಎಐ ಬಳಕೆಯ ವಿಧಾನದಲ್ಲಿ ಬದಲಾವಣೆ ಉಂಟಾಗಲಿದೆ' ಎಂದು ದಯಾನಂದ ಸಾಗರ್ ವಿಶ್ವವಿದ್ಯಾಲಯದ ಸ್ಥಾಪಕ ಡಿ. ಪ್ರೇಮಚಂದ್ರ ಸಾಗರ್ ತಿಳಿಸಿದರು.

'ನಮ್ಮ ಕ್ಯಾಂಪಸ್‌ನಲ್ಲಿ ಎನ್‌ವಿಡಿಯಾ ಚಾಲಿತ ಎಐ ಕಾರ್ಖಾನೆ ಸ್ಥಾಪಿಸಲಾಗುವುದು. ಆ ಮೂಲಕ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಎಐ ವ್ಯವಸ್ಥೆಗಳಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡಲಾಗುವುದು. ಆತ್ಮನಿರ್ಭರ ಭಾರತ, ತಂತ್ರಜ್ಞಾನ ಅಭಿವೃದ್ಧಿ, ಜವಾಬ್ದಾರಿಯುತವಾಗಿ ಎಐ ಬಳಕೆ ಸೇರಿದಂತೆ ದೀರ್ಘಕಾಲೀನ ಗುರಿಗಳನ್ನು ಹೊಂದಿದ್ದೇವೆ' ಎಂದು ವಿವರಿಸಿದರು.

ದಯಾನಂದ ಸಾಗರ್ ವಿಶ್ವವಿದ್ಯಾಲಯವು ಆರೋಗ್ಯ, ಎಂಜಿನಿಯರಿಂಗ್, ರಕ್ಷಣೆ, ಸೈಬರ್ ಭದ್ರತೆ, ಅರೆವಾಹಕಗಳು, ಸ್ಮಾರ್ಟ್ ಚಲನಶೀಲತೆ ಮತ್ತು ಸುಸ್ಥಿರತೆಯ ಮೇಲೆ ಕೇಂದ್ರೀಕರಿಸುವ ಕೆಪೆಕ್ಸ್‌ನಲ್ಲಿ ₹50 ಕೋಟಿಗೂ ಅಧಿಕ ವೆಚ್ಚದಲ್ಲಿ ಆರು ಉದ್ಯಮ-ಸಂಯೋಜಿತ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸಲಿದೆ. ಈ ಕೇಂದ್ರಗಳು ವಿಶೇಷ ಎಐ ಸಂಶೋಧನೆ ಮತ್ತು ಅನ್ವಯಿಕಾ ಕೇಂದ್ರಗಳಾಗಿ ಕಾರ್ಯನಿರ್ವಹಿಸಲಿವೆ ಎಂದರು.

ಸಾಂಸ್ಕೃತಿಕ ಮುನ್ನೋಟ

ಸಂಗೀತ ಕಛೇರಿ 11ಕ್ಕೆ

ಬೆಂಗಳೂರು: ಶ್ರೀರಾಮ ಸೇವಾ ಮಂಡಳಿ ಟ್ರಸ್ಟ್‌ನಿಂದ ಏ. 11ರಂದು ಕನಕಪುರ ರಸ್ತೆಯ ನೆಟ್ಟಿಗೆರೆ ಗ್ರಾಮದಲ್ಲಿರುವ ಎಸ್‌ವಿಎನ್ ಸ್ಮಾರಕ ಸಭಾಂಗಣದಲ್ಲಿ ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಮಧ್ಯಾಹ್ನ 3.15ಕ್ಕೆ ಗಾಯಕ ಶ್ರೀಹರಿ ಭಟ್ ಅವರ ಸಂಗೀತ ಕಛೇರಿ ನಡೆಯಲಿದ್ದು, ಶ್ರೀವಿದ್ಯಾ ಡಿ. (ಪಿಟೀಲು), ಕೌಶಿಕ್ ಶ್ರೀಧರ್ (ಮೃದಂಗ) ಸಾಥ್ ನೀಡಲಿದ್ದಾರೆ. ಸಂಜೆ 5ಕ್ಕೆ ನಡೆಯುವ ಸಂಗೀತ ಕಛೇರಿಯಲ್ಲಿ ಅನುರಾಧಾ ಮಧುಸೂದನ್ ಅವರು ವೀಣಾ ವಾದನ ಪ್ರಸ್ತುತಪಡಿಸಲಿದ್ದು, ಕೆ.ವಿ. ರವಿಶಂಕರ್ ಶರ್ಮ (ಮೃದಂಗ) ಹಾಗೂ ಬಿ.ಆರ್. ರವಿಕುಮಾರ್ (ಘಟ) ಸಾಥ್ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನೃತ್ಯ ನಾಟಕ ಪ್ರದರ್ಶನ

ಬೆಂಗಳೂರು: ಪ್ರಭಾತ್ ಆರ್ಟ್ಸ್ ಇಂಟರ್ ನ್ಯಾಷನಲ್ ವತಿಯಿಂದ ಏಪ್ರಿಲ್ 10 ಮತ್ತು 11ರಂದು ಪ್ರತಿದಿನ ಸಂಜೆ 7ಕ್ಕೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ 'ತಪೋಹಂಸ', 'ಸ್ವಪ್ನ ವೃಂದಾವನ' ನೃತ್ಯ ನಾಟಕಗಳ ಪ್ರದರ್ಶನ ನಡೆಯಲಿದೆ.

ಏ. 10ರಂದು ರಾಘವೇಂದ್ರ ಸ್ವಾಮಿಗಳ ಜೀವನ, ತಪಸ್ಸು ಮತ್ತು ಅವರ ಸಂದೇಶಗಳನ್ನೊಳಗೊಂಡ 'ತಪೋಹಂಸ' ನಾಟಕ ಪ್ರದರ್ಶನವಾಗಲಿದೆ. ಏ. 11ರಂದು ಸೋಂದ ವಾದಿರಾಜ ಸ್ವಾಮಿಗಳ ಆಧ್ಯಾತ್ಮಿಕ ಪಯಣ, ಜ್ಞಾನ ಪ್ರಚಾರ ಮತ್ತು ಭಕ್ತಿ ಪರಂಪರೆಯನ್ನು ಪ್ರಸ್ತುತಪಡಿಸುವ 'ಸ್ವಪ್ನ ವೃಂದಾವನ' ನಾಟಕ ಪ್ರದರ್ಶನವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಗೀತ ಸಂಜೆ ಕಾರ್ಯಕ್ರಮ

ಬೆಂಗಳೂರು: ಅನುರಾಗ್ಸ್ ಸಂಗೀತ ಗುರುಕುಲದಿಂದ ಏ. 11ರಂದು ಸಂಜೆ 5.30ಕ್ಕೆ ಜೆ.ಸಿ. ರಸ್ತೆಯಲ್ಲಿರುವ ಪುರ ಭವನದಲ್ಲಿ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಂಗೀತ ಸಂಜೆಯಲ್ಲಿ ಗಾಯಕರಾದ ಸಮನ್ವಿತಾ ಶರ್ಮಾ, ಅನುರಾಗ್ ಗದ್ದಿ, ಶರಣ್ ಚೌಧರಿ ಭಾಗವಹಿಸಲಿದ್ದಾರೆ. ವೇಣುಗೋಪಾಲ್ (ತಬಲಾ), ರಂಜನ್ ಬಿ. (ಪಿಟೀಲು), ದೀಪು (ಕೀ–ಬೋರ್ಡ್), ಸಿ.ಗೆರಾಲ್ಡ್ (ರಿದಮ್ ಪ್ಯಾಡ್) ಸಾಥ್ ನೀಡಲಿದ್ದಾರೆ. ಈ ಕಾರ್ಯಕ್ರಮಕ್ಕೆ 'ಪ್ರಜಾವಾಣಿ' ಮಾಧ್ಯಮ ಸಹಯೋಗ ಇದೆ.

'ವೀಕೆಂಡ್' ನಾಟಕೋತ್ಸವ

ಪಾಕ ಕ್ರಾಂತಿ ನಾಟಕದ ದೃಶ್ಯ

ಬೆಂಗಳೂರು: ನಗರದ ವಿವಿಧ ರಂಗ ತಂಡಗಳು ಒಂದೇ ವೇದಿಕೆಯಡಿ ಏ.11 ಮತ್ತು 12ರಂದು ಸಂಜೆ 6.30ಕ್ಕೆ ಬಸವೇಶ್ವರ ನಗರದ ಕೆ.ಇ.ಎ. ಪ್ರಭಾತ್ ರಂಗಮಂದಿರದಲ್ಲಿ 'ವೀಕೆಂಡ್' ನಾಟಕೋತ್ಸವ ಹಮ್ಮಿಕೊಂಡಿವೆ.

ಏ.11ರಂದು ಧ್ವನಿ ತಂಡದಿಂದ 'ಮಾಯಾಮೃಗ' ನಾಟಕ ಪ್ರದರ್ಶನ ಕಾಣಲಿದ್ದು, ಪೃಥ್ವಿ ಆರಾಧ್ಯ ಅವರ ನಿರ್ದೇಶನವಿದೆ. ಏ.12ರಂದು ಅಶೋಕ್ ಬಿ. ಅವರ ನಿರ್ದೇಶನದಲ್ಲಿ ವಿಶ್ವಪಥ ಕಲಾ ಸಂಗಮ ತಂಡದಿಂದ 'ಪಾಕ ಕ್ರಾಂತಿ' ನಾಟಕ ಪ್ರದರ್ಶನ ನಡೆಯಲಿದೆ. ಈ ಉತ್ಸವ 'ಪ್ರಜಾವಾಣಿ' ಮಾಧ್ಯಮ ಸಹಯೋಗದಲ್ಲಿ ನಡೆಯಲಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಮೇಲ್ಸೇತುವೆ, ಅಂಡರ್‌ಪಾಸ್ ಸ್ವಚ್ಛ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಚ್ಛ ಸರ್ವೇಕ್ಷಣ್ – 2025-26ರ ಅಡಿ ವಿಶೇಷ ಸ್ವಚ್ಛತಾ ಅಭಿಯಾನದ ಅಂಗವಾಗಿ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಮೇಲ್ಸೇತುವೆಗಳು ಹಾಗೂ ಅಂಡರ್ ಪಾಸ್‌ಗಳನ್ನು ಸ್ವಚ್ಛಗೊಳಿಸಿ, ನಾಲ್ಕು ಟನ್ ತ್ಯಾಜ್ಯ ತೆರವು ಮಾಡಲಾಗಿದೆ ಎಂದು ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಸ್ವಚ್ಛತಾ ಕಾರ್ಯದಲ್ಲಿ 334 ಪೌರ ಕಾರ್ಮಿಕರು, 161 ಆಟೊ ಟಿಪ್ಪರ್ ಚಾಲಕರು, ಸ್ವಚ್ಛತಾ ಸಿಬ್ಬಂದಿ ಭಾಗಿಯಾಗಿದ್ದರು ಎಂದು ಹೇಳಿದರು.

ತ್ಯಾಜ್ಯಮುಕ್ತ ನಗರ ಪಾಲಿಕೆ ರೂಪಿಸಬೇಕು ಹಾಗೂ ಸ್ವಚ್ಛ ಸರ್ವೇಕ್ಷಣ್ 2025-26ರ ಶ್ರೇಯಾಂಕ ಪಟ್ಟಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಉತ್ತಮ ಸ್ಥಾನ ಗಳಿಸಬೇಕಾಗಿದೆ. ಹೀಗಾಗಿ, ವಿಶೇಷ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡಿದ್ದು, ಕ್ರಿಯಾ ಯೋಜನೆಯ ಐದನೇ ಭಾಗವಾಗಿ 20 ಮೇಲ್ಸೇತುವೆಗಳು, ಸುತ್ತಮುತ್ತಲಿನ ಪ್ರದೇಶ ಹಾಗೂ ಎಂಟು ಅಂಡರ್‌ಪಾಸ್‌ಗಳನ್ನು ಶುಚಿಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ವಿಶೇಷ ಅಭಿಯಾನ: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳ ಅಂದವನ್ನು ಕಾಪಾಡುವ ಹಾಗೂ ಸುರಕ್ಷಿತ ನಗರ ವಾತಾವರಣ ನಿರ್ಮಾಣ ಮಾಡುವ ಉದ್ದೇಶದಿಂದ ಏಪ್ರಿಲ್ 13ರವರೆಗೆ ಫ್ಲೆಕ್ಸ್, ಬಂಟಿಂಗ್ಸ್, ಬ್ಯಾನರ್, ಫಲಕಗಳು ಸೇರಿದಂತೆ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ವಿಶೇಷ ಅಭಿಯಾನ ನಡೆಸಲಾಗುತ್ತಿದೆ ಎಂದು ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.

ಕೆ.ಆರ್.ಪುರ ವಲಯದ ಹೊರಮಾವು, ರಾಮಮೂರ್ತಿನಗರ, ವಿಜಿನಾಪುರ, ಬಸವನಪುರ, ದೇವಸಂದ್ರ, ಎ.ನಾರಾಯಣಪುರ, ವಿಜ್ಞಾನ ನಗರ, ಎಚ್‌ಎಎಲ್ ವಿಮಾನ ನಿಲ್ದಾಣ ಪ್ರದೇಶಗಳಲ್ಲಿ 812 ಫ್ಲೆಕ್ಸ್ ತೆರವುಗೊಳಿಸಲಾಯಿತು.

ಮಹದೇವಪುರ ವಲಯದ ವ್ಯಾಪ್ತಿಯ ಹೂಡಿ, ಗರುಡಾಚಾರ್ ಪಾಳ್ಯ, ಕಾಡುಗೋಡಿ, ಹಗದೂರು, ದೊಡ್ಡನೆಕ್ಕುಂದಿ, ಮಾರತ್‌ಹಳ್ಳಿ, ವರ್ತೂರು, ಬೆಳ್ಳಂದೂರು ಪ್ರದೇಶಗಳಲ್ಲಿ 1,060 ಫ್ಲೆಕ್ಸ್, ಬ್ಯಾನರ್, ಬಂಟಿಂಗ್‌ಗಳನ್ನು ತೆರವುಗೊಳಿಸಲಾಯಿತು ಎಂದು ಮಾಹಿತಿ ನೀಡಿದರು.

ಅನಧಿಕೃತವಾಗಿ ಜಾಹೀರಾತು ಫಲಕಗಳನ್ನು ಹಾಕುವುದು ಶಿಕ್ಷಾರ್ಹ ಅಪರಾಧ. ನಿಯಮ ಉಲ್ಲಂಘಿಸಿದ ವ್ಯಕ್ತಿಗಳು/ಸಂಸ್ಥೆಗಳಿಗೆ ದಂಡ ವಿಧಿಸಿ, ಪ್ರಕರಣ ದಾಖಲಿಸಲಾಗುವುದು ಎಂದರು.

ಮಹಾರಾಷ್ಟ್ರದಲ್ಲಿ ನಡೆದ ಆಲ್ ಇಂಡಿಯಾ ಪೊಲೀಸ್ ಡ್ಯೂಟಿ ಮೀಟ್–2026ರಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ(ಸಿಆರ್‌ಪಿಎಫ್) 'ಡಾಗ್ ಬ್ರೀಡಿಂಗ್ ಮತ್ತು ಟ್ರೈನಿಂಗ್ ಸ್ಕೂಲ್'ನ ಬೆಂಗಳೂರಿನ ಕೆ–9 ತಂಡವು ಉತ್ತಮ ಪ್ರದರ್ಶನ ನೀಡುವ ಮೂಲಕ ಚಾಂಪಿಯನ್ ಆಯಿತು.ತಂಡಕ್ಕೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು ಟ್ರೋಫಿ ವಿತರಣೆ ಮಾಡಿದರು

CONNECT

ಅದ್ದೂರಿ ಉದ್ಘಾಟನೆ

ನಮ್ಮ 3ನೇ ಮಳಿಗೆ

MYSORE SILKS ಸೀರೆ ಉತ್ಸವ By Sulakshmi Silks

Opening Offer 60%+10% Off

ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ

ನಮ್ಮ ಹೊಸ ಮಳಿಗೆಯಲ್ಲಿ 1 ರಿಂದ 10ನೇ ಏಪ್ರಿಲ್ 2026

SULAKSHMI SILKS

ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ

ಸಂಪರ್ಕಿಸಿ: 99727 18898 | 93531 38343 | 9886306643 | 96631 27606

ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

BUILDERS ESSENTIAL

Water Proofing

'WE-FIX' LEAKING ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING. MACBOND. 9448572697

PERSONAL

Change of Name

CHANGE OF NAME

I, POLISETTI BAAVANI AKSHITA Daughter of Somasekhar Rao Polisetti R/a #41, Mulberry Meadows, Near Swiss Town, Sadahalli Village, Devanahalli Taluk, Sadahalli, Bangalore Rural, Karnataka-562110 have changed my Name to POLISETTI BAAVANI AKSHITA RAO vide affidavit dated: 07-04-2026 before Notary S.Nagaraja, Bangalore.

I, S NAGENDRAN resident of No.107, B1 SFS, 6th B Main, NewTown Yelahanka, Bangalore-560064 have changed my name to NAGENDRAN S vide affidavit dated 08/04/2026 sworn before notary H.Sridhar Rao, Bangalore

AUTOMOTIVE

2 / 3 Wheelers Selling

Scooters

HONDA EV Scooter Brand New April 2026 registered. Battery charging. For sale. E-Swap. Contact:- 8618219064.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

ಸರಿ ಇದ್ದ ಹಳೆಯ ಫಲಕಗಳ ಬದಲಾವಣೆ • ಸಣ್ಣ ಅಕ್ಷರಗಳಲ್ಲಿ ಮುದ್ರಣ

ಬಿಎಂಟಿಸಿ ಬಸ್‌ನಿಲ್ದಾಣ: ಫಲಕಗಳಲ್ಲಿ ಅಕ್ಷರದೋಷ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ಬಿಎಂಟಿಸಿಯ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಇರುವ ಮಾರ್ಗಸೂಚಿ ಫಲಕಗಳನ್ನು ಬದಲಾವಣೆ ಮಾಡಲಾಗುತ್ತಿದೆ. ಆದರೆ, ಹೊಸ ಫಲಕಗಳಲ್ಲಿನ ಸಣ್ಣ ಅಕ್ಷರ, ತಪ್ಪಾದ ಹೆಸರುಗಳಿಂದಾಗಿ ಪ್ರಯಾಣಿಕರಿಗೆ ಸಮಸ್ಯೆಯಾಗುತ್ತಿದೆ.

ಹಿಂದೆ ಇದ್ದ ಫಲಕಗಳಲ್ಲಿ ಪ್ಲ್ಯಾಟ್‌ಫಾರ್ಮ್ ಸಂಖ್ಯೆ, ಬಸ್ ಮಾರ್ಗಗಳ ಸಂಖ್ಯೆ ದೊಡ್ಡದಾಗಿ ಮತ್ತು ದಪ್ಪ ಅಕ್ಷರಗಳಲ್ಲಿ ಇದ್ದಿದ್ದರಿಂದ ಪ್ರಯಾಣಿಕರಿಗೆ ಚೆನ್ನಾಗಿ ಕಾಣುತ್ತಿತ್ತು. ಫಲಕದ ಎರಡೂ ಬದಿಯಲ್ಲಿ ಮಾಹಿತಿ ಇರುತ್ತಿದ್ದರಿಂದ ಪ್ರಯಾಣಿಕರು ಯಾವ ಕಡೆಯಿಂದ ಬಂದರೂ ಗೊಂದಲವಾಗುತ್ತಿರಲಿಲ್ಲ. ಹೊಸ ಫಲಕದಲ್ಲಿ ಪ್ಲ್ಯಾಟ್‌ಫಾರ್ಮ್ ಸಂಖ್ಯೆ ಮಾತ್ರ ದೊಡ್ಡದಾಗಿ ಕಾಣುತ್ತದೆ. ಬಸ್ ಮಾರ್ಗಗಳ ಸಂಖ್ಯೆ ಒಂದು ಬದಿಯಲ್ಲಿ ಮಾತ್ರ ಇದೆ. ಫಲಕದ ಇನ್ನೊಂದು ಭಾಗದಲ್ಲಿ ಬಸ್ ಸಾಗುವ ಮಾರ್ಗಗಳನ್ನು ನಕ್ಷೆಯ ಮೂಲಕ ತೋರಿಸಲಾಗಿದೆ. ನಕ್ಷೆಯ ಗೆರೆಗಳು ಕಾಣುತ್ತವೆಯಾದರೂ ಏನು ಎಂಬುದು ಅರ್ಥವಾಗುವುದಿಲ್ಲ. ಅಲ್ಲದೇ ಅಲ್ಲಿ ಬಸ್ ಮಾರ್ಗಗಳ ಹೆಸರನ್ನು ಚಿಕ್ಕದಾಗಿ ನಮೂದಿಸಿರುವುದರಿಂದ ಗೊತ್ತಾಗುತ್ತಿಲ್ಲ ಎಂದು ಪ್ರಯಾಣಿಕ ವಿಶ್ವಾಸ್ ರಾಜಾಜಿನಗರ ತಿಳಿಸಿದರು.

'ಸಾರ್ವಜನಿಕರ ಹಣದಲ್ಲಿ ಮಾಡುವ ಅಭಿವೃದ್ಧಿ ಕೆಲಸಗಳು, ಜನರಿಗಾಗಿ ಮಾಡುವ ಬದಲಾವಣೆಗಳು ಉಪಯೋಗಕ್ಕೆ ಬರಬೇಕೇ ಹೊರತು ಹೀಗೆ ಬೇಕಾಬಿಟ್ಟಿಯಾಗಬಾರದು. ಜನರ ಪ್ರಯಾಣವನ್ನು ಸುಲಭವಾಗಿಸುವುದು ಬಿಎಂಟಿಸಿ ಜವಾಬ್ದಾರಿಯಾಗಬೇಕೇ ಹೊರತು ಬಸ್ ನಂಬರ್ ಹುಡುಕುತ್ತಾ ಸಮಯ ವ್ಯರ್ಥ ಮಾಡುವುದಲ್ಲ' ಎಂದು ಪ್ರಯಾಣಿಕರಾದ ಮಮತಾ ಎಂ. ಸಾಮಾಜಿಕ ಜಾಲತಾಣದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'5ನೇ ಪ್ಲ್ಯಾಟ್‌ಫಾರ್ಮ್‌ನಿಂದ ಶಾರದಾ ಕಾಲೊನಿಗೆ '89 ಬಿ' ಸಂಖ್ಯೆಯ ಬಸ್ ಹೋಗುತ್ತದೆ. ಆದರೆ, ಈ ನಂಬರ್ ಫಲಕದಲ್ಲಿಲ್ಲ. ಇರುವ ನಂಬರ್‌ಗಳನ್ನು ಭೂತಗನ್ನಡಿ ಹಿಡಿದು ನೋಡಬೇಕು' ಎಂದು ದೂರಿದ್ದಾರೆ.

ಬಸ್‌ಗಳು ಸುಜಾತಾ ಟಾಕೀಸ್ ಕಡೆಯಿಂದ ಸಾಗುವುದನ್ನು ನಕ್ಷೆಯಲ್ಲಿ ತೋರಿಸಲಾಗಿದೆ. ಇಂಗ್ಲಿಷ್‌ನಲ್ಲಿ ಸುಜಾತಾ ಟಾಕೀಸ್ ಎಂದೇ ಇದ್ದರೂ ಕನ್ನಡದಲ್ಲಿ 'ಸೂಪರ್ ಟಾಕೀಸ್' ಎಂದು ತಪ್ಪಾಗಿ ನಮೂದಿಸಲಾಗಿದೆ. ಕಮಲಾನಗರ ಹೆಸರನ್ನು ಕಮಲನಗರ, ಕಮಲಾನಗರ ಎಂದು ಎರಡೂ ರೀತಿಯಲ್ಲಿ ಬರೆಯಲಾಗಿದೆ. ಕೆಲವು ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ಈಗಲೂ ಹಳೇ ಫಲಕಗಳು ಇದ್ದು ಅಲ್ಲಿ ಸರಿಯಾಗಿ ಕಾಣುತ್ತಿದೆ.



ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಬಸ್ ಮಾರ್ಗಗಳ ಪಟ್ಟಿಯ ಫಲಕದಲ್ಲಿ ಸುಜಾತಾ ಟಾಕೀಸ್ ಸೂಪರ್ ಟಾಕೀಸ್ ಆಗಿರುವುದು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಎನ್‌ಜಿಒಗಳ ಕೆಲಸ

'ಸುಸ್ಥಿರ ನಗರ ಅಭಿವೃದ್ಧಿ, ಇಂಧನ ಮತ್ತು ಹವಾಮಾನ ಕ್ರಿಯೆಯ ಮೇಲೆ ಕೇಂದ್ರೀಕರಿಸುವ ಸ್ವತಂತ್ರ ಸಂಶೋಧನಾ ಸಂಸ್ಥೆ ಡಬ್ಲ್ಯುಆರ್‌ಐ ಮತ್ತು ಸಾರ್ವಜನಿಕ ಸಾರಿಗೆ ಸುಧಾರಣೆಗಾಗಿ ಕೆಲಸ ಮಾಡುವ ಬೆಂಗವಾಕ್ ಸಂಸ್ಥೆಗಳು ಈ ಫಲಕಗಳನ್ನು ಅಳವಡಿಸಿವೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ಈ ಎರಡೂ ಸಂಸ್ಥೆಗಳು ಅವರದ್ದೇ ರೀತಿಯಲ್ಲಿ ಅಧ್ಯಯನ ಮಾಡುತ್ತವೆ. ಇದಕ್ಕಾಗಿ ಅವರಿಗೆ ನಿಧಿ ಒದಗಿಸುವ ಸಂಸ್ಥೆಗಳಿರುತ್ತವೆ. ನಾವು ಅವರಿಗೆ ಯಾವುದೇ ಅನುದಾನ ನೀಡಿಲ್ಲ. ಫಲಕಗಳಲ್ಲಿನ ಅಕ್ಷರಗಳು ಬಹಳ ಸಣ್ಣದಾಗಿವೆ ಎಂದು ನಮ್ಮ ಅಧಿಕಾರಿಗಳು ತಿಳಿಸಿದ್ದರು. ಆದರೆ, ಅಕ್ಷರ ದೊಡ್ಡದು ಮಾಡದೇ ಅಳವಡಿಕೆ ಮಾಡಿದ್ದಾರೆ' ಎಂದು ಬಿಎಂಟಿಸಿ ಅಧಿಕಾರಿಗಳು ಹೇಳಿದ್ದಾರೆ.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ರಸ್ತೆ ದಾಟುತ್ತಿದ್ದ ಪಾದಚಾರಿಗೆ ಕ್ಯಾಂಟರ್ ವಾಹನ ಡಿಕ್ಕಿ: ಆಸ್ಪತ್ರೆಯಲ್ಲಿ ನಿಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರತ್ಯೇಕ ಅಪಘಾತದಲ್ಲಿ ಪಾದಚಾರಿ ಹಾಗೂ ಕ್ಯಾಂಟರ್ ಚಾಲಕ ಮೃತಪಟ್ಟಿದ್ದಾರೆ.

ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸ್ಯಾಟಲೈಟ್ ಬಸ್ ನಿಲ್ದಾಣದ ಸಿಗ್ನಲ್‌ನಲ್ಲಿ ನಿಂತಿದ್ದ ಲಾರಿಗೆ, ಹಿಂದಿನಿಂದ ವೇಗವಾಗಿ ಬಂದ ಕ್ಯಾಂಟರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಕ್ಯಾಂಟರ್ ಚಾಲಕ ಅಸುನೀಗಿದ್ದಾರೆ.

ಕೆ.ಆರ್.ಪುರ ನಿವಾಸಿ ವಿಜಯ್‌ಕುಮಾರ್ (50) ಮೃತ ಚಾಲಕ.

ಬುಧವಾರ ಮುಂಜಾನೆ 4 ಗಂಟೆ ಸುಮಾರಿಗೆ ಸ್ಯಾಟಲೈಟ್ ಬಸ್ ನಿಲ್ದಾಣದ ಎದುರಿನ ಸಿಗ್ನಲ್‌ನಲ್ಲಿ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ವಿಜಯಕುಮಾರ್ ಅವರು ಕ್ಯಾಂಟರ್ ವಾಹನದಲ್ಲಿ ತರಕಾರಿ ಹಾಗೂ ದಿನ ಬಳಕೆಯ ವಸ್ತುಗಳನ್ನು ತುಂಬಿಕೊಂಡು ಕೆ.ಆರ್.ಮಾರುಕಟ್ಟೆ ಕಡೆಯಿಂದ ಮೈಸೂರು ರಸ್ತೆ ಕಡೆ ಹೋಗುತ್ತಿದ್ದರು. ಔಷಧಿಗಳನ್ನು ತುಂಬಿಕೊಂಡು ಹೋಗುತ್ತಿದ್ದ ಲಾರಿ ಚಾಲಕ, ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿಯಲ್ಲಿ ಸಿಗ್ನಲ್ ಇರುವ ಕಾರಣಕ್ಕೆ ಲಾರಿ ನಿಲುಗಡೆ ಮಾಡಿದ್ದರು. ವೇಗವಾಗಿ ಬರುತ್ತಿದ್ದ ಕ್ಯಾಂಟರ್ ವಾಹನವನ್ನು ಚಾಲಕ ನಿಯಂತ್ರಿಸಲು ಸಾಧ್ಯವಾಗದೇ ಲಾರಿಗೆ ಡಿಕ್ಕಿ ಹೊಡೆದಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ವಿಜಯ್ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ದಾಟುವಾಗ ವಾಹನ ಡಿಕ್ಕಿ: ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಹೆಸರಘಟ್ಟ ಮುಖ್ಯರಸ್ತೆಯ ತರಬನಹಳ್ಳಿ ಬಳಿ ರಸ್ತೆ ದಾಟುವಾಗ ಕ್ಯಾಂಟರ್ ವಾಹನವು ಡಿಕ್ಕಿಯಾಗಿ ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ.

ಎಚ್.ಆರ್.ರಮೇಶ್ (56) ಮೃತ ವ್ಯಕ್ತಿ.

'ಹೆಸರಘಟ್ಟ ಮುಖ್ಯರಸ್ತೆಯ ತರಬನಹಳ್ಳಿಯ ಹನುಮಕ್ಕ ಗಿರಿಯಪ್ಪ ಕಲ್ಯಾಣ ಮಂಟಪದ ಬಳಿ ರಮೇಶ್ ಅವರು ರಸ್ತೆ ದಾಟುತ್ತಿದ್ದರು. ಆ ಸಂದರ್ಭದಲ್ಲಿ ವೇಗವಾಗಿ ಬಂದ ಕ್ಯಾಂಟರ್ ವಾಹನವೊಂದು ಡಿಕ್ಕಿ ಹೊಡೆದಿದೆ. ಡಿಕ್ಕಿಯಿಂದ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳೀಯರು ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ರಮೇಶ್ ಮೃತಪಟ್ಟಿದ್ದಾರೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

'ಕ್ಯಾಂಟರ್ ವಾಹನ ಚಾಲಕನ ಅತೀವೇಗ ಮತ್ತು ಅಜಾಗರೂಕ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಕಂಡುಬಂದಿದೆ. ರಮೇಶ್ ಅವರ ಪತ್ನಿ ಸಿ.ಅನಿತಾ ಅವರು ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಕಾರು ಮೆಕ್ಯಾನಿಕ್ ಅನುಮಾನಾಸ್ಪದ ಸಾವು

ಕಾರು ಮೆಕ್ಯಾನಿಕ್ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಅನ್ನಪೂರ್ಣೇಶ್ವರಿನಗರ ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಕೆಂಗುಂಟೆ ನಿವಾಸಿ ತೌಹಿಬ್ ಪಾಷಾ (23) ಮೃತ ವ್ಯಕ್ತಿ. ತೌಹಿಬ್ ಅವರ ಸಾವಿಗೆ ಅವರ ಪತ್ನಿಯೇ ಕಾರಣ ಎಂದು ದೂರು ನೀಡಲಾಗಿದ್ದು, ಪತ್ನಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

'ಕೆಂಗುಂಟೆಯಲ್ಲಿ ಇರುವ ಮೂರು ಅಂತಸ್ತಿನ ಕಟ್ಟಡದ ಮೊದಲ ಮಹಡಿಯಲ್ಲಿ ತೌಹಿಬ್ ಪಾಷಾ ದಂಪತಿ ವಾಸವಾಗಿದ್ದರು. ವೃತ್ತಿಯಲ್ಲಿ ಕಾರು ಮೆಕ್ಯಾನಿಕ್ ಆಗಿದ್ದ ತೌಹಿಬ್ ಅವರು ಕೆಲವು ತಿಂಗಳಿಂದ ವಿಪರೀತ ಮದ್ಯ ಸೇವಿಸುತ್ತಿದ್ದರು. ಅಲ್ಲದೇ ಗಂಗೊಂಡನಹಳ್ಳಿಯಲ್ಲಿ ಇರುವ ಸ್ನೇಹಿತರ ಜತೆಗೆ ಡ್ರಗ್ಸ್ ಸೇವನೆ ಸಹ ಮಾಡುತ್ತಿದ್ದರು. ಮನೆಗೂ ಬರುತ್ತಿರಲಿಲ್ಲ. ಇದೇ ವಿಚಾರಕ್ಕೆ ದಂಪತಿ ನಡುವೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ನಾಲ್ಕು ದಿನಗಳ ಹಿಂದೆ ಮನೆಯಿಂದ ಹೊರಹೋಗಿದ್ದ ತೌಹಿಬ್ ಪಾಷಾ ಮಂಗಳವಾರ ಮಧ್ಯಾಹ್ನ ಮನೆಗೆ ವಾಪಸ್ ಆಗಿದ್ದರು. ರಾತ್ರಿ 7.30ರ ಸುಮಾರಿಗೆ ದಂಪತಿ ನಡುವೆ ಜಗಳ ನಡೆದಿತ್ತು' ಎಂದು ಮೂಲಗಳು ಹೇಳಿವೆ.

'ಜಗಳ ನಡೆಯುತ್ತಿದ್ದ ವೇಳೆ ಅಡುಗೆ ಮನೆಯಲ್ಲಿದ್ದ ಚಾಕುವಿನಿಂದ ತೌಹಿಬ್ ಪಾಷಾ ಅವರೇ ಹೊಟ್ಟೆಗೆ ಇರಿದುಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ತನಿಖೆ ಪೂರ್ಣವಾದ ನಂತರ ಸಾವಿಗೆ ಕಾರಣ ಗೊತ್ತಾಗಲಿದೆ' ಎಂದು ಪೊಲೀಸರು ಹೇಳಿದರು.

ರಂಗಭೂಮಿ ಕಲಾವಿದ ಆತ್ಮಹತ್ಯೆ

ಸಾರಕ್ಕಿ ಸಮೀಪದ ಸಂಗಮ್ ವೃತ್ತದ ಬಳಿ ರಸ್ತೆಬದಿಯ ಮರಕ್ಕೆ ನೇಣುಹಾಕಿಕೊಂಡು ರಂಗಭೂಮಿ ಕಲಾವಿದ, ಕೋಲಾರದ ಮುರುಳಿ (32) ಅವರು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಳಿಗ್ಗೆ 7ರ ಸುಮಾರಿಗೆ ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನೆ ಮಾಡಲಾಯಿತು. ಮುರುಳಿ ಪೋಷಕರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ರಂಗಭೂಮಿಯ ತಾಂತ್ರಿಕ ವಿಭಾಗದಲ್ಲಿ ಮುರುಳಿ ಕೆಲಸ ಮಾಡುತ್ತಿದ್ದರು. ಜತೆಗೆ ಕಿರುಚಿತ್ರಗಳಲ್ಲೂ ನಟಿಸಿದ್ದರು. ಗಿರಿನಗರದಲ್ಲಿ ವಾಸವಾಗಿದ್ದರು ಎಂದು ಮೂಲಗಳು ಹೇಳಿವೆ.

ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ. ವೈಯಕ್ತಿಕ ಕಾರಣ ಇರಬಹುದು ಎಂಬುದಾಗಿ ಶಂಕಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಆತ್ಮಹತ್ಯೆಗೂ ಕೆಲವು ತಾಸು ಮೊದಲು ಮುರುಳಿ ಅವರು, 'ನಾನು ಸರಿಯಾಗಿ ಏನನ್ನೂ ಮಾಡಲು ಸಾಧ್ಯವಾಗಲಿಲ್ಲ. ಮುಂದಿನ ಜನ್ಮದಲ್ಲಿ ಮತ್ತೆ ನಿಮ್ಮ ಹೊಟ್ಟೆಯಲ್ಲಿ ಹುಟ್ಟುತ್ತೇನೆ' ಎಂಬುದಾಗಿ ಪೋಷಕರಿಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದರು' ಎಂದು ಪೊಲೀಸರು ಹೇಳಿದರು.

ಜೆ.ಪಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐವರು ವಿದ್ಯಾರ್ಥಿಗಳ ಬಂಧನ

ಮಾದಕ ಪದಾರ್ಥ ಮಾರಾಟ: ಪೊಲೀಸ್ ಕಮಿಷನರ್

ಪ್ರಜಾವಾಣಿ ವಾರ್ತೆ

ಮಂಗಳೂರು: ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿಸಿಕೊಂಡಿದ್ದ ಆರೋಪದ ಮೇಲೆ ಐವರು ವಿದ್ಯಾರ್ಥಿಗಳನ್ನು ಇಲ್ಲಿನ ಪೊಲೀಸರು ಬಂಧಿಸಿದ್ದಾರೆ.

ಈ ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯವನ್ನು ತೊರೆದು, ಬಾಡಿಗೆ ಮನೆಯಲ್ಲಿ ವಾಸವಿದ್ದುಕೊಂಡು ಮಾದಕ ಪದಾರ್ಥಗಳ ಮಾರಾಟ ಜಾಲದಲ್ಲಿ ತೊಡಗಿದ್ದರು ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಕಮಿಷನರ್, 'ವಿದ್ಯಾರ್ಥಿಯೊಬ್ಬನ ಬ್ಯಾಗಿನಲ್ಲಿ ಗಾಂಜಾ ಪ್ಯಾಕೆಟ್ ಪತ್ತೆಯಾಗಿತ್ತು. ಆತನ ಪೋಷಕರು ಈ ಬಗ್ಗೆ ನಮಗೆ ಮಾಹಿತಿ ನೀಡಿದ್ದರು. ಆ ಮಾಹಿತಿಯನ್ನು ಆಧರಿಸಿ, ಆತನಿಗೆ ಗಾಂಜಾ ಪೂರೈಸಿದವರ ಪತ್ತೆಗೆ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಈ ವೇಳೆ, ಬೇರೆ ಬೇರೆ ಕಾಲೇಜುಗಳ ಐವರು ವಿದ್ಯಾರ್ಥಿಗಳು ಹಾಸ್ಟೆಲ್ ತೊರೆದು, ಬಾಡಿಗೆ ಮನೆಯಲ್ಲಿ ಉಳಿದುಕೊಂಡು, ಮಾದಕ ಪದಾರ್ಥ ಪೂರೈಕೆ ವಹಿವಾಟು ನಡೆಸುತ್ತಿದ್ದುದು ಗೊತ್ತಾಗಿದೆ. ಆ ವಿದ್ಯಾರ್ಥಿಗಳನ್ನು ಬಂಧಿಸಿದ್ದೇವೆ. ಅವರೆಲ್ಲರೂ ವಯಸ್ಕರು. ಶೈಕ್ಷಣಿಕ ಹಿತದೃಷ್ಟಿಯಿಂದ ಅವರ ಮಾಹಿತಿ ಬಹಿರಂಗಪಡಿಸಿಲ್ಲ' ಎಂದು ತಿಳಿಸಿದ್ದಾರೆ.

'ನಗರದ ಆರು ಕಾಲೇಜುಗಳ 40 ವಿದ್ಯಾರ್ಥಿಗಳಿಗೆ ಹಾಗೂ ಇತರ ಹತ್ತು ಮಂದಿಗೆ ಮಾದಕ ಪದಾರ್ಥ ಪೂರೈಕೆ ಮಾಡಿದ್ದನ್ನು ಪತ್ತೆ ಮಾಡಲಾಗಿದೆ. ಎಲ್ಲ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಆಪ್ತಸಮಾಲೋಚನೆ ನಡೆಸಲಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

'ವಿದ್ಯಾರ್ಥಿಗಳ ಚಲನವಲನದ ಮೇಲೆ ಪೋಷಕರು ನಿಗಾ ವಹಿಸಬೇಕು. ವಿದ್ಯಾರ್ಥಿಗಳ ನಡತೆಯಲ್ಲಿ ಬದಲಾವಣೆ ಕಂಡುಬಂದರೆ ಗಮನಿಸಬೇಕು. ಅವರೇನಾದರೂ ಸಮಸ್ಯೆ ಎದುರಿಸುತ್ತಿದ್ದಾರೆಯೇ ಎಂಬುದನ್ನೂ ಆಗಾಗ ಪರಿಶೀಲಿಸಬೇಕು. ಅವರು ಮಾದಕ ಪದಾರ್ಥ ಸೇವನೆಯ ಚಟ ಹೊಂದಿರುವ ಮಾಹಿತಿ, ಅನುಮಾನಗಳಿದ್ದಲ್ಲಿ ಸ್ಥಳೀಯ ಠಾಣೆಗೆ ತಿಳಿಸಬೇಕು' ಎಂದು ಕಮಿಷನರ್ ಹೇಳಿದ್ದಾರೆ.

ಅಜ್ಜನ ಮನೆಯಲ್ಲಿ ಚಿನ್ನ ಕದ್ದ ಮೊಮ್ಮಗ

ಬೆಂಗಳೂರು: ಅಜ್ಜನ ಮನೆಯಲ್ಲಿ ಚಿನ್ನದ ಆಭರಣ ಕಳ್ಳತನ ಮಾಡಿದ್ದ ಮೊಮ್ಮಗನನ್ನು ಬಾಣಸವಾಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಾಲಕನಿಂದ ₹5 ಲಕ್ಷ ಮೌಲ್ಯದ 35 ಗ್ರಾಂ ಚಿನ್ನದ ಆಭರಣ ವಶಕ್ಕೆ ಪಡೆಯಲಾಗಿದೆ.

ಬಾಣಸವಾಡಿಯ ಈರಪ್ಪರೆಡ್ಡಿ ಲೇಔಟ್‌ನ ನಿವಾಸಿಯೊಬ್ಬರು ನೀಡಿದ ದೂರಿನ ಮೇಲೆ ಬಾಲಕನನ್ನು ಬಂಧಿಸಲಾಗಿದೆ.

'ದೂರುದಾರರು ತಮ್ಮ ಮನೆಯ ಬೀರುವಿನಲ್ಲಿ 199 ಗ್ರಾಂ ಚಿನ್ನದ ಆಭರಣ ಇಟ್ಟಿದ್ದರು. ಅಜ್ಜ, ಅಜ್ಜಿ ಆಸ್ಪತ್ರೆಗೆ ತೆರಳಿದ್ದಾಗ ಮನೆಯಲ್ಲಿದ್ದ ಮೊಮ್ಮಗ, ಚಿನ್ನವನ್ನು ಕದ್ದು ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

'ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣದಲ್ಲೂ ಇದೇ ಬಾಲಕ ಸಿಕ್ಕಿಹಾಕಿಕೊಂಡಿದ್ದ. ಬಾಲನ್ಯಾಯ ಮಂಡಳಿ ವಶದಲ್ಲಿ ಬಾಲಕ ಇರುವ ಮಾಹಿತಿ ಪಡೆದುಕೊಂಡು, ನ್ಯಾಯಾಲಯದಿಂದ ಬಾಡಿ ವಾರಂಟ್ ಪಡೆದು ಬಾಲಕನನ್ನು ವಶಕ್ಕೆ ಪಡೆದು ಬಂಧಿಸಲಾಯಿತು. ಕಳ್ಳತನ ಮಾಡಿರುವುದಾಗಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ. ಕದ್ದ ಚಿನ್ನವನ್ನು ಮೈಸೂರಿನ ಚಿನ್ನದ ಅಂಗಡಿಗೆ ಮಾರಾಟ ಮಾಡಿದ್ದ. ಅಲ್ಲಿದ್ದ ಚಿನ್ನವನ್ನು ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

₹5 ಕೋಟಿ ಮೌಲ್ಯದ ಚಿನ್ನದ ಗಟ್ಟಿ ಜಪ್ತಿ

ವಿದೇಶದಿಂದ ಚಿನ್ನವನ್ನು ಕಳ್ಳ ಸಾಗಣೆಯ ಮೂಲಕ ತಂದಿದ್ದ ಐವರನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು, ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಆರೋಪಿಗಳಿಂದ ₹5 ಕೋಟಿ ಮೌಲ್ಯದ ಚಿನ್ನವನ್ನು ವಶಕ್ಕೆ ಪಡೆದಿದ್ದಾರೆ.

ಸ್ಥಳೀಯರ ನೆರವು ಪಡೆದು ಬಾಂಗ್ಲಾದೇಶದ ಐವರು, ಚಿನ್ನವನ್ನು ಕಳ್ಳಸಾಗಣೆ ಮಾಡಲು ಮುಂದಾಗಿದ್ದರು. ಎಲ್ಲಿಂದ ಚಿನ್ನವನ್ನು ತರಲಾಗುತ್ತಿತ್ತು, ಯಾರಿಗೆ ಚಿನ್ನವನ್ನು ಮಾರಾಟ ಮಾಡಲು ಆರೋಪಿಗಳು ಮುಂದಾಗಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ವಾಟಾಳ್ ಬಂಧನ, ಬಿಡುಗಡೆ

ಇಂಗ್ಲಿಷ್‌ನಲ್ಲಿ ಬಂಧನ ವಾರಂಟ್ ತಂದಿದ್ದಕ್ಕೆ ತೀವ್ರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕರಣವೊಂದರಲ್ಲಿ ನ್ಯಾಯಾಲಯವು ಬಂಧನ ವಾರಂಟ್ ಆದೇಶ ಹೊರಡಿಸಿದ್ದರಿಂದ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಅವರನ್ನು ಬಸವೇಶ್ವರನಗರ ಠಾಣೆಯ ಪೊಲೀಸರು ಬುಧವಾರ ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರ ಎದುರು ನಾಗರಾಜ್ ಅವರನ್ನು ಪೊಲೀಸರು ಹಾಜರು ಪಡಿಸಿದರು. ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದರಿಂದ ಬಿಡುಗಡೆ ಮಾಡಲಾಯಿತು.

ರಾಜಾಜಿನಗರದ ಕ್ಷೇತ್ರದ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅವರ ಮನೆ ಎದುರು 2021ರಲ್ಲಿ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದ್ದರು. ಈ ಸಂಬಂಧ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದೇ ಪ್ರಕರಣದಲ್ಲಿ 42ನೇ ಎಸಿಜೆಎಂ ನ್ಯಾಯಾಲಯ ಬಂಧನ ವಾರಂಟ್ ಜಾರಿಗೊಳಿಸಿತ್ತು.

ಆಕ್ಷೇಪ: ಇಂಗ್ಲಿಷ್‌ನಲ್ಲಿ ಬಂಧನ ವಾರಂಟ್ ತಂದಿದ್ದಕ್ಕೆ ನಾಗರಾಜ್ ಆಕ್ಷೇಪ ವ್ಯಕ್ತಪಡಿಸಿದರು.

'ಕನ್ನಡದಲ್ಲಿ ವಾರಂಟ್ ಆದೇಶ ನೀಡಿದರೆ ಮಾತ್ರ ಬರುತ್ತೇನೆ. ಇಲ್ಲದಿದ್ದರೆ ಬರುವುದಿಲ್ಲ' ಎಂದು ಪಟ್ಟು ಹಿಡಿದರು. ಪೊಲೀಸ್ ಜೀಪನ್ನು ಹತ್ತುವುದಕ್ಕೂ ನಿರಾಕರಿಸಿದ್ದರು. ಕೊನೆಗೆ ಆಟೊದಲ್ಲಿ ಬರುವುದಾಗಿ ಹೇಳಿದರು. ಅದಕ್ಕೆ ಪೊಲೀಸರು ಒಪ್ಪಿದರು. ಆಟೊದಲ್ಲಿ ನಾಗರಾಜ್ ಅವರನ್ನು ನ್ಯಾಯಾಲಯಕ್ಕೆ ಕರೆದೊಯ್ಯಲಾಯಿತು.

ಇಂಗ್ಲಿಷ್‌ನಲ್ಲಿ ಬಂಧನ ವಾರಂಟ್ ತಂದಿದ್ದಕ್ಕೆ ಆಕ್ಷೇಪಿಸಿದ ವಾಟಾಳ್ ನಾಗರಾಜ್

ನೆಲಮಂಗಲ ಸಮೀಪದ ಅಡಕಮಾರನಹಳ್ಳಿ ಬಳಿ ಬುಧವಾರ ರಾತ್ರಿ ಸಂಭವಿಸಿದ ಅಗ್ನಿ ಅವಘಡದಿಂದ ಬೆಂಕಿಯ ಕೆನ್ನಾಲಿಗೆ ಎದ್ದಿದ್ದ ದೃಶ್ಯ ಪ್ರಜಾವಾಣಿ ಚಿತ್ರ

ಗೋದಾಮಿಗೆ ಬೆಂಕಿ: ಅಪಾರ ನಷ್ಟ

ಬೆಂಗಳೂರು: ಬೆಂಗಳೂರು- ತುಮಕೂರು ರಸ್ತೆಯ ಅಡಕಮಾರನಹಳ್ಳಿಯ ಆಂಜನೇಯ ದೇವಸ್ಥಾನದ ಬಳಿಯ ಆಹಾರ ಪದಾರ್ಥ ಸಂಗ್ರಹಿಸಿದ್ದ ಗೋದಾಮಿನಲ್ಲಿ ಬುಧವಾರ ತಡರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, ಗೋದಾಮು ಹೊತ್ತಿ ಉರಿದಿದೆ.

ನೆಲಮಂಗಲದ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು. ರಾತ್ರಿ ಒಂದು ಗಂಟೆಯಾದರೂ ನಿಯಂತ್ರಣ ಸಾಧ್ಯ ಆಗಿರಲಿಲ್ಲ. ಮಾದನಾಯಕನಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಗೋದಾಮಿನ ಒಳಗೆ ಯಾರಾದರೂ ಇದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಬೆಂಗಳೂರಿನಿಂದ ಮತ್ತಷ್ಟು ಅಗ್ನಿಶಾಮಕ ವಾಹನಗಳನ್ನು ಕಾರ್ಯಾಚರಣೆಗಾಗಿ ಕರೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಕಾರು, ಟ್ರಕ್ ಡಿಕ್ಕಿ ಗುತ್ತಿಗೆದಾರ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ: ಕನಕಪುರ– ಹಲಗೂರು ಹೆದ್ದಾರಿ ರಸ್ತೆ ತೋಟಳ್ಳಿ ಸಮೀಪದ ಬಳೆ ಬಸಪ್ಪನ ದೊಡ್ಡಿ ಗೇಟ್ ಬಳಿ ಬುಧವಾರ ಕಾರು ಮತ್ತು ಟ್ರಕ್ ನಡುವೆ ನಡೆದ ಭೀಕರ ಅಪಘಾತದಲ್ಲಿ ಕಾರು ಚಲಾಯಿಸುತ್ತಿದ್ದಂತಹ ವ್ಯಕ್ತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಬೆಂಗಳೂರಿನ ಕೆ.ಆರ್ ಪುರದ ಬೇಡಳ್ಳಿಯ ಅರುಣ್ ಬಾಬು (40) ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಇವರಿಗೆ ಪತ್ನಿ ಹಾಗೂ ಒಂದು ಮಗುವಿದೆ.

ಸಿವಿಲ್ ಗುತ್ತಿಗೆದಾರರಾಗಿರುವ ಅರುಣ್ ಬಾಬು ಹಲಗೂರಿನಲ್ಲಿ ಫಾರ್ಮ್ ಹೌಸ್ ಹೊಂದಿದ್ದಾರೆ. ಬುಧವಾರ ಬೆಳಗ್ಗೆ ಅಲ್ಲಿಗೆ ಹೋಗಿ ಕೆಲಸ ಮುಗಿಸಿಕೊಂಡು ಕಾರಿನಲ್ಲಿ ಬೆಂಗಳೂರಿಗೆ ವಾಪಸ್ ಹೊರಟಿದ್ದರು. ಮಧ್ಯಾಹ್ನ 3ರ ಸಮಯದಲ್ಲಿ ಅಪಘಾತ ಸಂಭವಿಸಿದೆ.

ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕಾರಿನೊಳಗೆ ಸಿಲುಕಿದ್ದ ಮೃತ ದೇಹವನ್ನು ಹೊರ ತೆಗೆಯಲಾಗದಷ್ಟು ಜಖಂಗೊಂಡಿತ್ತು. ಪೊಲೀಸರು ಪ್ರಯಾಸಪಟ್ಟು ಶವ ಹೊರ ತೆಗೆದರು.

ಹೆಚ್ಚು ಬೆಲೆ ತೆತ್ತು ಸಿಲಿಂಡರ್ ಖರೀದಿಸುವ ಸ್ಥಿತಿ, ಮೆನು ಕಡಿತ ಇಲ್ಲವೇ ದರ ಹೆಚ್ಚಳದ ಸಂಕಷ್ಟ

ಕೇಟರಿಂಗ್‌ಗೂ ತಟ್ಟಿದ ಸಿಲಿಂಡರ್ ಬಿಸಿ

• ಉಮೇಶಭಟ್ಟ ಪಿ.ಎಚ್

ಬೆಂಗಳೂರು: ವಾಣಿಜ್ಯ ಸಿಲಿಂಡರ್ ಕೊರತೆಯ ಬಿಸಿ ಅಡುಗೆ ತಯಾರಿ ವಲಯಕ್ಕೂ(ಕೇಟರಿಂಗ್) ತಟ್ಟಿದೆ. ಅಗತ್ಯದಷ್ಟು ಸಿಲಿಂಡರ್ ಸಿಗದೇ ಸಮಾರಂಭಗಳ ಊಟ ದುಬಾರಿಯಾಗಿದೆ.

ಮೊದಲೆಲ್ಲ ಯಥೇಚ್ಛವಾಗಿ, ನಿಗದಿತ ದರದೊಳಗೆ ವಾಣಿಜ್ಯ ಸಿಲಿಂಡರ್‌ಗಳು ಸಿಗುತ್ತಿದ್ದವು. ಸರಬರಾಜಿನಲ್ಲಿ ವ್ಯತ್ಯಯವಾದ ಬಳಿಕ ಸುಲಭವಾಗಿ ಸಿಲಿಂಡರ್ ಸಿಗುತ್ತಿಲ್ಲ. ಖರೀದಿಸಬೇಕೆಂದರೆ ಹೆಚ್ಚು ದರ ಪಾವತಿಸಬೇಕಾಗಿದೆ.

ಇದರಿಂದ ಸಮಾರಂಭಗಳಿಗೆ ಅಡುಗೆ ತಯಾರಿಸಲು ಒಪ್ಪಿಕೊಳ್ಳುವವರು ವಾಣಿಜ್ಯ ಸಿಲಿಂಡರ್ ಅನ್ನು ತಾವೇ ತರುವಂತೆ ಹೇಳುತ್ತಿದ್ದಾರೆ. ತಾವೇ ಸಿಲಿಂಡರ್ ತರಬೇಕು ಎಂದರೆ ದರ ಹೆಚ್ಚಳ ಇಲ್ಲವೇ ಊಟದಲ್ಲಿನ ಮೇಲೋಗರ ಹಾಗೂ ತಿನಿಸುಗಳ ಕಡಿತ ಮಾಡಬೇಕಾಗುತ್ತದೆ ಎಂದು ಸಲಹೆ ನೀಡುತ್ತಿದ್ದಾರೆ. ಸಮಾರಂಭ ನಡೆಸುವವರೂ ಹೆಚ್ಚು ಖರ್ಚು ಮಾಡುವ ಇಲ್ಲವೇ ಪಟ್ಟಿ ಬದಲಿಸುವಂತಾಗಿದೆ.

ಸಮಸ್ಯೆ ಸ್ವರೂಪ ಭಿನ್ನ: ಕರ್ನಾಟಕದಲ್ಲಿಯೇ ಅಂದಾಜು ಒಂದು ಲಕ್ಷ ಅಡುಗೆ ತಯಾರಕರು ಇದ್ದಾರೆ. ಇದರಲ್ಲಿ ವ್ಯವಸ್ಥಿತವಾಗಿ ನಡೆಸುವವರ ಪ್ರಮಾಣ 50 ಸಾವಿರಕ್ಕೂ ಅಧಿಕವಿದೆ. ಸಣ್ಣಪುಟ್ಟ ಸಮಾರಂಭಕ್ಕೆ ಅಡುಗೆ ಮಾಡಿಕೊಡುವವರೂ ಇದ್ದಾರೆ. ಬೆಂಗಳೂರು ಸೇರಿದಂತೆ ಪ್ರಮುಖ ನಗರ, ತಾಲ್ಲೂಕುಗಳಲ್ಲೂ ಸಮಸ್ಯೆಯಾಗಿದೆ.

ಇದರಲ್ಲಿ ದೊಡ್ಡ ಮದುವೆಗಳಿಗೆ 8 ರಿಂದ 10 ವಾಣಿಜ್ಯ ಸಿಲಿಂಡರ್ ಆದರೂ ಬೇಕಾಗುತ್ತದೆ. ಗೃಹ ಪ್ರವೇಶಕ್ಕೆ 3ರಿಂದ 4, ನಾಮಕರಣ, ನಿಶ್ಚಿತಾರ್ಥದಂತಹ ಸಮಾರಂಭಗಳಿಗೆ 2–3 ಸಿಲಿಂಡರ್ ಅಡುಗೆ ತಯಾರಿಸಲು ಬೇಕಾಗುತ್ತದೆ. ಸಿಲಿಂಡರ್ ಅನ್ನು ಹೆಚ್ಚು ದರ ಪಾವತಿಸಿ ತರಬೇಕಾಗಿರುವುದರಿಂದ ದುಬಾರಿ ಕಾರಣದಿಂದ ಹಲವರು ಕಾರ್ಯಕ್ರಮಗಳನ್ನೇ ರದ್ದುಪಡಿಸಿದ್ದಾರೆ.

ಮಾಂಸಾಹಾರ ತಯಾರಿಸುವವರು ಹೆಚ್ಚು ಕಟ್ಟಿಗೆ ಬಳಸುವುದರಿಂದ ಅವರಿಗೆ ಅಷ್ಟಾಗಿ ಸಮಸ್ಯೆಯಾಗಿಲ್ಲ. ಸಸ್ಯಾಹಾರ ಕೇಟರಿಂಗ್‌ನವರಿಗೆ ಹೆಚ್ಚಿನ ಅಡಚಣೆಯಾಗುತ್ತಿದೆ.

'ಮದುವೆಗೆ ಊಟದ ಮೆನುವಿನಲ್ಲಿ ದೋಸೆ, ಪೂರಿ ಇಲ್ಲವೇ ರೋಟಿಯನ್ನು ನೀಡುತ್ತೇವೆ. ಅಲ್ಲಿಯೇ ತಯಾರಿಸಿಕೊಡುವಂತಹ ಇಂತಹ ಆಹಾರವನ್ನು ಮೆನುವಿನಿಂದ ಕೈಬಿಟ್ಟು ಸಿಲಿಂಡರ್ ಪ್ರಮಾಣ ತಗ್ಗಿಸಿಕೊಂಡಿದ್ದೇವೆ. ಬೇಕೇ ಬೇಕು ಎಂದು ಕೇಳಿದಾಗ ಹೆಚ್ಚುವರಿ ಸಿಲಿಂಡರ್ ತಂದು ಕೊಡುವಂತೆ ಆಯೋಜಕರಿಗೆ ಸೂಚಿಸುತ್ತಿದ್ದೇವೆ' ಎಂದು ಅಡುಗೆ ತಯಾರಕರೊಬ್ಬರು ತಿಳಿಸಿದರು.

ಕಾಳಸಂತೆಯಲ್ಲಿ ಮಾರಾಟ: ಮೊದಲೆಲ್ಲಾ ಸರ್ಕಾರಿ ಹಾಗೂ ಖಾಸಗಿ ಕಂಪನಿಗಳ ಏಜೆನ್ಸಿಗಳಿಂದಲೂ ವಾಣಿಜ್ಯ ಸಿಲಿಂಡರ್ ಲಭ್ಯವಾಗುತ್ತಿತ್ತು. ಮದುವೆ, ನಾಮಕರಣ, ಗೃಹ ಪ್ರವೇಶ ಸೇರಿದಂತೆ ನಾನಾ ಕಾರ್ಯಕ್ರಮಗಳಿಗೆ ಅಡುಗೆ ಸರಬರಾಜು ಮಾಡುವವರು 19 ಕೆಜಿ ವಾಣಿಜ್ಯ ಸಿಲಿಂಡರ್ ಅನ್ನು ₹1,950ಗೆ ಖರೀದಿಸುತ್ತಿದ್ದರು. ಇದರಿಂದ ಅಷ್ಟಾಗಿ ಸಮಸ್ಯೆ ಆಗಿರಲಿಲ್ಲ. ಈಗ ಅದು ಹೆಚ್ಚಾಗಿದೆ.

'ಮೂರು ವಾರದಿಂದ ಸಿಲಿಂಡರ್ ಸಮಸ್ಯೆ ಹೆಚ್ಚಿದೆ. ಪಶ್ಚಿಮ ಏಷ್ಯಾದ ಭಾಗದಲ್ಲಿ ಯುದ್ಧದ ವಾತಾವರಣ ಶುರುವಾಗಿ ಅನಿಲ ಸರಬರಾಜು ವ್ಯತ್ಯಯವಾದ ಮರು ದಿನದಿಂದಲೇ ಸಿಲಿಂಡರ್ ಲಭ್ಯತೆ ಪ್ರಮಾಣ ಕಡಿಮೆ ಆಗಿದೆ. ಸಿಲಿಂಡರ್ ಒದಗಿಸುತ್ತಿದ್ದ ಏಜೆನ್ಸಿಯವರು ಕರೆ ಸ್ವೀಕರಿಸುತ್ತಿಲ್ಲ. ದರವಂತೂ ಮೂರು ಪಟ್ಟು ಹೆಚ್ಚಾಗಿದೆ. ಕಾಳಸಂತೆಯಲ್ಲಿ ₹5 ಸಾವಿರದಿಂದ ₹7 ಸಾವಿರವರೆಗೂ ವಾಣಿಜ್ಯ ಸಿಲಿಂಡರ್ ಮಾರಾಟವಾಗುತ್ತಿದೆ' ಎಂದು ಕೇಟರಿಂಗ್ ವಹಿವಾಟು ನಡೆಸುವ ಪ್ರತಿನಿಧಿಯೊಬ್ಬರು ಹೇಳಿದರು.

> ತೈಲ ಕಂಪೆನಿಗಳು ವಲಯಗಳನ್ನು ನಿಗದಿಪಡಿಸಿ ಆದ್ಯತೆ ಮೇಲೆ ವಾಣಿಜ್ಯ ಸಿಲಿಂಡರ್ ಒದಗಿಸುತ್ತಿವೆ. ಕೇಟರಿಂಗ್ ಅವರು ಹೋಟೆಲ್ ವಲಯದಡಿಯೇ ಬರುವುದರಿಂದ ಸನ್ನಿವೇಶ ನೋಡಿಕೊಂಡು ಸಿಲಿಂಡರ್ ವಿತರಿಸಲಾಗುತ್ತಿದೆ
> **ಶಾಂತಗೌಡ ಗುಣಕಿ,** ಜಂಟಿ ನಿರ್ದೇಶಕ, ಆಹಾರ ಇಲಾಖೆ ಬೆಂಗಳೂರು

> ಏಪ್ರಿಲ್, ಮೇನಲ್ಲಿ ಹೆಚ್ಚಾಗಿ ಮದುವೆ, ಗೃಹಪ್ರವೇಶ ನಡೆಯುತ್ತಿದ್ದು ಬೇಕಾಗುವಷ್ಟು ವಾಣಿಜ್ಯ ಸಿಲಿಂಡರ್ ಪೂರೈಕೆ ಆಗುತ್ತಿಲ್ಲ. ಹೋಟೇಲ್ ಮಾಲೀಕರ ಜತೆಯಲ್ಲಿ ಅಡುಗೆ ತಯಾರಕರಿಗೂ ಪ್ರತ್ಯೇಕ ಕೋಟಾ ನಿಗದಿಮಾಡಬೇಕು
> **ರಥಯಾತ್ರೆ ಸುರೇಶ್,** ಬೆಂಗಳೂರು

ಸೌದೆ ಒಲೆಗೆ ಒತ್ತು

ಆಹಾರ ಅಡುಗೆ ತಯಾರಿಸುವವರೂ ಸಿಲಿಂಡರ್ ಮೇಲೆ ಹೆಚ್ಚು ಅವಲಂಬನೆಯಾಗಿದ್ದರಿಂದ ಸಮಸ್ಯೆಯಾಗಿದೆ. ಪರ್ಯಾಯ ಕ್ರಮವಾಗಿ ಹಲವರು ಮನೆಯಲ್ಲಿಯೇ ಸುಧಾರಿತ ಸೌದೆ ಒಲೆಗಳನ್ನು ತಂದು ಬಳಸಲು ಆರಂಭಿಸಿದ್ದಾರೆ.

ತಮಿಳುನಾಡು ಹಾಗೂ ಇತರೆಡೆ ಉತ್ಪಾದಿಸುವ ಬಗೆಬಗೆಯ ಒಲೆಗಳು ಬೆಂಗಳೂರಿನ ಮಾರುಕಟ್ಟೆಯಲ್ಲಿ ಸಿಗುತ್ತಿವೆ. ಕಟ್ಟಿಗೆ ಹಾಗೂ ಗಾಳಿಯನ್ನು ಬಳಸಿ ಐದು ಗಂಟೆ ಅಡುಗೆ ಮಾಡಲು ನೆರವಾಗಬಲ್ಲ ಒಲೆಗಳು ಬಂದಿವೆ. ಹೆಚ್ಚು ಹೊಗೆ ಬಾರದ ಒಲೆಗಳನ್ನು ಬಳಸಲಾಗುತ್ತಿದೆ. '₹ 10 ಸಾವಿರದಿಂದ ₹ 15 ಸಾವಿರ ವೆಚ್ಚದ ಒಲೆಗಳು ಬಂದಿವೆ. ಎರಡು ಒಲೆ ಖರೀದಿಸಿ ಅಡುಗೆಗೆ ಬಳಸಿ ಕಾರ್ಯಕ್ರಮಗಳಿಗೆ ಒದಗಿಸುತ್ತಿದ್ದೇವೆ. ಸಿಲಿಂಡರ್ ಪ್ರಮಾಣ ಅರ್ಧದಷ್ಟು ತಗ್ಗಿದೆ' ಎಂದು ಬೆಂಗಳೂರಲ್ಲಿ ಕೇಟರಿಂಗ್ ನಡೆಸುವ ಶಿರಸಿಯ ಸುರೇಶ್ ನಾಯಕ್ ಹೇಳಿದರು.

ಬೆಂಗಳೂರಿನಲ್ಲಿ ಕೇಟರಿಂಗ್ ವಲಯದವರು ಸುಧಾರಿತ ಕಟ್ಟಿಗೆ ಒಲೆ ಬಳಸುತ್ತಿದ್ದಾರೆ

ನಿಧನ ವಾರ್ತೆ

ಜಿ.ಆರ್. ಸುಬ್ರಹ್ಮಣ್ಯ

ಬೆಂಗಳೂರು: ನಗರದ ವಿದ್ಯಾರಣ್ಯಪುರ ನಿವಾಸಿ ಜಿ.ಆರ್. ಸುಬ್ರಹ್ಮಣ್ಯ (91) ಅವರು ಮಂಗಳವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಬುಧವಾರ ನಡೆಯಿತು.

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಗರ್ಗೇಶ್ವರಿ ಗ್ರಾಮದವರಾದ ಅವರು ಎಚ್‌ಎಂಟಿ ಕಾರ್ಖಾನೆಯ ನಿವೃತ್ತ ಉದ್ಯೋಗಿ.

ಕಥೆ, ಕಾದಂಬರಿ, ಕವನ ಸಂಕಲನ ಸೇರಿ 35ಕ್ಕೂ ಹೆಚ್ಚು ಕೃತಿಗಳು 'ಗರಾಸು' ಕಾವ್ಯನಾಮದಲ್ಲಿ ಪ್ರಕಟಗೊಂಡಿವೆ. ಗೌರವ ಡಾಕ್ಟರೇಟ್ ಸೇರಿದಂತೆ ಹಲವು ಸಂಘ ಸಂಸ್ಥೆಗಳ ಪ್ರಶಸ್ತಿಗಳು ಸಂದಿವೆ.

ಜಿ.ಆರ್. ಸುಬ್ರಹ್ಮಣ್ಯ

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಲೋಕಾರ್ಪಣೆಗೆ ಸಿದ್ಧವಾಗಿರುವ ಭೈರವೈಕ್ಯ ಬಾಲಗಂಗಾಧರನಾಥ ಸ್ವಾಮೀಜಿಯವರ ಗುರು ಭೈರವೈಕ್ಯ ಮಂದಿರ

ಭೈರವೈಕ್ಯ ಮಂದಿರದ ಮೆರುಗು

ಆದಿಚುಂಚನಗಿರಿಯಲ್ಲಿ ಏ.15ರಂದು ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ನಾಗಮಂಗಲ: ತಾಲ್ಲೂಕಿನ ಆದಿಚುಂಚನಗಿರಿ ಮಠದ 71ನೇ ಪೀಠಾಧ್ಯಕ್ಷರಾಗಿದ್ದ ಬಾಲಗಂಗಾಧರನಾಥ ಸ್ವಾಮೀಜಿ ಅವರ ಗದ್ದುಗೆಯನ್ನು ನವೀಕರಿಸಲಾಗಿದ್ದು, ಬೃಹತ್ ಗುರು ಭೈರವೈಕ್ಯ ಮಂದಿರವು ಏಪ್ರಿಲ್ 15ರಂದು ಲೋಕಾರ್ಪಣೆಗೊಳ್ಳಲಿದೆ.

ಆದಿಚುಂಚನಗಿರಿ ಕ್ಷೇತ್ರದಲ್ಲಿರುವ ಕಾಲಭೈರವೇಶ್ವರಸ್ವಾಮಿ ದೇಗುಲದ ಪಕ್ಕದಲ್ಲಿಯೇ ಭೈರವೈಕ್ಯ ಬಾಲಗಂಗಾಧರನಾಥ ಸ್ವಾಮೀಜಿ ಅವರ ಸಮಾಧಿ ಮಾಡಲಾಗಿತ್ತು. ಶ್ರೀಗಳ ನಿಧನದ ಸಂದರ್ಭದಲ್ಲಿ ಗದ್ದುಗೆಗೆ ತಾತ್ಕಾಲಿಕವಾಗಿ ಮಂಟಪ ನಿರ್ಮಿಸಲಾಗಿತ್ತು. ನಂತರ ಮೂಲ ಸಮಾಧಿಯ ಗದ್ದುಗೆಯನ್ನು ಯಥಾಸ್ಥಿತಿಯಲ್ಲಿ ಇರಿಸಿಕೊಂಡು ಮಂಟಪವನ್ನು ಮಾತ್ರ ತೆರವುಗೊಳಿಸಿ, ಎರಡು ಅಂತಸ್ತುಗಳಲ್ಲಿ ಮಂದಿರವನ್ನು ನಿರ್ಮಿಸಲು ನಿರ್ಮಲಾನಂದನಾಥ ಸ್ವಾಮೀಜಿ ಅವರು ಮುಂದಾಗಿದ್ದು, ಮಂಟಪವನ್ನು ಸಂಪೂರ್ಣವಾಗಿ ಕೆಂಪು ಶಿಲೆ ಹಾಗೂ ವಿವಿಧ ಬಗೆಯ ಶಿಲೆಗಳಿಂದಲೇ ನಿರ್ಮಿಸಲಾಗಿದೆ.

ಮಂಟಪದ ನೆಲಮಹಡಿಯಲ್ಲಿ ಗುರು ಗದ್ದುಗೆಯಿದೆ. ಗದ್ದುಗೆಯ ಸುತ್ತ ಪ್ರದಕ್ಷಿಣಾ ಸ್ಥಳವಿರಲಿದೆ. ನೆಲಮಹಡಿಯ ಮೇಲಿನ ಅಂತಸ್ತಿನಲ್ಲಿ ಸ್ವಾಮೀಜಿ ಪುತ್ಥಳಿಯಿರುವ ಭವ್ಯ ಮಂಟಪವಿದೆ. ಕಾಲಭೈರವೇಶ್ವರಸ್ವಾಮಿ ದೇವಾಲಯದ ಪಶ್ಚಿಮ ಬಾಗಿಲಿಗೆ ಮಂಟಪದ ಮುಖ್ಯ ದ್ವಾರವಿದ್ದು, ಅತ್ಯಾಧುನಿಕ ಶೈಲಿಯಲ್ಲಿ ನಾಥ ಪರಂಪರೆಯನ್ನು ಸಾರುವ ಶಿಲ್ಪಕಲೆಯೊಂದಿಗೆ ಮಂಟಪ ನಿರ್ಮಿಸಲಾಗಿದೆ.

ಮಂದಿರದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ವಿವಿಧ ಮಠಗಳ ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದಾರೆ.

ಜಿಲ್ಲಾಧಿಕಾರಿ ಕುಮಾರ್ ಹಾಗೂ ಎಸ್‌ಪಿ ಶೋಭಾರಾಣಿ ಇತ್ತೀಚೆಗೆ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು. ಬಳಿಕ ನಿರ್ಮಲಾನಂದನಾಥ ಸ್ವಾಮೀಜಿ ಅವರೊಂದಿಗೆ ಕಾರ್ಯಕ್ರಮ ಕುರಿತು ಮಾಹಿತಿ ಪಡೆದರು.

ನಾಳೆಯಿಂದ ಧಾರ್ಮಿಕ ಕಾರ್ಯಕ್ರಮ

ಬಾಲಗಂಗಾಧರನಾಥ ಸ್ವಾಮೀಜಿ ಅವರ ಗದ್ದುಗೆಯ ಉದ್ಘಾಟನೆಯ ಅಂಗವಾಗಿ ನಿರ್ಮಲಾನಂದನಾಥ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಏಪ್ರಿಲ್ 10 ರಿಂದ 15 ರವರೆಗೆ ಆದಿಚುಂಚನಗಿರಿ ಮಠದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಏ.10 ಮತ್ತು ಏ.11 ರಂದು ಹೋಮ ಹವನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದರೆ. ಏ.12 ರಂದು ಕುಂಭಾಭಿಷೇಕ ನೆರವೇರಲಿದೆ. ಏ.13 ಮತ್ತು 14 ರಂದು ಮಠದಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಲಿದ್ದು, ಏ.15 ಕ್ಕೆ ಶ್ರೀಗುರು ಭೈರವೈಕ್ಯ ಮಂದಿರ ಲೋಕಾರ್ಪಣೆ ಹಾಗೂ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಉದ್ಘಾಟನೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಲಿದ್ದಾರೆ.

ನರ್ಸ್–ಅರಿವಳಿಕೆ ತಜ್ಞೆ ಜೊತೆ ವೈದ್ಯರ ಪ್ರಣಯ ಪ್ರಕರಣ

ನರ್ಸ್ ಜೀವಕ್ಕೆ ಕುತ್ತು: ವಿಚಾರಣೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಮುಖ್ಯಾಂಶಗಳು
- ಆತ್ಮಹತ್ಯೆಗೆ ಶರಣಾದ ನತದೃಷ್ಟ ನರ್ಸ್
- ಪೊಲೀಸರಿಗೆ ಮೃತಳ ತಾಯಿಯ ದೂರು

ಬೆಂಗಳೂರು: ನರ್ಸ್ ಆತ್ಮಹತ್ಯೆ ಪ್ರಕರಣವೊಂದರಲ್ಲಿ ಎರಡನೇ ಆರೋಪಿಯಾಗಿರುವ ಅರಿವಳಿಕೆ ತಜ್ಞೆಯ ವಿರುದ್ಧದ ಕ್ರಿಮಿನಲ್ ಪ್ರಕರಣದ ಅಧೀನ ನ್ಯಾಯಾಲಯದ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಇದೇ ವೇಳೆ ಪ್ರಕರಣದಲ್ಲಿ ಮೊದಲನೇ ಆರೋಪಿಯಾಗಿರುವ ಮತ್ತು ನರ್ಸ್ ಹಾಗೂ ಅರಿವಳಿಕೆ ತಜ್ಞೆಯ ಜೊತೆಗೆ ಅನೈತಿಕ ಸಂಪರ್ಕ ಹೊಂದಿದ್ದ ಆರೋಪ ಎದುರಿಸುತ್ತಿರುವ ವೈದ್ಯರ ವಿರುದ್ಧದ ವಿಚಾರಣೆಗೆ ಹಸಿರು ನಿಶಾನೆ ತೋರಿದೆ.

'ಆತ್ಮಹತ್ಯೆಗೆ ಶರಣಾದ ನರ್ಸ್ ಬರೆದಿದ್ದ ಡೆತ್ ನೋಟ್ ಆಧರಿಸಿ ನನ್ನ ವಿರುದ್ಧ ಜೆ.ಪಿ.ನಗರದ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ 30ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿರುವ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಅಸ್ಸಾಂನ ಜೋರ್‌ಹಾಟ್ ಜಿಲ್ಲೆಯ 33 ವರ್ಷದ ಅರಿವಳಿಕೆ ತಜ್ಞೆ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಆರೋಪಿ ವೈದ್ಯರು, ಅರಿವಳಿಕೆ ತಜ್ಞೆ ಜೊತೆಗೆ ಹೊಂದಿರುವ ಅನೈತಿಕ ಸಂಬಂಧದ ವಿಷಯ ತಿಳಿದು ನರ್ಸ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಈ ಘಟನೆಯಲ್ಲಿ ಅರಿವಳಿಕೆ ತಜ್ಞೆಯ ಪಾತ್ರ ಸೀಮಿತವಾಗಿ ಕಂಡು ಬರುತ್ತಿದೆ. ತಜ್ಞೆಯು ವೈದ್ಯರ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದಾರೆ ಎಂಬ ಏಕಮಾತ್ರ ಆರೋಪವನ್ನು ಹೊರತುಪಡಿಸಿದರೆ ಇವರದ್ದು ಬೇರಾವುದೇ ಪಾತ್ರ ಕಾಣುತ್ತಿಲ್ಲ. ಆದ್ದರಿಂದ, ಅರ್ಜಿದಾರರ ವಿರುದ್ಧದ ಅಧೀನ ನ್ಯಾಯಾಲಯದ ವಿಚಾರಣೆಗೆ ತಡೆ ನೀಡಲಾಗುತ್ತಿದೆ' ಎಂದು ನ್ಯಾಯಪೀಠ ಹೇಳಿದೆ.

'ನರ್ಸ್ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದ ಆರೋಪ ಎದುರಿಸುತ್ತಿರುವ ವೈದ್ಯರೂ ಸೇರಿದಂತೆ ಪ್ರಕರಣದ ಇತರೆ ಆರೋಪಿಗಳ ವಿರುದ್ಧದ ವಿಚಾರಣೆ ಮುಂದುವರಿಯುತ್ತದೆ' ಎಂದು ಸ್ಪಷ್ಟಪಡಿಸಿದೆ.

ಪ್ರತಿವಾದಿಗಳಾದ ಪುಟ್ಟೇನಹಳ್ಳಿ ಠಾಣೆ ಪೊಲೀಸರು ಹಾಗೂ ದೂರುದಾರರಾದ ಮೃತ ನರ್ಸ್ ತಾಯಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಪ್ರಕರಣವೇನು?: 'ಖಾಸಗಿ ಆಸ್ಪತ್ರೆ ವೈದ್ಯರೊಬ್ಬರು ತಾವು ಕರ್ತವ್ಯ ನಿರ್ವಹಿಸುತ್ತಿದ್ದ ಆಸ್ಪತ್ರೆಯಲ್ಲೇ ಕೆಲಸ ಮಾಡುತ್ತಿದ್ದ ನರ್ಸ್ ಹಾಗೂ ಅರಿವಳಿಕೆ ತಜ್ಞೆ (ಅರ್ಜಿದಾರರು) ಜೊತೆಗೆ ಅನೈತಿಕ ಸಂಪರ್ಕ ಹೊಂದಿದ್ದರು. ಅರಿವಳಿಕೆ ತಜ್ಞೆಯೊಂದಿಗಿನ ಸಂಬಂಧ ಗೊತ್ತಾದಾಗ ನರ್ಸ್, ಈ ಕುರಿತು ವೈದ್ಯರನ್ನು ಪ್ರಶ್ನಿಸಿದ್ದಾರೆ. ಆಗ ಇಬ್ಬರ ನಡುವೆ ಜಟಾಪಟಿ ನಡೆದಿದೆ. ಈ ವೇಳೆ ವೈದ್ಯರು ನರ್ಸ್ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಇದಾದ ಬಳಿಕ ನರ್ಸ್ ವೈದ್ಯನ ಹೆಸರು ಬರೆದಿಟ್ಟು ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ದೂರಿನಲ್ಲಿ ವಿವರಿಸಲಾಗಿದೆ.

'ನನ್ನ ಮಗಳ ಸಾವಿಗೆ ಕಾರಣವಾದ ವೈದ್ಯ ಹಾಗೂ ಅರಿವಳಿಕೆ ತಜ್ಞೆ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು' ಎಂದು ಕೋರಿ ನರ್ಸ್ ತಾಯಿ ಪೊಲೀಸರಿಗೆ ದೂರು ನೀಡಿದ್ದರು. ಇದರ ಅನುಸಾರ ಪೊಲೀಸರು ವೈದ್ಯರನ್ನು ಒಂದನೇ ಆರೋಪಿಯಾಗಿಸಿ ಮತ್ತು ಅರಿವಳಿಕೆ ತಜ್ಞೆಯನ್ನು ಎರಡನೇ ಆರೋಪಿಯಾಗಿಸಿ; ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 108ರ ಜೊತೆಗೆ 3(5)ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು.

ಉತ್ತಮ ಹೂಡಿಕೆಯ ಆಯ್ಕೆಗಾಗಿ ಕಾಯಬೇಡಿ. ಹೂಡಿಕೆ ಮಾಡಿ, ಉತ್ತಮ ಸಮಯಕ್ಕಾಗಿ ಕಾಯುತ್ತಿರಿ
ಅಂಕಿತ್ ಸಾಮ್ರಾಟ್, ಹೂಡಿಕೆದಾರ

ದುಡ್ಡಿನಂಥಾ ಮಾತು

ವಿಮೆ: ರೈಡರ್‌ಗಳ ಬಗ್ಗೆ ತಿಳಿದಿರಲಿ

• ವೈಭವ್ ಕುಮಾರ್



ವಿಮೆ ಎಂಬುದು ಮೂಲಭೂತವಾಗಿ ಅನಿಶ್ಚಿತ ಪರಿಸ್ಥಿತಿಯನ್ನು ಎದುರಿಸಲಿಕ್ಕಾಗಿ ಇರುವಂಥದ್ದು. ಗ್ರಾಹಕರು ಜೀವ ವಿಮಾ ಪಾಲಿಸಿಯನ್ನು ಖರೀದಿಸಿದಾಗ, ಅದು ಪ್ರಾಥಮಿಕವಾಗಿ, ಅವರ ಸಾವಿನಿಂದ ಉಂಟಾಗಬಹುದಾದ ಆರ್ಥಿಕ ಸಮಸ್ಯೆಗಳಿಂದ ಕುಟುಂಬಕ್ಕೆ ರಕ್ಷಣೆ ಒದಗಿಸುತ್ತದೆ. ಆದರೆ ಜೀವನದಲ್ಲಿ ಎದುರಾಗುವ ತೊಂದರೆ 'ಸಾವು' ಮಾತ್ರವೇ ಅಲ್ಲ. ಅದರ ಆಚೆಗೂ ಹಲವು ತೊಂದರೆಗಳು ಎದುರಾಗಬಹುದು.

ಅನಾರೋಗ್ಯ, ಅಪಘಾತ, ಅಂಗವೈಕಲ್ಯ, ಆದಾಯ ಇಲ್ಲವಾಗುವುದು ಕೂಡ ವ್ಯಕ್ತಿಯ ಜೀವನದಲ್ಲಿ ಯಾತನಾಮಯ ಸನ್ನಿವೇಶಗಳಾಗಿ ಎದುರಾಗಬಹುದು. ಹೆಚ್ಚಿನವರ ಪಾಲಿಗೆ, ಅದರಲ್ಲೂ ಮುಖ್ಯವಾಗಿ ಕೆಲಸದಲ್ಲಿ ಇರುವವರಿಗೆ ಮತ್ತು ಅವರ ಕುಟುಂಬಗಳಿಗೆ, ಇಂತಹ ಪ್ರತಿ ಸಂಕಷ್ಟದ ಸನ್ನಿವೇಶವನ್ನು ಪ್ರತ್ಯೇಕ ವಿಮಾ ಪಾಲಿಸಿಯೊಂದಿಗೆ ಎದುರಿಸುವುದು ತೀರಾ ಕ್ಲಿಷ್ಟಕರವಾದ ನಡೆ ಆಗಬಹುದು. ಹಾಗೆ ಮಾಡುವುದು ಹಣಕಾಸಿನ ದೃಷ್ಟಿಯಿಂದ ದುಬಾರಿಯಾಗಿ ಪರಿಣಮಿಸಬಹುದು, ಬೇರೆ ಬೇರೆ ಪಾಲಿಸಿಗಳನ್ನು ನಿರ್ವಹಣೆ ಮಾಡುವುದು ಕೂಡ ಬಹಳ ಕಷ್ಟದ ಕೆಲಸ ಆಗಬಹುದು. ಇಂತಹ ಸಂದರ್ಭಗಳಲ್ಲಿ ವಿಮಾ ಪಾಲಿಸಿಗಳ ರೈಡರ್‌ಗಳು ಮಹತ್ವದ ಪಾತ್ರ ವಹಿಸುತ್ತವೆ, ನೆರವಿಗೆ ಬರುತ್ತವೆ.

ರೈಡರ್‌ಗಳು ಅಂದರೆ: ಇವು ವಿಮಾ ಪಾಲಿಸಿಗಳ ಜೊತೆ ಹೆಚ್ಚುವರಿಯಾಗಿ ಪಡೆದುಕೊಳ್ಳುವ ಸೌಲಭ್ಯಗಳು. ಇವುಗಳನ್ನು ಪಡೆದುಕೊಳ್ಳುವುದು ಕಡ್ಡಾಯ ಅಲ್ಲ. ಆದರೆ ಇವುಗಳನ್ನು ಪಡೆದಾಗ ಮೂಲ ವಿಮೆಯ ಜೊತೆ ಹೆಚ್ಚುವರಿ ಸೌಲಭ್ಯ ಸಿಗುತ್ತದೆ. ತೀವ್ರ ಅನಾರೋಗ್ಯ, ಅಪಘಾತದ ಕಾರಣದಿಂದಾಗಿ ಉಂಟಾಗುವ ಅಂಗವೈಕಲ್ಯ ಅಥವಾ ವರಮಾನ ನಷ್ಟದ ಸನ್ನಿವೇಶವನ್ನು ಎದುರಿಸಲು ಇವುಗಳನ್ನು ಪಡೆದುಕೊಳ್ಳಲಾಗುತ್ತದೆ. ರೈಡರ್ ಸೌಲಭ್ಯ ಪಡೆದಾಗ, ಹೆಚ್ಚುವರಿಯಾಗಿ ಪ್ರತ್ಯೇಕವಾದ ವಿಮಾ ಪಾಲಿಸಿ ಖರೀದಿಸುವ ಅಗತ್ಯ ಇಲ್ಲವಾಗುತ್ತದೆ.

ಸರಳವಾಗಿ ಹೇಳಬೇಕು ಎಂದಾದರೆ, ರೈಡರ್ ಸೌಲಭ್ಯವು ಗ್ರಾಹಕರಿಗೆ ವಿಮಾ ಯೋಜನೆಯೊಂದನ್ನು ಹೆಚ್ಚು ಸಮಗ್ರವಾದ ಹಾಗೂ ಜೀವನದ ವಾಸ್ತವಗಳಿಗೆ ಹೆಚ್ಚು ಹತ್ತಿರವಾದ ಸುರಕ್ಷಾ ಕವಚವನ್ನಾಗಿ ರೂಪಿಸಿಕೊಳ್ಳಲು ನೆರವಾಗುತ್ತದೆ. ರೈಡರ್‌ಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭ, ಅವುಗಳನ್ನು ಖರೀದಿಸುವ ಪ್ರಕ್ರಿಯೆ ಸರಳ, ಭಿನ್ನವಾದ ಪ್ರತಿಯೊಂದು ಉದ್ದೇಶಕ್ಕಾಗಿ ಬೇರೆ ಬೇರೆ ವಿಮಾ ಪಾಲಿಸಿ ಖರೀದಿಸುವುದಕ್ಕಿಂತ ರೈಡರ್‌ಗಳನ್ನು ಖರೀದಿಸುವುದು ಕಡಿಮೆ ವೆಚ್ಚದಾಯಕ. ರೈಡರ್‌ಗಳನ್ನು ಪಡೆಯುವುದು ಸಂಪೂರ್ಣವಾಗಿ ಐಚ್ಛಿಕವಾಗಿದ್ದರೂ, ಇವು ಸರಳವಾದ ವಿಮಾ ಪಾಲಿಸಿಯೊಂದನ್ನು ಹೆಚ್ಚು ಸಮಗ್ರವಾದ ಹಣಕಾಸಿನ ರಕ್ಷಾ ಕವಚವನ್ನಾಗಿ ಪರಿವರ್ತಿಸುತ್ತವೆ.

ರೈಡರ್‌ಗಳು ಹಣಕಾಸಿನ ಭದ್ರತೆಯನ್ನು ಹೇಗೆ ಹೆಚ್ಚಿಸುತ್ತವೆ?

1) ಹೆಚ್ಚಿನ ಕವರೇಜ್ ಹಾಗೂ ವೈಯಕ್ತಿಕ ಅಗತ್ಯಕ್ಕೆ ಸ್ಪಂದನ: ಪ್ರತಿ ವ್ಯಕ್ತಿಗೆ ಎದುರಾಗಬಹುದಾದ ಸಮಸ್ಯೆ ಭಿನ್ನವಾಗಿರುತ್ತದೆ. ಪಾಲಿಸಿದಾರರಿಗೆ ತಮ್ಮ ಜೀವನಶೈಲಿ, ವೃತ್ತಿ, ಆರೋಗ್ಯದ ಸ್ಥಿತಿ, ಕೌಟುಂಬಿಕ ಜವಾಬ್ದಾರಿಗಳಿಗೆ ಅನುಗುಣವಾಗಿ ತಮ್ಮ ವಿಮಾ ರಕ್ಷೆಯನ್ನು ಮರುಹೊಂದಿಸಿಕೊಳ್ಳಲು ರೈಡರ್‌ಗಳು ನೆರವಾಗುತ್ತವೆ. ಉದಾಹರಣೆಗೆ ಹೇಳುವುದಿದ್ದರೆ, ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದ ರೈಡರ್‌ಗಳನ್ನು (ಕ್ರಿಟಿಕಲ್ ಇಲ್‌ನೆಸ್ ರೈಡರ್) ಜೀವವಿಮೆಯ ಜೊತೆ ಜೋಡಿಸಿಕೊಂಡರೆ, ಗಂಭೀರ ಅಥವಾ ಸಣ್ಣ ಪ್ರಮಾಣದ ಆರೋಗ್ಯದ ಸಮಸ್ಯೆ ಎದುರಾದಾಗ ಹಣಕಾಸಿನ ರಕ್ಷೆ ಸಿಗುತ್ತದೆ.

2) ಕಡಿಮೆ ವೆಚ್ಚದಲ್ಲಿ ರಿಸ್ಕ್ ನಿರ್ವಹಣೆ: ರೈಡರ್‌ಗಳು ಬಹುತೇಕರ ಕೈಗೆ ಎಟಕುವಂತೆ ಇರುವುದು ಅವು ಒದಗಿಸುವ ಅತಿದೊಡ್ಡ ಪ್ರಯೋಜನ. ನಿರ್ದಿಷ್ಟವಾದ ಸಮಸ್ಯೆಯೊಂದನ್ನು ನಿಭಾಯಿಸಲು ಅದಕ್ಕೆ ಸಂಬಂಧಿಸಿದ ಒಂದು ರೈಡರ್ ಖರೀದಿಸುವುದು ಸಾಮಾನ್ಯವಾಗಿ, ಅದಕ್ಕಾಗಿ ಪ್ರತ್ಯೇಕ ವಿಮೆ ಖರೀದಿಸುವುದಕ್ಕಿಂತ ಕಡಿಮೆ ವೆಚ್ಚದ ಕೆಲಸ. ಇದರಿಂದಾಗಿ, ಬಜೆಟ್ ಹಿಗ್ಗಿಸಿಕೊಳ್ಳದೆ ಹೆಚ್ಚಿನ ವಿಮಾ ರಕ್ಷೆಯನ್ನು ಬಯಸುವ ಸಣ್ಣ ಪ್ರಾಯದವರ ಕುಟುಂಬಗಳಿಗೆ, ಮೊದಲ ಬಾರಿಗೆ ವಿಮೆ ಖರೀದಿಸುತ್ತಿರುವವರಿಗೆ ರೈಡರ್‌ಗಳು ಆಪ್ತವಾಗುತ್ತವೆ.

3) ಬಿಕ್ಕಟ್ಟಿನ ಸಂದರ್ಭಗಳಲ್ಲಿ ಹೆಚ್ಚಿನ ಹಣಕಾಸಿನ ನೆರವು: ಹಣಕಾಸಿನ ನೆರವು ತೀರಾ ಅಗತ್ಯವಾಗುವ ಸಂದರ್ಭಗಳಲ್ಲಿ ನೆರವಿಗೆ ಬರುವ ಕೆಲವು ರೈಡರ್‌ಗಳು ಇವೆ. ಅಪಘಾತಕ್ಕೆ ಒಳಗಾಗಿ ವ್ಯಕ್ತಿ ಮೃತಪಟ್ಟಾಗ ಅಥವಾ ಅಂಗವೈಕಲ್ಯಕ್ಕೆ ಒಳಗಾದಾಗ ನೆರವಿಗೆ ಬರುವ ರೈಡರ್‌ಗಳು, ಅಂತಹ ಸಂದರ್ಭಗಳಲ್ಲಿ ಒಂದಿಷ್ಟು ಹಣದ ನೆರವು ಒದಗಿಸುತ್ತವೆ. ಅಪಘಾತಕ್ಕೆ ಒಳಗಾಗಿ ವ್ಯಕ್ತಿ ಮೃತಪಟ್ಟರೆ ಅಥವಾ ಅಂಗವೈಕಲ್ಯಕ್ಕೆ ಒಳಗಾದರೆ ವಿಮಾ ಪಾಲಿಸಿಯ ಮೂಲ ಸಮ್ ಅಶ್ಯೂರ್ಡ್ ಮೊತ್ತದ ಮೂರು ಪಟ್ಟು ಹೆಚ್ಚು ಮೊತ್ತವನ್ನು ನೆರವಿನ ರೂಪದಲ್ಲಿ ಈ ರೈಡರ್‌ಗಳು ಒದಗಿಸುವುದೂ ಇದೆ.

ಕುಟುಂಬದ ಪಾಲಿಗೆ ಸಂಪಾದನೆ ಮಾಡುವ ವ್ಯಕ್ತಿಯು ಇನ್ನಿಲ್ಲವಾದರೆ ಅಥವಾ ಅಂಗವೈಕಲ್ಯದಿಂದಾಗಿ ಆ ವ್ಯಕ್ತಿ ಸಂಪಾದನೆ ಮಾಡಲಾಗದ ಸ್ಥಿತಿ ತಲುಪಿದರೆ, ಆದಾಯದ ಪ್ರಯೋಜನ ಕಲ್ಪಿಸುವ ರೈಡರ್‌ಗಳು ಕುಟುಂಬಗಳ ನೆರವಿಗೆ ಬರುತ್ತವೆ, ಕುಟುಂಬದ ಸದಸ್ಯರಿಗೆ ನಿಶ್ಚಿತ ಮೊತ್ತವೊಂದು ಸಿಗುತ್ತಿರುವಂತೆ ಅವು ನೋಡಿಕೊಳ್ಳುತ್ತವೆ. ಪಾಲಿಸಿ ಪಡೆದಿರುವ ವ್ಯಕ್ತಿಯು ಶಾಶ್ವತ ಅಂಗವೈಕಲ್ಯಕ್ಕೆ ಒಳಗಾಗಿ, ದುಡಿಯಲು ಸಾಧ್ಯವಾಗದ ಸ್ಥಿತಿ ತಲುಪಿದರೆ ಕೆಲವು ರೈಡರ್‌ಗಳು ನಿಶ್ಚಿತ ಮೊತ್ತವೊಂದನ್ನು ಒಂದು ಬಾರಿಗೆ ಪಾವತಿಸುತ್ತವೆ.

4) ಕಂತು ಮನ್ನಾ: ವಿಮೆಯ ಕಂತನ್ನು ಮನ್ನಾ ಮಾಡಿಕೊಡುವ ಒಂದು ರೈಡರ್ ವಿಮಾ ಪಾಲಿಸಿ ಹೊಂದಿರುವವರ ಪಾಲಿಗೆ ಬಹಳ ಮಹತ್ವದ ನೆರವು ಒದಗಿಸುತ್ತದೆ. ಪಾಲಿಸಿ ಪಡೆದವರು ತೀರಾ ಅನಾರೋಗ್ಯಕ್ಕೆ ಗುರಿಯಾದರೆ ಅಥವಾ ಅವರು ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದರೆ ಅವರು ಭವಿಷ್ಯದಲ್ಲಿ ಪಾವತಿ ಮಾಡಬೇಕಿರುವ ಕಂತಿನ ಮೊತ್ತ ಈ ರೈಡರ್‌ನ ಕಾರಣದಿಂದಾಗಿ ಮನ್ನಾ ಆಗುತ್ತದೆ. ಇದಾದ ನಂತರವೂ ಅವರ ಪಾಲಿಸಿ ಚಾಲ್ತಿಯಲ್ಲಿ ಇರುತ್ತದೆ.

ಮಕ್ಕಳ ಶಿಕ್ಷಣ, ಮಕ್ಕಳ ಮದುವೆಯಂತಹ ದೀರ್ಘಾವಧಿಯ ಹಣಕಾಸಿನ ಗುರಿಗಳನ್ನು ತಲುಪಲು ಸಿದ್ಧತೆ ನಡೆಸುತ್ತಿರುವ ಕುಟುಂಬಗಳಿಗೆ ಈ ರೈಡರ್ ನೆರವಿಗೆ ಬರುತ್ತದೆ. ಪಾಲಿಸಿ ಪಡೆದಿರುವ ವ್ಯಕ್ತಿಯು ಹಣ ಸಂಪಾದಿಸಲು ಸಾಧ್ಯವಾಗದ ಸ್ಥಿತಿ ತಲುಪಿದರೂ, ಹಣಕಾಸಿನ ಯೋಜನೆಗಳು ಮುಂದುವರಿಯುವಂತೆ ಇದು ನೋಡಿಕೊಳ್ಳುತ್ತದೆ.

5) ತೆರಿಗೆ ವಿಚಾರದಲ್ಲಿ ನೆರವು: ರೈಡರ್‌ಗಳನ್ನು ಪಡೆದುಕೊಳ್ಳಲು ಪಾವತಿಸುವ ಮೊತ್ತಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಸಿ ಅಥವಾ ಸೆಕ್ಷನ್ 80ಡಿ ಅಡಿಯಲ್ಲಿ ತೆರಿಗೆ ವಿನಾಯಿತಿ ಸೌಲಭ್ಯ ಸಿಗುತ್ತದೆ. ಆದರೆ ಇದು ರೈಡರ್‌ನ ಸ್ವರೂಪ ಯಾವ ಬಗೆಯದ್ದು ಎಂಬುದನ್ನು ಆಧರಿಸಿದೆ. ತೆರಿಗೆ ಪ್ರಯೋಜನವು ವಿಮಾ ಪಾಲಿಸಿದಾರರಿಗೆ ತೆರಿಗೆ ಹೊರೆ ತಗ್ಗಿಸಿಕೊಡುವುದಷ್ಟೇ ಅಲ್ಲದೆ, ಅವರಿಗೆ ಹಣಕಾಸಿನ ರಕ್ಷಣೆಯನ್ನೂ ಒದಗಿಸುತ್ತದೆ.

6) ಅನುಕೂಲ: ಹಲವು ವಿಮಾ ಪಾಲಿಸಿಗಳನ್ನು ಒಬ್ಬನೇ ವ್ಯಕ್ತಿ ಪಡೆದು, ಅವುಗಳೆಲ್ಲವನ್ನೂ ನಿಭಾಯಿಸುವುದು ಬಹಳ ಸವಾಲಿನ ಕೆಲಸವಾಗುತ್ತದೆ. ಆದರೆ ರೈಡರ್‌ಗಳು ಹೆಚ್ಚುವರಿ ಸೌಲಭ್ಯಗಳನ್ನು ಒಂದು ಪಾಲಿಸಿಯ ಅಡಿಯಲ್ಲಿ ಒದಗಿಸಿ ಈ ಸವಾಲನ್ನು ಸರಳವಾಗಿಸುವ ಕೆಲಸ ಮಾಡುತ್ತವೆ. ಪಾಲಿಸಿ ಚಾಲ್ತಿಯಲ್ಲಿ ಇರುವ ಸಂದರ್ಭದಲ್ಲೇ ರೈಡರ್‌ಗಳನ್ನು ಸೇರಿಸಿಕೊಳ್ಳಲು ಹಲವು ವಿಮಾ ಕಂಪನಿಗಳು ಅವಕಾಶ ನೀಡುತ್ತವೆ. ಈ ಮೂಲಕ ಅವು, ವಿಮಾ ಪಾಲಿಸಿ ಖರೀದಿ ಸಮಯದಲ್ಲಿ ರೈಡರ್ ಪಡೆಯಲು ಮರೆತ ಗ್ರಾಹಕರಿಗೆ ಅವುಗಳನ್ನು ನಂತರದಲ್ಲಿ ಪಡೆದುಕೊಳ್ಳಲು ಅನುವು ಮಾಡಿಕೊಡುತ್ತವೆ.

ವಿಮಾ ರೈಡರ್‌ಗಳು ಸಣ್ಣ ಮೊತ್ತದವುಗಳಾಗಿ ಕಾಣಿಸಬಹುದು. ಆದರೆ ಬಿಕ್ಕಟ್ಟಿನ ಸಮಯಗಳಲ್ಲಿ ಅವುಗಳಿಂದ ಸಿಗುವ ಪ್ರಯೋಜನವು ಬಹಳ ದೊಡ್ಡದಾಗಬಹುದು. ಅವು ಅತ್ಯಂತ ಮಹತ್ವದ್ದಾದ ರಕ್ಷೆಯನ್ನು ನೀಡುತ್ತವೆ, ವಿಮಾ ಸೌಲಭ್ಯಗಳು ಜನರ ಕೈಗೆ ಹೊರೆಯಾಗದಂತೆ ಮಾಡುತ್ತವೆ, ಈ ಮೂಲಕ ನಿಜ ಜೀವನದ ಸಂದರ್ಭಗಳಲ್ಲಿ ವಿಮೆಯು ಹೆಚ್ಚು ಸಂಗತವಾಗುವಂತೆ ಮಾಡುತ್ತವೆ.

ಗ್ರಾಹಕರು ವಿಮೆಯನ್ನು ಖರೀದಿಸುವುದಷ್ಟೇ ಮಹತ್ವದ್ದಾಗುವುದಿಲ್ಲ, ಬದಲಿಗೆ ಸರಿಯಾದ ವಿಮೆಯನ್ನು ಪಡೆಯುವುದು ಮಹತ್ವದ್ದಾಗುತ್ತದೆ. ಈ ದಿಕ್ಕಿನಲ್ಲಿ ರೈಡರ್‌ಗಳು ನೆರವು ನೀಡುತ್ತವೆ.

ಲೇಖಕ ಎಕ್ಸಿಸ್ ಮ್ಯಾಕ್ಸ್ ಲೈಫ್ ಇನ್ಶೂರೆನ್ಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ

ವಿಮಾ ಗ್ರಾಹಕರು ತಿಳಿದಿರಬೇಕಾದ ಪ್ರಮುಖ ರೈಡರ್‌ಗಳು

- **ಗಂಭೀರ ಕಾಯಿಲೆಗಳ ರೈಡರ್:** ಇದು ಕ್ಯಾನ್ಸರ್, ಹೃದಯಾಘಾತ ಅಥವಾ ಪಾರ್ಶ್ವವಾಯುವಿನಂತಹ ಆರೋಗ್ಯ ತೊಂದರೆ ಎದುರಾದಾಗ ಇಡುಗಂಟೊಂದನ್ನು ಪಾಲಿಸಿದಾರರಿಗೆ ಪಾವತಿಸುತ್ತದೆ. ಆಸ್ಪತ್ರೆಗೆ ದಾಖಲಾದಾಗ ಆಗುವ ವೆಚ್ಚ ಅಥವಾ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ವೆಚ್ಚವನ್ನು ಕೂಡ ಕೆಲವು ರೈಡರ್‌ಗಳು ಭರಿಸುತ್ತವೆ
- **ಅಪಘಾತದಿಂದ ಸಾವು ಅಥವಾ ಅಂಗವೈಕಲ್ಯದ ರೈಡರ್:** ಅಪಘಾತ ಸಂಭವಿಸಿ ವ್ಯಕ್ತಿ ಮೃತಪಟ್ಟರೆ ಅಥವಾ ಆತನಿಗೆ ಶಾಶ್ವತ ಅಂಗವೈಕಲ್ಯ ಉಂಟಾದರೆ ಹೆಚ್ಚುವರಿ ಹಣಕಾಸಿನ ಅನುಕೂಲವನ್ನು ಈ ರೈಡರ್ ಒದಗಿಸುತ್ತದೆ. ಹಣಕಾಸಿನ ನೆರವನ್ನು ಒಂದೇ ಬಾರಿಗೆ, ಕಾಲಕಾಲಕ್ಕೆ ಆದಾಯದ ರೂಪದಲ್ಲಿ ಅಥವಾ ಇವೆರಡರ ಮಿಶ್ರಣದ ರೂಪದಲ್ಲಿ ಪಡೆಯಬಹುದು.
- **ಕಂತು ಮನ್ನಾ ರೈಡರ್:** ಪಾಲಿಸಿ ಪಡೆದಿರುವ ವ್ಯಕ್ತಿಯು ಅನಾರೋಗ್ಯ ಅಥವಾ ತೀವ್ರ ಗಾಯಕ್ಕೆ ಒಳಗಾಗಿ ಕಂತು ಕಟ್ಟಲು ಸಾಧ್ಯವಾಗದ ಸ್ಥಿತಿ ತಲುಪಿದರೆ, ಈ ರೈಡರ್ ಕಂತಿನ ಮೊತ್ತ ಮನ್ನಾ ಮಾಡಿಕೊಡುತ್ತದೆ. ಆಗ ವಿಮಾ ಸೌಲಭ್ಯವು ಚಾಲ್ತಿಯಲ್ಲಿ ಉಳಿದುಕೊಳ್ಳುತ್ತದೆ
- **ಆದಾಯದ ರೈಡರ್:** ವಿಮಾ ಪಾಲಿಸಿ ಪಡೆದಿರುವ ವ್ಯಕ್ತಿಯು ಮೃತಪಟ್ಟಲ್ಲಿ ನಾಮನಿರ್ದೇಶಿತ ವ್ಯಕ್ತಿಗೆ ನಿರಂತರ ಆದಾಯ ನೀಡುತ್ತದೆ.
- **ಅವಧಿ ರೈಡರ್:** ವ್ಯಕ್ತಿ ಮೃತಪಟ್ಟ ಸಂದರ್ಭದಲ್ಲಿ ಇದು ಮೂಲ ವಿಮಾ ಮೊತ್ತವನ್ನು ಹೆಚ್ಚು ಮಾಡಿಕೊಡುತ್ತದೆ

ಎಲ್ಲೆಲ್ಲಿ ಸಾಲ, ಯಾವುದಕ್ಕೆಲ್ಲ ಸಾಲ?

ಡಿಸೆಂಬರ್ ತ್ರೈಮಾಸಿಕದಲ್ಲಿ (2025ರ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿ) ವಿವಿಧ ಬಗೆಯ ಸಾಲಗಳ ನೀಡಿಕೆಯಲ್ಲಿ ಯಾವ ಪ್ರಮಾಣದ ಬೆಳವಣಿಗೆ ಅಥವಾ ಇಳಿಕೆ ಕಂಡುಬಂದಿದೆ ಎಂಬುದರ ವಿವರವನ್ನು ಟ್ರಾನ್ಸ್‌ಯೂನಿಯನ್ ಸಿಬಿಲ್ ಕಂಪನಿಯು ಈಚೆಗೆ ಬಿಡುಗಡೆ ಮಾಡಿರುವ ವರದಿಯೊಂದು ದಾಖಲಿಸಿದೆ.

2024ರ ಡಿಸೆಂಬರ್ ತ್ರೈಮಾಸಿಕದಲ್ಲಿ ಗೃಹಸಾಲ ಹಾಗೂ ಗ್ರಾಹಕ ಬಳಕೆ ಉಪಕರಣಗಳ ಖರೀದಿಗೆ ಪಡೆಯುವ ಸಾಲ ನೀಡಿಕೆಯು ಇಳಿಕೆ ಆಗಿತ್ತು. ಆದರೆ ಅದು 2025ರ ಡಿಸೆಂಬರ್ ತ್ರೈಮಾಸಿಕದಲ್ಲಿ ಹೆಚ್ಚಳ ಕಂಡಿದೆ ಎಂದು ವರದಿ ಹೇಳಿದೆ. 2025ರ ಡಿಸೆಂಬರ್ ತ್ರೈಮಾಸಿಕದ ಅವಧಿಯಲ್ಲಿ ಚಿನ್ನದ ಸಾಲ ನೀಡಿಕೆ ಪ್ರಮಾಣ ಶೇ 45ರಷ್ಟು ಹೆಚ್ಚಳ ಕಂಡಿದೆ.

ವಿವಿಧ ಬಗೆಯ ಸಾಲಗಳ ನೀಡಿಕೆ ಪ್ರಮಾಣದಲ್ಲಿ ಏರಿಕೆ, ಇಳಿಕೆ



ಚಿನ್ನದ ಸಾಲ ಪಡೆಯುವ ಗ್ರಾಹಕರು ಇವರು

- **ಚಿನ್ನದ ಸಾಲ ಪಡೆಯುವವರಲ್ಲಿ ಹೆಚ್ಚಿನವರು 35 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು. ಈ ಸಾಲ ಪಡೆಯುವ ಯುವಕರ ಪ್ರಮಾಣದಲ್ಲಿ ತುಸು ಹೆಚ್ಚಳ ಆಗಿದೆ**
- **ಚಿನ್ನದ ಸಾಲ ಪಡೆಯುವವರ ಪೈಕಿ ಹೆಚ್ಚಿನವರು ಅರೆನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸೇರಿದವರು. ಅಲ್ಲದೆ, ಅವರಲ್ಲಿ ಶೇಕಡ 50ರಷ್ಟಕ್ಕಿಂತ ಹೆಚ್ಚಿನವರ ಕ್ರೆಡಿಟ್ ಅಂಕ 730ಕ್ಕಿಂತ ಜಾಸ್ತಿ ಇದೆ.**

39% ಚಿನ್ನದ ಸಾಲ ಪಡೆದವರಲ್ಲಿ ಮಹಿಳೆಯರ ಪಾಲು

36% ಚಿನ್ನದ ಸಾಲ ಪಡೆದವರಲ್ಲಿ 35 ವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನವರ ಪಾಲು

68% ಚಿನ್ನದ ಸಾಲ ಪಡೆದವರಲ್ಲಿ ಅರೆನಗರ ಹಾಗೂ ಗ್ರಾಮೀಣ ಪ್ರದೇಶಗಳ ಜನರ ಪಾಲು

ಆಧಾರ: ಟ್ರಾನ್ಸ್‌ಯೂನಿಯನ್ ಸಿಬಿಲ್ ಸಂಸ್ಥೆ ಸಿದ್ಧಪಡಿಸಿರುವ ವರದಿ

ಟೈಟನ್ ಕಂಪನಿ

ಬ್ರೋಕರೇಜ್ ಮಾತು

ಟಾಟಾ ಸಮೂಹಕ್ಕೆ ಸೇರಿದ ಟೈಟನ್ ಕಂಪನಿಯ ಷೇರಿನ ಬೆಲೆ ₹5,200 ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಕಂಪನಿಯ ಆಭರಣ ವಹಿವಾಟು 2024–25ರ ಆರ್ಥಿಕ ವರ್ಷಕ್ಕೆ ಹೋಲಿಸಿದರೆ 2025–26ರಲ್ಲಿ ಶೇ 46ರಷ್ಟು ಬೆಳವಣಿಗೆ ದಾಖಲಿಸಿದೆ. ಚಿನ್ನದ ಬೆಲೆ ಏರಿಕೆಯ ನಡುವೆಯೂ ಗ್ರಾಹಕರಿಂದ ಖರೀದಿ ಹೆಚ್ಚಳವಾಗಿದೆ. ಇದು ಬೆಳವಣಿಗೆ ಏರಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ಇದೇ ಅವಧಿಯಲ್ಲಿ ಕಂಪನಿಯು ಹೊಸ ಆಭರಣ ಮಳಿಗೆಗಳನ್ನು ತೆರೆಯಿತು. ಕಂಪನಿಯ ಸುಗಂಧ ದ್ರವ್ಯಗಳು, ಬಿಡಿಭಾಗಗಳ ವಹಿವಾಟು ಸದೃಢವಾಗಿದೆ. ಜೊತೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಂಪನಿಯ ಉತ್ಪನ್ನಗಳಿಗೆ ಬೇಡಿಕೆ ಇದೆ.

2024–25ನೇ ಆರ್ಥಿಕ ವರ್ಷದಿಂದ 2027–28ನೇ ಆರ್ಥಿಕ ವರ್ಷದವರೆಗೆ ಕಂಪನಿಯ ಒಟ್ಟು ಮಾರಾಟದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 23ರಷ್ಟಿರಲಿದೆ. ಇದೇ ಅವಧಿಯಲ್ಲಿ ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 25ರಷ್ಟು ಮತ್ತು ತೆರಿಗೆ ನಂತರದ ಲಾಭ ಶೇ 27ರಷ್ಟಾಗಲಿದೆ ಎಂದು ತಿಳಿಸಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹4,478.10 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

'ನೀಟ್' ದಿಕ್ಸೂಚಿ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ/ಸಿಇಟಿ ಪರೀಕ್ಷೆ

CHEMISTRY

18) Select the correct statements from the following:

A) Atoms of all elements are composed of two fundamental particles (.......Contd)
B) The mass of the electron is 9.10939 × 10^{-31} kg.
C) All the isotopes of a given element show same chemical properties.
D) Protons and electrons are collectively known as nucleons.
E) Dalton's atomic theory, regarded the atom as an ultimate particle of matter.

Choose the correct answer from the options given below:

a) B, C and E only b) A, B and C only
c) C, D and E only d) A and E only

Ans:- (a)

Expln:- An Atom has three fundamental particles-electron, proton and neutron.

The mass of the electron is 9.10939 × 10^{-31} kg. Neutrons and protons, both are collectively known as nucleons.

All the isotopes of a given element show same chemical properties.

Dalton's atomic theory, regarded atom as an ultimate particle of matter.

19) The IUPAC name of



a) 4-Hydroxy-2-pentanone
b) 2-Hydroxy-4-pentanone
c) 2-Oxo-4-pentanol d) 4-Keto-2-pentanol

Ans:- a;

20) The statement that is NOT correct is

a) Compressibility factor measures the deviation of real gas from ideal behavior
b) van der Waals constant 'a' measures extent of intermolecular attractive forces for real gases
c) Critical temperature is the lowest temperature at which liquefaction of a gas first occurs
d) Boyle point depends on the nature of real gas.

Ans:-(c) Critical temperature is the temperature above which a gas cannot be liquefied irrespective of the pressure applied.

21) One dm^3 solution containing 10^{-5} moles each of Cl^- ions and CrO_4^{-2} ions is treated with 10^{-4} mole of silver nitrate. Which one of the following observations is made?

$$[K_{SP}\ Ag_2CrO_4 = 4 \times 10^{-12}]$$
$$[K_{SP}\ AgCl = 1 \times 10^{-10}]$$

a) Silver chromate gets precipitated first
b) Precipitation does not occur
c) Both silver chromate and silver chloride starts precipitating simultaneously
d) Silver chloride gets precipitated first

Ans:- b

22) The correct statement is ……

a) cyclohexadiene and cyclohexene cannot be isolated with ease during controlled hydrogenation of benzene
b) One mole each of benzene and hydrogen when reacted gives 1/3 mole of cyclohexene and 2/3 mole unreacted hydrogen
c) Hydrogenation of benzene to cyclohexene is an endothermic process
d) It is essier to hydrogenate benzene when compared to cyclohexene to cyclohexene.

Ans:-(a)

Expln:-during the hydrogenation of benzene, only cyclohexene can be isolated.



Benzene Cyclohexane

23)

For the reaction $2A \rightleftharpoons B + C$, $K_C = 4 \times 10^{-3}$. At a given time, the composition of reaction mixture is: $[A] = [B] = [C] = 2 \times 10^{-3}$ M.

Then, which of the following is correct?

a) Reaction is at equilibrium.
b) Reaction has a tendency to go in forward direction.
c) Reaction has a tendency to go in backward direction.
d) Reaction has gone to completion in forward direction.

Ans: (c)

Expln:-

$2A \rightleftharpoons B + C$, $K_C = 4 \times 10^{-3}$

At a given time t, Q_C is to be calculated and been compared with K_C.

$$Q_C = \frac{[B][C]}{[A]^2} = \frac{(2\times10^{-3})(2\times10^{-3})}{(2\times10^{-3})^2}$$

$Q_C = 1$

As $Q_C > K_C$, so reaction has a tendency to move backward.

24) Which one of the following statements is FALSE?

a) The ore is freed from almost all nonmetallic impurities
b) During roasting, moisture is removed from the ore
c) The concentrated zinz blende is subjected to calcinations during its extraction by pyrometallurgy
d) Calcination of ore is carried out in the absence of any blast of air.

Ans:- c;

25) Cryolite is..................

(a) Na_3AlF_6 and is used in the electrolysis of alumina for lowering the melting point of alumina only
(b) Na_3AlF_6 and is used in the electrolytic refining of alumina
(c) Na_3AlF_6 and is used in the electrolysis of alumina for decreasing electrical conductivity
(d) Na_3AlF_6 and is used in the electrolysis of alumina for lowering the melting point and increasing the conductivity of alumina.

Ans: (d) Na_3AlF_6 and is used in the electrolysis of alumina for lowering the melting point and increasing the conductivity of alumina.

BIOLOGY

MULTIPLE CHOICE QUESTIONS:-

38) If a recombinant DNA bearing gene for resistance to Ampicillin is transferred into E.coli cells, host cells become transformed into Ampicillin resistant cells. What happens when these E.coli are grown on medium containing Ampicillin?

(a) Non-transformants will grow and transformants will die
(b) Non-transformants will die and transformants will grow
(c) Both non-transformants and transformant will die
(d) Both non-transformants and transformant will grow

Ans:-b

39) Identify the incorrect statement from the following.

(a) The reservoir pool for phosphorus cycle is earth's crust, whereas atmosphere is the reservoir pool for carbon cycle.
(b) During carbon cycle and phosphorus cycle, there is very little respiratory release of carbon and phosphorus respectively.
(c) Atmospheric inputs of phosphorus throughout rainfall are much smaller than carbon inputs.
(d) Gaseous exchanges of phosphorus between organism and environment are negligible

Ans: b

Expl:- All the statements given in the questions are correct except the one that there is very little respiratory release of carbon and phosphorus during each carbon and phosphorus cycle. In carbon cycle a considerable amount or large amount of carbon is returned to the atmosphere in the form of CO_2 through numerous respiratory activities of producers and consumers.

Decomposers also contribute substantially to CO_2 pool by their processing of waste materials and dead organic matter of land or oceans. Some amount of carbon is lost to sediments and removed from circulation. Additional human activities are also responsible for releasing CO_2 to the atmosphere. Whereas, in phosphorus cycle there is no respiratory release of phosphorus into the atmosphere.

40) The result of the following reaction/experiment carried out by *Avery et. al.* on *Streptococcus pneumoniae* has proved conclusively that DNA is the genetic material

(a) Live 'R' strain + DNA from 'S' strain + DNAase
(b) Heat killed 'R' strain + DNA from 'S' strain + DNAase
(c) Live 'R' strain+DNA from 'S' strain+ RNAase
(d) Live 'R' strain + Denatured DNA of 'S' strain+protease

Ans:a

Expl:- In 1944, *Avery et. al.* purified biochemical's from the heat killed *S*-type bacteria into three components, i.e., DNA, carbonydrate and protein. DNA fraction was further divided into two parts (i.e., one with DNase and one without DNase). It was observed that only DNA of *S*-type can change *R*-type of bacteria in to *S*-type.

Therefore, the character or gene of virulence is located in DNA. Protease and hormone RNases also did not cause this transformation. This shows that Protein and RNA was not the transforming substance. Hence, they came to the conclusion that the chemical to be inherited was DNA.

41) Match the storage products listed under column I with the organisms given under column II; choose the appropriate option from the given choices.

Column I	Column II
A) Glycogen	1) Sargassum
B) Pyrenoids	2) Nostoc
C) Laminarian and mannitol	3) Polysiphonia
	4) spirogyra
D) Floridean strach	5) agaricus

	A	B	C	D
(a)	3	4	1	5
(b)	4	3	5	2
(c)	5	4	1	3
(d)	2	1	4	3

Ans:C

Expl:- Agaricus is a type of fungi belonging to class- Basidiomycetes. The reserve food material is glycogen or oil droplets in fungi. Spirogyra is an algae belonging to the Group-Chlorophyta (green algae). The chloroplasts of Spirogyra have 2-20 thylakoid lamellae which are usually associated with pyrenoids. Each pyrenoid has a central protein called 'pyreno crystal' and a surrounding starch sheath.

They serve the purpose of storing starch. Sargassum belongs to the group Pheophyta (brown algae). The accumulation product of photosynthesis in this is D-mannitol and the reserve food material is Laminarin.

And Polysiphonia belongs to the group-Rhodophyta (red algae) which has the reserve food material in the form of floridean starch (much more similar to the glycogen).

42) Identify the desirable charecteristics for a plasmid used in rDNA technology from the following

(a) Ability to multiply and express outside the host in a bioreactor
(b) A highly active promoter. *(Contd.........)*

ಚಿಟಿಕೆ ಸುದ್ದಿ

ಪಶು ವಿ.ವಿ ನಿವೃತ್ತ ಅಧಿಕಾರಿ ಬಳಿ ₹4.38 ಕೋಟಿ ಆಸ್ತಿ

ಬೀದರ್: ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ನಿವೃತ್ತ ಹಣಕಾಸು ನಿಯಂತ್ರಕ ಸುರೇಶ್ ಕೆ.ಎಲ್. ಅವರಿಗೆ ಸೇರಿದ, ಬೀದರ್, ಬೆಂಗಳೂರಿನಲ್ಲಿನ ವಿವಿಧ ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ಏಕಕಾಲಕ್ಕೆ ಮಂಗಳವಾರ ದಾಳಿ ನಡೆಸಿ, ಒಟ್ಟು ₹4.38 ಕೋಟಿ ಮೌಲ್ಯದ ಆಸ್ತಿ ಪತ್ತೆ ಹಚ್ಚಿದ್ದಾರೆ.

ಸುರೇಶ್ ಕೆ.ಎಲ್.

ಎರಡು ನಿವೇಶನ, ಎರಡು ವಾಸದ ಮನೆ, 3 ಎಕರೆ 34 ಗುಂಟೆ ಕೃಷಿ ಜಮೀನು ಸೇರಿ ₹3.36 ಕೋಟಿ ಮೌಲ್ಯದ ಸ್ಥಿರ ಆಸ್ತಿ ಹಾಗೂ ₹12 ಸಾವಿರ ನಗದು, ₹23.76 ಲಕ್ಷ ಮೌಲ್ಯದ ಚಿನ್ನಾಭರಣಗಳು, ₹46 ಲಕ್ಷ ಮೌಲ್ಯದ ವಾಹನಗಳು ಸೇರಿ ಒಟ್ಟು ₹1.02 ಕೋಟಿ ಮೌಲ್ಯದ ಚರ ಆಸ್ತಿ ಸೇರಿದೆ. ಮೂಲತಃ ಹಾಸನದವರಾದ ಸುರೇಶ್ ಬಳಿ ₹3.42 ಕೋಟಿ ಅಸಮತೋಲಿತ ಆಸ್ತಿ ಪತ್ತೆಯಾಗಿದ್ದು, ಬೀದರ್ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶೇಂಗಾ ಒಕ್ಕಲು ಯಂತ್ರಕ್ಕೆ ಸಿಲುಕಿ ಮಹಿಳೆ ಸಾವು

ಹಾವೇರಿ: ಜಿಲ್ಲೆಯ ಸವಣೂರು ತಾಲ್ಲೂಕು ಹೆಸರೂರು ಗ್ರಾಮದಲ್ಲಿ ಶೇಂಗಾ ಒಕ್ಕಲು ಯಂತ್ರಕ್ಕೆ ಸಿಲುಕಿ, ಕೃಷಿ ಕಾರ್ಮಿಕರಾದ ಶಾರದಾ ಹನುಮಂತಗೌಡ ಗೊಲ್ಲಗೌಡ್ರ (36) ಮೃತಪಟ್ಟಿದ್ದಾರೆ.

'ಯಂತ್ರದಲ್ಲಿ ಸೀರೆ ಸಿಲುಕಿದ್ದು, ಕ್ರಮೇಣ ಅವರು ಯಂತ್ರದಲ್ಲಿ ಸಿಲುಕಿ, ತೀವ್ರ ಸ್ವರೂಪದ ಗಾಯಗಳಾದವು' ಎಂದು ಸವಣೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

ರಥದ ಚಕ್ರಕ್ಕೆ ಸಿಲುಕಿ ಭಕ್ತ ಸಾವು

ಕಲಬುರಗಿ: ತಾಲ್ಲೂಕಿನ ಹಾಗರಗುಂಡಗಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ಶರಣ-ಬಸವೇಶ್ವರ ರಥೋತ್ಸವದ ವೇಳೆ ತೇರಿನ ಚಕ್ರಕ್ಕೆ ಸಿಲುಕಿ ಭಕ್ತರೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಿನೋದ ರೆಡ್ಡಿ

ಹಾಗರಗುಂಡಿ ಗ್ರಾಮದ ನಿವಾಸಿ ವಿನೋದ ರೆಡ್ಡಿ (42) ಮೃತರು. ರಥೋತ್ಸವವು ಪಾದಗಟ್ಟೆಯಿಂದ ಮರಳುವಾಗ ಈ ದುರಂತ ನಡೆದಿದೆ.

ವಿನೋದ ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ವಿನೋದ್ ಕಲಬುರಗಿಯಲ್ಲಿ ನೆಲಸಿದ್ದು, ಸಿಮೆಂಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ.

'ವಿನೋದ ತೇರು ಎಳೆಯುವಾಗ ಆಯತಪ್ಪಿ ಬಿದ್ದು, ಚಕ್ರದಡಿ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ. ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಕಾಡಾನೆ ದಾಳಿ ವ್ಯಕ್ತಿ ಸಾವು

ಮಡಿಕೇರಿ: ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಶ್ರೀಮಂಗಲದ ಕಾಯಿಮನಿ ನಿವಾಸಿ ರತ್ತು (56) ಬುಧವಾರ ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟರು. ಇದರೊಂದಿಗೆ ಜನವರಿ ತಿಂಗಳಿಂದ ಈವರೆಗೆ ಕಾಡಾನೆ ದಾಳಿಯಿಂದ ಮೃತಪಟ್ಟವರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

'ಅಪಘಾತದಿಂದ ನಿಶ್ಯಕ್ತರಾಗಿದ್ದ ರತ್ತು ದೂರ ಓಡಲಾಗದೇ ಕಾಡಾನೆಗೆ ಸಿಲುಕಿ ಗಾಯಗೊಂಡರು. ಆಸ್ಪತ್ರೆಗೆ ಒಯ್ಯುವ ಮಾರ್ಗದಲ್ಲಿ ಮೃತಪಟ್ಟಿದ್ದರು' ಎಂದು ಮಡಿಕೇರಿ ವನ್ಯಜೀವಿ ವಲಯದ ಡಿಸಿಎಫ್ ನೆಹರೂ 'ಪ್ರಜಾವಾಣಿ'ಗೆ ತಿಳಿಸಿದರು.

ಆರಿಫ್ ಕೊಲೆ ಪ್ರಕರಣ: ಏಳು ಆರೋಪಿಗಳ ಸೆರೆ

ಮಂಗಳೂರು: ಉಳ್ಳಾಲ ಠಾಣೆ ವ್ಯಾಪ್ತಿಯ ತೊಕ್ಕೊಟ್ಟಿನಲ್ಲಿ ಈಚೆಗೆ ನಡೆದ ರೌಡಿಶೀಟರ್ ಆರಿಫ್ ಹುಸೇನ್ ಹತ್ಯೆ ಸಂಬಂಧ ಏಳು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಆರಿಫ್ ಹುಸೇನ್

'ರಿಫತ್, ಜುಟ್ಟು ಅಷ್ಫಾಕ್, ಖಲೀಲ್, ಶಾಕೀರ್, ಇರ್ಫಾನ್, ರಿಜ್ವಾನ್ ಹಾಗೂ ಅವರಿಗೆ ಸಹಕರಿಸಿದ್ದ ಇರ್ಷಾದ್ ಬಂಧಿತರು. ಇವರಲ್ಲಿ ಆರು ಮಂದಿ ಉಚ್ಚಿಲ ಮುಳ್ಳುಗುಡ್ಡೆ ನಿವಾಸಿ ಆರಿಫ್ ಹುಸೇನ್ ಮೇಲಿನ ದಾಳಿಯಲ್ಲಿ ನೇರವಾಗಿ ಭಾಗಿಯಾಗಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

'ಹಳೆ ದ್ವೇಷದಿಂದ ಹತ್ಯೆ ನಡೆಸಿದ್ದಾರೆ. ಇನ್ನೂ ಅನೇಕರು ಭಾಗಿಯಾಗಿರುವ ಸಾಧ್ಯತೆ ಇದೆ. ಪತ್ತೆ ಕಾರ್ಯ ನಡೆದಿದೆ' ಎಂದೂ ತಿಳಿಸಿದ್ದಾರೆ.

ರಾಜಕೀಯ ನೀಲನಕ್ಷೆಯೊಂದಿಗೆ ಒಗ್ಗೂಡಿ

ದಲಿತ ಸಮುದಾಯಗಳಿಗೆ ಕೋಟಿಗಾನಹಳ್ಳಿ ರಾಮಯ್ಯ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಸಮುದಾಯಗಳು ತುಂಡು ತುಂಡಾಗಿ ಹೋಗಿವೆ. ಒಡೆಯುವ ಕೆಲಸ ಮುಗಿದಿದೆ. ಇನ್ನೇನಿದ್ದರೂ ಕೂಡಿಸುವ ಕೆಲಸ ಆಗಬೇಕು. ರಾಜಕೀಯ ನೀಲನಕ್ಷೆ ಇಟ್ಟುಕೊಂಡು, ದಮ್ಮದ ನೆರಳಿನಲ್ಲಿ ಒಗ್ಗೂಡಬೇಕು' ಎಂದು ಹೋರಾಟಗಾರ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

'ಒಳ ಮೀಸಲಾತಿ ಹೆಸರಿನಲ್ಲಿ ಸೋದರ ಸಮುದಾಯಗಳನ್ನು ಒಡೆದು ಆಳುವ ಮನುವಾದಿಗಳ ಕುತಂತ್ರ ಮತ್ತು ಸರ್ಕಾರದ ಹುನ್ನಾರ' ವಿರೋಧಿಸಿ ಪರಿಶಿಷ್ಟ ಜಾತಿ–ಪಂಗಡಗಳ ಸೌಹಾರ್ದ ಸೋದರತ್ವ ಸಮಿತಿ ಬುಧವಾರ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

ಅಸ್ಪೃಶ್ಯರಲ್ಲಿನ ಜಾತಿಗಳು ಹೊಸದಾಗಿ ಹುಟ್ಟಿಕೊಂಡಿದ್ದಲ್ಲ. ಅದು ಹಿಂದೆಯೇ ಇತ್ತು. ಜಾತಿ ಅಪ್ರಜ್ಞಾಪೂರ್ವಕವಾಗಿ ಇದ್ದಿದ್ದರಿಂದ ದಲಿತ ಸಂಘರ್ಷ ಸಮಿತಿ ಕಟ್ಟಲು ಸಾಧ್ಯವಾಗಿತ್ತು. ದಲಿತರು ದೊಡ್ಡ ಶಕ್ತಿಯಾಗಲು ಸಾಧ್ಯವಾಗಿತ್ತು. ಆದರೆ, ಈಗ ಜಾತಿಗಳು ಪ್ರಜ್ಞಾಪೂರ್ವಕವಾಗಿ ಬಿಟ್ಟಿವೆ. ಸಮುದಾಯಗಳು ಒಡೆದು ಹೋಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜಕೀಯವಾಗಿ ಬಹುಜನ ಚಳವಳಿಯನ್ನು ಕಾನ್ಶಿರಾಂ ಕಟ್ಟಿದ್ದರು. ಆದರೆ, ಪ್ರಸ್ತುತ ಬಹುಜನ ಚಳವಳಿಯೂ ಬಿಕ್ಕಟ್ಟನ್ನು ಎದುರಿಸುತ್ತಿದೆ. ಈಗಿನ ಕಾಲದ ರಾಜಕಾರಣವನ್ನು ಎದುರಿಸಲು ಆಗದ ಪರಿಸ್ಥಿತಿಗೆ ಬಹುಜನ ಸಮಾಜ ಪಕ್ಷ ಯಾಕೆ ತಲುಪಿತು ಎಂದು ಕೇಳಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಹೋರಾಟದಲ್ಲಿ 40 ವರ್ಷಗಳಿಂದ ಒಟ್ಟಾಗಿ ಇದ್ದಾಗ ನಮಗೆ ನಮ್ಮ ಜಾತಿಗಳು ಕಾಡಿರಲಿಲ್ಲ. ಆದರೆ, ಈಗ ಪರಸ್ಪರ ಬೇರೆ ಎಂಬ ಭಾವನೆ ಕಾಣತೊಡಗಿದೆ. ಯಾರೋ ಮುಖ್ಯಮಂತ್ರಿಯಾಗಲು, ಶೇ 2ರಷ್ಟು ಇರುವ ಉದ್ಯೋಗದಲ್ಲಿ ಪಾಲು ಪಡೆಯಲು ಇಷ್ಟೊಂದು ಚೂರು ಚೂರು ಆಗಬೇಕೇ? ಐಎಎಸ್, ಐಪಿಎಸ್ ಅಧಿಕಾರಿಗಳ ಕುತಂತ್ರಕ್ಕೆ ಬಲಿಯಾಗುತ್ತಿದ್ದೇವೆ. ವರ್ಣಾಶ್ರಮ ಧರ್ಮ ಮತ್ತೆ ಹೂಬಿಟ್ಟು ಫಲ ಕೊಡತೊಡಗಿದೆ ಎಂದರು.

ಪರಿಶಿಷ್ಟ ಜಾತಿ–ಪಂಗಡಗಳ ಸೌಹಾರ್ದ ಸೋದರತ್ವ ಸಮಿತಿ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಬಂತೇಜಿ ಮನೋರಕ್ಖಿತ ಮಾತನಾಡಿದರು. ಕೋಟಿಗಾನಹಳ್ಳಿ ರಾಮಯ್ಯ, ಧಮ್ಮವೀರ ಭಂತೇಜಿ , ಎನ್. ವೆಂಕಟೇಶ್ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

ಬಿಎಸ್‌ಪಿ ನಾಯಕ ಹ.ರಾ. ಮಹೇಶ್ ಮಾತನಾಡಿ, 'ಒಳಮೀಸಲಾತಿ ಜಾರಿಗೆ ವಿಳಂಬ ಮಾಡುತ್ತಿರುವುದು ಸರ್ಕಾರ. ಒಳಮೀಸಲಾತಿಯ ಹೆಸರಲ್ಲಿ ನಮ್ಮನ್ನು ಒಡೆಯುತ್ತಿರುವುದು ಮನುವಾದಿಗಳು. ನಾವು ಅವರನ್ನು ಪ್ರಶ್ನಿಸಬೇಕೇ ಹೊರತು ಪರಸ್ಪರ ನಮ್ಮೊಳಗಿನ ಸಮುದಾಯಗಳೇ ಕೆಸರೆರಚಾಟ ಮಾಡಬಾರದು' ಎಂದು ಹೇಳಿದರು.

'ಇಡೀ ಮಾನವಕುಲದ ಒಳಿತಿನ ಬಗ್ಗೆ ಮಾತನಾಡಿದ್ದ, ಕೆಲಸ ಮಾಡಿದ್ದ ಅಂಬೇಡ್ಕರ್ ಅವರನ್ನು ಎಸ್‌ಸಿ–ಎಸ್‌ಟಿ ನಾಯಕ ಎಂದು ಮನುವಾದಿಗಳು ಬಿಂಬಿಸಿದ್ದರು. ಆ ನಂತರ ಬರೀ ಎಸ್‌ಸಿಗಳ ನಾಯಕ ಎಂದು ಬಿಂಬಿಸಲಾಯಿತು. ಈಗ ಎಸ್‌ಸಿಗಳಲ್ಲಿಯೂ ಒಂದು ಒಳಜಾತಿಯ ನಾಯಕ ಎಂದು ಸೀಮಿತಗೊಳಿಸಲು ಮನುವಾದಿಗಳು ಕೆಲಸ ಮಾಡುತ್ತಿದ್ದು, ಬಹುತೇಕ ಯಶಸ್ವಿಯಾಗುತ್ತಿದ್ದಾರೆ. ಇದಕ್ಕೆ ಉತ್ತರ ನೀಡಬೇಕಾದರೆ ನಾವು ಸೋದರ ಸಮುದಾಯಗಳು ಸೌಹಾರ್ದವಾಗಿ ಬದುಕಬೇಕು. ಸತ್ಯ, ನ್ಯಾಯ, ಸಮಾನತೆಯ ಪರ ಇರಬೇಕು' ಎಂದರು.

ಜೇತವನ ಬೌದ್ಧ ವಿಹಾರದ ಭಂತೇಜಿ ಮನೋರಕ್ಖಿತ, ಬೌದ್ಧ ಮಹಾಸಭಾದ ಧಮ್ಮವೀರ ಭಂತೇಜಿ ಸಾನ್ನಿಧ್ಯ ವಹಿಸಿದ್ದರು.

'ಬ್ರಾಹ್ಮಣಶಾಹಿಗೆ ತಕ್ಕ ಉತ್ತರ ನೀಡೋಣ'

'ನಮ್ಮನ್ನು ಒಡೆಯಲೆಂದೇ ಬ್ರಾಹ್ಮಣಶಾಹಿ ಮತ್ತು ಬಂಡವಾಳ ಶಾಹಿಗಳು ಒಟ್ಟಾಗಿ ಕೆಲಸ ಮಾಡುತ್ತಿವೆ' ಎಂದು ದಲಿತ ಸಂಘರ್ಷ ಸಮಿತಿ ನಾಯಕ ಎನ್.ವೆಂಕಟೇಶ್ ಹೇಳಿದರು.

'ಇದರ ವಿರುದ್ಧ ನಾವು ಒಟ್ಟಾಗಿ ಸಮಾವೇಶ ನಡೆಸಿ ಇವುಗಳಿಗೆ ಉತ್ತರ ನೀಡಬೇಕು' ಎಂದು ಅವರು ಆಶಿಸಿದರು.

ಶುದ್ಧ ನೀರಿನ ಘಟಕ: ಸಿಇಒಗಳಿಗೆ ಸಚಿವ ಪ್ರಿಯಾಂಕ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ದುಃಸ್ಥಿತಿಯಲ್ಲಿರುವ ಶುದ್ಧ ನೀರಿನ ಘಟಕಗಳನ್ನು ಆದ್ಯತೆಯ ಮೇಲೆ ಸರಿಪಡಿಸಲು ಉದ್ದೇಶಿಸಲಾಗಿದ್ದು, ಅಂತಹ ಘಟಕಗಳ ಬಗ್ಗೆ ವೈಜ್ಞಾನಿಕ ರೀತಿಯಲ್ಲಿ ಅಧ್ಯಯನ ಮಾಡಿ ವರದಿ ಕಳುಹಿಸಬೇಕು' ಎಂದು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.

ಎಲ್ಲ ಜಿಲ್ಲಾ ಪಂಚಾಯತಿಗಳ ಸಿಇಒಗಳ ಜೊತೆ ಬುಧವಾರ ವಿಡಿಯೊ ಸಂವಾದ ನಡೆಸಿದ ಅವರು, 'ಬೇಸಿಗೆ ಎದುರಿಸಲು ಜಿಲ್ಲೆಗಳಿಗೆ ವಿಶೇಷ ಅನುದಾನ ನೀಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ಯಾವುದೇ ಲೋಪ ಆಗದಂತೆ ಕ್ರಮ ಕೈಗೊಳ್ಳಬೇಕು' ಎಂದು ನಿರ್ದೇಶಿಸಿದರು.

'ರಾಜ್ಯದ ಹಲವು ಕಡೆಗಳಲ್ಲಿ ನೀರಿನ ಮೂಲಗಳಿಲ್ಲದೆ ಶುದ್ಧ ನೀರಿನ ಘಟಕಗಳು ಸ್ಥಗಿತಗೊಂಡಿವೆ. ನಿರ್ವಹಣೆಯ ಹೊಣೆಗಾರಿಕೆ ನಿಗದಿಪಡಿಸದಿರುವುದು ಸೇರಿದಂತೆ ಹಲವು ಕಾರಣಗಳಿಂದ ಸ್ಥಗಿತಗೊಂಡಿರುವ ಘಟಕಗಳನ್ನು ದುರಸ್ತಿಗೊಳಿಸುವ ಮೊದಲು ಸಾಧಕ-ಬಾಧಕಗಳನ್ನು ಪರಿಶೀಲಿಸಿ, ಈ ಕುರಿತು ವಿವರವಾದ ನೀಲನಕ್ಷೆ ಸಿದ್ಧಪಡಿಸಿ, ವರದಿಯನ್ನು ಕಳುಹಿಸಬೇಕು' ಎಂದರು.

'ಕುಡಿಯುವ ನೀರಿನ ಸಮಸ್ಯೆ ಕುರಿತು ತಿಳಿಸುವ ಜನಪ್ರತಿನಿಧಿಗಳು ಹಾಗೂ ದೂರು ಸಲ್ಲಿಸುವ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಉತ್ತರ ನೀಡುವ ಮೂಲಕ ಅಧಿಕಾರಿಗಳು ಉತ್ತರದಾಯಿಗಳಾಗಬೇಕು. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಕಳೆದ ವರ್ಷದಂತೆ ಈ ವರ್ಷವೂ ತಾಲ್ಲೂಕು ಮಟ್ಟದಲ್ಲಿ ಸಹಾಯವಾಣಿ ತೆರೆದು ಸಮಸ್ಯೆಗಳನ್ನು ಆಲಿಸಬೇಕು' ಎಂದೂ ಪ್ರಿಯಾಂಕ್ ಸೂಚಿಸಿದರು.

'ಬೇಸಿಗೆ ಅವಧಿಯಲ್ಲಿ ಬಾಡಿಗೆಗೆ ಪಡೆಯುವ ಟ್ಯಾಂಕರ್‌ಗಳಿಗೆ ಹಾಗೂ ಖಾಸಗಿ ಕೊಳವೆ ಬಾವಿಗಳಿಗೆ ಹಣ ಪಾವತಿ ವಿಳಂಬ ಆಗದಂತೆ ನೋಡಿಕೊಳ್ಳಬೇಕು. ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಗ್ರಾಮೀಣ ನೀರು ಸರಬರಾಜು ಇಲಾಖೆಯ ಎಂಜಿನಿಯರ್‌ಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಬೇಕು' ಎಂದು ಸೂಚಿಸಿದ ಅವರು, 2023ನೇ ಸಾಲಿನ ಬಾಕಿ ಪಾವತಿಸಲು ಸರ್ಕಾರಕ್ಕೆ ಈಗ ಪತ್ರ ಬರೆಯುತ್ತಿರುವ ಕಾರ್ಯವೈಖರಿಯ ಬಗ್ಗೆ ಕೆಲವು ಎಂಜಿನಿಯರ್‌ಗಳನ್ನು ತರಾಟೆಗೆ ತೆಗೆದುಕೊಂಡರು.

ಸಣ್ಣೇನಹಳ್ಳಿ ದರ್ಶನ್ ಕಸ್ಟಡಿ ಸಾವು ಪ್ರಕರಣ: ನೋಟಿಸ್

ಸಮಿತಿ ರಚನೆಗೆ ಸಿ.ಜೆ ಪೀಠ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ಐದು ವರ್ಷಗಳಲ್ಲಿ ನಡೆದಿರುವ ಪೊಲೀಸ್ ಕಸ್ಟಡಿ ಸಾವುಗಳ ತನಿಖೆ, ಪ್ರಾಸಿಕ್ಯೂಷನ್, ಸಂತ್ರಸ್ತರಿಗೆ ಪರಿಹಾರ ಮತ್ತು ಸರ್ಕಾರಕ್ಕೆ ಸೂಕ್ತ ಶಿಫಾರಸು ಮಾಡಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಬೇಕು' ಎಂಬ ಕೋರಿಕೆಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಈ ಸಂಬಂಧ, 'ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್–ಕರ್ನಾಟಕ' (ಪಿಯುಸಿಎಲ್) ಸಂಘಟನೆಯ ಪ್ರಧಾನ ಕಾರ್ಯದರ್ಶಿ ಇ.ಶುಜಾಯತ್ ಉಲ್ಲಾ ಮತ್ತು 'ನ್ಯಾಯಕ್ಕಾಗಿ ಕೈದಿ ಕುಟುಂಬಗಳ ಸಂಘ'ದ ಸಂಚಾಲಕಿ ವಿ.ಚಂದ್ರಶ್ರೀ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಮುಖ್ಯ ನ್ಯಾಯಮೂರ್ತಿ (ಸಿಜೆ) ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠ, 'ಕಸ್ಟಡಿ ಸಾವುಗಳ ಕುರಿತು ಈಗಾಗಲೇ ಹಲವು ತೀರ್ಪುಗಳು ಬಂದಿವೆ. ನಿಮಗೆ ಯಾವ ಆದೇಶ ಬೇಕು' ಎಂದು ಅರ್ಜಿದಾರರ ಪರ ಹೈಕೋರ್ಟ್ ವಕೀಲ ಕ್ಲಿಫ್ಟನ್ ರೋಜಾರಿಯೊ ಅವರನ್ನು ಪ್ರಶ್ನಿಸಿತು. ಇದಕ್ಕೆ ಕ್ಲಿಫ್ಟನ್, 'ಅರ್ಜಿದಾರರು ಕಸ್ಟಡಿ ಸಾವಿನ ಬಗ್ಗೆ ಪರಿಹಾರ ಕೋರುತ್ತಿಲ್ಲ, ಕಸ್ಟಡಿಯಲ್ಲಿನ ಕಿರುಕುಳದ ಬಗ್ಗೆ ಕೇಳುತ್ತಿದ್ದಾರೆ' ಎಂದರು.

ಇದಕ್ಕೆ ನ್ಯಾಯಪೀಠವು, 'ಕಸ್ಟಡಿಯಲ್ಲಿನ ಕಿರುಕುಳದ ಬಗ್ಗೆಯೂ ಹಲವು ತೀರ್ಪುಗಳು ಬಂದಿವೆ. ವ್ಯಕ್ತಿಯನ್ನು ಬಂಧಿಸಿದ ನಂತರ ಪಾಲಿಸಬೇಕಾದ ಪ್ರಕ್ರಿಯೆಗಳು ಈಗಾಗಲೇ ಚಾಲ್ತಿಯಲ್ಲಿವೆ. ಪ್ರಕ್ರಿಯೆ ಉಲ್ಲಂಘಿಸಿದ ಪ್ರಕರಣಗಳಲ್ಲಿ ನಿರ್ದೇಶನ ನೀಡಬಹುದು. ಕಿರುಕುಳ ನೀಡಿರುವುದು ಸಾಬೀತಾದ ಪ್ರಕರಣಗಳಲ್ಲಿ ಅಧಿಕಾರಿಗಳಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಹಲವು ಆದೇಶಗಳಲ್ಲಿ ಸಂತ್ರಸ್ತರಿಗೆ ಪರಿಹಾರಕ್ಕೆ ಆದೇಶಿಸಿದೆ' ಎಂಬ ಅಂಶಗಳನ್ನು ಉಲ್ಲೇಖಿಸಿತು.

ನೋಟಿಸ್: ಅರ್ಜಿದಾರರ ಐದು ಕೋರಿಕೆಗಳ ಪೈಕಿ 2025ರ ನವೆಂಬರ್‌ನಲ್ಲಿ ಸಣ್ಣೇನಹಳ್ಳಿಯ ದರ್ಶನ್ ಎಂಬ ಯುವಕನನ್ನು ಠಾಣೆಗೆ ಕರೆದೊಯ್ದು ಗಂಭೀರವಾಗಿ ಹಲ್ಲೆ ನಡೆಸಿ, ಆತನ ಸಾವಿಗೆ ಕಾರಣವಾದ ಆರೋಪಕ್ಕೆ ಸಂಬಂಧಿಸಿದಂತೆ ವಿವೇಕನಗರ ಠಾಣಾ ಪೊಲೀಸರ ವಿರುದ್ಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಲಾಗಿದೆ.

'ದರ್ಶನ್ ಸಾವಿನ ತನಿಖೆ ನಡೆಸಲು ವಿಶೇಷ ತನಿಖಾ ತಂಡ ರಚಿಸಬೇಕು. ಕಾಲಮಿತಿಯಲ್ಲಿ ಹೈಕೋರ್ಟ್ ನಿಗಾದಲ್ಲಿ ತನಿಖೆ ಕೈಗೊಳ್ಳಬೇಕು. ದರ್ಶನ್ ಕುಟುಂಬದವರಿಗೆ ₹50 ಲಕ್ಷ ಪರಿಹಾರಕ್ಕೆ ಆದೇಶಿಸಬೇಕು. ದರ್ಶನ್ ಕುಟುಂಬದವರಿಗೆ ರಕ್ಷಣೆ ಒದಗಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಈ ಕೋರಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಜುಲೈ 15ಕ್ಕೆ ಮುಂದೂಡಿದೆ.

ನಿರಾಕರಿಸಲಾದ ಕೋರಿಕೆಯಲ್ಲಿ ಏನಿತ್ತು?

- 'ಪೊಲೀಸ್ ಕಸ್ಟಡಿಯಲ್ಲಿ ಆರೋಪಿಗಳಿಗೆ ನೀಡಲಾಗುವ ಕಿರುಕುಳ ಮತ್ತು ಸಾವನ್ನು ತಡೆಯಲು ಕಡ್ಡಾಯ ವೈದ್ಯಕೀಯ ಪರೀಕ್ಷೆ, ಎಫ್ಐಆರ್ ದಾಖಲು, ಮ್ಯಾಜಿಸ್ಟೀರಿಯಲ್ ತನಿಖೆ, ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಒಳಗೊಂಡು ಸಮಗ್ರ ಶಿಷ್ಟಾಚಾರ ರೂಪಿಸಲು ನಿರ್ದೇಶಿಸಬೇಕು
- ಕಸ್ಟಡಿಯಲ್ಲಿನ ದೌರ್ಜನ್ಯ ಮತ್ತು ಸಾವುಗಳ ಸಂಬಂಧ ಕಠಿಣ ಮತ್ತು ಪಾರದರ್ಶಕ ರೀತಿಯಲ್ಲಿ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ನಿರ್ದೇಶಿಸಬೇಕು
- ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಸಿಸಿಟಿವಿಗಳು ಚಾಲ್ತಿಯಲ್ಲಿರಬೇಕು. ಸಿಸಿಟಿವಿ ಸರಿಯಾಗಿ ಕೆಲಸ ಮಾಡದ ಠಾಣೆಯಲ್ಲಿನ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಪೊಲೀಸ್ ಮಹಾನಿರ್ದೇಶಕರು ಮತ್ತು ಬೆಂಗಳೂರು ಪೊಲೀಸ್ ಆಯುಕ್ತರಿಗೆ ನಿರ್ದೇಶಿಸಬೇಕು ಎಂದು ಕೋರಲಾಗಿತ್ತು. ಈ ಕೋರಿಕೆಗಳನ್ನು ಪರಿಗಣಿಸಲು ನ್ಯಾಯಪೀಠ ನಿರಾಕರಿಸಿದೆ

ಪ್ರವಾಸಕ್ಕೆ ಬಂದಿದ್ದ ಕೇರಳ ವಿದ್ಯಾರ್ಥಿನಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿಗೆ ಪ್ರವಾಸ ಬಂದಿದ್ದ ಕೇರಳದ 10ನೇ ತರಗತಿ ವಿದ್ಯಾರ್ಥಿನಿ ನಾಪತ್ತೆಯಾಗಿದ್ದು, ಮಂಗಳವಾರ ರಾತ್ರಿ ಮತ್ತು ಬುಧವಾರ ಇಡೀ ದಿನ ಪೊಲೀಸರು ಹುಡುಕಾಟ ನಡೆಸಿದರು. ಆದರೆ ಬಾಲಕಿಯು ಪತ್ತೆಯಾಗಿಲ್ಲ.

ಕೇರಳದ ಪಾಲಕ್ಕಾಡ್‌ನಿಂದ 40ಕ್ಕೂ ಹೆಚ್ಚು ಜನರು ಪ್ರವಾಸ ಬಂದಿದ್ದರು. ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿರುವ ಮಾಣಿಕ್ಯಧಾರಾ ಜಲಪಾತ ವೀಕ್ಷಣೆಗೆ ತೆರಳಿದ್ದಾಗ ಸಂಜೆ 5.30ರ ಸುಮಾರಿಗೆ ಬಾಲಕಿ ನಾಪತ್ತೆ ಆಗಿರುವುದು ಕುಟುಂಬದವರಿಗೆ ಗೊತ್ತಾಗಿದೆ.

ರಾತ್ರಿ 8 ಗಂಟೆ ತನಕ ಹುಡುಕಿ ನಂತರ ಪೊಲೀಸರಿಗೆ ತಿಳಿಸಿದ್ದಾರೆ. ಪೊಲೀಸರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ರಾತ್ರಿ ಇಡೀ ಥರ್ಮಲ್ ಡ್ರೋನ್ ಬಳಸಿ ಹುಡುಕಾಡಿದರು.

ಅಗ್ನಿಶಾಮಕ ದಳ, ಪೊಲೀಸರು, ಅರಣ್ಯ ಇಲಾಖೆ, ಎಸ್‌ಡಿಆರ್‌ಎಫ್ ಸಿಬ್ಬಂದಿ, ಸ್ಥಳೀಯ ವಿಕೋಪ ತಡೆ ಕಾರ್ಯಾಚರಣೆ ತಂಡ ಸೇರಿ 100ಕ್ಕೂ ಹೆಚ್ಚು ಜನ ಹುಡುಕಾಟ ನಡೆಸಿದರು. ಸೂಕ್ಷ್ಮ ಪ್ರದೇಶಗಳಲ್ಲೂ ತಡಕಾಡಿದರು. ಹಗ್ಗ ಕಟ್ಟಿ ಕಡಿದಾದ ಪ್ರದೇಶಗಳಿಗೆ ಇಳಿದು ಶೋಧ ನಡೆಸಿದರು. ಅದರೆ, ಬಾಲಕಿ ಪತ್ತೆಯಾಗಲಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಲ್ಲಿಗೆ ಬಂದಿದ್ದ ಕಾರುಗಳ ನೋಂದಣಿ ಸಂಖ್ಯೆ, ಪ್ರವಾಸಿಗರ ದೂರವಾಣಿ ಸಂಖ್ಯೆಗಳನ್ನು ಪರಿಶೀಲಿಸಿ ಬೇರೆ ಆಯಾಮಗಳಲ್ಲೂ ಶೋಧ ನಡೆಸಲಾಗುತ್ತಿದೆ ಎಂದೂ ತಿಳಿಸಿದ್ದಾರೆ.

ಬೇಡ್ತಿ–ವರದಾ: ಆಂಧ್ರ ಪ್ರದೇಶ ಸರ್ಕಾರದ ತಗಾದೆ

'ನದಿ ಜೋಡಣೆಯಲ್ಲೂ ಪಾಲು'

• ಮಂಜುನಾಥ ಹೆಬ್ಬಾರ್

ನವದೆಹಲಿ: ಪ್ರಸ್ತಾವಿತ ಬೇಡ್ತಿ–ವರದಾ ನದಿಗಳ ಜೋಡಣೆ ವೇಳೆಯಲ್ಲಿ ತಮ್ಮ ರಾಜ್ಯಕ್ಕೆ ನ್ಯಾಯಬದ್ಧವಾದ ನೀರು ಹಂಚಿಕೆ ಮಾಡಬೇಕು ಎಂದು ಆಂಧ್ರ ಪ್ರದೇಶ ಸರ್ಕಾರ ತಗಾದೆ ಎತ್ತಿದೆ.

ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಳಕ್ಕೆ ಅನುವು ಮಾಡಿಕೊಡಬಾರದು ಎಂದು ಆಂಧ್ರ ಪ್ರದೇಶ ಸರ್ಕಾರವು ಜಲಶಕ್ತಿ ಸಚಿವಾಲಯಕ್ಕೆ ಜನವರಿಯಲ್ಲಿ ಪತ್ರ ಬರೆದಿತ್ತು. ಅದರ ಬೆನ್ನಲ್ಲೇ, ನೆರೆ ರಾಜ್ಯವು ನದಿ ಜೋಡಣೆಯ ನೀರು ಹಂಚಿಕೆ ವಿಷಯದಲ್ಲೂ ತಕರಾರು ಶುರು ಮಾಡಿದೆ.

ನದಿ ಜೋಡಣೆಯ ವಿಷಯದಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ತನ್ನ ನಿಲುವನ್ನು ತಿಳಿಸಿರುವ ಆಂಧ್ರ ಪ್ರದೇಶ ಸರ್ಕಾರ, 'ಈ ನದಿಗಳನ್ನು ಜೋಡಿಸುವ ಮೂಲಕ 18.50 ಟಿಎಂಸಿ ಅಡಿ ನೀರನ್ನು ಕೃಷ್ಣಾ ಜಲಾನಯನ ಪ್ರದೇಶಕ್ಕೆ ತಿರುಗಿಸಲು ಪ್ರಸ್ತಾಪಿಸಲಾಗಿದೆ. ಹೀಗಾಗಿ, ಕೃಷ್ಣಾ ನ್ಯಾಯಮಂಡಳಿ ತೀರ್ಪಿನ ಪ್ರಕಾರ, ರಾಜ್ಯಕ್ಕೆ ಪಾಲು ನೀಡಬೇಕು' ಎಂದು ಆಗ್ರಹಿಸಿದೆ. ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ನದಿ ಜೋಡಣೆಯ ವಿಶೇಷ ಸಮಿತಿಯ ಸಭೆಯಲ್ಲೂ ಈ ಬೇಡಿಕೆ ಮುಂದಿಟ್ಟಿದೆ. ಇನ್ನೊಂದೆಡೆ, ನದಿ ಜೋಡಣೆ ಕುರಿತು ರಾಜ್ಯಗಳು ಒಮ್ಮತಕ್ಕೆ ಬಂದಿಲ್ಲ. ಜತೆಗೆ, ರಾಜ್ಯಕ್ಕೆ ಕನಿಷ್ಠ ಪಾಲು ಹಂಚಿಕೆ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದ ಅಂತರ್ ರಾಜ್ಯ ವಿವಾದಗಳು ಬಗೆಹರಿದ ಬಳಿಕವಷ್ಟೇ ನದಿಗಳ ಜೋಡಣೆಯ ಒಪ್ಪಂದಕ್ಕೆ ಸಹಿ ಹಾಕುವುದಾಗಿ ಕರ್ನಾಟಕ ಸರ್ಕಾರ ಸ್ಪಷ್ಟಪಡಿಸಿದೆ.

ಗೋದಾವರಿ– ಕಾವೇರಿ ನದಿ ಜೋಡಣೆಯ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಕರ್ನಾಟಕ ಆಕ್ಷೇಪ ವ್ಯಕ್ತಪಡಿಸಿತ್ತು. ರಾಜ್ಯಕ್ಕೆ ಹಂಚಿಕೆ ಮಾಡಿರುವ ನೀರಿನ ಪ್ರಮಾಣ ಭಾರಿ ಕಡಿಮೆ ಇದ್ದು, ಪಾಲು ಹೆಚ್ಚಿಸಿದರೆ ಮಾತ್ರ ಒಪ್ಪಂದಕ್ಕೆ ಸಹಿ ಹಾಕುವುದಾಗಿ ರಾಜ್ಯ ಸರ್ಕಾರ ಸ್ಪಷ್ಟಪಡಿಸಿತ್ತು. ಆ ಬಳಿಕ, ಬೇಡ್ತಿ–ವರದಾ ನದಿಗಳ ಜೋಡಣೆ ಪ್ರಸ್ತಾವವನ್ನು ಈ ಯೋಜನೆಯಲ್ಲಿ ಸೇರಿಸಲಾಗಿತ್ತು.

ಧಾರವಾಡ ಜಿಲ್ಲೆಯಲ್ಲಿ ಉಗಮಗೊಂಡು ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಹರಿದು ಅರಬ್ಬಿ ಸಮುದ್ರ ಸೇರುವ ಬೇಡ್ತಿ ನದಿಯನ್ನು ಹಾವೇರಿ ಮತ್ತು ಗದಗ ಜಿಲ್ಲೆಯ ವ್ಯಾಪ್ತಿಗೆ ನೀರು ಪೂರೈಕೆಗೆ ವರದಾ ನದಿಗೆ ಜೋಡಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ ಕರ್ನಾಟಕ ಸರ್ಕಾರ ಒಪ್ಪಿಗೆ ಸೂಚಿಸಿದೆ.

ಹಾವೇರಿ, ಗದಗ, ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿ ನೀರಾವರಿ, ಕುಡಿಯುವ ನೀರು ಪೂರೈಕೆ, ಕೈಗಾರಿಕೆಗಳಿಗೆ ನೀರು ಒದಗಿಸುವುದು ಈ ಯೋಜನೆಯ ಉದ್ದೇಶ. ನದಿ ನೀರು ಸಂಗ್ರಹಕ್ಕೆ ಶಿರಸಿಯ ಸಹಸ್ರಲಿಂಗ ಮತ್ತು ಪಟ್ಟಣದ ಹೊಳೆ ಬಳಿ ಹಾಗೂ ಯಲ್ಲಾಪುರದ ಬೇಡ್ತಿ ಸೇತುವೆ ಸಮೀಪ ಕಿರು ಅಣೆಕಟ್ಟೆ ನಿರ್ಮಾಣ ಮಾಡಲಾಗುತ್ತದೆ. ಅಲ್ಲಿಂದ 246.58 ಕಿ.ಮೀ ಪೈಪ್‌ಲೈನ್ ಮೂಲಕ ನೀರು ಕೊಂಡೊಯ್ಯಲಾಗುತ್ತದೆ. ಈ ನದಿಗಳ ಜೋಡಣೆಯಿಂದಾಗಿ 1.04 ಲಕ್ಷ ಹೆಕ್ಟೇರ್‌ಗೆ ನೀರಾವರಿ ಒದಗಿಸಬಹುದು ಎಂದು ಡಿಪಿಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ತೆಲಂಗಾಣದಿಂದಲೂ ರಗಳೆ

ಗೋದಾವರಿ–ಕಾವೇರಿ ನದಿಗಳ ಜೋಡಣೆ ಸಂದರ್ಭದಲ್ಲಿ ಬದಲಿ ವಿಧಾನದ ಮೂಲಕ ಆಲಮಟ್ಟಿಯಿಂದ ಕರ್ನಾಟಕಕ್ಕೆ 16 ಟಿಎಂಸಿ ಅಡಿ ನೀರು ಹಂಚಿಕೆ ಮಾಡುವುದನ್ನು ಮರು ಪರಿಶೀಲಿಸಬೇಕು ಎಂದು ತೆಲಂಗಾಣ ಸರ್ಕಾರವು ಜಲಶಕ್ತಿ ಸಚಿವಾಲಯದ ಮೇಲೆ ಒತ್ತಡ ಹೇರಿದೆ. ನೀರಿನ ಹಂಚಿಕೆಯಿಂದ ತೆಲಂಗಾಣದ ಜುರಾಲಾ ಯೋಜನೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ದೂರಿದೆ.

'ಕ್ಯಾಂಪಸ್‌-ಟು-ಕರಿಯರ್' ಶೃಂಗ ಮೇ 15ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣದಲ್ಲಿ ಕೌಶಲ ಉತ್ತೇಜಿಸಲು ಮೇ 15 ಮತ್ತು 16ರಂದು ಕ್ಯಾಂಪಸ್‌-ಟು-ಕರಿಯರ್ (ಸಿ ಟು ಸಿ) ಶಿಕ್ಷಣ ಶೃಂಗ ಹಮ್ಮಿಕೊಳ್ಳಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಬುಧವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು, ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಕೌಶಲ ಕೋರ್ಸ್‌ಗಳನ್ನು ಪರಿಚಯಿಸುವ ಮೂಲಕ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವುದು, ಹೊಸ ಉದ್ಯೋಗಗಳನ್ನು ಸೃಷ್ಟಿಸುವುದು 'ಕ್ಯಾಂಪಸ್ ಟು ಕರಿಯರ್' ಶೃಂಗದ ಉದ್ದೇಶ. ಸರ್ಕಾರಿ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟ, ಕೈಗಾರಿಕಾ ವಲಯದಲ್ಲಿ ಅವಶ್ಯವಿರುವ ಕೌಶಲ ಶಿಕ್ಷಣ ನೀಡಲು ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಶೃಂಗಸಭೆಯಲ್ಲಿ ರಾಜ್ಯದ ಪ್ರಮುಖ ಕೈಗಾರಿಕಾ ಸಂಸ್ಥೆಗಳು, ಶಿಕ್ಷಣ ತಜ್ಞರು ಹಾಗೂ ಸರ್ಕಾರದ ಅಧಿಕಾರಿಗಳು ಒಂದೆಡೆ ಸೇರಿ ಚರ್ಚಿಸಲಿದ್ದಾರೆ. ಜಾಗತಿಕವಾಗಿ ಉನ್ನತ ಶಿಕ್ಷಣ ಸಾಕಷ್ಟು ಬದಲಾಗಿದ್ದು, ಬದಲಾದ ಪರಿಕಲ್ಪನೆಗೆ ಅನುಗುಣವಾಗಿ ವಿದ್ಯಾರ್ಥಿ ಗಳನ್ನು ಸಜ್ಜುಗೊಳಿಸುವುದು ಸರ್ಕಾರದ ಉದ್ದೇಶ ಎಂದು ವಿವರ ನೀಡಿದರು.

ಸಂಪುಟ ಸಭೆಗೆ ರಾಜ್ಯ ಶಿಕ್ಷಣ ನೀತಿ

ರಾಜ್ಯ ಶಿಕ್ಷಣ ನೀತಿಯ ಪೂರ್ಣ ಪ್ರಮಾಣದ ಅನುಷ್ಠಾನ ಕುರಿತು ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದೂ ಸುಧಾಕರ್ ಹೇಳಿದರು.

ಉನ್ನತ ಶಿಕ್ಷಣದಲ್ಲಿ ಈಗಾಗಲೇ ರಾಜ್ಯ ಶಿಕ್ಷಣ ನೀತಿಯ ಬಹುತೇಕ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. ಸಂಪುಟದ ಸಹೋದ್ಯೋಗಿಗಳು ರಾಜ್ಯ ಶಿಕ್ಷಣ ನೀತಿಯ ಕರಡು ಓದುತ್ತಿದ್ದಾರೆ. ನಂತರ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದರು.

ಜೇನು ಗಿಡುಗ

ಪ್ರಜಾವಾಣಿ ಚಿತ್ರ: ಅನೂಪ್ ರಾಘ್. ಟಿ.

ಜೇನುಗೂಡುಗಳನ್ನು ತಿನ್ನುವ ಜೇನು ಗಿಡುಗ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಪಶ್ಚಿಮ ವಾಹಿನಿ ಬಳಿ ಕ್ಯಾಮೆರಾ ಕಣ್ಣಿಗೆ ಕಂಡ ಬಗೆ...

ಜೈಲರ್ ಮೇಲೆ ಕೈದಿಗಳಿಂದ ಹಲ್ಲೆ

ಬಳ್ಳಾರಿ: ಇಲ್ಲಿನ ಕೇಂದ್ರ ಕಾರಾಗೃಹದ ಜೈಲರ್ ಅಶೋಕ ಹೊಸಮನಿ ಅವರ ಮೇಲೆ ಕೈದಿಗಳು ಬುಧವಾರ ಹಲ್ಲೆ ಮಾಡಿದ್ದು, ಐವರ ವಿರುದ್ಧ ಬ್ರೂಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಶೀದ್, ಸಲೀಮ್, ವಿನೋದ್, ಅಲ್ತಾಫ್ ಮತ್ತು ರಾಜು ವಿರುದ್ಧ ಪ್ರಕರಣ ದಾಖಲಾಗಿದೆ. ಎಲ್ಲರೂ ದರೋಡೆ, ಹಲ್ಲೆ ಸೇರಿ ವಿವಿಧ ಪ್ರಕರಣಗಳಲ್ಲಿ ಭಾಗಿಯಾದವರು' ಎಂದು ಪೊಲೀಸರು ತಿಳಿಸಿದ್ದಾರೆ.

'ಕಾರಾಗೃಹದಲ್ಲಿ ಧೂಮಪಾನ ಸೇರಿ ಇತರೆ ಸೌಲಭ್ಯಗಳಿಗೆ ಗಲಾಟೆ ಮಾಡುತ್ತಿದ್ದ ಕೈದಿಗಳು ಜೈಲರ್‌ಗೆ ಪ್ರಶ್ನಿಸಲು ಹೋಗಿದ್ದಾಗ ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ' ಎಂದು ತಿಳಿಸಿದ್ದಾರೆ.

ವೈದ್ಯರ ಕೊರತೆ ನಿವಾರಣೆಗೆ ತುರ್ತು ಕ್ರಮ

ಬೆಂಗಳೂರು: ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ನಿವಾರಿಸಲು ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವೈದ್ಯಾಧಿಕಾರಿಗಳನ್ನು ನಿಯೋಜಿಸುವ ಉದ್ದೇಶದಿಂದ ವರ್ಗಾವಣೆ ನಿಯಮಗಳಲ್ಲಿ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ತಿದ್ದುಪಡಿಗಾಗಿ ಸಿದ್ಧಪಡಿಸಲಾಗಿರುವ ಪ್ರಸ್ತಾವಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸ ಲಾಗಿದ್ದು, ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ತಿದ್ದುಪಡಿ ನಿಯಮಗಳು 2026ನೇ ಸಾಲಿನ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಗೆ ಅನ್ವಯ ಆಗಲಿದೆ.

ಈ ತಿದ್ದುಪಡಿ ನಿಯಮದಲ್ಲಿ ಶೇ 50ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರುವ ಆಸ್ಪತ್ರೆಗಳಲ್ಲಿ ತಕ್ಷಣವೇ ವೈದ್ಯರನ್ನು ನಿಯೋಜಿಸಬೇಕು ಎಂದು ಅಧಿಸೂಚನೆ ಯಲ್ಲಿ ಸ್ಪಷ್ಟಪಡಿಸಲಾಗಿದೆ.

ಮೂರು ದಿನಗಳ ಇಸ್ರೊ ಅಂತರರಾಷ್ಟ್ರೀಯ ಸಮ್ಮೇಳನ: ಅಧ್ಯಕ್ಷ ನಾರಾಯಣನ್ ಮಾಹಿತಿ

'ಗಗನಯಾನ: 3 ಪ್ರಾಯೋಗಿಕ ಕಾರ್ಯಾಚರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವನನ್ನು ಬಾಹ್ಯಾಕಾಶಕ್ಕೆ ಕರೆದೊಯ್ಯಬಲ್ಲ ನೌಕೆ ಸಿದ್ಧವಾಗಿದೆ. ಆದರೆ, ಮಾನವ ಸಹಿತ ಕಾರ್ಯಾಚರಣೆ ನಡೆಸುವುದಕ್ಕೂ ಮುನ್ನ ಮಾನವ ರಹಿತ ಮೂರು ಪ್ರಾಯೋಗಿಕ ಕಾರ್ಯಾಚರಣೆಗಳನ್ನು ನಡೆಸಲಿದ್ದೇವೆ' ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಹೇಳಿದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ನಗರದಲ್ಲಿ ಆಯೋಜಿಸಿರುವ, ಬಾಹ್ಯಾಕಾಶ ನೌಕೆ ಉಡ್ಡಯನೋತ್ತರ ಕಾರ್ಯಾಚರಣೆ ಕುರಿತ ಮೂರು ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ನಂತರ ಅವರು ಮಾತನಾಡಿದರು.

'ಭಾರತದಲ್ಲಿ ಬಾಹ್ಯಾಕಾಶ ಸಂಶೋಧನೆಯು 1962ರಲ್ಲಿ ಆರಂಭವಾಯಿತು. ಅಲ್ಲಿಂದ ಈವರೆಗೆ ನಾವು ಬಹಳ ದೂರ ಸಾಗಿ ಬಂದಿದ್ದೇವೆ. ಮಂಗಳಯಾನ, ಚಂದ್ರಯಾನ–1 ಯಶಸ್ವಿಯಾದವು. ಚಂದ್ರಯಾನ–2ರ ವೈಫಲ್ಯದ ನಂತರ ಚಂದ್ರನ ದಕ್ಷಿಣ ಧ್ರುವದಲ್ಲಿ ಮೊದಲ ಬಾರಿಗೆ ನೌಕೆ ಇಳಿಸಿದ ಶ್ರೇಯ ಚಂದ್ರಯಾನ–3ಕ್ಕೆ ಸಲ್ಲುತ್ತದೆ. ಆದಿತ್ಯ ಎಲ್–1 ನಂತರ ಈಗ ಮಾನವಸಹಿತ ಬಾಹ್ಯಾಕಾಶ ಯಾನಕ್ಕೆ ಸಿದ್ಧತೆ ನಡೆಸಿದ್ದೇವೆ' ಎಂದರು.

'ಗಗನಯಾನ ಕಾರ್ಯಾಚರಣೆಗೆ ಎಲ್ಲ ಸಿದ್ಧತೆಗಳೂ ನಡೆದಿವೆ. ನೌಕೆ ಮತ್ತು ಅದನ್ನು ಹೊತ್ತೊಯ್ಯಲಿರುವ ರಾಕೆಟ್ ಸಿದ್ಧವಾಗಿವೆ. ರಾಕೆಟ್ 15–20 ನಿಮಿಷ ಕಾರ್ಯಾಚರಣೆ ನಡೆಸಿ, ನೌಕೆ ಅಥವಾ ಉಪಗ್ರಹವನ್ನು ಕಕ್ಷೆಗೆ ಸೇರಿಸುತ್ತದೆ. ಆನಂತರ ತಜ್ಞರು 2ರಿಂದ 15 ವರ್ಷಗಳವರೆಗೂ ಉಪಗ್ರಹ, ನೌಕೆಗಳ ಕಾರ್ಯಾಚರಣೆಗೆ ಪ್ರತಿಕ್ಷಣವೂ ದುಡಿಯುತ್ತಾರೆ' ಎಂದರು.

'ಈ ಬಾಹ್ಯಾಕಾಶ ಯೋಜನಾ ಕಾರ್ಯಾಚರಣೆಯು ಅತ್ಯಂತ ಸೂಕ್ಷ್ಮವಾದ ಕೆಲಸ. ಸಣ್ಣ ತಪ್ಪು ನಡೆದರೂ ಇಡೀ ಕಾರ್ಯಾಚರಣೆ ಮತ್ತು ಯೋಜನೆ ವಿಫಲವಾಗುತ್ತದೆ. ಈ ಹಂತದಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯ ಅವಕಾಶಗಳು ಇವೆ. ಆ ಸಾಧ್ಯತೆಗಳನ್ನು ಪರಿಶೀಲಿಸಲು ಈ ಸಮ್ಮೇಳನ ವೇದಿಕೆ ಒದಗಿಸಲಿದೆ' ಎಂದರು.

'ಜಾಗತಿಕ ಮಟ್ಟದ ಬಾಹ್ಯಾಕಾಶ ಸಂಸ್ಥೆಗಳು ಮತ್ತು ಖಾಸಗಿ ಕಂಪನಿಗಳು, ನವೋದ್ಯಮಗಳು ಈ ಸಮ್ಮೇಳನದಲ್ಲಿ ಭಾಗಿಯಾಗಿವೆ. ಕಡಿಮೆ ವೆಚ್ಚದಲ್ಲಿ ಮಾನವಸಹಿತ ಬಾಹ್ಯಾಕಾಶಯಾನವನ್ನು ಕೈಗೊಳ್ಳಬಹುದಾದ ಸಾಧ್ಯತೆಗಳನ್ನು ಈ ಸಮ್ಮೇಳನದಲ್ಲಿ ನಿಕಷಕ್ಕೆ ಒಡ್ಡಲಿವೆ. ಇಲ್ಲಿ ವಿಚಾರಗಳನ್ನು ಮಂಡಿಸಲು 42,000ಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದರು. ಅಂತಿಮ ಹಂತಕ್ಕೆ ಆಯ್ಕೆಯಾದ 120 ಮಂದಿ ತಮ್ಮ ಸಂಶೋಧನಾ ಪತ್ರಿಕೆಗಳನ್ನು ಇಲ್ಲಿ ಮಂಡಿಸಲಿದ್ದಾರೆ' ಎಂದರು.

ಐರೋಪ್ಯ ಬಾಹ್ಯಾಕಾಶ ಸಂಸ್ಥೆ, ಜಪಾನ್ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಫ್ರೆಂಚ್ ಬಾಹ್ಯಾಕಾಶ ಸಂಸ್ಥೆ ಒಳಗೊಂಡು ಹಲವು ಖಾಸಗಿ ಬಾಹ್ಯಾಕಾಶ ಸಂಸ್ಥೆಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗಿಯಾಗಿದ್ದಾರೆ.


ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಮತ್ತು ಮಾಜಿ ಅಧ್ಯಕ್ಷ ಎ.ಎಸ್. ಕಿರಣ್‌ಕುಮಾರ್ ಅವರು, ಸಮ್ಮೇಳನದ ವಸ್ತು ಪ್ರದರ್ಶನ ಮಳಿಗೆಗಳಲ್ಲಿ ಇದ್ದ ತಾಂತ್ರಿಕ ಉಪಕರಣಗಳ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು —ಪಿಟಿಐ ಚಿತ್ರ

ಕಾರ್ಯಾಗಾರ, ವಸ್ತುಪ್ರದರ್ಶನ...

ಮೂರು ದಿನಗಳ ಸಮ್ಮೇಳನದಲ್ಲಿ ಮೊದಲ ಎರಡು ದಿನ ಸಂಶೋಧನಾ ಪತ್ರಿಕೆಗಳ ಮಂಡನೆ, ಸಂವಾದ ಕಾರ್ಯಕ್ರಮಗಳು ನಡೆಯಲಿವೆ. ಮೂರನೇ ದಿನ ಪ್ರಧಾನವಾಗಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿದ್ದು, ಸಂವಾದಗಳೂ ಇರಲಿವೆ.

ಸಮ್ಮೇಳನದ ಭಾಗವಾಗಿ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದ್ದು, ಇಸ್ರೊದ ಈವರೆಗಿನ ಬಾಹ್ಯಾಕಾಶ ಯೋಜನೆಗಳು ಮತ್ತು ಕಾರ್ಯಾಚರಣೆಗಳ ಕುರಿತ ಮಾದರಿ ಹಾಗೂ ವಿವರಗಳನ್ನು ಇರಿಸಲಾಗಿದೆ.

ಪ್ರಥಮ ಪುಣ್ಯ ಸ್ಮರಣೆ

ಶ್ರೀ. ಹೆಚ್. ಬಸವಯ್ಯ, ಐ.ಎ.ಎಸ್. (ನಿ)
ಜುಲೈ 10, 1934 - ಏಪ್ರಿಲ್ 09, 2025

ನೀವು ನಮ್ಮಿಂದ ಅಗಲಿ ಒಂದು ವರ್ಷವಾಯಿತು,
ಆದರೆ ನಿಮ್ಮ ನೆನಪುಗಳು ಪ್ರತಿ ಕ್ಷಣವೂ ನಮ್ಮೊಂದಿಗೆ ಜೀವಂತವಾಗಿದೆ.
ನಿಮ್ಮ ಪ್ರೀತಿ ಮತ್ತು ಮಾರ್ಗದರ್ಶನ
ನಮ್ಮ ಜೀವನದಲ್ಲಿ ಸದಾ ಬೆಳಕಾಗಿರುತ್ತದೆ.

ಶ್ರೀಮತಿ ರಾಜಮ್ಮ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು

ಹೊಸ ಪಕ್ಷ– ಚಡ್ಡಾ ಕುತೂಹಲದ ಪೋಸ್ಟ್

ನವದೆಹಲಿ (ಪಿಟಿಐ): 'ಮತ್ತೊಂದು ಪಕ್ಷ ಸೇರುವುದಕ್ಕಿಂತ ಸ್ವಂತ ಪಕ್ಷವನ್ನೇಕೆ ಸ್ಥಾಪಿಸಬಾರದು' ಎಂಬ ಸಾಮಾಜಿಕ ಮಾಧ್ಯಮ ಬಳಕೆದಾರರೊಬ್ಬರ ವಿಡಿಯೊ ಪೋಸ್ಟ್‌ಗೆ 'ಕುತೂಹಲಕಾರಿ ಆಲೋಚನೆ' ಎಂದು ಪ್ರತಿಕ್ರಿಯಿಸುವ ಮೂಲಕ ಎಎಪಿ ರಾಜ್ಯಸಭೆ ಸದಸ್ಯ ರಾಘವ್ ಚಡ್ಡಾ ಊಹಾಪೋಹಕ್ಕೆ ಪುಷ್ಟಿ ನೀಡಿದ್ದಾರೆ.

ಚಡ್ಡಾ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪುಸ್ತಕವೊಂದರ 'ನೆವರ್ ಔಟ್‌ಶೈನ್ ದ ಮಾಸ್ಟರ್' ಎಂಬ ಪತ್ಯದ ಶೀರ್ಷಿಕೆ ಹಾಕಿ ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರಿಗೆ ತಿರುಗೇಟು ನೀಡಿದ್ದರು. ಇದನ್ನು ಹಂಚಿಕೊಂಡಿದ್ದ ಸಾಮಾಜಿಕ ಮಾಧ್ಯಮ ಬಳಕೆದಾರರೊಬ್ಬರು ವಿಡಿಯೊ ಪೋಸ್ಟ್ ಮಾಡಿದ್ದರು.

ಚಡ್ಡಾ ಅವರನ್ನು ಎಎಪಿ ರಾಜ್ಯಸಭೆಯ ಉಪ ನಾಯಕನ ಸ್ಥಾನದಿಂದ ತೆರವು ಮಾಡಿತ್ತು. ಅಲ್ಲದೆ, ಪ್ರಧಾನಿ ನರೇಂದ್ರಮೋದಿ ವಿರುದ್ಧ ಚಡ್ಡಾ ಪ್ರಶ್ನೆ ಎತ್ತುತ್ತಿಲ್ಲ ಎಂದು ಆರೋಪಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿದ್ದ ಚಡ್ಡಾ 'ನನ್ನ ಧ್ವನಿ ಅಡಗಿಸಲಾಗಿದೆ, ಸೋಲಿಸಲಾಗಿಲ್ಲ' ಎಂದಿದ್ದರು.

ನಾಲ್ಕು ವಿಡಿಯೊ ಮತ್ತು ಎರಡು ಪೋಸ್ಟ್‌ಗಳನ್ನು ಬಿಡುಗಡೆ ಮಾಡುವ ಮೂಲಕ 'ಪಕ್ಷದ ನಿರ್ಧಾರದಿಂದ ನಾನು ಸುಮ್ಮನೆ ಕೂರುವುದಿಲ್ಲ' ಎಂದು ಸಂದೇಶ ರವಾನಿಸಿದ್ದರು.

ಕೇಂದ್ರದ ನಿರ್ಧಾರ ಒಪ್ಪಲ್ಲ: ಸ್ಟಾಲಿನ್

'ಕ್ಷೇತ್ರ ಪುನರ್‌ವಿಂಗಡಣೆ: ಅಭಿಪ್ರಾಯ ಪಡೆಯದಿದ್ದರೆ ಬೆಂಬಲವಿಲ್ಲ'

ಚೆನ್ನೈ (ಪಿಟಿಐ): 'ನ್ಯಾಯಯುತವಾಗಿ ಕ್ಷೇತ್ರ ಪುನರ್‌ವಿಂಗಡಣೆಯಾಗಬೇಕೆಂದು ದಕ್ಷಿಣ ಭಾರತ ಬಯಸುತ್ತದೆ ಮತ್ತು ಈ ವಿಚಾರವಾಗಿ ರಾಜ್ಯಗಳ ಅಭಿಪ್ರಾಯ ಪಡೆಯದೇ ಕೈಗೊಳ್ಳುವ ಯಾವುದೇ ನಿರ್ಧಾರವನ್ನು ನಾವು ಒಪ್ಪಿಕೊಳ್ಳುವುದಿಲ್ಲ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಬುಧವಾರ ತಿಳಿಸಿದ್ದಾರೆ.

'ಶಾಂತವಾಗಿರುವ ದಕ್ಷಿಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಬಿರುಗಾಳಿ ಎಬ್ಬಿಸಬಾರದು' ಎಂದು ಎಚ್ಚರಿಸಿದ ಸ್ಟಾಲಿನ್ ಅವರು ಮೋದಿ ಅವರಿಗೆ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ.

'ಕ್ಷೇತ್ರ ಪುನರ್‌ವಿಂಗಡಣೆಯ ಅಪಾಯ: ಭಾರತ ಸರ್ವಾಧಿಕಾರದತ್ತ ಜಾರುತ್ತಿದೆಯೇ?' ಎಂಬ ಶೀರ್ಷಿಕೆಯಡಿ 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿರುವ ಸ್ಟಾಲಿನ್, 'ದಕ್ಷಿಣದ ಜನರು ಎತ್ತಿರುವ ಪ್ರಶ್ನೆಗಳಿಗೆ ಪ್ರಧಾನಿ ಮೋದಿ ನ್ಯಾಯಯುತವಾಗಿ ಉತ್ತರಿಸಬೇಕು. ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ಹೇಗೆ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ ಎನ್ನುವುದನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಏಕೆ ಮುಚ್ಚಿಡುತ್ತಿದೆ' ಎಂದು ಪ್ರಶ್ನಿಸಿದ್ದಾರೆ.

'ನೀವು ಏನನ್ನು ಮುಚ್ಚಿಡಲು ಪ್ರಯತ್ನಿಸುತ್ತಿದ್ದೀರಿ? ಸರ್ವಪಕ್ಷಗಳ ಅಭಿಪ್ರಾಯ ಪಡೆಯದೇ ಸಾಂವಿಧಾನಿಕ ತಿದ್ದುಪಡಿಗಳನ್ನು ಮಾಡುವುದು ಸರ್ವಾಧಿಕಾರವಲ್ಲದೇ ಮತ್ತೇನು?' ಎಂದಿದ್ದಾರೆ.

'ವಿರೋಧ ಪಕ್ಷಗಳು ಮತ್ತು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸದ ಪ್ರಧಾನಿ ಅವರು ನಾಗರಿಕರ ಪ್ರಶ್ನೆಗಳಿಗಾದರೂ ಉತ್ತರಿಸುವರೇ ಎಂದು ತಿಳಿಯಲು ಬಯಸುತ್ತೇವೆ' ಎಂದಿದ್ದಾರೆ.

'ಸ್ಟಾಲಿನ್ ಬಳಿ ಎಲ್ಲ ಅಧಿಕಾರವಿದ್ದರೆ ಈ ರ‍್ಯಾಲಿ ನಡೆಯುತ್ತಿರಲಿಲ್ಲ'

ತಿರುನೆಲ್‌ವೇಲಿ(ಪಿಟಿಐ): ಟಿವಿಕೆ ಮುಖ್ಯಸ್ಥ ವಿಜಯ್ ಅವರು ಆಡಳಿತಾರೂಢ ಡಿಎಂಕೆ ವಿರುದ್ಧ ಬುಧವಾರ ತೀವ್ರ ವಾಗ್ದಾಳಿ ನಡೆಸಿದರು. 'ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಲ್ಲಿ ಎಲ್ಲ ಅಧಿಕಾರ ಇದ್ದಿದ್ದರೆ, ಈ ಕಾರ್ಯಕ್ರಮ ನಡೆಯುತ್ತಲೇ ಇರಲಿಲ್ಲ' ಎಂದು ಆರೋಪಿಸಿದರು.



ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಅವರು ಕೆಲವು ಅಡೆ-ತಡೆಗಳನ್ನು ಒಡ್ಡಿ, ನಾವು ಬರದಂತೆ ತಡೆದರು. ಆದರೆ ಸದ್ಯ ಇದು 'ಕೇರ್ ಟೇಕರ್ ಸರ್ಕಾರ'. ಅವರು ಅಧಿಕಾರವಿಲ್ಲದ ಮುಖ್ಯಮಂತ್ರಿ' ಎಂದು ಟೀಕಿಸಿದರು.

'ಲೂಟಿ ಹೊಡೆದ ಹಣದಿಂದ ಈ ಸರ್ಕಾರ ರಚನೆಯಾಗಿದೆ. ಅದರ ಮಿತ್ರಪಕ್ಷಗಳಲ್ಲಿ ಒಗ್ಗಟ್ಟು ಇಲ್ಲ. ಮೈತ್ರಿ ಮಾಡಿಕೊಂಡಿರುವವರೇ ಪರಸ್ಪರರ ಪಕ್ಷಕ್ಕೆ ಮತ ಹಾಕುವುದಿಲ್ಲ' ಎಂದು ಹೇಳಿದರು.

'ಡಿಎಂಕೆಯು ತಮಿಳುನಾಡು ಕಾಂಗ್ರೆಸ್‌ಗೆ ಕೋಟಿಗಟ್ಟಲೆ ಹಣ ನೀಡಿ ತನ್ನ ಜೇಬಿನಲ್ಲಿ ಇಟ್ಟುಕೊಂಡಿದೆ. 'ನಿಜವಾದ ಕಾಂಗ್ರೆಸ್' ಟಿವಿಕೆ ಪರ ಇದೆ' ಎಂದರು.

ಚುನಾವಣಾ ಪ್ರಚಾರಕ್ಕಿಳಿದ ವಿಜಯ್ ಕಟೌಟ್

ಚೆನ್ನೈ: ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಎಲ್ಲ ಅಭ್ಯರ್ಥಿಗಳಿಗೂ ತಮ್ಮ ನಾಯಕ, ಜನಪ್ರಿಯ ನಟ ವಿಜಯ್ ಅವರು ಖುದ್ದು ಪ್ರಚಾರ ಮಾಡಬೇಕೆಂಬ ಬಯಕೆ ಇರುವುದು ಸಹಜ.

ಆದರೆ, ತಮಿಳುನಾಡು ಪೊಲೀಸರು ವಿಧಿಸಿರುವ ಕಟ್ಟುನಿಟ್ಟಿನ ಷರತ್ತಿನಿಂದಾಗಿ ವಿಜಯ್ ಅವರು ಎಲ್ಲ ಕ್ಷೇತ್ರಗಳಿಗೂ ಹೋಗಿ ಪ್ರಚಾರ ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ತಿರುಚಿರಾಪಳ್ಳಿಯ ತಿರುವೇರಂಬೂರು ಕ್ಷೇತ್ರದ ಅಭ್ಯರ್ಥಿ ನವಲ್ಪಟ್ಟು ವಿಜಿ ಅವರು ತಮ್ಮ ಪರವಾಗಿ ವಿಜಯ್ ಅವರೇ ಬಂದು ಪ್ರಚಾರ ಮಾಡುತ್ತಿದ್ದಾರೆ ಎಂದು ತೋರಿಸಲು ಹೊಸ ಮಾರ್ಗವನ್ನು ಕಂಡುಕೊಂಡಿದ್ದಾರೆ.

ಕೈಮುಗಿದು ನಿಂತಿರುವ ವಿಜಯ್ ಅವರ ಪೂರ್ಣ ಪ್ರಮಾಣದ ಕಟೌಟ್‌ನೊಂದಿಗೆ ವಿಜಿ ಅವರು ಪ್ರಚಾರ ಮಾಡುತ್ತಿದ್ದಾರೆ. ತಮ್ಮ ಪ್ರಚಾರದ ವಾಹನದಲ್ಲಿ ಪ್ರಮುಖವಾಗಿ ಕಾಣಿಸುವಂತೆ ಕಟೌಟ್ ನಿಲ್ಲಿಸಿ ಅದಕ್ಕೆ ಟಿವಿಕೆ ಪಕ್ಷದ ಕೆಂಪು–ಹಳದಿ ಧ್ವಜವನ್ನು ಹೊದಿಸಿದ್ದಾರೆ.

15 ದಿನಗಳ ಹಿಂದೆ ಡಿಎಂಕೆ ತೊರೆದು ಟಿವಿಕೆ ಸೇರಿದ್ದ ವಿಜಿ ಅವರಿಗೆ ಟಿಕೆಟ್ ನೀಡಲಾಗಿತ್ತು. ಅವರು ಶಿಕ್ಷಣ ಸಚಿವ ಅನ್ಬಿಲ್ ಮಹೇಶ್ ಪೊಯ್ಯಮೊಳಿ ಅವರ ವಿರುದ್ಧ ಸ್ಪರ್ಧಿಸಿದ್ದಾರೆ.

ವಿಜಿ ಮಾತ್ರವಲ್ಲದೆ, ತಿರುಚಿರಾಪಳ್ಳಿ ಜಿಲ್ಲೆಯ ಟಿವಿಕೆ ಅಭ್ಯರ್ಥಿಗಳು ಏಪ್ರಿಲ್ 2ರಂದು ನಗರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ತಮ್ಮನ್ನು ವಿಜಯ್ ಅವರೇ ಪರಿಚಯಿಸುತ್ತಾರೆ ಎಂದು ಆಶಿಸಿದ್ದರು. ಆದರೆ, ವಿಜಯ್ ಅವರು ತಮ್ಮ ಪ್ರಚಾರ ವಾಹನದ ಮೇಲೆ ಏಕಾಂಗಿಯಾಗಿ ಕಾಣಿಸಿಕೊಂಡು ಸುಮಾರು 15 ನಿಮಿಷ ಜನರೊಂದಿಗೆ ಮಾತನಾಡಿದ್ದರು.

ಚುನಾವಣಾ ಪ್ರಚಾರದ ವೇಳೆ ವಿಜಯ್ ಅವರ ಉಪಸ್ಥಿತಿ ಇರುವಂತೆ ತೋರಿಸುವ ಉದ್ದೇಶದಿಂದ ಕಟೌಟ್‌ಗಳ ಮೊರೆಹೋಗಿದ್ದಾರೆ. ಆ ಮೂಲಕ ವಿಜಯ್ ಅವರ ಹೆಸರಿನಲ್ಲಿ ಮತ ಯಾಚಿಸುತ್ತಿರುವುದು ಕಂಡುಬರುತ್ತಿದೆ.

ವಿಜಯ್ ಅವರ ಕಟೌಟ್ ಬಳಸಿ ಮತ ಕೇಳುತ್ತಿರುವ ವಿಜಿ ಅವರ ವಿಡಿಯೊ ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಸಿ.ಎಸ್ ವರ್ಗ

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯ ಕಾರ್ಯದರ್ಶಿ ಎನ್. ಮುರುಗಾನಂದಂ ಅವರನ್ನು ವರ್ಗಾವಣೆ ಮಾಡಿರುವ ಭಾರತೀಯ ಚುನಾವಣಾ ಆಯೋಗವು, ಆ ಹುದ್ದೆಗೆ ಹಿರಿಯ ಐಎಎಸ್ ಅಧಿಕಾರಿ ಎಂ. ಸಾಯಿ ಕುಮಾರ್ ಅವರನ್ನು ನೇಮಿಸಿದೆ.

ಆಯೋಗದ ಈ ಕ್ರಮವನ್ನು ತೀವ್ರವಾಗಿ ಖಂಡಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, 'ಇದು ಏಕಪಕ್ಷೀಯ ಮತ್ತು ರಾಜಕೀಯ ಪ್ರೇರಿತ' ಎಂದು ಕಿಡಿಕಾರಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಭವಾನಿಪುರ ಕ್ಷೇತ್ರದ ಟಿಎಂಸಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲು ಪಕ್ಷದ ಕಾರ್ಯಕರ್ತರ ಜತೆಗೆ ಬುಧವಾರ ಮೆರವಣಿಗೆಯಲ್ಲಿ ಸಾಗಿದರು –ಪಿಟಿಐ ಚಿತ್ರ

ಟಿಎಂಸಿ– ಆಯೋಗ ವಾಗ್ವಾದ

ಒಂದನೇ ಪುಟದಿಂದ...

ಅದಕ್ಕೆ ಅವರು, ಸಭೆಯಿಂದ ತೊಲಗಿ ಎಂದು ನಮ್ಮ ವಿರುದ್ಧ ಆಕ್ರೋಶ ಹೊರಹಾಕಿದರು' ಎಂದು ಡೆರಿಕ್ ಓಬ್ರಯಾನ್ ವಿವರಿಸಿದರು.

'ಆಯೋಗದ ಜತೆಗೆ ಸುಮಾರು ಎಂಟರಿಂದ ಒಂಬತ್ತು ಸಭೆಗಳಲ್ಲಿ ಭಾಗ ವಹಿಸಿದ್ದೇವೆ. ಯಾವ ಸಭೆಯಲ್ಲೂ ಸಿಇಸಿ ಹೊರತುಪಡಿಸಿ ಇತರ ಚುನಾವಣಾ ಆಯುಕ್ತರು ಮಾತನಾಡಿಲ್ಲ. ಅವರಿಗೆ ಮಾತನಾಡಲೂ ಅವಕಾಶ ನೀಡಲಾಗುತ್ತಿಲ್ಲ' ಎಂದು ಆರೋಪಿಸಿದರು.

'ಸಿಇಸಿ ಜತೆಗೆ ಸುಮಾರು ಏಳು ನಿಮಿಷಗಳ ಸಭೆ ನಡೆಯಿತು. ಸಿಇಸಿ ಪದಚ್ಯುತಿಗೆ ಸಂಸತ್ತಿನ ಇತಿಹಾಸದಲ್ಲಿಯೇ ಮೊದಲ ಬಾರಿಗೆ ನೋಟಿಸ್ ಸಲ್ಲಿಕೆಯಾಗಿದೆ. ಇದಕ್ಕಾಗಿ, ಸಭೆಯ ಕೊನೆಯಲ್ಲಿ ನಮ್ಮ ನಿಯೋಗದ ಸದಸ್ಯರೊಬ್ಬರು ಜ್ಞಾನೇಶ್ ಕುಮಾರ್ ಅವರನ್ನು ಅಭಿನಂದಿಸಿದರು' ಎಂದು ಡೆರಿಕ್ ವ್ಯಂಗ್ಯವಾಡಿದರು.

'ಸಭ್ಯತೆ ಕಾಯ್ದುಕೊಳ್ಳದ ಟಿಎಂಸಿ ನಾಯಕರು': ಟಿಎಂಸಿ ಆರೋಪವನ್ನು ಅಲ್ಲಗಳೆದಿರುವ ಚುನಾವಣಾ ಆಯೋಗವು, 'ಟಿಎಂಸಿ ನಾಯಕರು ಸಭೆಯಲ್ಲಿ ಸಭ್ಯತೆಯನ್ನು ಕಾಯ್ದುಕೊಳ್ಳದೆ ಜೋರಾಗಿ ಕೂಗಾಡಿದರು' ಎಂದು ಹೇಳಿದೆ.

'ಡೆರಿಕ್ ಅವರು, ಸಿಇಸಿ ಅವರಿಗೆ 'ನೀವು ಮಾತನಾಡಬೇಡಿ, ಉಳಿದವರು ಮಾತನಾಡಲಿ' ಎಂದು ಏರಿದ ಧ್ವನಿಯಲ್ಲಿ ಹೇಳಿದರು. ಸಭ್ಯತೆ ಕಾಯ್ದುಕೊಳ್ಳುವಂತೆ ಮಾಡಿದ ಮನವಿಗೂ ಸ್ಪಂದಿಸಲಿಲ್ಲ' ಎಂದು ಆಯೋಗದ ಮೂಲಗಳು ತಿಳಿಸಿವೆ.

ಸಭೆ ಬಳಿಕ 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿರುವ ಆಯೋಗ, 'ಟಿಎಂಸಿ ನಿಯೋಗದ ಜತೆ ಮಾತುಕತೆ ನಡೆಸಲಾಯಿತು. ಭಯಮುಕ್ತ, ಹಿಂಸಾಚಾರಮುಕ್ತ, ಬೆದರಿಕೆಮುಕ್ತ, ಪ್ರಚೋದನೆಮುಕ್ತ ಮತ್ತು ಚುನಾವಣಾ ದುಷ್ಕೃತ್ಯಗಳಿಗೆ ಅವಕಾಶ ಇಲ್ಲದಂತೆ ಚುನಾವಣೆ ನಡೆಸುವುದಾಗಿ ನಿಯೋಗಕ್ಕೆ ತಿಳಿಸಲಾಗಿದೆ' ಎಂದು ಮಾಹಿತಿ ನೀಡಿದೆ.

ಇದಕ್ಕೆ ಪ್ರತಿಯಾಗಿ ಟಿಎಂಸಿ ಸಹ 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿದ್ದು, 'ಚುನಾವಣೆಗಳು ದೆಹಲಿಯ ನಿಯಂತ್ರಣದಿಂದ ಮುಕ್ತವಾಗಿರಬೇಕು, ರಾಜಕೀಯ ಪಕ್ಷಪಾತದಿಂದ ಮುಕ್ತವಾಗಿರಬೇಕು, ದ್ವಿಮುಖ ನೀತಿಯಿಂದ ಮುಕ್ತವಾಗಿರಬೇಕು ಮತ್ತು ಯಾರನ್ನೂ ಗುರಿಯಾಗಿಸಿ ಕಿರುಕುಳ ನೀಡಬಾರದು ಎಂಬುದನ್ನು ನಿರೀಕ್ಷಿಸುತ್ತೇವೆ' ಎಂದಿದೆ.

'ಅನಕ್ಷರಸ್ಥರು' ಹೇಳಿಕೆಗೆ ವಿಷಾದ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಗುಜರಾತ್‌ನ ಜನರು 'ಅನಕ್ಷರಸ್ಥರು' ಎಂಬ ಹೇಳಿಕೆ ನೀಡಿದ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ವಿಷಾದ ವ್ಯಕ್ತಪಡಿಸಿದ್ದಾರೆ. 'ಆ ರಾಜ್ಯದ ಜನರನ್ನು ಎಂದಿಗೂ ಅತ್ಯಂತ ಗೌರವದಿಂದ ಕಾಣುತ್ತೇನೆ' ಎಂದು ಹೇಳಿದ್ದಾರೆ.

'ಕೇರಳದಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ನಾನು ನೀಡಿದ ಹೇಳಿಕೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದ ಮೇಲೂ, ಉದ್ದೇಶಪೂರ್ವಕವಾಗಿ ತಪ್ಪಾಗಿ ಅರ್ಥೈಸಲಾಗುತ್ತಿದೆ. ಗುಜರಾತ್ ಜನರ ಭಾವನೆಗೆ ಧಕ್ಕೆ ತರುವುದು ನನ್ನ ಉದ್ದೇಶವಾಗಿರಲಿಲ್ಲ' ಎಂದು 'ಎಕ್ಸ್‌'ನಲ್ಲಿ ಹೇಳಿದ್ದಾರೆ.

ಭಾನುವಾರ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ್ದ ಖರ್ಗೆ ಅವರು, 'ಗುಜರಾತ್ ಜನರು ಅನಕ್ಷರಸ್ಥರು, ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮೂರ್ಖರನ್ನಾಗಿಸಿದ್ದಾರೆ. ಆದರೆ, ನರೇಂದ್ರ ಮೋದಿ ಅಥವಾ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇರಳದ ಜನರನ್ನು ಮೂರ್ಖರನ್ನಾಗಿಸಲು ಸಾಧ್ಯವಿಲ್ಲ. ಅವರು ಬುದ್ಧಿವಂತರು ಮತ್ತು ಶಿಕ್ಷಿತರು' ಎಂದು ಹೇಳಿದ್ದರು. ಈ ಬೆನ್ನಲ್ಲೇ ಖರ್ಗೆ ಅವರು ಕ್ಷಮೆಯಾಚಿಸಬೇಕು ಎಂದು ಬಿಜೆಪಿ ಆಗ್ರಹಿಸಿತ್ತು.

ಮಾಜಿ ಸಚಿವ ರವಿಶಂಕರ್ ಪ್ರಸಾದ್ ಅವರು, 'ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರು ಖರ್ಗೆ ಅವರ ಹೇಳಿಕೆ ಯನ್ನು ಒಪ್ಪಿಕೊಳ್ಳುತ್ತಾರೆಯೇ ಎಂದು ಸ್ಪಷ್ಟನೆ ನೀಡಬೇಕು' ಎಂದು ಒತ್ತಾಯಿಸಿದ್ದರು.

ಅಭ್ಯರ್ಥಿಗಳ ಭವಿಷ್ಯ ನಿರ್ಧರಿಸಲಿರುವ ಮತದಾರರು

ಕೇರಳ, ಅಸ್ಸಾಂ, ಪುದುಚೆರಿ: ಇಂದು ಮತದಾನ

ರಾಜ್ಯ	ಒಟ್ಟು ಮತದಾರರು	ಮಹಿಳೆಯರು	ಪುರುಷರು	ಲಿಂಗತ್ವ ಅಲ್ಪಸಂಖ್ಯಾತರು	ಒಟ್ಟು ಕ್ಷೇತ್ರಗಳು	ಅಭ್ಯರ್ಥಿಗಳು
ಕೇರಳ	2.71 ಕೋಟಿ	1.39ಕೋಟಿ	1.32 ಕೋಟಿ	273	140	883
ಅಸ್ಸಾಂ	2.50ಕೋಟಿ	1.25ಕೋಟಿ	1.25 ಕೋಟಿ	318	126	722
ಪುದುಚೆರಿ	9.50 ಲಕ್ಷ	4.46ಲಕ್ಷ	5.03 ಲಕ್ಷ	139	30	294

ನವದೆಹಲಿ (ಪಿಟಿಐ): ಕೇರಳ, ಅಸ್ಸಾಂ ಹಾಗೂ ಪುದುಚೆರಿಯಲ್ಲಿ ಏಪ್ರಿಲ್ 9ರಂದು (ಗುರುವಾರ) ಮತದಾನ ನಡೆಯಲಿದ್ದು, ಮತದಾರರು ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ.

ಎರಡು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಬೆಳಿಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದೆ.

ಕೇರಳದಲ್ಲಿ 30,471 ಮತಗಟ್ಟೆಗಳಿದ್ದರೆ, ಅಸ್ಸಾಂನಲ್ಲಿ 31,486, ಪುದುಚೆರಿಯಲ್ಲಿ 1,099 ಮತಗಟ್ಟೆಗಳಿವೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಕಾಂಗ್ರೆಸ್, ಬಿಜೆಪಿ ಸೇರಿದಂತೆ ರಾಜಕೀಯ ಪಕ್ಷಗಳಿಗೆ ಈ ಚುನಾವಣೆಯು ಪ್ರತಿಷ್ಠೆಯ ಕಣವಾಗಿದ್ದು, ಒಂದು ತಿಂಗಳಿನಿಂದ ಅಬ್ಬರದ ಪ್ರಚಾರ ನಡೆಸಿವೆ.

ಅಂಚೆ ಮತದಾನಕ್ಕೆ ನೂತನ ಮಾರ್ಗಸೂಚಿ (ಕೋಲ್ಕತ್ತ ವರದಿ): ಅಂಚೆ ಮತದಾನ ಪ್ರಕ್ರಿಯೆಯನ್ನು ಬಲಗೊಳಿಸಲು ಚುನಾವಣಾ ಆಯೋಗ ನೂತನ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು, ಮತಗಟ್ಟೆಗಳಲ್ಲಿ ಕೇಂದ್ರೀಯ ಸಶಸ್ತ್ರ ಮೀಸಲು ಪೊಲೀಸ್ ಪಡೆ ಮತ್ತು ವೀಕ್ಷಕರ ನಿಯೋಜನೆಯನ್ನು ಅದು ಕಡ್ಡಾಯಗೊಳಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದರು.

ತಮಿಳುನಾಡಿನಲ್ಲಿ ಏ.23ರಂದು, ಪಶ್ಚಿಮಬಂಗಾಳದಲ್ಲಿ ಏ.23 ಮತ್ತು 29ರಂದು ಮತದಾನ ನಡೆಯಲಿದೆ.

ಕೂಚ್ ಬಿಹಾರ್: ವೀಕ್ಷಕರ ವಿರುದ್ಧ ಕ್ರಮ

ಪಶ್ಚಿಮ ಬಂಗಾಳದ ಕೂಚ್ ಬಿಹಾರ್ ದಕ್ಷಿಣ ಕ್ಷೇತ್ರದ ವೀಕ್ಷಕ ಅನುರಾಗ್ ಯಾದವ್ ಅವರನ್ನು ಚುನಾವಣಾ ಆಯೋಗ ಬುಧವಾರ ವೀಕ್ಷಕ ಹುದ್ದೆಯಿಂದ ತೆರವುಗೊಳಿಸಿದೆ.

ಅನುರಾಗ್ ಅವರಿಗೆ ಕ್ಷೇತ್ರದ ಮತಗಟ್ಟೆಗಳ ಸಂಖ್ಯೆಯ ಬಗ್ಗೆ ಸ್ಪಷ್ಟವಾಗಿ ತಿಳಿದಿಲ್ಲ ಎಂಬುದು ಕಂಡುಬಂದ ಬಳಿಕ ಆಯೋಗ ಈ ಕುರಿತು ಆದೇಶಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕ್ಷೇತ್ರದಲ್ಲಿ ಎಷ್ಟು ಮತಗಟ್ಟೆಗಳಿವೆ ಎಂದು ಸಭೆಯಲ್ಲಿ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರು ಕೇಳಿದಾಗ, ಅನುರಾಗ್ ಅವರು ಗೊಂದಲಕ್ಕೆ ಒಳಗಾದರು. ಮಾಹಿತಿ ನೀಡಲು ಕೆಲ ನಿಮಿಷ ತೆಗೆದುಕೊಂಡರು. ಇದಕ್ಕೆ ಅತೃಪ್ತಿ ವ್ಯಕ್ತಪಡಿಸಿದ ಸಿಇಸಿ, ಆ ವೀಕ್ಷಕರನ್ನು ಹುದ್ದೆಯಿಂದ ತೆಗೆಯುವಂತೆ ನಿರ್ದೇಶಿಸಿದರು' ಎಂದು ಮೂಲಗಳು ತಿಳಿಸಿವೆ.

ಮಮತಾ ನಾಮಪತ್ರ ಸಲ್ಲಿಕೆ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಭವಾನಿಪುರ ವಿಧಾನಸಭಾ ಕ್ಷೇತ್ರದಿಂದ ಬುಧವಾರ ನಾಮಪತ್ರ ಸಲ್ಲಿಸಿದರು.

ಮೆರವಣಿಗೆ ಮೂಲಕ ಚುನಾವಣಾ ಅಧಿಕಾರಿ ಕಚೇರಿಗೆ ಬಂದ ಮಮತಾ ಅವರು ಉಮೇದುವಾರಿಕೆ ಸಲ್ಲಿಸಿದರು. 2021ರಲ್ಲಿ ನಂದಿಗ್ರಾಮ ಕ್ಷೇತ್ರದಲ್ಲಿ ಸೋತ ಬಳಿಕ, ಭವಾನಿಪುರದಲ್ಲಿ ನಡೆದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಈಗ ಅದೇ ಕ್ಷೇತ್ರದಿಂದ ಮರು ಆಯ್ಕೆ ಬಯಸಿದ್ದಾರೆ.

ಸಹಸ್ರಾರು ಮಹಿಳಾ ಬೆಂಬಲಿಗರು ಮತ್ತು ಪಕ್ಷದ ಕಾರ್ಯಕರ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಮತಗಟ್ಟೆಯತ್ತ ಸಿಬ್ಬಂದಿ

ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ್

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ನಿಯೋಜಿತರಾಗಿರುವ ಸಿಬ್ಬಂದಿ ಬುಧವಾರ ವಿದ್ಯುನ್ಮಾನ ಮತಯಂತ್ರ, ಇತರೆ ಸಾಮಗ್ರಿ ಪಡೆದು ಮತಗಟ್ಟೆಗಳತ್ತ ಹೆಜ್ಜೆಹಾಕಿದರು

ಚುನಾವಣಾ ಆಯೋಗದ ಪಕ್ಷಪಾತ ಬಯಲು: ಸಿದ್ದರಾಮಯ್ಯ

ಬೆಂಗಳೂರು: 'ಬಿಜೆಪಿ ಅಥವಾ ಎನ್‌ಡಿಎ ಸರ್ಕಾರಗಳು ಏನು ಮಾಡಿದರೂ ಚುನಾವಣಾ ಆಯೋಗ ಕಣ್ಣು ಮುಚ್ಚಿಕೊಂಡಿರುತ್ತದೆ. ಆದರೆ, ಕರ್ನಾಟಕ ಸರ್ಕಾರ ವಿಧಾನಸಭಾ ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುತ್ತಿರುವಾಗ ಕ್ಯಾತೆ ತೆಗೆಯುತ್ತಿದೆ. ಈ ಇಬ್ಬಗೆ ನೀತಿಯು ಚುನಾವಣಾ ಆಯೋಗದ ಪಕ್ಷಪಾತವನ್ನು ಬಯಲು ಮಾಡಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉಪ ಚುನಾವಣೆ ಸಂದರ್ಭದಲ್ಲಿ ರಾಜ್ಯದ ಗ್ಯಾರಂಟಿ ಯೋಜನೆಗಳಡಿ ಬಿಡುಗಡೆಯಾಗಿರುವ ನಿಧಿಗಳ ವಿವರ ನೀಡುವಂತೆ ಕರ್ನಾಟಕ ಸರ್ಕಾರಕ್ಕೆ ಚುನಾವಣಾ ಆಯೋಗವು ಬರೆದಿದ್ದ ಪತ್ರವನ್ನು ಉಲ್ಲೇಖಿಸಿ ಅವರು 'ಎಕ್ಸ್' ಮಾಡಿದ್ದಾರೆ. 'ಚುನಾವಣಾ ಆಯೋಗದ ಇಂಥ ಗೊಡ್ಡು ಬೆದರಿಕೆಗಳಿಗೆ ಬಗ್ಗದೆ ಕೊಟ್ಟ ಭರವಸೆಗಳನ್ನು ಪೂರೈಸಲು ಸರ್ಕಾರ ಬದ್ಧವಾಗಿದೆ' ಎಂದಿದ್ದಾರೆ.

'ನಮ್ಮ ಗ್ಯಾರಂಟಿ ಯೋಜನೆಗಳನ್ನು ಗುರಿಯಾಗಿಸಿ ದಾಳಿ ಮಾಡುವುದು ಕೇವಲ ರಾಜಕೀಯ ಎಂದೆನಿಸುವುದಿಲ್ಲ. ಇದು ಬಡವರ, ಮಹಿಳೆಯರ ಮತ್ತು ಕರ್ನಾಟಕದ ವಿರುದ್ಧದ ಪರೋಕ್ಷ ದಾಳಿ' ಎಂದೂ ಹೇಳಿದ್ದಾರೆ.

'ಗ್ಯಾರಂಟಿ ವಿಚಾರವಾಗಿ ಆಯೋಗ ಅನುಸರಿಸುತ್ತಿರುವ ನೀತಿಯು ಅನುಮಾನಸ್ಪದವಾಗಿದೆ. ಇದು ನಿಷ್ಪಕ್ಷಪಾತ ನಡೆಯಲ್ಲ. ಮಹಾರಾಷ್ಟ್ರ ಮತ್ತು ಬಿಹಾರದಂತಹ ರಾಜ್ಯಗಳಲ್ಲಿ ಚುನಾವಣೆಗೂ ಮೊದಲು ನಗದು ವರ್ಗಾವಣೆ ಯೋಜನೆಗಳನ್ನು ಪ್ರಕಟಿಸಲಾಗಿದೆ. ಮತದಾರರಿಗೆ ನೇರ ವಾಗಿ ಯೋಜನೆಗಳ ಲಾಭವನ್ನು ವರ್ಗಾಯಿಸಲಾಗಿದೆ. ಅವೆಲ್ಲವೂ ಬಹಿರಂಗವಾಗಿ ನಡೆದಿವೆ. ಆದರೂ ಆಯೋಗ ಮೌನ ವಹಿಸಿತ್ತು' ಎಂದಿದ್ದಾರೆ.

ಪುದುಚೆರಿಯಲ್ಲಿ ಡ್ರೋನ್ ಕಣ್ಗಾವಲು

ಪುದುಚೆರಿ (ಪಿಟಿಐ): 'ಕೇಂದ್ರಾಡಳಿತ ಪ್ರದೇಶ ಪುದುಚೆರಿಯಲ್ಲಿ ಚುನಾವಣೆ ಮೇಲೆ ಡ್ರೋನ್‌ಗಳ ಮೂಲಕ ನಿಗಾ ಇಟ್ಟಿದ್ದು, ಈವರೆಗೆ ₹77.25 ಲಕ್ಷ ನಗದು ಮತ್ತು ₹68.50 ಲಕ್ಷ ಮೌಲ್ಯದ ಮದ್ಯ ಜಪ್ತಿ ಮಾಡಲಾಗಿದೆ' ಎಂದು ಮುಖ್ಯ ಚುನಾವಣಾಧಿಕಾರಿ ಪಿ. ಜವಾಹರ್ ಬುಧವಾರ ತಿಳಿಸಿದ್ದಾರೆ.

ಎಐಎನ್‌ಆರ್‌ಸಿ, ಬಿಜೆಪಿ, ಎಐಎಡಿಎಂಕೆ ಮತ್ತು ಎಲ್‌ಜೆಕೆ ಮೈತ್ರಿಯ ಎನ್‌ಡಿಎ ಮತ್ತೆ ಅಧಿಕಾರಕ್ಕೇರುವ ತವಕದಲ್ಲಿದೆ. ಕಾಂಗ್ರೆಸ್, ಡಿಎಂಕೆ, ವಿಸಿಕೆ ಪಕ್ಷಗಳ ಇಂಡಿಯಾ ಮೈತ್ರಿಕೂಟ ಅಧಿಕಾರ ಕಸಿಯುವ ಹೋರಾಟ ನಡೆಸಿದೆ. ಈ ಬಾರಿ ನಟ ವಿಜಯ್ ಅವರ ಟಿವಿಕೆ ಮೂರನೇ ಶಕ್ತಿಯಾಗಿ ಕಣದಲ್ಲಿದೆ.

ಬಿಜೆಪಿಯಿಂದ ಆಮಿಷ: ಆರೋಪ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಬಿಜೆಪಿಯು ಮತದಾರರಿಗೆ ಹಣದ ಆಮಿಷ ವೊಡ್ಡುತ್ತಿದೆ ಎಂದು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹಾಗೂ ಸಿಪಿಎಂ ಸಾರಥ್ಯದ ಎಲ್‌ಡಿಎಫ್ ಬುಧವಾರ ಆರೋಪಿಸಿವೆ.

ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರು ಮತದಾರರಿಗೆ ಹಣ ಹಂಚುತ್ತಿರುವ ಹಾಗೂ ಸೀರೆ ವಿತರಿಸುತ್ತಿರುವ ವಿಡಿಯೊ, ಛಾಯಾಚಿತ್ರಗಳನ್ನು ಯುಡಿಎಫ್ ಬಿಡುಗಡೆ ಮಾಡಿದೆ.

ತ್ರಿಶ್ಶೂರ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯು ಮತದಾರರಿಗೆ ದಿನಸಿ ಕಿಟ್‌ಗಳನ್ನು ವಿತರಿಸುತ್ತಿದೆ ಎಂದು ಎಲ್‌ಡಿಎಫ್ ದೂರಿದೆ.

ದೂರು ಕೇಳಿಬಂದ ಬೆನ್ನಿಗೆ ಚುನಾವಣಾ ಅಧಿಕಾರಿಗಳು ತನಿಖೆ ಕೈಗೊಂಡಿದ್ದಾರೆ.

ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಸುರೇಂದ್ರನ್ ಅವರು ಈ ಆರೋಪವನ್ನು ನಿರಾಕರಿಸಿದ್ದು, ತಮ್ಮ ವಿರುದ್ಧ ಪಿತೂರಿ ನಡೆದಿದೆ ಎಂದು ದೂರಿದ್ದಾರೆ.

ಪಾಲಕ್ಕಾಡ್ ಹಾಗೂ ತ್ರಿಶ್ಶೂರ್ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ತೀವ್ರ ಪೈಪೋಟಿಯ ಸ್ಪರ್ಧೆ ನಡೆಸಿದೆ.

'ರಾಜಕೀಯ ಜಾಹೀರಾತು ತೆಗೆಯಿರಿ'

ತಿರುವನಂತಪುರ (ಪಿಟಿಐ): ಕೇರಳ ವಿಧಾನಸಭೆಗೆ ಏಪ್ರಿಲ್ 9ಕ್ಕೆ ಮತದಾನ ನಡೆಯಲಿದ್ದು, ಅದಕ್ಕೂ ಒಂದು ದಿನ ಮುಂಚೆ ಮಾಧ್ಯಮಗಳು ಮತ್ತು ಆನ್‌ಲೈನ್ ವೇದಿಕೆಗಳಲ್ಲಿ ಬರುತ್ತಿರುವ ರಾಜಕೀಯ ಜಾಹೀರಾತುಗಳನ್ನು ತಕ್ಷಣವೇ ತೆಗೆದುಹಾಕುವಂತೆ ಚುನಾವಣಾ ಆಯೋಗ ಬುಧವಾರ ಸೂಚಿಸಿದೆ.

ಚುನಾವಣಾ ಆಯೋಗದ ಕೇರಳ ಕಚೇರಿಯು, ಮಾಧ್ಯಮಗಳು ಮತ್ತು ಪತ್ರಕರ್ತರನ್ನು ಒಳಗೊಂಡ ಅಧಿಕೃತ ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಈ ಸೂಚನೆಯನ್ನು ಹಾಕಿದೆ.

'ಮಾಧ್ಯಮಗಳು ಮತ್ತು ಆನ್‌ಲೈನ್ ವೇದಿಕೆಗಳಲ್ಲಿನ ಜಾಹೀರಾತುಗಳು ಪ್ರಸಾರವಾಗುತ್ತಿವೆ. ಬಹಿರಂಗ ಪ್ರಚಾರ ಅಂತ್ಯವಾದ ನಂತರ ಇದನ್ನು ಅನುಮತಿಸಲಾಗುವುದಿಲ್ಲ. ಅವುಗಳನ್ನು ತಕ್ಷಣವೇ ತೆಗೆದುಹಾಕುವಂತೆ ವಿನಂತಿಸಲಾಗಿದೆ' ಎಂದು ಸಂದೇಶವು ಹೇಳಿದೆ.

ಶಬರಿಮಲೆ ಮಹಿಳೆಯರ ಪ್ರವೇಶ ಪ್ರಕರಣ: ಸಂವಿಧಾನ ಪೀಠದಿಂದ ವಿಚಾರಣೆ

'ಮೂಢನಂಬಿಕೆ ನಿರ್ಧರಿಸುವ ಹಕ್ಕಿದೆ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಯಾವುದೇ ಧಾರ್ಮಿಕ ಆಚರಣೆಯು ಮೂಢನಂಬಿಕೆಯೋ ಅಥವಾ ಅಲ್ಲವೋ ಎಂಬುದನ್ನು ಪರಿಗಣಿಸುವ ಹಕ್ಕು ಮತ್ತು ನ್ಯಾಯವ್ಯಾಪ್ತಿಯನ್ನು ತಾನು ಹೊಂದಿರುವುದಾಗಿ ಹೇಳಿದ ಸುಪ್ರೀಂ ಕೋರ್ಟ್, 'ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಾಲಯದ ಭಕ್ತರಲ್ಲದವರು ದೇಗುಲದ ಪದ್ಧತಿಯನ್ನು ಪ್ರಶ್ನಿಸಿ ಪಿಐಎಲ್ ಸಲ್ಲಿಸಬಹುದೇ' ಎಂದು ಬುಧವಾರ ಪ್ರಶ್ನಿಸಿದೆ.

ಶಬರಿಮಲೆ ದೇವಸ್ಥಾನ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಮತ್ತು ಬಹು ಧರ್ಮೀಯರು ಆಚರಿಸುವ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠ ಈ ಹೇಳಿಕೆ ನೀಡಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಎಂ.ಎಂ.ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಆಗಸ್ಟೀನ್ ಜಾರ್ಜ್ ಮಸೀಹ್, ಪ್ರಸನ್ನ ಬಿ. ವರಾಳೆ, ಆರ್. ಮಹದೇವನ್ ಮತ್ತು ಜಾಯ್‌ಮಾಲ್ಯಾ ಬಾಗ್ಚಿ ಅವರು ಈ ಪೀಠದಲ್ಲಿದ್ದಾರೆ.

ಕೇಂದ್ರದ ಪರ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಯಾವುದೇ ಆಚರಣೆಯನ್ನು ಮೂಢನಂಬಿಕೆ ಎಂದು ಊಹಿಸಿದರೂ, ಅದು ಮೂಢನಂಬಿಕೆ ಎಂದು ನಿರ್ಧರಿಸುವುದು ನ್ಯಾಯಾಲಯದ ಕೆಲಸವಲ್ಲ. ಅದು ಶಾಸಕಾಂಗದ ಕೆಲಸ. ಶಾಸಕಾಂಗವು ಮಧ್ಯಪ್ರವೇಶಿಸಿ ಸುಧಾರಣೆಗಾಗಿ ಕಾನೂನು ರೂಪಿಸುತ್ತದೆ' ಎಂದು ಪ್ರತಿಪಾದಿಸಿದರು.

'ನಿರ್ಧರಿಸುವ ಹಕ್ಕಿದೆ': ಸರ್ಕಾರದ ಈ ವಾದವನ್ನು ಒಪ್ಪದ ಪೀಠವು, ಮೂಢನಂಬಿಕೆಯನ್ನು ನಿರ್ಧರಿಸುವ ಹಕ್ಕು ಮತ್ತು ನ್ಯಾಯವ್ಯಾಪ್ತಿಯನ್ನು ನ್ಯಾಯಾಲಯ ಹೊಂದಿದೆ. ಆನಂತರ ಏನು ಮಾಡಬೇಕು ಎಂಬುದನ್ನು ಶಾಸಕಾಂಗ ತೀರ್ಮಾನಿಸಬೇಕು. ಆದರೆ, ಶಾಸಕಾಂಗದ ನಿರ್ಧಾರವೇ ಕೊನೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಪೀಠ ತಿಳಿಸಿತು.

ತತ್ತ್ವಶಾಸ್ತ್ರದ ಮಸೂರದಿಂದ ಗಮನಿಸಬೇಕು: 'ಅಗತ್ಯ ಧಾರ್ಮಿಕ ಆಚರಣೆ ಯಾವುದು ಎಂಬುದನ್ನು ನಿರ್ಧರಿಸುವಾಗ ನ್ಯಾಯಾಲಯವು ಆ ನಿರ್ದಿಷ್ಟ ಧರ್ಮದ ತತ್ತ್ವಶಾಸ್ತ್ರದ ಮಸೂರದ ಮೂಲಕ ನೋಡಬೇಕು' ಎಂದು ನ್ಯಾ. ನಾಗರತ್ನ ಅವರು ಅಭಿಪ್ರಾಯಪಟ್ಟರು.

'ಭಕ್ತರಲ್ಲದವರು ಪಿಐಎಲ್ ಸಲ್ಲಿಸಬಹುದೇ?'

ನಿರ್ದಿಷ್ಟ ಧಾರ್ಮಿಕ ಪಂಗಡ ಅಥವಾ ಧಾರ್ಮಿಕ ಗುಂಪಿಗೆ ಸೇರದ ವ್ಯಕ್ತಿಯು ಆ ಧಾರ್ಮಿಕ ಪಂಗಡ ಅಥವಾ ಗುಂಪಿನ ಆಚರಣೆಯನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ಮೂಲಕ ಪ್ರಶ್ನಿಸಬಹುದೇ ಎಂದು ಸಂವಿಧಾನ ಪೀಠ ಇದೇ ವೇಳೆ ಪ್ರಶ್ನಿಸಿತು.

ವಿಚಾರಣೆಯ ಆರಂಭದಲ್ಲಿ ನ್ಯಾಯಮೂರ್ತಿ ನಾಗರತ್ನ ಅವರು, 'ಶಬರಿಮಲೆ ಪ್ರಕರಣದಲ್ಲಿ ಮೂಲ ಅರ್ಜಿದಾರರು ಭಕ್ತರಲ್ಲ ಎಂಬುದು ತಿಳಿದುಬರುತ್ತದೆ. ಅಂದರೆ ಯಾವುದೇ ಭಕ್ತರು ಈ ವಿಷಯದಲ್ಲಿ ನ್ಯಾಯಾಲಯವನ್ನು ಸಂಪರ್ಕಿಸಿಲ್ಲ. ಹಾಗಾದರೆ ಈ ದೇಗುಲದ ಆಚರಣೆಯನ್ನು ಪ್ರಶ್ನಿಸುತ್ತಿರುವ ರಿಟ್ ಅರ್ಜಿದಾರರು ಯಾರು?' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಕೇಳಿದರು.

ಇದರ ಮೂಲ ಅರ್ಜಿದಾರರು 'ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಷನ್' ಎಂದು ಮೆಹ್ತಾ ಉತ್ತರಿಸಿದರು.

'ಹಾಗಾದರೆ ಅವರು ಭಕ್ತರಲ್ಲ. ಈ ವಿಷಯದಲ್ಲಿ ನಾವು ಸ್ಪಷ್ಟವಾಗಿರಬೇಕು. ಅಯ್ಯಪ್ಪ ಸ್ವಾಮಿಯ ಭಕ್ತರಲ್ಲದವರು, ಈ ದೇಗುಲದ ಬಗ್ಗೆ ಕಾಳಜಿಯಿಲ್ಲದವರು ಅಲ್ಲಿನ ಆಚರಣೆಯನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿದರೆ ನ್ಯಾಯಾಲಯ ಅದನ್ನು ಸ್ವೀಕರಿಸಬಹುದೇ?' ಎಂದು ನ್ಯಾಯಮೂರ್ತಿ ನಾಗರತ್ನ ಅವರು ಕೇಳಿದರು.

ಇದೇ ಪ್ರಶ್ನೆಯನ್ನು ಒಂಬತ್ತು ನ್ಯಾಯಮೂರ್ತಿಗಳ ಪೀಠದ ಮುಂದೆ ಉಲ್ಲೇಖಿಸಲಾಗಿದೆ ಎಂದ ಮೆಹ್ತಾ ಅವರು, 'ಮಸೀದಿಗಳಲ್ಲಿ ಮುಸ್ಲಿಂ ಮಹಿಳೆಯರ ಪ್ರವೇಶವನ್ನು ಕೋರಿ ಇತರ ಧರ್ಮೀಯರು ರಿಟ್ ಅರ್ಜಿ ಸಲ್ಲಿಸಬಹುದೇ' ಎಂದು ಅವರು ಪೀಠವನ್ನು ಕೇಳಿದರು.

ಹಿರಿಯ ವಕೀಲ ರಾಜೀವ್ ಧವನ್, 'ನ್ಯಾಯಾಲಯವನ್ನು ಸಂಪರ್ಕಿಸಲು ಹಿಂಜರಿಯುತ್ತಿರುವ ಹಿಂದೂ ಮಹಿಳೆಯರ ಪರವಾಗಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ' ಎಂದು ಹೇಳಿದರು.

'ಸುಪ್ರೀಂ' ಎರಡು ತೀರ್ಪುಗಳು ಒಳ್ಳೆಯ ಕಾನೂನಲ್ಲ: ಕೇಂದ್ರ

ನವದೆಹಲಿ (ಪಿಟಿಐ): 'ವ್ಯಭಿಚಾರ ಮತ್ತು ಸಲಿಂಗಕಾಮಿಗಳ ಒಪ್ಪಿತ ಸಂಬಂಧ ಅಪರಾಧವಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ಎರಡು ಮಹತ್ವದ ತೀರ್ಪುಗಳು ಒಳ್ಳೆಯ ಕಾನೂನುಗಳಲ್ಲ' ಎಂದು ಕೇಂದ್ರ ಸರ್ಕಾರ ಹೇಳಿದೆ.

'ಈ ತೀರ್ಪುಗಳು ಸಾಂವಿಧಾನಿಕ ನೈತಿಕತೆಯ ವ್ಯಕ್ತಿನಿಷ್ಠ ಅಭಿಪ್ರಾಯವನ್ನು ಆಧರಿಸಿದ್ದಾಗಿವೆ. ಹಾಗಾಗಿ, ಇವನ್ನು ಒಳ್ಳೆಯ ಕಾನೂನುಗಳಲ್ಲ ಎಂದು ಘೋಷಿಸಬೇಕು' ಎಂದು ಕೇಂದ್ರ ಸರ್ಕಾರ ಮನವಿ ಮಾಡಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಎದುರು ಕೇಂದ್ರ ಈ ಮನವಿ ಸಲ್ಲಿಸಿದೆ.

'ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ'ಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಒಂಬತ್ತು ಪ್ರಶ್ನೆಗಳನ್ನು ರೂಪಿಸಿದೆ. ಸಂವಿಧಾನದ 25 ಮತ್ತು 26ನೇ ವಿಧಿಯಲ್ಲಿನ ನೈತಿಕತೆ ಎಂಬ ಪದದ ವ್ಯಾಪ್ತಿ ಏನು, ಇದು ಸಾಂವಿಧಾನಿಕ ನೈತಿಕತೆಯನ್ನು ಒಳಗೊಳ್ಳುವುದೇ' ಎಂದು ಕೇಂದ್ರಕ್ಕೆ ಪ್ರಶ್ನಿಸಿದೆ.

'ಸಾಂವಿಧಾನಿಕ ನೈತಿಕತೆ ಎನ್ನುವುದು ಒಂದು ಭಾವನೆಯಾಗಿದೆ. ಈ ವ್ಯಕ್ತಿನಿಷ್ಠ ಪರಿಕಲ್ಪನೆಯನ್ನು ನ್ಯಾಯಾಂಗವು ಶಾಸನ ಪರಿಶೀಲನೆಗೆ ಬಳಸಬಾರದು' ಎಂದು ಕೇಂದ್ರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ಮನವಿ ಮಾಡಿದರು.

ಅಭಿಮಾನಿಗಳಿಗೆ ನಟ ರಜನಿಕಾಂತ್ ಸಲಹೆ

'ತಮ್ಮ ಸುರಕ್ಷತೆಯೇ ಆದ್ಯತೆಯಾಗಲಿ'

ಚೆನ್ನೈ (ಪಿಟಿಐ): 'ಅಭಿಮಾನಿಗಳಿಗೆ ತಮ್ಮ ಸುರಕ್ಷತೆಯೇ ಆದ್ಯತೆಯಾಗಿರಬೇಕು. ಅಭಿಮಾನದಿಂದಾಗುವ ತೊಂದರೆಗಳನ್ನು ತಾವೇ ಎದುರಿಸಬೇಕು ಎಂಬುದನ್ನು ಮರೆಯಬಾರದು' ಎಂದು ನಟ ರಜನಿಕಾಂತ್ ಅವರು ಸಲಹೆ ನೀಡಿದರು.



ರಜನಿಕಾಂತ್

ಚೆನ್ನೈ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯುವಜನರು ಶಿಕ್ಷಣ ಮತ್ತು ದೈಹಿಕ ಆರೋಗ್ಯಕ್ಕೆ ಆದ್ಯತೆ ನೀಡಬೇಕು' ಎಂದು ಮನವಿ ಮಾಡಿದರು.

ಚುನಾವಣಾ ರ‍್ಯಾಲಿ ವೇಳೆ ನಟ ವಿಜಯ್ ಅವರನ್ನು ನೋಡಲು ಅಭಿಮಾನಿಗಳು ನೂಕುನುಗ್ಗಲು ಮಾಡುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಅಭಿಮಾನಿಗಳು ಎಚ್ಚರದಿಂದ ಇರಬೇಕು. ವಿದ್ಯಾರ್ಥಿ ಜೀವನವೂ ಮಹತ್ವದಾಗಿದ್ದು, ಆ ಸಮಯ ವ್ಯರ್ಥ ಮಾಡಿಕೊಂಡರೆ ಜೀವನ ಪೂರ್ತಿ ಕಷ್ಟಪಡಬೇಕಾಗುತ್ತದೆ. ನಿಮ್ಮ ಸಂಪೂರ್ಣ ಆಲೋಚನೆ ಮತ್ತು ಗಮನ ಶಿಕ್ಷಣದ ಮೇಲೆ ಇರಬೇಕು' ಎಂದು ಹೇಳಿದರು.

'ಮಾದಕ ವಸ್ತುಗಳ ದಾಸರಾಗಬೇಡಿ. ಇದು ನಿಮ್ಮ ಮತ್ತು ನಿಮ್ಮ ಕುಟುಂಬವನ್ನು ನರಕಕ್ಕೆ ತಳ್ಳುತ್ತದೆ. ಇಂತಹ ವಿಷಯಗಳಿಗೆ ಪ್ರಚೋದಿಸುವ ಸ್ನೇಹಿತರಿದ್ದರೆ, ಅವರಿಂದ ದೂರ ಇರಿ' ಎಂದು ಸಲಹೆ ನೀಡಿದರು.

ಮುಂದಿನ ಚಿತ್ರದ ಕುರಿತು ಮಾತನಾಡಿದ ಅವರು, ಇನ್ನೂ ಶೇ 20ರಷ್ಟು ಚಿತ್ರೀಕರಣ ಬಾಕಿ ಉಳಿದಿದೆ ಎಂದು ಹೇಳಿದರು.

ಮುಂಬೈ: ಸುರೇಂದ್ರ ಕುಮಾರ್ ಜೆಡಿಎಸ್ ಅಧ್ಯಕ್ಷರಾಗಿ ನೇಮಕ

ಪ್ರಜಾವಾಣಿ ವಾರ್ತೆ

ಮುಂಬೈ: ಜಾತ್ಯತೀತ ಜನತಾ ದಳವು (ಜೆಡಿಎಸ್) ಕಂಪ್ಯೂಟರ್ ಎಂಜಿನಿಯರ್ ಮತ್ತು ವಕೀಲರಾಗಿರುವ ಸುರೇಂದ್ರಕುಮಾರ್ ಬಾಜಪೈ ಅವರನ್ನು ಪಕ್ಷದ ಮುಂಬೈ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿದೆ.

ಜಾತ್ಯತೀತ ಜನತಾ ದಳದ ರಾಷ್ಟ್ರೀಯ ಅಧ್ಯಕ್ಷ ಮತ್ತು ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಅವರ ಸಲಹೆ ಮೇರೆಗೆ, ಮಹಾರಾಷ್ಟ್ರ ರಾಜ್ಯ ಜಾತ್ಯತೀತ ಜನತಾ ದಳದ ಅಧ್ಯಕ್ಷ ನಾಥಬಾವು ಶೇವಾಲೆ ಅವರು ಬಾಜಪೈ ಅವರನ್ನು ನೇಮಿಸಿದ್ದಾರೆ.

ಈ ಹಿಂದೆ ಬಾಜಪೈ ಅವರು ಮಹಾರಾಷ್ಟ್ರ ರಾಜ್ಯ ಘಟಕದ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ್ದರು.

ಮುಂಬೈ ಜಾತ್ಯತೀತ ಜನತಾ ದಳದ ಹಂಗಾಮಿ ಅಧ್ಯಕ್ಷರಾಗಿ ಹಾಜಿ ಸಲೀಂ ಭಟ್ಟಿ ಮತ್ತು ಮಹಾರಾಷ್ಟ್ರ ರಾಜ್ಯ ಘಟಕದ ಕಾರ್ಯಾಧ್ಯಕ್ಷರಾಗಿ ಪ್ರಭಾಕರ್ ನಾರ್ಕರ್ ಅವರನ್ನು ನೇಮಿಸಲಾಗಿದೆ.

ಶಂಕಿತ ಉಗ್ರರು ಹತ್ತು ದಿನ ಪೊಲೀಸ್ ವಶಕ್ಕೆ

ಶ್ರೀನಗರ (ಪಿಟಿಐ): ನಿಷೇಧಿತ ಲಷ್ಕರ್–ಎ–ತೈಬಾ (ಎಲ್ಇಟಿ) ಭಯೋತ್ಪಾದಕ ಸಂಘಟನೆಯೊಂದಿಗೆ ಸಂಬಂಧ ಹೊಂದಿರುವ ಐವರನ್ನು ಸ್ಥಳೀಯ ನ್ಯಾಯಾಲಯವು ಬುಧವಾರ 10 ದಿನ ಪೊಲೀಸರ ವಶಕ್ಕೆ ನೀಡಿದೆ. ಐವರಲ್ಲಿ ಇಬ್ಬರು ಪಾಕಿಸ್ತಾನಿ ಪ್ರಜೆಗಳಾಗಿದ್ದು, ಮೂವರು ಸ್ಥಳೀಯರಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಾಕಿಸ್ತಾನಿ ಭಯೋತ್ಪಾದಕ ಅಬ್ದುಲ್ಲಾ ಅಲಿಯಾಸ್ ಅಬು ಹುರೇರಾ ನೇತೃತ್ವದ ಅಂತರರಾಜ್ಯ ಎಲ್ಇಟಿ ಜಾಲವನ್ನು ಪತ್ತೆಹಚ್ಚಿ, ಐವರನ್ನು ಬಂಧಿಸಲಾಗಿದೆ. 16 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಈತ ಕಾಶ್ಮೀರದ ಹೊರಗೂ ತನ್ನ ನೆಲೆಗಳನ್ನು ಸ್ಥಾಪಿಸಿದ್ದನು.

ಹುರೇರಾ ಜೊತೆಗೆ ಮತ್ತೊಬ್ಬ ಪಾಕಿಸ್ತಾನಿ ಭಯೋತ್ಪಾದಕ ಉಸ್ಮಾನ್ ಅಲಿಯಾಸ್ ಖುಬೈಬ್ ಮತ್ತು ಶ್ರೀನಗರ ನಿವಾಸಿಗಳಾದ ಮೊಹಮ್ಮದ್ ನಖೀಬ್ ಭಟ್, ಆದಿಲ್ ರಶೀದ್ ಭಟ್ ಮತ್ತು ಗುಲಾಮ್ ಮೊಹಮ್ಮದ್ ಮಿರ್ ಅಲಿಯಾಸ್ ಮಾಮಾನನ್ನು ಮಂಗಳವಾರ ಬಂಧಿಸಲಾಯಿತು.

ಇವರ ಇತರ ಸಹಚರರು, ಹಣಕಾಸು ನೆರವು ನೀಡುವವರು, ಸಹಾಯಕರು ಮತ್ತು ಅಂತರ ರಾಜ್ಯ ಸಂಪರ್ಕಗಳನ್ನು ಪತ್ತೆಹಚ್ಚಲು ತನಿಖೆ ನಡೆಯುತ್ತಿರುವುದರಿಂದ ಹಲವಾರು ಶಂಕಿತ ವ್ಯಕ್ತಿಗಳನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಲ್ಮಾನ್ ಖಾನ್ ವಿರುದ್ಧದ ವಾರಂಟ್‌ಗೆ ತಡೆ

ನವದೆಹಲಿ (ಪಿಟಿಐ): ಪಾನ್ ಮಸಾಲಕ್ಕೆ ಸಂಬಂಧಿಸಿದ ಜಾಹೀರಾತಿನ ಮೂಲಕ ತಪ್ಪು ಸಂದೇಶ ನೀಡಲಾಗಿದೆ ಎಂಬ ಆರೋಪದಡಿ ನಟ ಸಲ್ಮಾನ ಖಾನ್ ಅವರ ವಿರುದ್ಧ ಹೊರಡಿಸಿದ್ದ ವಾರಂಟ್‌ಗೆ ರಾಷ್ಟ್ರೀಯ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗ (ಎನ್‌ಸಿಡಿಆರ್‌ಸಿ) ತಡೆ ನೀಡಿದೆ.

ವಿಚಾರಣೆಯ ಪೂರ್ಣ ದಾಖಲೆಗಳನ್ನು ನೀಡುವಂತೆ ಜೈಪುರ ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗಕ್ಕೆ ಸಮನ್ಸ್ ಜಾರಿಗೊಳಿಸಿ, ದಾಖಲೆಗಳನ್ನು ಎನ್‌ಸಿಡಿಆರ್‌ಸಿ ರಿಜಿಸ್ಟ್ರಾರ್‌ಗೆ ವರ್ಗಾಯಿಸುವಂತೆ ಎನ್‌ಸಿಡಿಆರ್‌ಸಿ ಅಧ್ಯಕ್ಷರಾದ ನ್ಯಾಯಮೂರ್ತಿ ಎ.ಪಿ ಸಾಹಿ ಮತ್ತು ಸದಸ್ಯರಾದ ಭರತ್‌ಕುಮಾರ್ ಪಾಂಡೆ ಅವರ ಪೀಠವು ರಾಜಸ್ಥಾನ ರಾಜ್ಯ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗಕ್ಕೆ ನಿರ್ದೇಶನ ನೀಡಿದೆ.

ಸಲ್ಮಾನ್ ಖಾನ್

'ರಾಷ್ಟ್ರೀಯ ಪೀಠದಲ್ಲಿ ಪ್ರಕರಣ ಇತ್ಯರ್ಥವಾಗುವವರೆಗೆ ಜಿಲ್ಲಾ ಆಯೋಗ ಹೊರಡಿಸಿರುವ ವಾರಂಟ್ ಅನ್ನು ತಡೆಹಿಡಿಯಲಾಗುತ್ತದೆ' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಜನರನ್ನು ದಾರಿ ತಪ್ಪಿಸುವ ಜಾಹೀರಾತನ್ನು ನೀಡಿದ್ದಾರೆ ಎಂದು ಆರೋಪಿಸಿ ರಾಜಶ್ರೀ ಪಾನ್ ಮಸಾಲ ಮತ್ತು ಅದರ ರಾಯಭಾರಿ ಸಲ್ಮಾನ್ ಖಾನ್ ವಿರುದ್ಧ 2025ರಲ್ಲಿ ಜೈಪುರ ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗಕ್ಕೆ ದೂರು ಸಲ್ಲಿಕೆಯಾಗಿತ್ತು.

ಆ ಜಾಹೀರಾತನ್ನು ನಿರ್ಬಂಧಿಸಿ ಜಿಲ್ಲಾ ಆಯೋಗವು 2026ರ ಜನವರಿ 6ರಂದು ಆದೇಶ ಹೊರಡಿಸಿತ್ತು. ಆಯೋಗದ ಆದೇಶದ ಬಳಿಕವೂ ಸಲ್ಮಾನ್ ಚಿತ್ರವಿರುವ ಜಾಹೀರಾತನ್ನು ಪ್ರದರ್ಶಿಸುವ ಮೂಲಕ ನ್ಯಾಯಾಂಗ ನಿಂದನೆ ಮಾಡಲಾಗಿದೆ ಎಂದು ಮತ್ತೊಂದು ಅರ್ಜಿ ಸಲ್ಲಿಕೆಯಾಗಿತ್ತು. ನ್ಯಾಯಾಂಗ ನಿಂದನೆ ಆರೋಪದಡಿ ಜಿಲ್ಲಾ ಆಯೋಗವು ಜನವರಿ 15ರಂದು ಸಲ್ಮಾನ್ ವಿರುದ್ಧ ಜಾಮೀನು ಪಡೆಯಬಹುದಾದ ವಾರಂಟ್ ಜಾರಿಗೊಳಿಸಿತ್ತು. ಈ ಆದೇಶವನ್ನು ರಾಜ್ಯ ಆಯೋಗವು ಎತ್ತಿಹಿಡಿದಿತ್ತು.

ಪಠ್ಯಪುಸ್ತಕ ಸಮಿತಿ ಪುನರ್‌ರಚನೆ

'ಸುಪ್ರೀಂ' ತರಾಟೆ ಬಳಿಕ ಬದಲಾವಣೆ
20 ಪರಿಣತರಿರುವ ಹೊಸ ಸಮಿತಿ

ನವದೆಹಲಿ (ಪಿಟಿಐ): 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಎಂಬ ಅಧ್ಯಾಯವನ್ನು 8ನೇ ತರಗತಿಯ ಪಠ್ಯಪುಸ್ತಕದಲ್ಲಿ ಅಳವಡಿಸಿದ್ದ ಕಾರಣಕ್ಕೆ ಸುಪ್ರೀಂ ಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡ ಬಳಿಕ ಎನ್‌ಸಿಇಆರ್‌ಟಿ ತನ್ನ ಪಠ್ಯಪುಸ್ತಕ ಸಮಿತಿಯಲ್ಲಿ ಬದಲಾವಣೆ ಮಾಡಿದೆ.

ರಾಷ್ಟ್ರೀಯ ಪಠ್ಯಪುಸ್ತಕ ಮತ್ತು ಬೋಧನಾ ತರಬೇತಿ ವಿಷಯಗಳ ಸಮಿತಿಯ (ಎನ್‌ಎಸ್‌ಟಿಸಿ) ಐಐಟಿ ಮದ್ರಾಸ್‌ನ ನಿರ್ದೇಶಕ ವಿ. ಕಾಮಕೋಟಿ, ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಮುಖ್ಯಸ್ಥ ರಘುವೇಂದ್ರ ತನ್ವರ್, ವಿಶ್ರಾಂತ ಕುಲಪತಿ ಆರ್. ವೆಂಕಟರಾವ್, ಕೇಂದ್ರೀಯ ಶಿಕ್ಷಣ ತಂತ್ರಜ್ಞಾನ ಸಂಸ್ಥೆಯ ಜಂಟಿ ನಿರ್ದೇಶಕ ಅಮರೇಂದ್ರ ಪ್ರಸಾದ್ ಬೆಹೆರಾ ಅವರನ್ನು ಒಳಗೊಂಡಂತೆ 20 ಜನ ಪರಿಣತರಿದ್ದಾರೆ.

ಹಿಂದಿನ ಸಮಿತಿಯಲ್ಲಿ 22 ಮಂದಿ ಸದಸ್ಯರಿದ್ದರು. ಸುಪ್ರೀಂ ಕೋರ್ಟ್ ಆದೇಶದಂತೆ, ಐಐಟಿ ಗಾಂಧಿನಗರದ ಮಾಜಿ ಅತಿಥಿ ಪ್ರಾಧ್ಯಾಪಕ ಮಿಶೆಲ್ ಡೆನಿನೊ, ಚೆನ್ನೈನ ನೀತಿ ನಿರೂಪಣೆ ಅಧ್ಯಯನ ಕೇಂದ್ರದ ಮುಖ್ಯಸ್ಥ ಎಂ.ಡಿ ಶ್ರೀನಿವಾಸ್, ಪ್ರಧಾನ ಮಂತ್ರಿ ಅವರ ಆರ್ಥಿಕ ಸಲಹಾ ಮಂಡಳಿಯ ಮಾಜಿ ಮುಖ್ಯಸ್ಥ ದಿವಂಗತ ಬಿಬೆಕ್ ದೆಬರಾಯ್ ಅವರನ್ನು ಸಮಿತಿಯಿಂದ ಕೈಬಿಡಲಾಗಿದೆ.

ಪಠ್ಯಪುಸ್ತಕ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಎಂಬ ಅಧ್ಯಾಯವನ್ನು ಸೇರಿಸಿರುವ ವಿಚಾರವಾಗಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಸುಪ್ರೀಂ ಕೋರ್ಟ್ ಎನ್‌ಸಿಇಆರ್‌ಟಿಯನ್ನು ತರಾಟೆಗೆ ತೆಗೆದುಕೊಂಡಿತ್ತು.

ಇಂಟರ್‌ನೆಟ್ ನಿರ್ಬಂಧ ತೆರವು

ಇಂಫಾಲ್ (ಪಿಟಿಐ): ಮಣಿಪುರ ಸರ್ಕಾರ ರಾಜ್ಯದ ಐದು ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸೇವೆಗಳಿಗೆ ವಿಧಿಸಿದ್ದ ನಿರ್ಬಂಧವನ್ನು ಷರತ್ತುಗಳೊಂದಿಗೆ ತೆರವುಗೊಳಿಸಿದೆ. ಆದರೆ, ಮೊಬೈಲ್ ಡೇಟಾ ಸೇವೆಗಳಿಗೆ ವಿಧಿಸಿರುವ ನಿರ್ಬಂಧ ಮುಂದುವರಿದಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಮಣಿಪುರ

ಮಣಿಪುರದ ವಿಷ್ಣುಪುರ ಜಿಲ್ಲೆಯಲ್ಲಿ ಮಂಗಳವಾರ ಬಾಂಬ್ ದಾಳಿಯಲ್ಲಿ ಇಬ್ಬರು ಮಕ್ಕಳು ಮೃತಪಟ್ಟ ನಂತರ ಹಿಂಸಾಚಾರ ಭುಗಿಲೆದ್ದಿತ್ತು. ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸರ್ಕಾರ ಐದು ಜಿಲ್ಲೆಗಳಲ್ಲಿ ಮೂರು ದಿನಗಳಿಂದ ಇಂಟರ್‌ನೆಟ್ ಸೇವೆಗಳಿಗೆ ತಾತ್ಕಾಲಿಕವಾಗಿ ನಿರ್ಬಂಧ ವಿಧಿಸಿತ್ತು.

ನಾಗರಿಕರಿಗೆ ಹಾಗೂ ಸರ್ಕಾರದ ಪ್ರಮುಖ ಕಚೇರಿಗಳು, ಹೈಕೋರ್ಟ್ ಮತ್ತು ಮನೆಯಿಂದ ಕೆಲಸ ಮಾಡುವವರಿಗೆ ಉಂಟಾದ ತೊಂದರೆಗಳನ್ನು ಪರಿಶೀಲಿಸಿದ ಸರ್ಕಾರ, ಇಂಟರ್‌ನೆಟ್ ಸೇವೆಯ ನಿರ್ಬಂಧವನ್ನು ತೆರವುಗೊಳಿಸಿದೆ. ಇದು ಐಎಸ್‌ಪಿ/ಟಿಎಸ್‌ಪಿಗಳ ಮೂಲಕ ನೋಂದಣಿ ಮಾಡಿಕೊಂಡಿರುವ ಬ್ರಾಡ್ ಬ್ಯಾಂಡ್ ಸಂಪರ್ಕಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಗೃಹ ಇಲಾಖೆ ಹೇಳಿಕೆಯಲ್ಲಿ ತಿಳಿಸಿದೆ.

'ಬಳಕೆದಾರರು ವೈ-ಫೈ ಅಥವಾ ಹಾಟ್‌ಸ್ಪಾಟ್ ಹಂಚಿಕೆಯ ಮೇಲಿನ ನಿರ್ಬಂಧಗಳು ಸೇರಿದಂತೆ ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸಬೇಕು. ಸರ್ಕಾರ ಅನುಮತಿ ನೀಡಿರುವ ಸಂಪರ್ಕಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸಂಪರ್ಕಗಳನ್ನು ಬಳಸುವಂತಿಲ್ಲ' ಎಂದು ಹೇಳಿಕೆಯಲ್ಲಿ ಉಲ್ಲೇಖಿಸಿದೆ.

ಉಗ್ರರ ನಂಟು: ಸರ್ಕಾರಿ ನೌಕರರ ವಜಾ

ಶ್ರೀನಗರ (ಪಿಟಿಐ): 'ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ' ನೀತಿ ಅಡಿಯಲ್ಲಿ ಇಬ್ಬರು ಸರ್ಕಾರಿ ನೌಕರರನ್ನು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಕೆಲಸದಿಂದ ವಜಾ ಮಾಡಿದ್ದಾರೆ' ಎಂದು ಅಧಿಕಾರಿಗಳು ಬುಧವಾರ ಮಾಹಿತಿ ನೀಡಿದರು.

ರಾಮ್‌ಬನ್‌ನಲ್ಲಿ ಶಿಕ್ಷಣ ಇಲಾಖೆಯಲ್ಲಿ 4ನೇ ದರ್ಜೆ ನೌಕರನಾಗಿ ಕೆಲಸ ಮಾಡುತ್ತಿದ್ದ ಫರಹತ್ ಅಲಿ ಖಾಂಡೆ ಮತ್ತು ಬಂಡಿಪೋರಾದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಮೊಹಮ್ಮದ್ ಶಫಿ ದಾರ್ ಅವರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ.

'ವೈವಾಹಿಕ ಯುದ್ಧದ ಮಹಾಭಾರತ'

ನವದೆಹಲಿ (ಪಿಟಿಐ): ಪರಸ್ಪರ ದೂರವಿರುವ ದಂಪತಿಯ ನಡುವಿನ ದಶಕದ ವಿವಾದವನ್ನು 'ವೈವಾಹಿಕ ಯುದ್ಧದ ಮಹಾಭಾರತ' ಎಂದ ಸುಪ್ರೀಂ ಕೋರ್ಟ್, 'ಕಾನೂನಿನ ಯುದ್ಧ'ಕ್ಕೆ ಮಂಗಳವಾರ ಇತಿಶ್ರೀ ಹಾಡಿದೆ.

'ದಂಪತಿ ನಡುವಿನ ಯಾವೊಂದು ಬಾಂಧವ್ಯವೂ ಜೀವಂತವಾಗಿಲ್ಲ' ಎಂಬುದನ್ನು ಗಮನಿಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು, ವಿವಾಹವನ್ನು ರದ್ದುಗೊಳಿಸಿದೆ.

ವಿವಾಹವನ್ನು ಅನೂರ್ಜಿತಗೊಳಿಸಲು ಸಂವಿಧಾನದ 142ನೇ ವಿಧಿಯಡಿ ಅಧಿಕಾರವನ್ನು ಬಳಸಿದ ನ್ಯಾಯಪೀಠವು, ಪತಿ ದಾಖಲಿಸಿದ್ದ 80ಕ್ಕೂ ಹೆಚ್ಚು ದೂರುಗಳನ್ನು ವಜಾಗೊಳಿಸಿದೆ.

ಪತ್ನಿ, ಆಕೆಯ ಕುಟುಂಬ ಹಾಗೂ ವಕೀಲರ ವಿರುದ್ಧವೂ ಕಾನೂನು ಕ್ರಮಗಳ ಪ್ರತೀಕಾರ ಮತ್ತು ಅಸಹ್ಯಕರ ಅಭಿಯಾನ ಆರಂಭಿಸಲು ಪತಿಯು ತನ್ನ ಕಾನೂನು ಪರಿಣತಿಯನ್ನು ಬಳಸಿಕೊಂಡಿದ್ದಕ್ಕಾಗಿ ನ್ಯಾಯಪೀಠವು ವಕೀಲರ ಮೇಲೆ ಅಸಮಾಧಾನ ವ್ಯಕ್ತಪಡಿಸಿತು.

ದೀರ್ಘಾವಧಿಯ, ಕಹಿ ವೈವಾಹಿಕ ಕಲಹದಲ್ಲಿ ದಂಪತಿ ಸಿಲುಕಿದ್ದಾರೆ. ಇದರ ಪರಿಣಾಮವಾಗಿ ವಿವಿಧ ನ್ಯಾಯಾಲಯಗಳು ಹಾಗೂ ವೇದಿಕೆಗಳಲ್ಲಿ ಹಲವು ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ನ್ಯಾಯಮೂರ್ತಿ ಮೆಹ್ತಾ ತಮ್ಮ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ಹಲವು ದೂರುಗಳನ್ನು ದಾಖಲಿಸುವ ಮೂಲಕ ಪ್ರಕ್ರಿಯೆಯನ್ನು ಸಂಕೀರ್ಣಗೊಳಿಸಲು ಪತಿ ಪ್ರಯತ್ನಿಸಿದ್ದಾರೆ. ದಾಖಲಾದ ದೂರುಗಳಲ್ಲಿ ಪ್ರತೀಕಾರ ಹಾಗೂ ಕಿರಿಕಿರಿ ಉಂಟು ಮಾಡುವ ಪ್ರಕರಣಗಳೇ ಬಹುತೇಕವು ಎಂದಿದ್ದಾರೆ.

ಪತ್ನಿ– ಮಕ್ಕಳು ನಿರ್ಗತಿಕರಾಗದಂತೆ, ಇದುವರೆಗಿನ ವೆಚ್ಚವನ್ನು ಭರಿಸಲು ಹಾಗೂ ಶಾಶ್ವತ ಜೀವನಾಂಶವಾಗಿ ₹5 ಕೋಟಿ ಪರಿಹಾರ ನೀಡುವಂತೆ ನ್ಯಾಯಾಲಯವು ಪತಿಗೆ ಸೂಚಿಸಿದೆ. ಒಂದೇ ಕಂತು ಇಲ್ಲವೇ, ಒಂದು ವರ್ಷದೊಳಗೆ ನಾಲ್ಕು ಸಮಾನ ಕಂತುಗಳಲ್ಲಿ ಪಾವತಿಸಬೇಕೆಂದು ತೀರ್ಪಿನಲ್ಲಿ ಹೇಳಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು
ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ಮುಖ್ಯ ಅಭಿಯಂತರರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ" ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105,
ದೂ: 08472-220817, E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಯಾದಗಿರಿ–ಎನ್.ಜಿ.ಆರ್/2026–27/08 ದಿನಾಂಕ: 04–04–2026

–: ಟೆಂಡರ್ ಆಹ್ವಾನಿಸುವ ಸೂಚನೆ :–

1) ಕಾಮಗಾರಿ ವಿವರ: ನಗರೋತ್ಥಾನ (ಮುನಿಸಿಪಾಲಿಟಿ) ಹಂತ–3 ರಡಿ ಯಾದಗಿರಿ ನಗರದ ಗುರುಸಣಗಿ ಬ್ರಿಡ್ಜ್ ಕಂ ಬ್ಯಾರೇಜ್ ಹತ್ತಿರ ಮೂಲಸ್ಥವಾರಕ್ಕೆ ವಿದ್ಯುದ್ದೀಕರಣಗೊಳಿಸುವುದು, ಜ್ಯಾಕವೆಲ್ ಪ್ರವೇಶ ದ್ವಾರಕ್ಕೆ ಆರ್.ಸಿ.ಸಿ ಕಾಲಮ್ಸ್, ಬೀಮ್ ಮತ್ತು ಗೇಟ್ ನ್ನು ಒದಗಿಸುವುದು ಹಾಗೂ ಅಳವಡಿಸುವುದು, ಹಾಗೂ 02 ಸಂಖ್ಯೆಯ 345 ಅಶ್ವಶಕ್ತಿ ಸಾಮರ್ಥ್ಯದ ಅಥವಾ ತತ್ಸಮಾನ ಅಶ್ವಶಕ್ತಿ ಸಾಮರ್ಥ್ಯದ ಡಿಪ್ ವೆಲ್ ಟರ್ಬೈನ್ ಪಂಪಸೆಟ್ ಡಿಸ್ಚಾರ್ಜ 291 ಎಲ್.ಪಿಎಸ್ (1047.09 ಕ್ಯೂಬಿಕ್/ಗಂಟೆ) 60 ಮೀಟರ್ಸ ಹೆಡ್ ಜೊತೆಗೆ ಇತರೆ ಸಲಕರಣೆಗಳನ್ನು ಒದಗಿಸುವುದು, ಅಳವಡಿಸುವುದು, ವಿದ್ಯುದ್ದೀಕರಣಗೊಳಿಸುವದು ಹಾಗೂ ಅನುಷ್ಠಾನಗೊಳಿಸುವ ಕಾಮಗಾರಿ (ಲಂಪಸಮ್ – ವೇರಿಯೇಷನ್ ಇರುವುದಿಲ್ಲ) (ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ/2025–26/ ಇ.ಎಲ್/ವರ್ಕ_ಇಂಡೆಂಟ್ 499), 2) ಕಾಮಗಾರಿ ಅಂದಾಜು ಮೊತ್ತ: **ರೂ. 177.32 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ)**, 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ. 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 2,66,000/– 5) ಕಾಮಗಾರಿಯ ಅವಧಿ: 06 (ಆರು) ತಿಂಗಳು, 6) ಇ– ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: 08–04–2026 ಸಮಯ: 13:00 ಗಂಟೆಯ ನಂತರ, 7) ಪೂರ್ವ ಟೆಂಡರ್ ಸಭೆ ದಿನಾಂಕ: 15–04–2026 ಸಮಯ 11:30 ಗಂಟೆಯವರೆಗೆ, 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 22–04–2026 ಸಮಯ 17:30 ಗಂಟೆಯವರೆಗೆ, 9) ಟೆಂಡರ್ ತೆರೆಯುವ ದಿನಾಂಕ: 24–04–2026 ಸಮಯ 11:00 ಗಂಟೆಯ ನಂತರ, 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105 ದೂ: 08472-220817 E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/– ಮುಖ್ಯ ಅಭಿಯಂತರರು
ಕನನೀಸ ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಲಯ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/19/ಕೆ.ಎಸ್.ಎಂ.ಸಿ.&ಎ/2025–26

TUNGABHADRA BOARD: TB DAM
e-Procurement Short Term Tender Notice
IFB Nos.01/2026-27 to 11/2026-27 DT.08.04.2026

Tender for **11 Nos. of Works** in respect of HW & HLC Division, TB Dam and LLC Division, Ballari under 'Service Category" are invited through `e-Procurement'.

Bid Document downloading Start Date & Time:	:	09.04.2026 at 12:00 PM
Bid Document downloading End Date & Time:	:	16.04.2026 at 3:00 PM
Bid Submission End Date & Time:	:	16.04.2026 at 5:30 PM
Date of opening of Technical / Commercial Stage:	:	16.04.2026 at 6:00 PM

Further details can be seen @ **https://tender.apeprocurement.gov.in**
Ph: 08394 - 259114 Sd/- **Superintending Engineer**
Email: seibtbb@yahoo.com I.B, TB Board, TB Dam

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಶಾಂತಿನಿಲಯ, ಕಾನ್ವೆಂಟ್ ಜಂಕ್ಷನ್ ಮಡಿಕೇರಿ, ಕೊಡಗು ಜಿಲ್ಲೆ–571201
email: dcpokodagu@gmail.com ದೂರವಾಣಿ: 08272–228800
ಸಂ:ಡಿಸಿಪಿಕೊ/ಪೋ.ಪ/ಪ.ಪ್ರಕಟಣೆ/2026–27 ದಿನಾಂಕ:08–04–2026

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರದಲ್ಲಿ ಪ್ರಸ್ತುತ ಪೋಷಣೆ ಹಾಗೂ ರಕ್ಷಣೆ ಪಡೆಯುತ್ತಿರುವ, **ಕು। ಜ್ಯೋತಿ, ಕು। ಅರ್ಪಿತ ಹಾಗೂ ಕು। ಸೋನಿಯಾ** ಈ ಮಕ್ಕಳ ಪೋಷಕರು ಹಾಗೂ ಸಂಬಂಧಿಕರು ಇದುವರೆಗೂ ಪತ್ತೆಯಾಗಿರುವುದಿಲ್ಲ. ಈ ಮಕ್ಕಳ ಪೋಷಕರು ಅಥವಾ ಸಂಬಂಧಿಕರು ಯಾರಾದರೂ ಇದ್ದಲ್ಲಿ ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿ, ಶಾಂತಿನಿಲಯ ಕಾನ್ವೆಂಟ್ ಜಂಕ್ಷನ್, ಮಡಿಕೇರಿ ಹಾಗೂ ದೂರವಾಣಿ: 08272–228800ಯನ್ನು ಸಂಪರ್ಕಿಸಲು ತಿಳಿಯಪಡಿಸಲಾಗಿದೆ. ಮಕ್ಕಳ ಪೋಷಕರು ಯಾರೂ ಬಾರದಿದ್ದಲ್ಲಿ ಈ ಮಕ್ಕಳನ್ನು ಕಾನೂನು ಪ್ರಕಾರ ದತ್ತು ನೀಡಲು ಕ್ರಮಕೈಗೊಳ್ಳಲಾಗುವುದು.



ಕು। ಜ್ಯೋತಿ
ಅಂದಾಜು ವಯಸ್ಸು 09 ವರ್ಷ, ತಂದೆಯ ಹೆಸರು: ಮಂಜು, ತಾಯಿಯ ಹೆಸರು: ಪವಿತ್ರ ದಿನಾಂಕ:30–03–2026ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ. ಮಾತನಾಡುವ ಭಾಷೆ: ಕನ್ನಡ ಮತ್ತು ಎರವ. ಈ ಹಿಂದೆ ವಾಸವಿದ್ದ ವಿಳಾಸ: C/o ನೆಲ್ಲಮಕ್ಕಡ ಶರತ್ ಸೋಮಣ್ಣ, ಕಾವಾಡಿ ಅಮ್ಮತ್ತಿ ಗ್ರಾಮ ವಿರಾಜಪೇಟೆ ತಾ॥ ಕಪ್ಪು ಮೈ ಬಣ್ಣ, ಕೋಲು ಮುಖ, ಗುಂಗುರು ಕೂದಲು ಹೊಂದಿರುತ್ತಾಳೆ.

ಕು। ಅರ್ಪಿತ
ಅಂದಾಜು ವಯಸ್ಸು 08 ವರ್ಷ, 9 ತಿಂಗಳು, ತಂದೆಯ ಹೆಸರು: ಅಪ್ಪಿ, ತಾಯಿಯ ಹೆಸರು:ಶ್ವೇತಾ ದಿನಾಂಕ:07–03–2025ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ವಿರಾಜಪೇಟೆಯ ಕ್ಯಾಥರಿನ್ ಚೆತ್ತಿಧಿನಿ, ಮಕ್ಕಳ ಪಾಲಾ ಸಂಸ್ಥೆಗೆ ದಾಖಲಾಗಿರುತ್ತಾಳೆ. ಮಾತನಾಡುವ ಭಾಷೆ: ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಜಯರವರ ಲೈನ್ ಮನೆ, ಕಾನೂರು ಗ್ರಾಮ, ಪೊನ್ನಂಪೇಟೆ ತಾ. ಕಪ್ಪು ಮೈ ಬಣ್ಣ, ಕೋಲು ಮುಖ, ನಯವಾದ ಕೂದಲು ಹೊಂದಿರುತ್ತಾಳೆ.

ಕು। ಸೋನಿಯಾ
ವಯಸ್ಸು ಅಂದಾಜು 10 ವರ್ಷ 10 ತಿಂಗಳು, ತಂದೆಯ ಹೆಸರು: ಅಪ್ಪಿ ತಾಯಿಯ ಹೆಸರು: ಶ್ವೇತಾ, ದಿನಾಂಕ:07–03–2025ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ವಿರಾಜಪೇಟೆಯ ಕ್ಯಾಥರಿನ್ ಚೆತ್ತಿಧಿನಿ, ಮಕ್ಕಳ ಪಾಲಾ ಸಂಸ್ಥೆಗೆ ದಾಖಲಾಗಿರುತ್ತಾಳೆ. ಮಾತನಾಡುವ ಭಾಷೆ: ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಜಯರವರ ಲೈನ್ ಮನೆ, ಕಾನೂರು ಗ್ರಾಮ, ಪೊನ್ನಂಪೇಟೆ ತಾ॥. ಕಪ್ಪು ಮೈ ಬಣ್ಣ, ಕೋಲು ಮುಖ, ನಯವಾದ ಕೂದಲು ಹೊಂದಿರುತ್ತಾಳೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಡಿಕೇರಿ, ಕೊಡಗು ಜಿಲ್ಲೆ

ಕರ್ನಾಟಕ ಸರಕಾರ
ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ವ.) ರವರ ಕಛೇರಿ, ದೊಡ್ಡಣ ಗುಡ್ಡೆ, ಉಡುಪಿ–576102
Email: sadhssudupi@gmail.com Office Phone: 0820-2531950
ಸಂ.: ತೋಉನಿ: ಹಿಸತೋನಿ: ರಾವ: ಉ: ತಾಸ:42:2025–26 ದಿನಾಂಕ: 06–04–2026

ಇ–ಟೆಂಡರ್ ಪ್ರಕಟಣೆ

ಉಡುಪಿ ಜಿಲ್ಲೆಯ ತೋಟಗಾರಿಕೆ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಲು ತೋಟಗಾರಿಕೆಯಲ್ಲಿ ತರಬೇತಿ ಪಡೆದ ಅನುಭವಸ್ಥ ತೋಟಗಾರರ ಸೇವೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು, ಮಾನವ ಸಂಪನ್ಮೂಲ ಸೇವಾ ಏಜೆನ್ಸಿಗಳಿಂದ 2026–27ನೇ ಸಾಲಿಗೆ 1 ವರ್ಷದ ಅವಧಿಗೆ KPPP ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ.

Service Estimate No: KSHDA/2025-26/SE0527, EMD: Rs. 47,500/-
ಆನ್‌ಲೈನ್ ಟೆಂಡರ್ ಸಲ್ಲಿಕೆ ಕೊನೆಯ ದಿನಾಂಕ: 15–04–2026 ಸಂಜೆ 4:00 ಗಂಟೆ.
ಹೆಚ್ಚಿನ ಮಾಹಿತಿಗಾಗಿ: ವೆಬ್‌ಸೈಟ್: https://www.kppp.karnataka.gov.in
ಸಂಪರ್ಕ: 8296771189 / 9448211725 / 9035247365

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಉಡುಪಿ.

ವಾಸಾಇ/ಸನಿಉ/ಕೆಎಸ್ಎಂಸಿಎ/26/26–27 ದಿ: 08.04.2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಕಾನಿಇಂ/ಪಿಬಿ/ಗುತ್ತಿಗೆ/8443/2026–27/103
ದಿನಾಂಕ : 07–04–2026

ಇ–ಟೆಂಡರ್ ಪ್ರಕಟಣೆ

ದಿನಾಂಕ: 07–04–2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕ್ರಸಂ 1ರ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 27–05–2026 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ **http://www.kppp.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/– (ಎನ್.ಎನ್.ಪಾಟೀಲ) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್ಎಂಸಿಎ/30/2026–27

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ) ರವರ ಕಛೇರಿ, 4ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 30ನೇ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560011
ಸಂ. ಕಾಅ(ಕ್ಯುಎ/ಕ್ಯುಸಿ)/ವ–2/ಬೆದನಪಾ/ಟೆಂಡ್/01/25–26/ಕರೆ–3 ದಿನಾಂಕ : 08–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರೆ–3)
(ದ್ವಿಲಕೋಟೆ ವ್ಯವಸ್ಥೆ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಬೆದನಪಾ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ), ಬೆದನಪಾ, ಇವರಿಂದ ಬೆಂಗಳೂರು ದಕ್ಷಿಣ ನಗರ ಪಾಲಿಕೆ (ಬೆದನಪಾ) ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗವು ಕೆಪಿಪಿ ಪೋರ್ಟಲ್ ಮೂಲಕ ಕೆಳಕಂಡ ಕಾಮಗಾರಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಒಳಗೊಂಡಂತೆ ಯೋಜನಾ ನಿರ್ವಹಣೆಯ ಸಮಾಲೋಚನಾ ಸೇವೆಗಳಿಗಾಗಿ ಇದೇ ರೀತಿಯ ಕೆಲಸವನ್ನು ಮಾಡಿರುವ ಆಸಕ್ತಿಯುಳ್ಳ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಕೋರಿಕೆಯನ್ನು ಆಹ್ವಾನಿಸಿದೆ.

ಕ್ರ.	ಕಾಮಗಾರಿಯ ಹೆಸರು
1	ವಿಶೇಷ ಮೂಲ ಸೌಕರ್ಯ ಯೋಜನೆಗಳಿಗೆ ಬಂಡವಾಳ ನೆರವು (ಸಿಎಸ್ಎಸ್‌ಐಪಿ) (4 ಕಾಮಗಾರಿಗಳನ್ನು ಒಳಗೊಂಡ ಜಿಓ ಬಿಎಸ್‌ಸಿಸಿ ಕ್ರ.ಸಂ. 34, 50, 49, 78) ಪ್ಯಾಕೇಜ್ ಸಂ. ಸಿಎಸ್ಎಸ್‌ಐಪಿ ಬಿಹೆಚ್–03 ಅಡಿಯಲ್ಲಿ ಆಯ್ದ ಆರ್ಟೀರಿಯಲ್, ಸಬ್ ಆರ್ಟೀರಿಯಲ್ ಮತ್ತು ಇತರ ಪ್ರಮುಖ ರಸ್ತೆಗಳಿಗೆ ಸೂಕ್ತ ಕ್ಯಾಂಬರ್, ಶೌಲ್ಡರ್ ಫಾರ್ಮೇಶನ್, ಸೈಡ್ ಡ್ರೈನ್ ಅಭಿವೃದ್ಧಿ ಮತ್ತು ರಸ್ತೆ ಸುರಕ್ಷತಾ ಕ್ರಮಗಳೊಂದಿಗೆ ಮೇಲ್ಪದರವನ್ನು ಹಾಕುವುದರಿಂದ ಹಾಲಿ ಇರುವ ಡಾಂಬರು ರಸ್ತೆಗೆ ಸುಧಾರಣೆಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣವನ್ನು ಒಳಗೊಂಡಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು (ಕರೆ–3). **ಯೋಜನೆಯ ವೆಚ್ಚ** : ರೂ.1000.00 ಲಕ್ಷಗಳು. **ಇಎಂಡಿ ಮೊತ್ತ** : ರೂ.37,500/–

ವೇಳಾಪಟ್ಟಿ : (1) ಟೆಂಡರ್ ದಾಖಲೆಯನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **(https://kppp.karnataka.gov.in)** ನ ಗುತ್ತಿಗೆದಾರರಿಗೆ ಲಾಗಿನ್ ಅಡಿಯಿಂದ ಡೌನ್‌ಲೋಡ್ ಮಾಡಬಹುದಾದ ದಿನಾಂಕ : **09–04–2026** ರಿಂದ (2) ಬಿಡ್–ಪೂರ್ವ ಸಭೆಯ ದಿನಾಂಕ : **13–04–2026, ಬೆಳಿಗ್ಗೆ 11:30 ಗಂಟೆ**. ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ) ರವರ ಕಛೇರಿ, 4ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 30ನೇ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560011 (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **16–04–2026 ರಂದು ಸಂಜೆ 4:00 ಗಂಟೆ**ಯವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **17–04–2026 ರಂದು ಸಂಜೆ 4:30 ಗಂಟೆ**ಗೆ (5) ಟೆಂಡರ್‌ನ ಮಾನ್ಯತೆ : ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕದಿಂದ 90 ದಿನಗಳು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ),
ವಲಯ–2, ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2026–27/18 ದಿನಾಂಕ: 08/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿತೀಯ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2026–27 ನೇ ಸಾಲಿನ ವಿಭಾಗ ಮತ್ತು ಉಪ–ವಿಭಾಗ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಮಾಲೋಚಕರು ಒದಗಿಸುವ ಕುರಿತು ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **10/04/2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ : ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : 12 ತಿಂಗಳು ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **10/04/2026** ಸಮಯ 10:00 ಗಂಟೆಯಿಂದ **17/04/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **10/04/2026** ಸಮಯ 10:00 ಗಂಟೆಯಿಂದ **17/04/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **18/04/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರುದಿನ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **21/04/2026** ರಂದು ಅಥವಾ ತಾಂತ್ರಿಕ ಬಿಡ್ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರ

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/15/ಕೆಎಸ್ಎಂಸಿಎ/2026–27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ನಾಬದಂಕಾ ವಿಭಾಗ–05,
ರೋಡಲಬಂಡಾ–584127 ತಾ: ಲಿಂಗಸುಗೂರು ಜಿ: ರಾಯಚೂರು.
email:kbjnleenrbc5@gmail.com
ಸಂ.ಕೃಭಾಜನಿನಿ/ನಾಬದಂಕಾ/ವಿ–5/ಯೋಶಾ/2026–27/08 ದಿನಾಂಕ:–06.04.2026

ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿದಾರರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಿವಿಲ್ ಒಂದನೇ ದರ್ಜೆ ಹಾಗೂ ಮೇಲ್ಪಟ್ಟಗುತ್ತಿಗೆದಾರ ರಿಂದ "Survey, Investigation, Preparation of Design & Drawings, Installation, Testing and commissioning of Lift Headworks, Electrical Sub-Station, Transmission Line, Terminal Bay, Rising Main, Delivery Chamber and Construction of Pipe Distribution Network including Structures and SCADA Compatible Sluice valves, Butterfly valves, Flow Meters, Discharge Control Meters and Air Valves, Scour Valves, Butterfly valves, Discharge Control Meters providing intermediate sump wherever necessary in complete manner etc Piped Distribution Network for 19,600 Ha. of command area of Pamanakallur and other Villages in Maski taluk of Raichur district from Distributary 5A of Narayanpura Right bank canal including Supply of Spares, Accessories and Tools including Operation and Maintenance of the Entire System for Five years from the date of Successful Commissioning of the entire system on Turnkey Basis".(Work indent no:KBJNL/2025-26/ LI/WORK_INDENT2778)" ಎಂಬ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ತಿಳಿಸಿರುವಂತೆ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಅಹ್ವಾನಿಸಲಾಗಿದೆ.

1) ಲಕೋಟೆ ಪದ್ಧತಿ: ದ್ವಿ–ಲಕೋಟೆ **2) ಕಾಮಗಾರಿ ಅಂದಾಜು ಪತ್ರಿಕೆಯ ಸಂಖ್ಯೆ:** KBJNL/2025-26/ LI/WORK_INDENT2778)" **3) ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ:** 08.04.2026 ರಿಂದ 13.05.2026 ಸಂಜೆ 5.00 ಗಂಟೆಯವರೆಗೆ **4) ಟೆಂಡರ್ ಕುರಿತು ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 18.04.2026 ರಂದು ಮಧ್ಯಾಹ್ನ 1.30ಗಂಟೆ ಯವರೆಗೆ **5) ಪ್ರೀ–ಬಿಡ್ ಸಭೆ ಜರುಗುವ ದಿನಾಂಕ:** 23.04.2026 ರಂದು ಬೆಳಗ್ಗೆ 11.30 ಗಂಟೆಗೆ **6) ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:** 13.05.2026 ರಂದು ಸಂಜೆ 5.00 ಗಂಟೆಯ ವರೆಗೆ **7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 14.05.2026 ರಂದು ಸಂಜೆ 5.15 ಗಂಟೆಗೆ **8) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 18.05.2026 ರಂದು ಬೆಳಗ್ಗೆ 11.30 ಗಂಟೆಗೆ (ತಾತ್ಕಾಲಿಕ)

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ https://kppp.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು
ಕೃಭಾಜನಿನಿ, ನಾಬದಂಕಾ, ವಿಭಾಗ ಸಂ–05
ರೋಡಲಬಂಡಾ

DIP/RCR/11/KSMC&A/13/2026-27

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#59, ರಿಚ್‌ಮಂಡ್ ರಸ್ತೆ (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ),
ಬೆಂಗಳೂರು–25. ದೂ: 080–25584102 / 25594893
ಇಮೇಲ್ : eecontracktsphc@gmail.com ವೆಬ್‌ಸೈಟ್: www.ksphc.org
ಸಂಖ್ಯೆ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟೆಂಡರ್/02/2026–27/02/77 ದಿನಾಂಕ: 08.04.2026

ಟೆಂಡರ್ ಅಧಿಸೂಚನೆ ಪ್ರಕಟಣೆ

ಕೆಎಸ್‌ಪಿಹೆಚ್ & ಐಡಿಸಿಎಲ್ ರವರು ಕೆಳಕಂಡ ಪಿಎಂಸಿ ಕಾಮಗಾರಿಗಳಿಗಾಗಿ ಕೆಟಿಪಿಪಿ 2000 ಕಾಯಿದೆ & ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ರಂತೆ ಕೆಪಿಪಿಪಿ **https://kppp.karnataka.gov.in** ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

01 ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ಲಂಪ್ಸಮ್ ಟರ್ನ್‌ಕೀ ಆಧಾರದ ಮೇಲೆ 24 ಪಿಸಿ ಕ್ವಾರ್ಟರ್‌ಗಳ ನಿರ್ಮಾಣ – ಸಾಂಪ್ರದಾಯಿಕ ವಿಧಾನದ ನಿರ್ಮಾಣ (ಫ್ರೇಮ್ಡ್ ಸ್ಟ್ರಕ್ಚರ್) (ಜಿ+2) ಮಹಡಿಗಳ ನಿರ್ಮಾಣ ಕಾಮಗಾರಿಗೆ Project Management Consultancy Services (PMC) ಸಮಾಲೋಚಕರನ್ನು ನೇಮಿಸುವ ಕುರಿತು.

02 ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಲಂಪ್ಸಮ್ ಟರ್ನ್‌ಕೀ ಆಧಾರದ ಮೇಲೆ 24 ಪಿಸಿ ಕ್ವಾರ್ಟರ್‌ಗಳ ನಿರ್ಮಾಣ – ಸಾಂಪ್ರದಾಯಿಕ ವಿಧಾನದ ನಿರ್ಮಾಣ (ಫ್ರೇಮ್ಡ್ ಸ್ಟ್ರಕ್ಚರ್) (ಜಿ+2) ಮಹಡಿಗಳ ನಿರ್ಮಾಣ ಕಾಮಗಾರಿಗೆ Project Management Consultancy Services (PMC) ಸಮಾಲೋಚಕರನ್ನು ನೇಮಿಸುವ ಕುರಿತು.

03 ತುಮಕೂರು ನಗರದಲ್ಲಿ ಪೊಲೀಸ್ ಅಧೀಕ್ಷಕರ ವಸತಿ ಗೃಹ ನಿರ್ಮಾಣ ಕಾಮಗಾರಿಗೆ Project Management Consultancy Services (PMC) ಸಮಾಲೋಚಕರನ್ನು ನೇಮಿಸುವ ಕುರಿತು.

04 ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ 50 ಬಂದಿಗಳ ಸಾಮರ್ಥ್ಯದ ನೂತನ ತಾಲ್ಲೂಕು ಕಾರಾಗೃಹ ನಿರ್ಮಾಣ ಕಾಮಗಾರಿಗೆ Project Management Consultancy Services (PMC) ಸಮಾಲೋಚಕರನ್ನು ನೇಮಿಸುವ ಕುರಿತು.

05 ಬೆಂಗಳೂರಿನಲ್ಲಿ ಚಿಕ್ಕಬಾಣಾವರ ಪೊಲೀಸ್ ಠಾಣೆ, ಸಂಚಾರ ಠಾಣೆ ಮತ್ತು ಎಸಿಪಿ ಉಪವಿಭಾಗ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿಗೆ Project Management Consultancy Services (PMC) ಸಮಾಲೋಚಕರನ್ನು ನೇಮಿಸುವ ಕುರಿತು.

06 ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ 24 ಪಿಸಿ ವಸತಿಗಳ ಕಟ್ಟಡ ನಿರ್ಮಾಣ ಕಾಮಗಾರಿಗೆ Project Management Consultancy Services (PMC) ಸಮಾಲೋಚಕರನ್ನು ನೇಮಿಸುವ ಕುರಿತು.

07 ಕಲಬುರಗಿ ಜಿಲ್ಲೆ, ಸೇಡಂ ತಾಲ್ಲೂಕಿನಲ್ಲಿ ಐವತ್ತು ಬಂದಿಗಳ ಸಾಮರ್ಥ್ಯದ ನೂತನ ತಾಲ್ಲೂಕು ಕಾರಾಗೃಹ ನಿರ್ಮಾಣ ಕಾಮಗಾರಿಗೆ Project Management Consultancy Services (PMC) ಸಮಾಲೋಚಕರನ್ನು ನೇಮಿಸುವ ಕುರಿತು.

ಯೋಜನಾ ಮೇಲ್ವಿಚಾರಣಾ ಸೇವೆಗಳಲ್ಲಿ ನಿರ್ದಿಷ್ಟ ಅನುಭವ ಹೊಂದಿರುವ ಮತ್ತು ಅಗತ್ಯವಾದ ಮೂಲಸೌಕರ್ಯ ಮತ್ತು ಅಂತಹ ಸೇವೆಗಳನ್ನು ಕೈಗೊಳ್ಳಲು ಆರ್ಥಿಕ ಸಾಮರ್ಥ್ಯ ಹೊಂದಿರುವ ಆಸಕ್ತ ಸಮಾಲೋಚಕರು / ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಾಖಲೆಗಳ ಇತರೆ ಮಾಹಿತಿಗಳು ಕೆಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 15.04.2026ರ ನಂತರದಿಂದ** ಲಭ್ಯವಿರುತ್ತದೆ.

"ಕೆಎಸ್‌ಪಿಹೆಚ್ & ಐಡಿಸಿಎಲ್ ರವರು ಯಾವುದೇ ಕಾರಣ ನೀಡದೇ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ."

ಸೂಚನೆ: ಉಳಿದಂತೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡುಗಳಿದ್ದಲ್ಲಿ ಕೇವಲ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್ – ಗುತ್ತಿಗೆಗಳು

DIPR/CP/YC/110/2026-27

ಅಭಿಮತ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸರಿಯಾದ ರೀತಿಯಲ್ಲಿ ಉಪಯೋಗಿಸದಿದ್ದರೆ ಒಳ್ಳೆಯ ಗುಣವೇ ಕೆಲವು ಬಾರಿ ಕೆಟ್ಟದ್ದಕ್ಕೆ ಕಾರಣವಾಗುತ್ತದೆ.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಐಟಿ ನಿಯಮ: ತಿದ್ದುಪಡಿ ಪ್ರಸ್ತಾವ ವಾಕ್ ಸ್ವಾತಂತ್ರ್ಯ ಹತ್ತಿಕ್ಕುವ ಯತ್ನ

ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿಸಂಹಿತೆ) ನಿಯಮಗಳು–2021ಕ್ಕೆ ಕೇಂದ್ರ ಸರ್ಕಾರ ತರಲು ಉದ್ದೇಶಿಸಿರುವ ತಿದ್ದುಪಡಿಯು ವಾಕ್ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಪ್ರಯತ್ನವಾಗಿದೆ ಎಂದು ಭಾವಿಸಲಿಕ್ಕೆ ವಿಶ್ವಾಸಾರ್ಹ ಕಾರಣಗಳಿವೆ. ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು (ಎಂಇಐಟಿವೈ) ತರಲು ಮುಂದಾಗಿರುವ ಈ ತಿದ್ದುಪಡಿಯು, ಕೇಂದ್ರ ಸರ್ಕಾರದ 'ಸ್ಪಷ್ಟೀಕರಣಾತ್ಮಕ ಮತ್ತು ಕಾರ್ಯನಿರ್ವಹಣೆ'ಯ ವಿವರಣೆಯನ್ನು ಮೀರಿ, ವಾಕ್ ಸ್ವಾತಂತ್ರ್ಯದ ಮೇಲೆ ಸರ್ಕಾರದ ಅಧಿಕಾರವನ್ನು ವಿಸ್ತರಿಸುವ ಅವಕಾಶ ಕಲ್ಪಿಸಲಿದೆ. ಇಂಟರ್ನೆಟ್ ಆಡಳಿತಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಇರುವ ನಿಯಮಗಳು, ವಿಶೇಷವಾಗಿ ಮಧ್ಯವರ್ತಿಗಳ ಪಾತ್ರಕ್ಕೆ ಸಂಬಂಧಿಸಿದಂತೆ ಇರುವ ನಿಯಮಗಳನ್ನು ಬದಲಾಯಿಸುವುದು ತಿದ್ದುಪಡಿಯ ಉದ್ದೇಶವಾಗಿದೆ. ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವ ಮತ್ತು ಜಾರಿಗೊಳಿಸುವ ಪ್ರಕ್ರಿಯೆ ಶಾಸಕಾಂಗದ ಬೆಂಬಲವಿಲ್ಲದೆ ನಡೆಯುತ್ತಿದೆ. ನಿಯಮಗಳ ಬದಲಾವಣೆಯ ಮಹತ್ವದ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಅಭಿಪ್ರಾಯಗಳನ್ನು ಸ್ವೀಕರಿಸಲು ನೀಡಿರುವ ಮಾರ್ಚ್ 30ರಿಂದ ಏಪ್ರಿಲ್ 14ರವರೆಗಿನ ಕಡಿಮೆ ಗಡುವಿನ ಬಗ್ಗೆಯೂ ಆಕ್ಷೇಪಗಳು ವ್ಯಕ್ತವಾಗಿವೆ.

ನಿಯಮಗಳಿಗೆ ತರಲಾಗುವ ತಿದ್ದುಪಡಿಯು, ಡಿಜಿಟಲ್ ಸೇವೆಗಳನ್ನು ಒದಗಿಸುವ ವೇದಿಕೆಗಳು ಅಥವಾ ಮಧ್ಯವರ್ತಿಗಳಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣಗಳು, ಸಲಹೆಗಳು, ನಿರ್ದೇಶನಗಳು ಹಾಗೂ ಇತರ ಆದೇಶಗಳನ್ನು ಹೊರಡಿಸಲು 'ಎಂಇಐಟಿವೈ'ಗೆ ಅಧಿಕಾರವನ್ನು ನೀಡಲಿದೆ. ಐಟಿ ಕಾಯ್ದೆಯ ಸೆಕ್ಷನ್ 79ರ ಅಡಿಯಲ್ಲಿ ದೊರೆಯುವ ನಿರ್ದಿಷ್ಟ ಹೊಣೆಗಾರಿಕೆಯಿಂದ ರಕ್ಷಣೆ ನೀಡುವ 'ಸೇಫ್ ಹಾರ್ಬರ್' ಸುರಕ್ಷತೆಯನ್ನು ಉಳಿಸಿಕೊಳ್ಳಲು ಈ ವೇದಿಕೆಗಳು 'ಎಂಇಐಟಿವೈ' ನಿರ್ದೇಶನಗಳನ್ನು ಪಾಲಿಸುವುದು ಅನಿವಾರ್ಯವಾಗುತ್ತದೆ. 'ಸುರಕ್ಷಿತ, ವಿಶ್ವಾಸಾರ್ಹ ಮತ್ತು ಉತ್ತರದಾಯಿತ್ವದ ಇಂಟರ್ನೆಟ್' ವ್ಯವಸ್ಥೆಯನ್ನು ಖಚಿತಪಡಿಸುವ ಉದ್ದೇಶವನ್ನು ಸರ್ಕಾರ ಮುಂದು ಮಾಡುತ್ತಿದ್ದರೂ, ಸಚಿವಾಲಯದ ಪ್ರಸ್ತಾವ ಮುಕ್ತ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟು ಮಾಡುವ ಹಾಗೂ ನಿಯಂತ್ರಣಕ್ಕೆ ಹೆಚ್ಚಿನ ಅವಕಾಶ ಕಲ್ಪಿಸುವ ವ್ಯವಸ್ಥೆಯನ್ನು ಉತ್ತೇಜಿಸುವಂತೆ ಕಾಣಿಸುತ್ತಿದೆ. ಕಾನೂನು ಮಾರ್ಗದ ಹೊರತಾಗಿ, ಸರ್ಕಾರವು ತನ್ನಷ್ಟಕ್ಕೆ ತಾನು ಪರಮಾಧಿಕಾರ ಕೊಟ್ಟುಕೊಂಡಿದೆ ಹಾಗೂ ಸಲಹೆಗಳು ಮತ್ತು ಸ್ಪಷ್ಟೀಕರಣಗಳ ರೂಪದಲ್ಲಿ ಏಕಪಕ್ಷೀಯವಾಗಿ ರೂಪಿಸಲಾದ ನಿಯಮಗಳಿಗೆ ಒಪ್ಪಿಗೆಯನ್ನು ಬಯಸುತ್ತಿದೆ. ಇಲ್ಲಿಯವರೆಗೆ ಮಧ್ಯವರ್ತಿ ವೇದಿಕೆಗಳು ಹೊಂದಿದ್ದ 'ಸೇಫ್ ಹಾರ್ಬರ್' ಹಕ್ಕುಗಳು ಸರ್ಕಾರದ ಸಲಹೆ ಅಥವಾ ನಿಯಂತ್ರಣಗಳಿಗೆ ಒಳಪಟ್ಟಿರಲಿಲ್ಲ. ಈ ವ್ಯವಸ್ಥೆಯನ್ನು ಬದಲಿಸಿ, ವೇದಿಕೆಗಳು ಪ್ರಕಟಿಸುವ ವಿಷಯಗಳಿಗೆ ಅವುಗಳನ್ನು ಸಂಪೂರ್ಣ ಹೊಣೆಗಾರರನ್ನಾಗಿಸುವ ಪ್ರಯತ್ನಗಳು ನಡೆಯುತ್ತಿವೆ. ನಿಯಮಗಳು ಅಸ್ಪಷ್ಟವಾಗಿರುವ ಸಂದರ್ಭದಲ್ಲಿ ಮಧ್ಯವರ್ತಿ ವೇದಿಕೆಗಳು ವಿಶೇಷ 'ಎಚ್ಚರ'ದಿಂದ ವರ್ತಿಸತೊಡಗುತ್ತವೆ. ಆಗ, ಬಳಕೆದಾರರ ಡಿಜಿಟಲ್ ಹಕ್ಕುಗಳು ತೊಂದರೆಗೊಳಗಾಗಬಹುದು.



ಐಟಿ ನಿಯಮಗಳಿಗೆ ತಿದ್ದುಪಡಿ ತರುವ ಕೇಂದ್ರ ಸರ್ಕಾರದ ಪ್ರಸ್ತಾವವು ಆತಂಕಕಾರಿ. ಅದು, ಸಾರ್ವಜನಿಕ ವೇದಿಕೆಗಳಲ್ಲಿ ಜನಸಾಮಾನ್ಯರ ಧ್ವನಿಯನ್ನು ಅಡಗಿಸುವ ಸಾಧ್ಯತೆ ಇದೆ.

ಸಚಿವಾಲಯದ ಪ್ರಸ್ತಾವಗಳು ಮೇಲ್ವಿಚಾರಣೆಯ ವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶ ಹೊಂದಿವೆ. ಅಂತರ ವಿಭಾಗೀಯ ಸಮಿತಿಯೊಂದನ್ನು ರಚಿಸುವ ಮೂಲಕ, ಮಧ್ಯವರ್ತಿಗಳನ್ನು ಹಾಗೂ ಬಳಕೆದಾರರು ಸೃಷ್ಟಿಸುವ ಸುದ್ದಿ ಪಠ್ಯಗಳನ್ನು ಅದರ ವ್ಯಾಪ್ತಿಗೆ ತರುವ ಯೋಜನೆಯೂ ತಿದ್ದುಪಡಿಯಲ್ಲಿದೆ. ಇದರಿಂದ, ಆನ್‌ಲೈನ್ ಸಂವಹನವು ಕಠಿಣ ಪರಿಶೀಲನೆಗೆ ಒಳಪಡುವ ಸಾಧ್ಯತೆಯಿದೆ. ಡಿಜಿಟಲ್ ಸುದ್ದಿಗಳನ್ನು ಪ್ರಕಟಿಸುವ ವೇದಿಕೆಗಳೊಂದಿಗೆ, ದೈನಂದಿನ ಬಳಕೆದಾರರು ಮತ್ತು ಇನ್‌ಫ್ಲುಯೆನ್ಸರ್‌ಗಳನ್ನೂ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಸಮಾನ ಬಾಧ್ಯಸ್ಥರನ್ನಾಗಿ ಮಾಡುವ ಉದ್ದೇಶವಿದೆ. ಈ ಮೂಲಕ, ಬಾಹ್ಯ ಮೂಲಗಳಿಂದ ಸುದ್ದಿಯನ್ನು ಹಂಚಿಕೊಳ್ಳುವ ಅಥವಾ ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ ವಿಷಯಗಳನ್ನು ಹಂಚಿಕೊಳ್ಳುವ ಸಾಮಾಜಿಕ ಮಾಧ್ಯಮಗಳ ಸ್ವತಂತ್ರ ಬಳಕೆದಾರರು ಹಾಗೂ ಇನ್‌ಫ್ಲುಯೆನ್ಸರ್‌ಗಳನ್ನು ಕೂಡ ಸರ್ಕಾರದ ಮೇಲ್ವಿಚಾರಣೆಯ ಅಡಿಯಲ್ಲಿ ತರಬಹುದಾಗಿದೆ. ಈ ಬೆಳವಣಿಗೆ, ಸುದ್ದಿಗಳು ಹಾಗೂ ಅಭಿಪ್ರಾಯಗಳ ಮುಕ್ತ ಅಭಿವ್ಯಕ್ತಿಗೆ ಅಡಚಣೆ ಉಂಟು ಮಾಡಲಿದೆ. ಸರ್ಕಾರದ ಪ್ರಸ್ತಾವವನ್ನು, ತಪ್ಪು ಮಾಹಿತಿಯನ್ನು ತಡೆಗಟ್ಟುವ ಮುನ್ನೆಚ್ಚರಿಕೆ ಕ್ರಮದ ರೂಪದಲ್ಲಿ ಬಿಂಬಿಸಲಾಗುತ್ತಿದ್ದರೂ, ಅದು, ಸಾರ್ವಜನಿಕ ವೇದಿಕೆಗಳಲ್ಲಿನ ಜನಸಾಮಾನ್ಯರ ಧ್ವನಿಯನ್ನು ಮೌನವಾಗಿಸುವ ಸಾಧ್ಯತೆಯೇ ಹೆಚ್ಚಾಗಿದೆ.

ಚಾಲಡಿ

ಜಗತ್ತಿಗೆ ದೊಡ್ಡ ಪಾಠ

ಸಣ್ಣ ದೇಶ, ಯಾವ ಲೆಕ್ಕ, ಮೂರೇ ದಿನಕ್ಕೆ ಮುಗಿಸುತ್ತೇವೆ ಎಂಬ ದೈತ್ಯ ರಾಷ್ಟ್ರಗಳ ಅಹಂ ಅನ್ನು ಇರಾನ್ ಮತ್ತು ಉಕ್ರೇನ್ ಕರಗಿಸಿದ್ದು, ಜಗತ್ತಿಗೆ ಒಳ್ಳೆಯದು.

ಕವಿರಾಜ್, ಚಿತ್ರಸಾಹಿತಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕರ್ನಾಟಕ ಮತ್ತು ತೆಲಂಗಾಣ ಸರ್ಕಾರಗಳು 'ದ್ವೇಷ ಭಾಷಣ'ಕ್ಕೆ ಕಾನೂನಿನ ಲಗಾಮು ಹಾಕಲು ಮುಂದಾಗಿವೆ. ಆದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆಯವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ದ್ವೇಷ ಕಾರುತ್ತಿದ್ದಾರೆ. ಕಾಂಗ್ರೆಸ್ ಹೇಳುವ 'ಮೊಹಬ್ಬತ್ ಕಿ ದುಖಾನ್' ಎಂದರೆ ಇದೇನಾ?

ಡಾ. ಕೆ. ಸುಧಾಕರ್, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 9-4-2001

- **ತೆಹಲ್ಕಾ: ಹುಬ್ಬಳ್ಳಿ–ಧಾರವಾಡದಲ್ಲಿ ರ‍್ಯಾಲಿ**

ಹುಬ್ಬಳ್ಳಿ, ಏ. 8– ತೆಹಲ್ಕಾ ಚಿತ್ರ ಸುರುಳಿ ಬಯಲಿಗೆ ತಂದ ರಕ್ಷಣಾ ಹಗರಣಕ್ಕೆ ಸಂಬಂಧಿಸಿ ಪ್ರಧಾನಿ ರಾಜೀನಾಮೆಗೆ ಒತ್ತಾಯಿಸಿ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಇಂದು ಪ್ರತ್ಯೇಕ ರ‍್ಯಾಲಿ ನಡೆಸುವ ಮೂಲಕ ಕಾಂಗ್ರೆಸ್ ಪಕ್ಷದಲ್ಲಿನ ಗುಂಪುಗಾರಿಕೆ ಬಯಲಿಗೆ ಬಂದಂತಾಗಿದೆ.

ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಪ್ರತಿನಿಧಿಯಾಗಿ ಸಚಿವ ಡಿ.ಬಿ. ಇನಾಂದಾರ್ ಹುಬ್ಬಳ್ಳಿಯ ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ಇದು ಕೆಪಿಸಿಸಿ ನೇತೃತ್ವದಲ್ಲಿ ನಡೆದ ಅಧಿಕೃತ ರ‍್ಯಾಲಿ ಎಂದು ಶಾಸಕರಾದ ಜಬ್ಬಾರ್ ಖಾನ್ ಹೊನ್ನಾಳಿ, ಸಿ.ಎಸ್. ಶಿವಳ್ಳಿ, ಶಿವಾನಂದ ಅಂಬಡಗಟ್ಟಿ, ಕೆ.ಎನ್. ಗಡ್ಡಿ ಮತ್ತು ರಾಜ್ಯ ಕಿಸಾನ್ ಸೆಲ್ ಅಧ್ಯಕ್ಷ ವೀರಣ್ಣ ಮತ್ತಿಕಟ್ಟಿ ಹೇಳಿದ್ದಾರೆ.

- **ವಿಶ್ವಕಪ್ ಏಷ್ಯಾ ವಲಯ ಫುಟ್‌ಬಾಲ್: ಯುಎಇ ವಿರುದ್ಧ ಭಾರತಕ್ಕೆ ಜಯ**

ಬೆಂಗಳೂರು, ಏ. 8– ಭಾರತದ ಆಟಗಾರರು ಕೊನೆಗೂ 'ಪವಾಡ' ನಡೆಸಿಯೇ ಬಿಟ್ಟರು. ವಿಶ್ವಕಪ್ ಫುಟ್‌ಬಾಲ್ ಏಷ್ಯಾ ವಲಯದ ಮೊದಲ ಅರ್ಹತಾ ಸುತ್ತಿನ 8ನೇ ಗುಂಪಿನ ಪಂದ್ಯದಲ್ಲಿ ಬಲಿಷ್ಠ ಯುನೈಟೆಡ್ ಅರಬ್ ಎಮಿರೇಟ್ಸ್ ತಂಡವನ್ನು ಆಲ್ಬರ್ಟೊ ಜೂಲ್ಸ್ ಕ್ಲಾಡಿಯೊ ತಂದಿತ್ತ ಪಂದ್ಯದ ಏಕೈಕ ಗೋಲಿನಿಂದ ಸೋಲಿಸಿದ ಭಾರತ ಅನಿರೀಕ್ಷಿತ ಫಲಿತಾಂಶ ಒದಗಿಸಿತು.

75 ವರ್ಷಗಳ ಹಿಂದೆ

ಸೋಮವಾರ, 9-4-1951

- **ಭಾರತದ ರಾಜ್ಯಾಂಗದಲ್ಲಿ ತಿದ್ದುಪಾಟು**

ನವದೆಹಲಿ, ಏ. 8– ರಾಜ್ಯಾಂಗಕ್ಕೆ ಅನೇಕ ತಿದ್ದುಪಡಿಗಳನ್ನು ಸೂಚಿಸಲು ಭಾರತ ಸರ್ಕಾರವು ಪರಿಶೀಲಿಸುತ್ತಿರುವುದಾಗಿ ತಿಳಿದುಬಂದಿದೆ. ಇವುಗಳ ಬಗ್ಗೆ ಕೇಂದ್ರ ಸರ್ಕಾರವು ಅಂತಿಮ ನಿರ್ಧಾರಕ್ಕೆ ಬಂದ ಬಳಿಕ ವಿವಿಧ ಸಂಸ್ಥಾನಗಳ ಮುಖ್ಯ ಸಚಿವರುಗಳಿಗೆ ಅವರ ಅಭಿಪ್ರಾಯ ತಿಳಿಯಲು ಇವನ್ನು ಕಳುಹಿಸಲಾಗಿರುವ ನಿರೀಕ್ಷೆ ಇದೆ.

ಪ್ರಧಾನಿ ನೆಹರೂ ಅವರು ಆಗಲೇ ಘೋಷಿಸಿರುವಂತೆ, ಈ ತಿದ್ದುಪಡಿಗಳನ್ನು ರಾಜ್ಯಾಂಗಕ್ಕೆ ತಿದ್ದುಪಡಿ ಮಾಡುವ ಮಸೂದೆಯ ರೂಪದಲ್ಲಿ ಸೂಚಿಸಲಾಗುವುದು. ಮೇ ತಿಂಗಳ ಅಂತ್ಯದಲ್ಲಿ ಪಾರ್ಲಿಮೆಂಟ್ ಅಧಿವೇಶನವೇಳುವ ಮುನ್ನ ಈ ಮಸೂದೆಗೆ ಅಂಗೀಕಾರವಾಗುವ ಸಂಭವವಿದೆ. ರಾಜ್ಯಾಂಗದಲ್ಲಿ ಐದು ಮುಖ್ಯ ತಿದ್ದುಪಡಿಗಳನ್ನು ಸೂಚಿಸುವ ಯೋಚನೆ ಇದೆ. ಇವು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದುವಾಗಿರುತ್ತವೆ.

ಆಕಾಶ–ಪಾತಾಳ ಸೇರಿಸಿ ಶಕ್ತಿಶೋಧ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಆಫ್ರಿಕಾ ಖಂಡದ ಮಾಲಿ ದೇಶದಲ್ಲಿ 'ಬೌರಾಕೆಬೌಗೌ' ಹೆಸರಿನ ಹಳ್ಳಿಗೆ ಬನ್ನಿ. ಜಗತ್ತಿನ ನಕಾಶೆಯಲ್ಲಿ ಇದಕ್ಕೆ ವಿಶೇಷ ಸ್ಥಾನಮಾನ ವಿದೆ. ಆದರೆ, ನಕಾಶೆಯಲ್ಲಿ ಈ ಊರನ್ನು ಹುಷಾರಾಗಿ ಹುಡುಕಬೇಕು. ಏಕೆಂದರೆ, ಆ ದೇಶದ ಬಹಳಷ್ಟು ಊರುಗಳ ಹೆಸರಿನ ತುದಿಗೆ ...ಬೌಗೌ ಎಂತಲೇ ಇರುತ್ತದೆ. ಉದಾ: ನೌಮೌಬೌಗೌ, ಜಿಬ್ಲೆಬೌಗೌ, ಬೆಲೆಕಾನ್‌ಬೌಗೌ, ಕಲೀಫಾಬೌಗೌ, ಸೊಗಲೊಂಬೌಗೌ- ಹೀಗೆ. ಪಕ್ಕದ ಬುರ್ಕಿನಾಫಾಸೊ ದೇಶದಲ್ಲೂ ಬೌಗೌಗಳು ಬಹಳಷ್ಟಿವೆ. ಬೌರಾಕೆಬೌಗೌ ವಿಶೇಷ ಏನೆಂದರೆ, ಅಲ್ಲಿನ 1,500 ಕುಟುಂಬಗಳಿಗೆ ನೈಸರ್ಗಿಕ ಜಲಜನಕ ಅನಿಲದಿಂದಲೇ ವಿದ್ಯುತ್ ಪೂರೈಸಲಾಗುತ್ತಿದೆ. ಹೊಗೆಯಿಲ್ಲ, ಮಸಿ ಇಲ್ಲ; ಈ ಅನಿಲವನ್ನು ಉರಿಸಿದಾಗ ಶುದ್ಧ ನೀರಿನ ಆವಿಯೇ ಹೊರಬರುತ್ತದೆ. ಅದನ್ನೇ ತಂಪಾಗಿಸಿ ಕುಡಿಯಲೂ ಬಳಸಬಹುದು. ಕಳೆದ 15 ವರ್ಷಗಳಿಂದ ಸತತವಾಗಿ ಜಲಜನಕದ ಶಕ್ತಿಯಿಂದಲೇ ಅಲ್ಲಿ ಬೆಳಕು ಸೂಸುತ್ತಿದೆ, ಒಲೆ ಉರಿಯುತ್ತಿದೆ. ಪರಿಶುದ್ಧ ಸಂಪನ್ಮೂಲದ ಏಕೈಕ ಜಾಗತಿಕ ಉದಾಹರಣೆ ಅದು.

ಭೂಮಿಗೆ ರಂಧ್ರ ಕೊರೆದರೆ ಕೆಲವೆಡೆ ನೀರು, ನಸೀಬಿದ್ದರೆ ನೈಸರ್ಗಿಕ ಅನಿಲ ಮತ್ತು ಕಚ್ಚಾತೈಲ ಸಿಗುವುದು ನಮಗೆಲ್ಲ ಗೊತ್ತು. ಮಾಲಿ ದೇಶದ ಈ ಊರಲ್ಲಿ ನೆಲದಾಳದಿಂದ ಜಲಜನಕವೇ ಜಿನುಗುತ್ತಿದೆ ಎಂಬುದು ಗೊತ್ತಾಗಲು ಒಂದು ಚೋದ್ಯದ ಸಂದರ್ಭ ಕಾರಣವಾಗಿತ್ತು. ಅಲ್ಲಿನ ಹಳೇ ಬಾವಿಕಟ್ಟೆಯ ಮೇಲೆ ಹೈದನೊಬ್ಬ ಕೂತು ಸಿಗರೇಟು ಸೇದಲೆಂದು ಕಡ್ಡಿಗೀರಿದ. ಅದರ ಕಿಡಿಯಿಂದ ಬಾವಿಗೇ ಬೆಂಕಿ ಬಿದ್ದು ದಗದಗ ಉರಿಯಿತು. ಬೆಂಕಿ ಆರಿ ತುಸು ಹೊತ್ತಿನ ಮೇಲೆ ಕಿಡಿ-ಗೇಡಿಗಳು ಮತ್ತೆ ಕಡ್ಡಿ ಗೀರಿದಾಗ ಪುನಃ ಬೆಂಕಿ ಹೊತ್ತಿಕೊಂಡಿತು.

ಮಾಲಿ ತೀರಾ ಹಿಂದುಳಿದ ದೇಶವಾದರೂ ಆ ಊರಿಗೆ ಶಕ್ತಿತಜ್ಞರು ಬಂದರು. ಬಾವಿಯಲ್ಲಿ ಒಸರುತ್ತಿರುವ ಜಲಜನಕ ಶೇ 98ರಷ್ಟು ಪರಿಶುದ್ಧವೆಂದು ನಿರ್ಧರಿಸಿ, ಪಕ್ಕದಲ್ಲಿ ಕೊಳವೆ ಬಾವಿ ಕೊರೆದು ಜನರೇಟರ್ ಹಾಕಿ ವಿದ್ಯುತ್ ಉತ್ಪಾದನೆ ಆರಂಭಿಸಿದರು. ಅದು ಹೊಸದೊಂದು ಶಕ್ತಿಮೂಲದ ಶೋಧಕ್ಕೆ ಪ್ರೇರಣೆ ನೀಡಿತು.

ನೆಲದಾಳದಲ್ಲಿ ಜಲಜನಕವೂ ಸಿಗುತ್ತದೆಂದು ತೈಲ ಕಂಪನಿಗಳಿಗೆ ಹಿಂದೆಯೇ ಗೊತ್ತಿತ್ತಾದರೂ ಅದನ್ನೊಂದು ರಗಳೆ ಅನಿಲವೆಂದೇ ಕಡೆಗಣಿಸಿದ್ದರು. ಆದರೆ, ಈಗಿನ ಪರಿಸ್ಥಿತಿ ಬದಲಾಗಿದೆ. ಕಚ್ಚಾತೈಲ, ನೈಸರ್ಗಿಕ ಅನಿಲ, ಕಲ್ಲಿದ್ದಲು ಮುಂತಾದ ಕೊಳಕು ಪಳೆಯುಳಿಕೆ ಇಂಧನಗಳನ್ನು ಉರಿಸುತ್ತ ಹೋದರೆ ಭೂಮಿಯ ಜ್ವರ ಇನ್ನಷ್ಟು ಏರುತ್ತದೆಂದು ಗೊತ್ತಾಗಿದೆ. ಈಗಂತೂ ಯಾವುದೋ ದೇಶದ ತಿಕ್ಕಲು ದೊರೆ ಇನ್ಯಾವುದೋ ದೇಶವನ್ನು ಹತ್ತಿಕ್ಕಲು ಹೋಗಿ ಸಕಲಾರು ದೇಶಗಳಲ್ಲಿ ಇಂಧನದ ಅಭಾವ ಸೃಷ್ಟಿ ಮಾಡಲೂಬಹುದು! ಈ ಅವಾಂತರಗಳ ಮಧ್ಯೆ ಇನ್ನು 25–30 ವರ್ಷಗಳಲ್ಲಿ ಶಕ್ತಿಯ ಬೇಡಿಕೆ ಈಗಿಗಿಂತ ಮೂರು ಪಟ್ಟು ಹೆಚ್ಚಾಗಲಿದೆ. ಹಾಗಾಗಿ ಹೊಸ, ಸುರಕ್ಷಿತ ಇಂಧನಗಳನ್ನು ಮತ್ತು ಶಕ್ತಿಮೂಲಗಳನ್ನು ಶೋಧಿಸುವ ತರಾತುರಿ ಹಿಂದೆಂದಿಗಿಂತ ಹೆಚ್ಚಾಗಿದೆ. ಗಾಳಿ + ಬಿಸಿಲು ಸಾಲದೆಂದು ಹೊಸ ಹೊಸ ಪರಮಾಣು ಸ್ಥಾವರಗಳ ನಿರ್ಮಾಣ ನಡೆಯುತ್ತಿದೆ. ಯುರೇನಿಯಂನಲ್ಲಿರುವ ಪರಮಾಣುಗಳನ್ನು ಒಡೆದು ಶಕ್ತಿ ಉತ್ಪಾದನೆ ಮಾಡುವುದಕ್ಕಿಂತ ನೀರಲ್ಲಿರುವ ಜಲಜನಕದ ಪರಮಾಣುಗಳನ್ನು ಬಲವಂತದಿಂದ ಬೆಸುಗೆ ಹಾಕಿದರೆ ಇನ್ನೂ ಜಾಸ್ತಿ ಶಕ್ತಿ ಸಿಗುತ್ತದೆಂದು ಅಂಥ 'ಫ್ಯೂಶನ್ ರಿಯಾಕ್ಟರ್'ಗಳ ನಿರ್ಮಾಣದ ಪೈಪೋಟಿ ತೀವ್ರವಾಗಿದೆ. ನೆಲದ ಕೆಳಗೆ ಆಳದ ರಂಧ್ರ ಕೊರೆದು ಅಲ್ಲಿನ ಭೂಶಾಖವನ್ನೇ ಮೇಲೆತ್ತಿ ಶಕ್ತಿಯನ್ನು ಪಡೆಯುವ ಕೆಲಸವೂ ನಡೆದಿದೆ. ಅಮೆರಿಕದ ಕೇಪ್ ಸ್ಟೇಶನ್ ಎಂಬಲ್ಲಿ ದಾಖಲೆಯ ನಾಲ್ಕೂವರೆ ಕಿ.ಮೀ. ಆಳಕ್ಕೆ ಮತ್ತು ಒಂದೂವರೆ ಕಿ.ಮೀ. ಅಡ್ಡಡ್ಡ ರಂಧ್ರ ಕೊರೆದು ಭೂಶಾಖವನ್ನು ಉಗಿಯನ್ನಾಗಿ ಮೇಲೆತ್ತಿ ವಿದ್ಯುತ್ ಉತ್ಪಾದಿಸಿ ಇದೀಗ ಗ್ರಿಡ್‌ಗೆ ಪೂರೈಸಲು ಸಿದ್ಧತೆ ನಡೆದಿದೆ.

ಅವೆಲ್ಲವುಗಳ ಹೊರತಾಗಿ ಈಗ ಭೂತಲದ ಜಲಜನಕ (ಜಿಯಾಲಜಿಕಲ್ ಹೈಡ್ರೊಜನ್) ಎಲ್ಲೆಲ್ಲಿ ಸಿಕ್ಕೀತೆಂದು ಶೋಧಿಸಲು ಭಾರೀ ಬಂಡವಾಳ ಹರಿದು ಬರತೊಡಗಿದೆ. ಶಿಲೆಗಳಲ್ಲಿ ಸುಮಾರು ಐದು ಸಾವಿರ ಶತಕೋಟಿ ಟನ್ ಜಲಜನಕ ಅವಿತಿದೆ ಎಂದು ಅಂದಾಜು ಮಾಡಲಾಗಿದೆ. ಅವು ಸಾಂದ್ರವಾಗಿ ಸಿಗಬಹುದಾದ ತಾಣಗಳಿಗಾಗಿ ಅಮೆರಿಕ, ಆಸ್ಟ್ರೇಲಿಯಾ ಮತ್ತು ಫ್ರಾನ್ಸ್ ದೇಶಗಳಲ್ಲಿ ಆಕಾಶ-ಪಾತಾಳ ಒಂದಾಗಿಸಿ ಹುಡುಕಾಟ ನಡೆದಿದೆ. ಜಲಜನಕ ಅನಿಲ ಪಾತಾಳದಲ್ಲಷ್ಟೇ ಸಿಗುತ್ತದಾದರೂ, ಕೆಲವು ವಿಶಿಷ್ಟ ಭೂಲಕ್ಷಣ ಇರುವಲ್ಲಿ ಮಾತ್ರ ಅದು ಅವಿತಿರುವ ಸಾಧ್ಯತೆ ಇರುವುದರಿಂದ ಅಂಥ ಲಕ್ಷಣಗಳನ್ನು ಆಕಾಶದಿಂದಲೇ ಪತ್ತೆ ಮಾಡಬಹುದಾಗಿದೆ. ಅಂದಹಾಗೆ, ಜಲಜನಕ ತೀರಾ ಚಂಚಲ ಅನಿಲವಾಗಿದ್ದು ಪಾತಾಳದಿಂದ ಮೇಲೆತ್ತುವಾಗ ಅದೆಷ್ಟೇ ಜಾಗರೂಕತೆ ವಹಿಸಿದರೂ ಅರ್ಧಕ್ಕಿಂತ ಹೆಚ್ಚೇ ಪುಸಕ್ಕೆಂದು ಜಾರಿ ಆಕಾಶ ಸೇರುತ್ತದೆ.

> ಇನ್ನು 25–30 ವರ್ಷಗಳಲ್ಲಿ ಜಗತ್ತಿನ ಶಕ್ತಿ ಬೇಡಿಕೆ ಈಗಿನ ಮೂರು ಪಟ್ಟು ಹೆಚ್ಚಲಿದೆ. ತೈಲ, ಅನಿಲ, ಕಲ್ಲಿದ್ದಲಿನಂಥ ಕೊಳಕು ಇಂಧನಗಳನ್ನು ಬದಿಗಿಟ್ಟು ಹೊಸ, ಸುರಕ್ಷಿತ, ಸುಸ್ಥಿರ ಶಕ್ತಿಮೂಲಗಳಿಗೆ ತುರುಸಿನ ಹುಡುಕಾಟ ನಡೆದಿದೆ. ಶಕ್ತ ರಾಷ್ಟ್ರಗಳೇನೋ ಚಂದ್ರನಲ್ಲೂ ಗಣಿಗಾರಿಕೆ ನಡೆಸಬಹುದು. ನಮ್ಮದೇನು ಕತೆ?

ನೆಲದಾಳದ ಎಂತೆಂಥ ಶಿಲಾಸ್ತರಗಳಲ್ಲಿ ಜಲಜನಕ ತಂತಾನೇ ಸಿಗಬಹುದು ಎಂಬುದನ್ನು ವಿಜ್ಞಾನಿಗಳು ಈಗಾಗಲೇ ಶೋಧಿಸಿದ್ದಾರೆ. ಭೂಖಂಡಗಳು ತಂತಮ್ಮೊಳಗೆ ಭಾರೀ ತಿಕ್ಕಾಟ ನಡೆಸಿದ ತಾಣಗಳಲ್ಲೆಲ್ಲ ವಿಶೇಷ ಆದ್ಯತೆಯ ಮೇಲೆ ಸಮೀಕ್ಷೆ ನಡೆಯುತ್ತಿದೆ. ಅನಾದಿಕಾಲದಲ್ಲಿ ತೀರ ಒತ್ತಡ ಮತ್ತು ಶಾಖದಿಂದ ಪಕ್ವಾದ 'ಅಲ್ಟ್ರಾಮಾಫಿಕ್' ಶಿಲೆಗಳಲ್ಲಿನ ಸರ್ಪೆಂಟೀನ್ ಸ್ತರಗಳಲ್ಲೂ ಜಲಜನಕ ಸಂಚಯ ಇದ್ದೀತೆಂದು ಹೇಳಲಾಗುತ್ತಿದೆ. ಅದು ನಿಜವೇ ಆಗಿದ್ದರೆ ನಮ್ಮ ಹೊಳೆನರಸೀಪುರದ ಎಣ್ಣೆರಂಗನ ಬೆಟ್ಟದ ಸುತ್ತಲಿನ ಖನಿಜಕಾಶಿಯಲ್ಲೂ ಜಲಜನಕ ಜಿನುಗಬಹುದು. (ಹಾಗೆಂದು ಅಲ್ಲಿನ ಕತ್ತಲ ಕಂದರಗಳಲ್ಲಿ ಕಡ್ಡಿಗೀರುವ ಸಾಹಸಕ್ಕೆ ಹೋದೀರಿ ಜೋಕೆ!)

ಜಲಜನಕದ ನಾಲ್ಕು 'ವರ್ಣಮಯ' ಮುಖಗಳು ಹೀಗಿವೆ: ಅದನ್ನು ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲದಿಂದಲೂ ಪಡೆಯಬಹುದು. ಆದರೆ ಉತ್ಪಾದನಾ ಹಂತದಲ್ಲೇ ಸಾಕಷ್ಟು ಕೊಳಕು ಆಕಾಶಕ್ಕೇರುತ್ತದೆ. ಹಾಗಾಗಿ ಅದು ಕಂದು 'ಗ್ರೇ ಹೈಡ್ರೊಜನ್'. ಆಗ ಹೊರಹೊಮ್ಮುವ ಕೊಳಕು ಗಾಳಿಯನ್ನು ನೆಲದೊಳಕ್ಕೆ ತೂರಿಸುತ್ತಲೇ ಜಲಜನಕವನ್ನು ಉತ್ಪಾದಿಸಿದರೆ ಅದು ತುಸು ಸುಧಾರಿತ 'ಬ್ಲೂ ಹೈಡ್ರೊಜನ್' ಎನಿಸುತ್ತದೆ. ಇನ್ನು, ಗಾಳಿ ಅಥವಾ ಬಿಸಿಲಿನಿಂದ ವಿದ್ಯುತ್ ಉತ್ಪಾದಿಸಿ, ಆ ವಿದ್ಯುಚ್ಛಕ್ತಿಯಿಂದ ನೀರನ್ನು ವಿಭಜಿಸಿ, ಆಮ್ಲಜನಕ ಮತ್ತು ಶುದ್ಧ ಜಲಜನಕ ಅನಿಲಗಳನ್ನು ಸಂಗ್ರಹಿಸಬಹುದು. ಅದಕ್ಕೆ ಪರಿಸರಸ್ನೇಹಿ 'ಗ್ರೀನ್ ಹೈಡ್ರೊಜನ್' ಎನ್ನುತ್ತಾರೆ. ರಾಜಸ್ತಾನ್ ಮರುಭೂಮಿಯ ಬಿಸಿಲನ್ನು ಹೀರಿ ಅದಾನಿ 'ಗ್ರೀನ್ ಎನರ್ಜಿ' ಕಂಪನಿ ಈ ವಿಧಾನದಿಂದಲೇ ಜಲಜನಕವನ್ನು ಉತ್ಪಾದಿಸಿ ದೇಶಕ್ಕೆಲ್ಲ ವಿತರಿಸುತ್ತಿದೆ. ಕೊನೆಯದಾಗಿ, ಭೂತಲದಿಂದಲೇ ನೇರವಾಗಿ ಜಲಜನಕವನ್ನು ಹೀರಿ ತೆಗೆಯುವುದು 'ವೈಟ್ ಹೈಡ್ರೊಜನ್' ಅಥವಾ 'ಗೋಲ್ಡ್ ಹೈಡ್ರೊಜನ್' ಅಥವಾ 'ನೈಸರ್ಗಿಕ ಜಲಜನಕ' ಎನ್ನಿಸಿಕೊಳ್ಳುತ್ತದೆ.

ಭಾರತದಲ್ಲಿ ಜಲಜನಕ ಇಂಧನಕ್ಕೆಂದೇ 20 ಸಾವಿರ ಕೋಟಿ ರೂಪಾಯಿಗಳ 'ರಾಷ್ಟ್ರೀಯ ಗ್ರೀನ್ ಹೈಡ್ರೊಜನ್ ಮಿಶನ್' ಚಾಲೂ ಇದ್ದು, ಇದೀಗ ನೆಲದಾಳದ ಜಲಜನಕದ ಶೋಧಕ್ಕೂ ಹೆಜ್ಜೆ ಇಡಲಾಗುತ್ತಿದೆ. ಇತ್ತೀಚೆಗಷ್ಟೇ ಸಮೀಕ್ಷಾ ತಂಡಗಳು ಹಡಗು, ವಿಮಾನಗಳಲ್ಲಿ ಗುಜರಾತಿನ ಕ್ಯಾಂಬೇ ಬೋಗುಣಿ, ಅಂಡಮಾನ್ ನಿಕೊಬಾರ್ ದ್ವೀಪ ಸಮೂಹ ಮತ್ತು ಬಂಗಾಳ ಕೊಲ್ಲಿಗಳಲ್ಲಿ ದತ್ತಾಂಶ ಸಂಗ್ರಹಕ್ಕೆ ಹೊರಟಿವೆ.

ಬೌರಾಕೆಬೌಗೌ ಕುಗ್ರಾಮಕ್ಕೆ ಮತ್ತೆ ಬರೋಣ. ಅಲ್ಲಿನ ಬಾವಿಯಲ್ಲಿ ಜಲಜನಕ ಪತ್ತೆಯಾದ ತಕ್ಷಣ ವಿಜ್ಞಾನಿಗಳು ಅತ್ತ ಧಾವಿಸಿ ಇಷ್ಟುದ್ದ ಕತೆಗೆ ಕಾರಣರಾದರು. ಹೋಲಿಕೆಗೆ ಹೇಳುವುದಾದರೆ, ಬೆಂಗಳೂರಿನ ಹೊರವಲಯದ ಮಾವಳ್ಳಿಪುರದ ತಿಪ್ಪೆಗುಡ್ಡೆಯಲ್ಲೂ ಏಳೆಂಟು ವರ್ಷಗಳ ಹಿಂದೆ ಹೀಗೇ ಆಗಿತ್ತು. ಚಿಂದಿ ಆಯುವ ಹುಡುಗನೊಬ್ಬ ಕಡ್ಡಿ ಗೀರಿ ಬಿಸಾಕಿದಾಗ ಅಲ್ಲಿ ಜಿನುಗುತ್ತಿದ್ದ ಮೀಥೇನ್ ಅನಿಲದಿಂದ ನೀಲಿ ಜ್ವಾಲೆ ಹೊಮ್ಮಿತು. ತಮಾಷೆಗೆಂದು ಪಡ್ಡೆಹುಡುಗರು ಅಲ್ಲೇ ಒಲೆ ಹೊತ್ತಿಸಿ, ನೀರನ್ನು ಕುದಿಸಿದ ದೃಶ್ಯವೂ ಟೀವಿಯಲ್ಲಿ ಬಂತು. ಆದರೆ 'ವಿಜ್ಞಾನ ನಗರ' ಎಂಬ ಖ್ಯಾತಿಯ ಯಾವ ಸರ್ಕಾರಿ ತಜ್ಞರೂ ಅಲ್ಲಿ ಹೋಗಿ ರಂಧ್ರ ಮಾಡಿ, ಕೊಳವೆ ಇಳಿಸಿ ಮೀಥೇನ್ ಅನಿಲದ ಗಣಿಗಾರಿಕೆಯ ಸಾಧ್ಯತೆಯನ್ನು ಪರೀಕ್ಷೆ ಮಾಡಲಿಲ್ಲ. ಹಾಗೆಂದು ಪರೀಕ್ಷೆ ಆಗಿಲ್ಲವೆಂದಲ್ಲ; ನಗರದ ಸುತ್ತಲಿನ 38 (ಅಧಿಕೃತ) ತಿಪ್ಪೆಗುಡ್ಡೆಗಳಲ್ಲಿ ಸಿಗುವ ಮೀಥೇನ್ ಅನಿಲದ ಒಟ್ಟೂ ಪ್ರಮಾಣವನ್ನು ಅಂದಾಜು ಮಾಡಿ ಬೆಂಗಳೂರು ವಿವಿಯ ಪರಿಸರ ವಿಜ್ಞಾನಗಳ ವಿಭಾಗದಿಂದ ಡಾಕ್ಟರೇಟ್ ಡಿಗ್ರಿ ಪಡೆದವರೂ ಇದ್ದಾರೆ. ವಿಭಾಗದ ಮುಖ್ಯಸ್ಥೆಯಾಗಿದ್ದ ಡಾ. ನಂದಿನಿಯವರ ಮಾರ್ಗದರ್ಶನದಲ್ಲಿ ಇನ್ನೊಬ್ಬ ಯುವತಿ ಇನ್ನೇನು ಪಿಎಚ್.ಡಿ. ಪ್ರಬಂಧವನ್ನು ಸಲ್ಲಿಸಲಿದ್ದಾರೆ. ಇದೀಗ ಯುದ್ಧದ ಬಿಸಿ ತಟ್ಟಿದಾಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ ತುಸು ಎಚ್ಚತ್ತಂತಿದೆ. ಕಸದ ಶಕ್ತಿಯನ್ನು ಹೀರಿ ಸಿಲಿಂಡರಿಗೆ ತುಂಬುವುದು ವ್ಯವಸ್ಥಿತವಾಗಿ ಜಾರಿಗೆ ಬಂದರೆ ನಮ್ಮ ರಾಜ್ಯದ ಜಿಲ್ಲೆ, ತಾಲ್ಲೂಕು, ಪಟ್ಟಣಗಳಿಗೂ ಉತ್ತಮ ಮಾದರಿ ಸಿಕ್ಕಂತಾದೀತು.

ಶಕ್ತ ದೊರೆಗಳು ಭೂಮಿಯ ಆಚಿನ ಇಂಧನಕ್ಕೂ ಬಲೆ ಬೀಸುತ್ತಿದ್ದಾರೆ. ಚಂದ್ರನ ಆಚೆ ಮಗ್ಗುಲಿನ ಕತ್ತಲಲ್ಲಿ ಹಿಮ, ನೀರು, ಜಲಜನಕ ಮತ್ತು ಹೀಲಿಯಂ ಸಂಗ್ರಹ ಜಾಸ್ತಿ ಇದೆಯೆಂದು ಗೊತ್ತಾಗಿದೆ. ಚೀನೀಯರು 2020ರಲ್ಲಿ ಮಾನವರಹಿತ 'ಚಾಂಗ್-ಇ5' ನೌಕೆಯನ್ನು ಅಲ್ಲಿಳಿಸಿ ರೋಬಾಟ್ ಮೂಲಕವೇ ಒಂದಿಷ್ಟು ಕಲ್ಲುಗಳನ್ನು ಎತ್ತಿ ತಂದಿದ್ದಾರೆ. ಅದು ಗೊತ್ತಾಗಿ, ಟ್ರಂಪ್ ಮಹಾಶಯ ಆಗಲೇ ಸಿಡಿದೆದ್ದು ಚಂದ್ರನ ಮೇಲೆ ಗಣಿಗಾರಿಕೆ ಮಾಡಬೇಕೆಂಬ ಕಾರ್ಯಾಜ್ಞೆಯನ್ನು ಅದೇ ವರ್ಷ ಹೊರಡಿಸಿ ಆಗಿತ್ತು. ಚೀನೀಯರಿಗಿಂತ ಒಂದು ಹೆಜ್ಜೆ ಮುಂದಿಟ್ಟು ಇದೀಗ ನಾಲ್ವರು ಗಗನಯಾತ್ರಿಗಳು 'ಆರ್ಟೆಮಿಸ್' ಯೋಜನೆಯಲ್ಲಿ ಚಂದ್ರನ ಪ್ರದಕ್ಷಿಣೆ ಮುಗಿಸಿ ಬರುತ್ತಿದ್ದಾರೆ. ಇನ್ನು ಐದು ವರ್ಷಗಳಲ್ಲಿ ಈ ಎರಡೂ ದೇಶಗಳ ಧೀರರು ಅಲ್ಲಿಳಿದು ಟೆಂಟ್ ಹಾಕಲಿದ್ದಾರೆ. ಆಮ್ಲಜನಕವೂ ಸಿಗದ ಚಂದ್ರನೆಲದಲ್ಲಿ ಆರಂಭಿಕ ಶಕ್ತಿಮೂಲವಾಗಿ ಪರಮಾಣು ರಿಯಾಕ್ಟರ್‌ಗಳನ್ನು ಹೂಡಲು ಎರಡೂ ದೇಶಗಳು ಸನ್ನದ್ಧವಾಗುತ್ತಿವೆ. ನೀರು ಸಿಕ್ಕರೆ ಅದನ್ನೇ ವಿಭಜಿಸಿ ಉಸಿರಾಟದ ಗಾಳಿಯನ್ನೂ, ಅಡುಗೆಗೆ ಇಂಧನವನ್ನೂ ಪಡೆಯುತ್ತಾರೇನೋ.

ಚಂದ್ರನ ಕಲ್ಲು ಮರಳಿನ ರಾಶಿಯಲ್ಲಿ ಅವರು ಎಂಥದೇ ಇಂಧನವನ್ನು ಹುಡುಕಿಕೊಳ್ಳಲಿ. ನಾವು ಇಲ್ಲಿ ನಮ್ಮ ನಗರ-ಪಟ್ಟಣಗಳ ಹಿತ್ತಿಲಲ್ಲಿ ಹೂತಿರುವ ನಿಧಿಯನ್ನೇ ಮೇಲೆತ್ತಿ ಉರಿಸುವಂತಾದರೆ ನಮಗೂ ಒಳ್ಳೆಯದು, ಆಕಾಶಕ್ಕೂ ಭೂಮಿಗೂ ಒಳ್ಳೆಯದು.

ವಾಚಕರ ವಾಣಿ

ನೇಮಕಾತಿ: ಹೋರಾಟ ಹತ್ತಿಕ್ಕಲು ಯತ್ನ

ರಾಜ್ಯ ಸರ್ಕಾರದ ನೇಮಕಾತಿ ವಿಳಂಬ ಧೋರಣೆ ಖಂಡಿಸಿ ಧಾರವಾಡದಲ್ಲಿ ಉದ್ಯೋಗ ಆಕಾಂಕ್ಷಿಗಳು ಮತ್ತೊಂದು ಸುತ್ತಿನ ಶಾಂತಿಯುತ ಹೋರಾಟಕ್ಕೆ ಸಜ್ಜಾಗಿದ್ದಾರೆ. ಇದಕ್ಕಾಗಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆಯು ಪೊಲೀಸ್ ಇಲಾಖೆಯ ಅನುಮತಿ ಕೋರಿದೆ. ಆದರೆ, ಪೊಲೀಸ್ ಇಲಾಖೆ ಪ್ರತಿಭಟನೆಗೆ ಅನುಮತಿ ನಿರಾಕರಿಸಿದೆ. ಇದು ಸರಿಯಾದ ನಡೆಯಲ್ಲ. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಯಾವುದೇ ಹೊಸ ನೇಮಕಾತಿ ನಡೆದಿಲ್ಲ. ಸಾವಿರಾರು ಉದ್ಯೋಗಾಕಾಂಕ್ಷಿಗಳು ಸಾಲ ಮಾಡಿ ಪರೀಕ್ಷೆಯ ಸಿದ್ಧತೆಯಲ್ಲಿ ತೊಡಗಿದ್ದಾರೆ. ಪ್ರಜಾಪ್ರಭುತ್ವ ದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಶಾಂತಿಯುತವಾಗಿ ಪ್ರತಿಭಟಿಸುವುದು ಎಲ್ಲರ ಹಕ್ಕಾಗಿದೆ. ಪ್ರತಿಭಟನೆಗೆ ಅವಕಾಶವನ್ನೇ ನಿರಾಕರಿಸುವುದು ಪ್ರಶ್ನಾರ್ಹ. ಇದು ಹೋರಾಟ ಹತ್ತಿಕ್ಕುವ ಯತ್ನವಷ್ಟೆ.

ಸಿದ್ದು ಮೈದೊಳಲು, ಶಿವಮೊಗ್ಗ

ಆಸೆಯ ಬಿಸಿಲು ಕುದುರೆಯೇರಿದ ಭ್ರಷ್ಟರು

ಲೋಕಾಯುಕ್ತ ದಾಳಿಯ ವೇಳೆ ಅಧಿಕಾರಿಗಳು ಸಂಪಾದಿಸಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಅಕ್ರಮ ಆಸ್ತಿ ಬಯಲಾಗಿರುವ ವರದಿ ಓದಿ ದಿಗ್ಭ್ರಮೆ ಆಯಿತು. ಮಹಿಳಾ ಅಧಿಕಾರಿಗಳ ಅಕ್ರಮ ಸಂಪಾದನೆಯು ಬೆರಗು ಮೂಡಿಸುತ್ತದೆ. ಹೆಣ್ಣುಮಕ್ಕಳು ಉನ್ನತ ಸ್ಥಾನಕ್ಕೇರಿದರೆ ಭ್ರಷ್ಟಾಚಾರ ಕಡಿಮೆಯಾದೀತು; ಅವರ ಸಹಜ ಮಾತೃತ್ವ, ಸಹಾನುಭೂತಿ, ಸಹನೆ, ಸಂವೇದನಾಶೀಲತೆಯು ಸೇವಾ ಮೌಲ್ಯವನ್ನು ಹೆಚ್ಚಿಸುತ್ತದೆ ಎಂದು ಭಾಷಣಗಳಲ್ಲಿ ಕೇಳಿದ್ದೇವೆ. ಬಹಳಷ್ಟು ಮಹಿಳೆಯರು ಪುರುಷರನ್ನು ಹಿಂದಿಕ್ಕಿ ದೇಶಸೇವೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಆದರೆ, ಕೆಲವರು ಇದಕ್ಕೆ ತದ್ವಿರುದ್ಧ. ಅಕ್ರಮ ಸಂಪತ್ತಿನ ಒಡತಿಯರಾಗುತ್ತಿದ್ದಾರೆ. ಆಸೆಯ ಮುಂದೆ ಎಲ್ಲರೂ ಸಮಾನರು ಎಂಬುದನ್ನು ಸಾಬೀತುಪಡಿಸುತ್ತಿದ್ದಾರೆ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಕೊಲ್ಲಿ ಯುದ್ಧ ಮತ್ತು ಭಾರತದ ನಡೆ

ಅಮೆರಿಕ ಮತ್ತು ಇರಾನ್ ಎರಡು ವಾರಗಳ ಕದನ ವಿರಾಮಕ್ಕೆ ಸಮ್ಮತಿಸಿರುವುದು ವಿಶ್ವದ ಹಲವು ದೇಶಗಳು ತಾತ್ಕಾಲಿಕವಾಗಿಯಾದರೂ ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ. ಡೊನಾಲ್ಡ್ ಟ್ರಂಪ್ ಅವರು ಇರಾನಿನ ನಾಗರಿಕತೆಯನ್ನೇ ನಾಶ ಮಾಡಿ, ಅದನ್ನು ಶಿಲಾಯುಗಕ್ಕೆ ಕಳುಹಿಸುವ ಧಮಕಿ ಹಾಕಿದ್ದು ಹಾಸ್ಯಾಸ್ಪದ. ಅಮೆರಿಕ ಭೂಸೇನೆ ಬಳಸಿ ಇರಾನ್‌ನಲ್ಲಿನ ಸೇತುವೆ, ಶಕ್ತಿ ಸ್ಥಾವರಗಳನ್ನು ನಾಶಗೊಳಿಸಿದರೂ ಮೂಲ ಅರ್ಥದಲ್ಲಿ ನಾಗರಿಕತೆಯೇನೂ ನಾಶವಾಗುವುದಿಲ್ಲ. ಈ ಶಾಂತಿ ಮಾತುಕತೆಯಲ್ಲಿ ಪಾಕಿಸ್ತಾನದ ಮಾತನ್ನು ಉಭಯ ಪಕ್ಷಗಳು ಆಲಿಸುತ್ತಿರುವುದು ಅಚ್ಚರಿದಾಯಕ. ಭಾರತವು ವೈಯಕ್ತಿಕ ಮಟ್ಟದಲ್ಲಾಗಲಿ, ವಿಶ್ವಸಂಸ್ಥೆ ಮತ್ತಿತರ ವೇದಿಕೆಗಳಲ್ಲೇ ಆಗಲಿ ಪರಿಣಾಮಕಾರಿಯಾದ ಪಾತ್ರ ನಿರ್ವಹಿಸಿಲ್ಲ. ಈಗಲೂ ಕಾಲ ಮಿಂಚಿಲ್ಲ; ಅಂತರರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧವಾದ ನಡೆ, ನುಡಿ ತೋರುತ್ತಿರುವ ದೇಶಗಳನ್ನು ಟೀಕಿಸುವ ಧೈರ್ಯ ತೋರಲಿ.

ಎಚ್.ಎಸ್. ಮಂಜುನಾಥ, ಗೌರಿಬಿದನೂರು

ಗೌರವ ಇಲ್ಲದ ಅಧಿಕಾರಕ್ಕೆ ಅರ್ಥ ಉಂಟೆ?

ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರು ಪೊಲೀಸ್ ಠಾಣೆಯ ಪಿಎಸ್‌ಐ ಅವರು, ಸಿಬ್ಬಂದಿಯನ್ನು ಮೂರು ಗಂಟೆ ಬಿಸಿಲಿನಲ್ಲಿ ನಿಲ್ಲಿಸಿದ್ದು ವರದಿಯಾಗಿದೆ. ಇದು ಸಾರ್ವಜನಿಕರ ಅಸಮಾಧಾನಕ್ಕೂ ಕಾರಣವಾಗಿದೆ. ಅಧಿಕಾರದ ದುರುಪಯೋಗ ಸಹನೀಯವಲ್ಲ. ಠಾಣೆಯಲ್ಲಿ ಸೇವೆ ಸಲ್ಲಿಸುವವರು ಯಾಂತ್ರಿಕ ಸಿಬ್ಬಂದಿಯಲ್ಲ; ಅವರು ಕೂಡ ಮನುಷ್ಯರು. ಕುಟುಂಬದ ಹೊಣೆ ಹೊತ್ತವರು. ಬಿಸಿಲಿನಲ್ಲಿ ನಿಲ್ಲುವ ನೋವು ದೇಹಕ್ಕಷ್ಟೇ ಅಲ್ಲ, ಮನಸ್ಸಿಗೂ ಗಾಸಿ ಮಾಡುತ್ತದೆ. ನಿಜವಾದ ನಾಯಕತ್ವ ಎಂದರೆ ಭಯ ಹುಟ್ಟಿಸುವುದಲ್ಲ; ಅದು ಗೌರವ ಗಳಿಸುವುದಾಗಿದೆ. ಗೌರವ ಮತ್ತು ಮಾನವೀಯತೆ ಇಲ್ಲದ ಯಾವುದೇ ಅಧಿಕಾರಕ್ಕೂ ಅರ್ಥವಿಲ್ಲ.

ಸಿದ್ದೇಗೌಡ, ಬೆಂಗಳೂರು

'ಗೌಡಾ' ಘನತೆಯು ಮಣ್ಣುಪಾಲಾಗದಿರಲಿ

ಹಾವೇರಿ ವಿಶ್ವವಿದ್ಯಾಲಯವು ತಮಗೆ ಪ್ರಕಟಿಸಿದ್ದ ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸುವುದಿಲ್ಲವೆಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಹಲವು ರಾಜಕಾರಣಿಗಳು ವಿ.ವಿಯ 'ಗೌಡಾ'ಗಳಿಗೆ ಲಾಬಿ ಮಾಡುವ ಕಾಲದಲ್ಲಿ ಗೌರವ ಪದವಿಯನ್ನು ನಯವಾಗಿ ತಿರಸ್ಕರಿಸಿರುವುದು ಮಾದರಿಯಾದ ನಡೆ. ಬಹುತೇಕ ವಿ.ವಿ.ಗಳು ಹಾಲಿ ಮತ್ತು ಮಾಜಿ ರಾಜಕಾರಣಿಗಳಿಗೆ, ಚಿತ್ರತಾರೆಯರಿಗೆ, ಉದ್ಯಮಿಗಳಿಗೆ ಬೇಕಾಬಿಟ್ಟಿಯಾಗಿ ಗೌರವ ಡಾಕ್ಟರೇಟ್ ನೀಡುತ್ತಿವೆ. ಇವರಲ್ಲಿ ಅರ್ಹರಿಗಿಂತ ಅನರ್ಹರ ಪಾಲು ಹೆಚ್ಚಿದೆ. ನಿಜವಾದ ಸಾಧಕರು ವಿ.ವಿಗಳ ಕಣ್ಣಿಗೆ ಬೀಳದಿರುವುದು ದುರದೃಷ್ಟಕರ. ಒಂದು ವೇಳೆ ಬಿದ್ದರೂ ಅವರನ್ನು ಗುರುತಿಸುವಲ್ಲಿ ಜಾಣಕುರುಡುತನ ಪ್ರದರ್ಶಿಸುತ್ತಿವೆ. ವಿ.ವಿಗಳು 'ಗೌಡಾ'ಗಳನ್ನು ರಾಜಕೀಯ, ಸಿನಿಮಾ, ಉದ್ಯಮ ಕ್ಷೇತ್ರದವರಿಗೆ ಕೊಡುವುದನ್ನು ಬಿಡಬೇಕು. ಉಳಿದ ಕ್ಷೇತ್ರಗಳಲ್ಲಿನ ಸಾಧಕರಿಗೆ ನೀಡುವ ಮೂಲಕ ಪದವಿಯ ಘನತೆಯನ್ನು ಉಳಿಸಬೇಕಿದೆ.

ಟಿ. ಸತೀಶ್ ಜವರೇಗೌಡ, ಮಂಡ್ಯ

ವಿಜಯ್ ಸ್ಪರ್ಧೆ: ನಳ–ದಮಯಂತಿ ನೆನಪು

ಟಿವಿಕೆ ಮುಖ್ಯಸ್ಥ ವಿಜಯ್ ಅವರು ಪೆರಂಬೂರು ಕ್ಷೇತ್ರದಿಂದ ಚುನಾವಣಾ ಕಣಕ್ಕೆ ಸ್ಪರ್ಧಿಸಿದ್ದಾರೆ. ಅವರನ್ನು ಇಕ್ಕಟ್ಟಿಗೆ ಸಿಲುಕಿಸಲು 'ವಿಜಯ್' ಹೆಸರಿನ ನಾಲ್ವರು ಸ್ವತಂತ್ರ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಸುದ್ದಿ ಓದಿದಾಗ ನಳ–ದಮಯಂತಿಯ ಪುರಾಣ ಕಥೆ ನೆನಪಾಯಿತು. ಸ್ವಯಂವರದಲ್ಲಿ ನಳ ಮಹಾರಾಜನನ್ನು ವರಿಸಲು ಸಿದ್ಧಳಾದ ದಮಯಂತಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಯಮಧರ್ಮರಾಜ, ಶನಿ ಮಹಾರಾಜರು ನಳ ಮಹಾರಾಜನಂತೆಯೇ ವೇಷಧರಿಸಿ ಸ್ವಯಂವರದಲ್ಲಿ ಪಾಲ್ಗೊಂಡಿರುತ್ತಾರೆ. ಚುನಾವಣಾ ಸಂದರ್ಭದಲ್ಲಿ ಈ ರೀತಿಯ ತಂತ್ರಗಾರಿಕೆ ಸಾಮಾನ್ಯ. ಮತದಾರ ಪ್ರಭುಗಳು ಜಾಣ್ಮೆ ತೋರಬೇಕಷ್ಟೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಚುರುಮುರಿ

ಕದನ ವಿರಾಮ

• ಗುರು ಪಿ.ಎಸ್.

'ನೋಡ್ರೀ... ನಾನು ಯಾರ್ ತಂಟೆಗೂ ಹೋಗಲ್ಲ, ನನ್ನ ತಂಟೆಗೆ ಬಂದ್ರೆ ಸುಮ್ನಿರಲ್ಲ' ಎಂದು ಇರಾನ್ ರೀತಿ ಎಚ್ಚರಿಕೆ ಕೊಟ್ಟಳು ಹೆಂಡತಿ.

'ನಾನೂ ಅಷ್ಟೇ, ನನ್ನ ತಂಟೆಗೆ ಬಂದ್ರೆ ಸುಮ್ನಿರಲ್ಲ, ನನ್ನ ತಂಟೆಗೆ ಬರದಿದ್ದರೂ ಸುಮ್ನಿರಲ್ಲ. ಈ ಮನೆಯ ಯಜಮಾನ ನಾನು, ನಾನು ಹೇಳಿದಂತೆಯೇ ನಡೆಯಬೇಕು' ಅಮೆರಿಕ ರೀತಿಯಲ್ಲಿಯೇ ನಾನು ಎಚ್ಚರಿಕೆ ಕೊಟ್ಟೆ.

'ಅದ್ಯಾಕೆ, ನನಗೂ ಸ್ವಾಭಿಮಾನ ಇದೆ, ಹಕ್ಕಿದೆ. ನಾನೂ ಈ ಮನೆ ಯಜಮಾನಿ. ನನ್ನ ಮಾತಿಗೂ ಈ ಮನೆಯಲ್ಲಿ ಬೆಲೆ ಇರಬೇಕು' ಎಂದು ಹೆಂಡತಿ ಹಟದಲ್ಲಿ ಹೇಳಿದಳು.

'ನಮ್ಮ ಮನೆಯವರ ಬಗ್ಗೆ ಹೀಯಾಳಿಸಿ ಮಾತಾಡ್ತೀಯ. ಎಷ್ಟು ಸಲ ವಾರ್ನಿಂಗ್ ಕೊಟ್ಟಿಲ್ಲ ನಿನಗೆ, ಆದರೂ ಮಾತಾಡ್ತೀಯ'.

'ನೀವೂ ನಮ್ಮ ಮನೆಯವರ ಬಗ್ಗೆ ಮಾತಾಡಲ್ವ, ಆಗ ನನಗೆ ಸಿಟ್ಟು ಬರಲ್ವ...'

'ಇನ್ನೊಮ್ಮೆ ಮಾತನಾಡಿದರೆ ನಿನ್ನನ್ನ ನಿನ್ನ ತವರು ಮನೆಗೆ ಕಳಿಸಿಬಿಡ್ತೀನಿ' ಯುದ್ಧ ಘೋಷಿಸುವಂತೆ ಮಾತನಾಡಿದೆ.

'ಹೌದಾ, ಅದು ಹೇಗ್ ಕಳಿಸ್ತೀರಿ ಕಳಿಸಿ ನೋಡೋಣ' ಎಂದು ದೊಡ್ಡದಾಗಿ ಕಣ್ಣುಬಿಟ್ಟಳು.

'ಹೋಗ್ಲಿ ಬಿಡಮ್ಮ, ಸುಮ್ಮನೆ ನಮ್ಮ ನಡುವೆ ಜಗಳ ಯಾಕೆ, ಹೊಂದಿಕೊಂಡು ಹೋಗೋಣ' ಎಂದೆ ಮೆತ್ತಗೆ.

'ನೀವೇನ್ರೀ ಒಳ್ಳೆ ಟ್ರಂಪ್ ರೀತಿ ಆಡ್ತೀರಿ, ಇರಾನ್‌ನ ನಾಶ ಮಾಡ್ತೀನಿ ಅಂತ ಹೇಳಿದ್ ಮರುದಿನವೇ ಕದನ ವಿರಾಮ ಘೋಷಿಸ್ತೀನಿ ಅಂತ ಹೇಳ್ದಂಗಾಯ್ತಿದು' ಎಂದು ಜೋರಾಗಿ ನಕ್ಕಳು.

'ಏನ್ ಮಾಡೋದು, ಟ್ರಂಪ್ ಮಾಡ್ತಿರೋದೆಲ್ಲ ನೊಬೆಲ್ ಶಾಂತಿ ಪ್ರಶಸ್ತಿಗಾಗಿ...'

'ಮತ್ತೆ ನೀವು?'

'ನಾನು ಮಾಡ್ತಿರೋದೂ ಅದಕ್ಕೆ, ಶಾಂತಿಗಾಗಿ...'

'ಓಹೋಹೋ, ಜಗಳ ಏನೋ ಮಾಡಿದ್ರಿ... ನಮ್ಮಿಬ್ಬರಲ್ಲಿ ಯಾರು ಗೆದ್ದಂತಾಯ್ತು ಈಗ?'

'ನಾನೇ ಗೆದ್ದಿದ್ದು ಅಂತ ನಾನು ಹೇಳ್ಕೊಂಡು ಬರ್ತೀನಿ, ನೀನೇ ಗೆದ್ದಿದ್ದು ಅಂತ ನೀನು ಹೇಳ್ಕೊಂಡ್ ಓಡಾಡು' ಎಂದು ಹೊರಗಡಿಯಿಟ್ಟೆ.

ಸಂಗತ

ಎಲ್ಲೋ ಆ ಒಂದು 'ಹೊಸ ಧ್ವನಿ' ಕೇಳಿಸುತ್ತಲಿದೆ!

ನಾಳೆಗಳ ಬಗ್ಗೆ ನಿರೀಕ್ಷೆ ಹುಟ್ಟಿಸುವ ಜನಪರ ನಾಯಕನಿಗಾಗಿ ಸಮೂಹ ಸದಾ ಕಾಯುತ್ತಿರುತ್ತದೆ. ಆ ಧ್ವನಿ ಅಸಲಿಯೋ ನಕಲಿಯೋ ಗುರ್ತಿಸುವುದು ಕಠಿಣ.

• ಕುಸುಮಾ ಆಯರಹಳ್ಳಿ

ನಾವು ಜನಸಾಮಾನ್ಯರು, ಬಡವರು, ಮಧ್ಯಮವರ್ಗದವರು ಸದಾ ಒಂದು ಧ್ವನಿಗಾಗಿ ಕಾದಿರುತ್ತೇವೆ. ನಮ್ಮ ಪರವಾಗಿ ನಮ್ಮದೇ ಮಾತುಗಳನ್ನು ಆಡುವ ಧ್ವನಿಗಾಗಿ, ನಾವು ತಲಪಲಾರದ ಜಾಗಕ್ಕೆ ನಮ್ಮ ಕಷ್ಟಗಳನ್ನು ಮುಟ್ಟಿಸುವ ಧ್ವನಿಗಾಗಿ ಕಾದಿರುತ್ತೇವೆ. ಅಂತಹ ಧ್ವನಿ ಕೇಳಿದರೆ ಸಾಕು, ಅದು ನಮ್ಮ ಧ್ವನಿಯಾದೀತು ಎಂಬ ಸಣ್ಣ ವಿಶ್ವಾಸ ಹುಟ್ಟಿದರೆ ಸಾಕು, ಅಂತಹವರನ್ನು ನಂಬಿ ಬೆಂಬಲಿಸುತ್ತೇವೆ.

ಮೊದಲಿಗೆ, ಜನಸಾಮಾನ್ಯರ ಧ್ವನಿಯೇ ತಾನೆಂಬ ವ್ಯಕ್ತಿಗಳನ್ನು ಪೂರ್ತಿ ನಂಬುತ್ತಿತ್ತು ಸಮಾಜ. ಕೆಲವರು ನಂಬಿಕೆ ಉಳಿಸಿಕೊಳ್ಳುತ್ತಿದ್ದರು, ಮತ್ತೆ ಕೆಲವರು ನಂಬಿಕೆ ಮುರಿಯುತ್ತಿದ್ದರು. ಆಗ ನಂಬಿದ ಸಮುದಾಯ ನೊಂದುಕೊಳ್ಳುತ್ತಿತ್ತು; ಮತ್ತೊಂದು ಹೊಸ ಜನಪರ ಧ್ವನಿ ಬರುತ್ತಿದ್ದಂತೆಯೇ ಅದನ್ನು ನಂಬುತ್ತಿತ್ತು.

'ಹೊಸಧ್ವನಿ ನಂಬಿಕೆ'ಯ ಕುರಿತು 'ಕೋ' ಹೆಸರಿನ ತಮಿಳು ಸಿನಿಮಾ ಇದೆ. ಅದರಲ್ಲೊಬ್ಬ ರಾಜಕಾರಣಿ ಭ್ರಷ್ಟ ವ್ಯವಸ್ಥೆಯ ವಿರುದ್ಧ ಅಭಿಯಾನ ಆರಂಭಿಸುತ್ತಾನೆ. ಅವನ ಮೇಲೆ ಬಾಂಬ್ ದಾಳಿಯಾಗುತ್ತದೆ. ಕಡೆಗೆ ಅವನು ಮುಖ್ಯಮಂತ್ರಿಯೂ ಆಗುತ್ತಾನೆ. ನಂತರ ಗೊತ್ತಾಗುವ ಸಂಗತಿ, ಆ ಬಾಂಬ್ ದಾಳಿ ಮತ್ತು ಅವನ ಎಲ್ಲ ಜನಪರ ಮಾತುಗಳೂ ಪೂರ್ವಯೋಜಿತ! ಇದನ್ನು ಸುದ್ದಿ ಮಾಡಲು ತಯಾರಾಗಿ ಫೋಟೊಗಾಗಿ ಹೋದಾಗ, ಆ ರಾಜಕಾರಣಿ ಸಮಾಜಘಾತುಕ ಗುಂಪಿನೊಂದಿಗಿರುತ್ತಾನೆ; ಅವರು ತಮ್ಮಲ್ಲೇ ಹೊಡೆದಾಡಿಕೊಂಡು ರಾಜಕಾರಣಿ ಸಮೇತ ಎಲ್ಲರೂ ಸಾಯುತ್ತಾರೆ. ಆ ಪತ್ರಕರ್ತ ಕಚೇರಿಯಲ್ಲಿದ್ದ ತನ್ನ ಗೆಳತಿಗೆ ಫೋನ್ ಮಾಡಿ, 'ಸತ್ತ ರಾಜಕಾರಣಿಯ ಬಗ್ಗೆ ನಕಾರಾತ್ಮಕ ವರದಿ ಬರೆಯುವುದು ಬೇಡ. ಅವನು ಸಮಾಜಘಾತುಕ ಶಕ್ತಿಗಳಿಗೆ ಬಲಿಯಾದ ಹುತಾತ್ಮನೆಂದು ಸುದ್ದಿ ಮಾಡೋಣ' ಎನ್ನುತ್ತಾನೆ. ರಾಜಕಾರಣಿಯ ಮುಖವಾಡ ಸಮಾಜಕ್ಕೆ ಗೊತ್ತಾಗುವುದರಿಂದ ಜನರ ನಂಬಿಕೆ ಸಾಯುತ್ತದೆ; ಅದರಿಂದ, ರಾಜಕೀಯಕ್ಕೆ ಬರುವ ಹೊಸ ಯುವಕರ ಮೇಲೆ ಜನರಿಗೆ ನಂಬಿಕೆ ಹೊರಟುಹೋಗುತ್ತದೆ ಎನ್ನುವುದು ಪತ್ರಕರ್ತನ ನಿಲುವು.

ರಾಜಕಾರಣದಲ್ಲಿ ಮಾತ್ರವಲ್ಲ, ಎಲ್ಲ ಕ್ಷೇತ್ರಗಳಲ್ಲೂ ಜನಸಮುದಾಯ ಒಮ್ಮೆ ನಂಬಿಕೆ ಕಳೆದುಕೊಂಡರೆ ಮತ್ತೆ ಅವರು ಯಾರನ್ನಾದರೂ ನಂಬಲು ಸಮಯ ಬೇಕಾಗುತ್ತದೆ. ಪ್ರಾಮಾಣಿಕರನ್ನೂ ಅನುಮಾನಿಸುವಂತಾಗುತ್ತದೆ.



ಬಡವರ ಧ್ವನಿಯಾಗಿ ಮಾತಾಡುತ್ತಾ, ಅದನ್ನೇ ತಮ್ಮ ಬಂಡವಾಳವನ್ನಾಗಿ, ಸ್ವ ಏಳಿಗೆಯ ಮೆಟ್ಟಿಲಾಗಿ ಮಾಡಿಕೊಳ್ಳುವುದು ಒಂದು ಮಹಾದ್ರೋಹ. ಹಾಗೆ ಮಾಡುವವರು, ನಂಬಿಕೆಗಳನ್ನು ಮತ್ತೆ ಮತ್ತೆ ಮುರಿಯುತ್ತಾ ಜನಸಾಮಾನ್ಯರ ಮನಸ್ಸಿನಲ್ಲಿ 'ಇದು ಇಷ್ಟೇ' ಎಂಬ ವಿಷಾದ ತುಂಬುವವರು. ಹೊಸ ಸಾಧ್ಯತೆ, ಹೊಸ ಕನಸೇ ಇಲ್ಲದಂತೆ ಮಾಡುವವರು. 'ಬದಲಾವಣೆಗೆ ಕಾಯುತ್ತಾ ಮೂರ್ಖರಾಗುವುದಕ್ಕಿಂತ ನಾವೂ ಒಂದಿಷ್ಟು ಹೊಂದಿಕೊಂಡುಬಿಡೋಣ' ಎಂಬ ಹತಾಶೆಯ ಹಂತಕ್ಕೆ ಜನರನ್ನು ಒಯ್ಯುವವರು. ಜನಪರ ಧ್ವನಿಯೊಂದು ನಿಧಾನಕ್ಕೆ ಭ್ರಷ್ಟವಾಗುತ್ತಾ, ನಂಬಿಕೆ ಕಳೆದುಕೊಳ್ಳುತ್ತಾ ಹೋದಂತೆ, ಜನಸಾಮಾನ್ಯರೂ ವೈಯಕ್ತಿಕ ಮಟ್ಟದಲ್ಲಿ ಭ್ರಷ್ಟಾಚಾರವನ್ನು ಒಪ್ಪಿಕೊಂಡು, ಭ್ರಷ್ಟತೆಯ ಅಭ್ಯಾಸಿಗಳಾಗುವಂತೆ ಮಾಡುತ್ತದೆ. ನಾವೀಗ ಬಹುತೇಕ ಆ ಹಂತ ತಲಪಿಯಾಗಿದೆ.

ಪ್ರಸ್ತುತ, ಹೊಸಧ್ವನಿಗಳಿಗೆ ತಮ್ಮನ್ನು ತಾವು ಜನಪರ ಅಂತ ತೋರಿಸಿಕೊಳ್ಳಲು, ತಮ್ಮ ಧ್ವನಿಯನ್ನು ಎಲ್ಲರಿಗೂ ತಲಪಿಸುವಂತೆ ಮಾಡಲು ತಂತ್ರಜ್ಞಾನ ಶಕ್ತಿಶಾಲಿ ಧ್ವನಿವರ್ಧಕವಾಗಿ ಕೆಲಸ ಮಾಡುತ್ತಿದೆ. ಹೊಸಕಾಲದ ಜನನಾಯಕರು ಹಿಂದಿನವರ ಹಾಗೆ ಜನರ ಮೇಲೆ ರೇಗುವುದಿಲ್ಲ. ದರ್ಪ ತೋರುವುದಿಲ್ಲ. ಎಷ್ಟು ಮಧುರವಾಗಿ ಮಾತಾಡುತ್ತಾರೆ ಅಂತ ನಾವಂದುಕೊಳ್ಳುತ್ತೇವೆ. ಆದರೆ, ಮಾತಿನಿಂದ ಮಾತ್ರ ಅವರ ವ್ಯಕ್ತಿತ್ವವನ್ನೂ ಜನಪರತೆಯನ್ನೂ ಅಳೆಯಲಾಗದು. ನಟಿಸಿ ಜನರ ವಿಶ್ವಾಸ ಗಳಿಸಬೇಕೆಂಬುದು ನವನಾಯಕತ್ವ ಹಿಡಿಯುವವರ ಹಾಗೂ ಅವರಿಗಾಗಿ ಕೆಲಸ ಮಾಡುವ ತಂಡದ ತಂತ್ರದ ಭಾಗ. ಇದೀಗ ಜನರಿಗೆ ತಮ್ಮ ಪರವಾದ ನಿಜದನಿಯನ್ನು ಗುರ್ತಿಸುವುದೇ ದೊಡ್ಡ ಸವಾಲು. ಹಾಗಾಗಿಯೇ ಜನನಾಯಕರಿಗೆ ಧ್ವನಿವರ್ಧನೆಗೆ ಸಹಾಯ ಮಾಡಿದ ತಂತ್ರಜ್ಞಾನವೇ ಇತ್ತ ಜನತಾ ನ್ಯಾಯಾಲಯವಾಗಿಯೂ ಬದಲಾಗಿ, ಪ್ರತಿ ಹೊಸ ಜನಪರ ಧ್ವನಿಯನ್ನೂ ಕಟಕಟೆಯಲ್ಲಿ ನಿಲ್ಲಿಸಿ ಪ್ರಶ್ನಿಸುತ್ತಿದೆ. 'ಪಿಆರ್' ತಂಡ ಎಂಬ ನಾಟಕ ಕರ್ತೃಗಳು ಬರೆದುಕೊಡುವ ಚೆಂದದ ಮಾತುಗಳನ್ನು ಆಡುತ್ತಾ, ಮುಖವಾಡ ಧರಿಸಿ ನಗುವ ಹೊಸ ಧ್ವನಿಗಳನ್ನು, ಧ್ವನಿಪರೀಕ್ಷೆಗೆ ಒಳಪಡಿಸಲಾಗುತ್ತದೆ. ಮೈಕು ಹಿಡಿದು ವೇದಿಕೆ ಏರಿ ಮಾತಾಡಿ ಹೋಗುವ ಹಾಗಿಲ್ಲ, ಇಲ್ಲಿ ಯಾರೂ ಈಗ. ಪ್ರಶ್ನೆಗಳನ್ನು ಎದುರಿಸಲೇಬೇಕಾಗುತ್ತದೆ. ಜನಪರ ಧ್ವನಿ ಎಂಬುದು ಈಗ ಕೇಳಿದ ಕೂಡಲೇ ನಂಬಿಕೆಯನ್ನಲ್ಲ, ಅನುಮಾನವನ್ನು ಹುಟ್ಟಿಸುವ ಹಾಗಾಗಿದೆ. ಮತ್ತೆ ಮತ್ತೆ ನಂಬಿಕೆಗಳನ್ನು ಕಳೆದುಕೊಂಡ ಮೇಲೆ ಆಗುವ ಪರಿಣಾಮ ಇದು.

ಇಷ್ಟಾಗಿಯೂ ಇಲ್ಲಿ, ಹೊಸ ಜನಪರ ಧ್ವನಿಗಳು ಹುಟ್ಟುತ್ತಿವೆ. ಜನ ಮತ್ತೆ ಕಿವಿಗೊಡುತ್ತಿದ್ದಾರೆ. ಯಾರೋ ಪ್ರಾಮಾಣಿಕರು ಎಲ್ಲಿಂದಲೋ ಬರುತ್ತಾರೆಂಬ ನಂಬಿಕೆ ಪೂರ್ತಿ ಸಾಯದೇ, ಜನರ ಮನಸ್ಸಿನ ಯಾವುದೋ ಮೂಲೆಯಲ್ಲಿ ಜೀವ ಹಿಡಿದುಕೊಂಡಿದೆ. ಅದೆಲ್ಲವೂ ಮತ್ತೆ ಮತ್ತೆ ಸುಳ್ಳಾಗಿ, ಜನ ನಾಳಿನ ನಂಬಿಕೆಯನ್ನು ಪೂರ್ತಿಯಾಗಿ ಕಳೆದುಕೊಂಡರೆ, ಹೊಸ ಧ್ವನಿ ಪ್ರಾಮಾಣಿಕವಾದದ್ದೇ ಆದರೂ ಜನ ತಿರಸ್ಕರಿಸಬಹುದು! ಆ ಮಟ್ಟಕ್ಕೆ ಹೋದರೆ, ಮತ್ತೆ ಏನೂ ಉಳಿಯುವುದಿಲ್ಲ. ಜನಪರ ಧ್ವನಿ ಎಂಬ ನಟನೆ ಈಗ ನಮ್ಮ ಮುಂದಿನ ದೊಡ್ಡ ಸವಾಲು. ಕೆಟ್ಟತನಕ್ಕಿಂತಲೂ ಒಳ್ಳೆಯತನದ ನಟನೆ ಬಹಳ ಅಪಾಯಕಾರಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡೊಂಕು ಬಾಲದ ನಾಯಕರು

ಕೆಪಿಎಸ್‌ಸಿ ಅಕ್ರಮಕ್ಕೆ ನೀರೆರೆಯುತ್ತಿರುವ ಅಧಿಕಾರಸ್ಥ ರಾಜಕಾರಣಿಗಳು

• ವೈ.ಗ.ಜಗದೀಶ್

ಕಲೆ: ಸಂತೋಷ್ ಸಸಿಹಿತ್ಲು

'ನಾಯಿ ಬಾಲಕ್ಕೆ ದಬ್ಬೆ ಕಟ್ಟಿದರೆ ನೆಟ್ಟಗಾಗುತ್ತದೆಯೇ?' ಎಂಬ ಗಾದೆಯೊಂದಿದೆ. ಅಂದರೆ, ಡೊಂಕಾಗಿರುವ ಬಾಲಕ್ಕೆ ಮರದ ಪಟ್ಟಿ ಕಟ್ಟಿದರೆ ಅದು ನೇರವಾಗುತ್ತದೆಯೇ, ಪಟ್ಟಿ ತೆಗೆದಾಕ್ಷಣ ಅದು ಯಥಾರೀತಿ ಡೊಂಕಾಗಿಯೇ ಉಳಿಯುತ್ತದೆ. ಕರ್ನಾಟಕ ಲೋಕಸೇವಾ ಆಯೋಗದ ಕತೆಯೂ ಹಾಗೆಯೇ ಇದ್ದಂತಿದೆ. ವಿಚಿತ್ರವೆಂದರೆ ದಬ್ಬೆ ಕಟ್ಟುವ ಜಾಗದಲ್ಲಿರುವವರೇ ಡೊಂಕು ಬಾಲದ ನಾಯಕರಾದರೆ ಕೆಪಿಎಸ್‌ಸಿ ನೆಟ್ಟಗಾಗುವುದು ಹೇಗೆ?

ಇಂತಹವರನ್ನು ನೋಡಿಯೇ ಪುರಂದರದಾಸರು...

ಡೊಂಕು ಬಾಲದ ನಾಯಕರೆ
ನೀವೇನೂಟವ ಮಾಡುವಿರಿ
ಕಣಕ ಕುಟ್ಟೋ ಅಲ್ಲಿಗೆ ಹೋಗಿ
ಹಣಕಿ ಇಣಕಿ ನೋಡುವಿರಿ
ಕಣಕ ಕುಟ್ಟೋ ಒನಕೆಲಿ ಬಡಿದರೆ
ಕಂಞ ಕುಂಞ ಕಂಞ ಕುಂಞ ಮಾಡುವಿರಿ

ಎಂದು ಹಾಡಿದ್ದಿರಬೇಕು. ಕಣಕದ ಒಳಗಿನ ಹೂರಣದ ಪರಿಮಳವನ್ನು ಅರಸಿ ಹೋದ ನಾಯಿಗೆ ಒನಕೆಯ ಪೆಟ್ಟು ತಪ್ಪಿದ್ದಲ್ಲ ಎಂಬುದು ಪುರಂದರರ ಮಾತು. ಇಲ್ಲಿಯೂ ಹಾಗೆಯೇ; ನಾಯಕರು ಕೆಪಿಎಸ್‌ಸಿಯಲ್ಲಿ ಸಿಗುವ ಕಣಕದೊಳಗಿನ 'ಹೂರಣ'ದ ಘಮಕ್ಕಾಗಿ ಅಲ್ಲಿ ಹಣಕಿ ಇಣಕಿ ನೋಡುವುದು, ಕೈಯಾಡಿಸುವುದು ನಡೆದೇ ಇದೆ. ಆ ಕಾರಣಕ್ಕಾಗಿಯೇ, ಕೆಪಿಎಸ್‌ಸಿ ಆಡಳಿತವೆಂಬುದು ಹಾಳಾಗಿ ಹೋಗಿ, ಉದ್ಯೋಗಾಕಾಂಕ್ಷಿಗಳ ಕನಸುಗಳನ್ನೇ ನುಚ್ಚುನೂರು ಮಾಡುವ ಕಾಯಕದಲ್ಲಿ ಸಕ್ರಿಯವಾಗಿದೆ.

ಕೆಪಿಎಸ್‌ಸಿಯ ಅಂತರ್ಜಾಲ ತಾಣದಲ್ಲಿ 'ದುರಾಚಾರ ಪ್ರಕರಣ' ಎಂಬ ಪ್ರತ್ಯೇಕ ವಿಭಾಗ ಇದೆ. ಇದರ ಒಳಹೊಕ್ಕು ನೋಡಿದರೆ ಆಗಾಗ ನಡೆಸುವ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಎಸಗಿದ ಪ್ರಮಾದ, ಅದರ ಬಗೆಗಿನ ತನಿಖೆ ಹಾಗೂ ಪರಿಣಾಮಗಳ ವಿವರಗಳಿವೆ. ಆದರೆ, ಅಧ್ಯಕ್ಷ, ಸದಸ್ಯರು, ಕಾರ್ಯದರ್ಶಿ, ಪರೀಕ್ಷಾ ನಿಯಂತ್ರಕರು ಎಸಗಿದ ಘೋರ ಅಪರಾಧಗಳ ಕುರುಹುಗಳೇ ಅಲ್ಲಿ ಸಿಗುವುದಿಲ್ಲ. ಅಷ್ಟರಮಟ್ಟಿಗೆ ಕೆಪಿಎಸ್‌ಸಿ ಪಾರದರ್ಶಕತೆಯನ್ನು ಹೊತ್ತು ಮೆರೆಯುತ್ತಿದೆ.

ಕೆಪಿಎಸ್‌ಸಿ ಭ್ರಷ್ಟಾಚಾರದ ಕರಾಳ ಚರಿತ್ರೆಯನ್ನು ಬಗೆದರೆ ಅಧ್ಯಕ್ಷ, ಸದಸ್ಯರ ನೇಮಕಾತಿಯಲ್ಲಿ ಅಧಿಕಾರಸ್ಥ ರಾಜಕಾರಣಿಗಳು ಹಾಗೂ ಲೋಕಭವನವೇ (ಹಿಂದಿನ ರಾಜಭವನ) ಪ್ರಧಾನ ಪಾತ್ರಧಾರಿಗಳೆಂದು ಸ್ಪಷ್ಟವಾಗುತ್ತದೆ. ಆಯೋಗ ದೊಡ್ಡ ಮಟ್ಟದ ಅಪರಾಧೀಕರಣಕ್ಕೆ ತೆರೆದುಕೊಂಡಿದ್ದು, ಸದ್ದು ಮಾಡಿದ್ದು 1998ರ ಕಾಲಘಟ್ಟದ ಬಳಿಕವೇ. ಹಾಗಂತ, ಅಲ್ಲಿಯವರೆಗೆ ಭ್ರಷ್ಟಾಚಾರ ಇರಲಿಲ್ಲವೆಂದಲ್ಲ; ಎಲ್ಲ ಹುದ್ದೆಗಳನ್ನು ನೇರಾನೇರ ಬಿಕರಿಗಿಟ್ಟ ನಿದರ್ಶನಗಳು ಸಿಗುವುದಿಲ್ಲ. 90ರ ದಶಕದಲ್ಲಿ 'ತಾಳಿಭಾಗ್ಯ' ಹಾಗೂ ರಾಜಕೀಯ ಪ್ರಭಾವಗಳು, ಸ್ವಲ್ಪ ಮಟ್ಟಿಗೆ ಲಂಚ ನಡೆಯುತ್ತಿದ್ದವು. ಸಂದರ್ಶನದ ವೇಳೆ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆ ಎಂಬುದು ಅಭ್ಯರ್ಥಿಯ ಕಡತದ ಕೊನೆ ಪುಟದಿಂದ ಆರಂಭವಾಗುತ್ತಿತ್ತು. ಪ್ರಭಾವಿ ಸಚಿವರು ತಮ್ಮ ಶಿಫಾರಸು ಪತ್ರದಲ್ಲಿ ನೀಡಿದ್ದ 'ಸ್ಟಾರ್'ಗೆ ಅನುಗುಣವಾಗಿ ಪ್ರಶ್ನೆಗಳು ಇರುತ್ತಿದ್ದವು. ಇಲ್ಲವೇ, ಹಣ ಕೊಟ್ಟ ಅಭ್ಯರ್ಥಿಯಾಗಿದ್ದರೆ ಅದು ಕೂಡ ಕಡತದ ಕೊನೆಯಲ್ಲಿ ಸಂಜ್ಞೆಯ ರೂಪದಲ್ಲಿ ಇರುತ್ತಿತ್ತು. ಸ್ಟಾರ್ ಹಾಗೂ ಸಂಜ್ಞೆ ಇದ್ದರೆ ಪ್ರಶ್ನೆಗಳಿಲ್ಲದೇ ಕುಶಲೋಪರಿಗಳಲ್ಲೇ ಸಂದರ್ಶನ ಮುಗಿದು ಬಿಡುತ್ತಿತ್ತು. ಅವರೆಡೂ ಇಲ್ಲದಿದ್ದರೆ ಅಭ್ಯರ್ಥಿಯ ಹುದ್ದೆಗೆ ಸಂಬಂಧವೇ ಇಲ್ಲದ ಪ್ರಶ್ನೆಗಳನ್ನು ಕೇಳಿ, ಅವರನ್ನೇ ತಬ್ಬಿಬ್ಬುಗೊಳಿಸಿ ಅಜ್ಞಾನಿಯೆಂದು ಬಿಂಬಿಸಿ ಹೊರಗೆ ಕಳುಹಿಸಿದ ನಿದರ್ಶನಗಳು ಇದ್ದವು.

ಎಚ್‌.ಡಿ.ದೇವೇಗೌಡ ನೇತೃತ್ವದ ಜನತಾದಳ ಸರ್ಕಾರವು ಎಚ್‌.ಎನ್‌.ಕೃಷ್ಣ ಅವರನ್ನು ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಿತು. ಅವರು ಅಧ್ಯಕ್ಷರಾಗಿದ್ದು ಎಸ್‌.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ. ಎಚ್‌.ಎನ್‌.ಕೃಷ್ಣ ಅವಧಿಯಲ್ಲಿ ನಡೆದ 1998, 1999, 2004 ಮೂರು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಳು ವಿವಾದಕ್ಕೆ ಸಿಲುಕಿದವು. ಅದಾದ ಬಳಿಕ ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಧ್ಯಕ್ಷರಾಗಿ ನೇಮಕವಾದ ಗೋನಾಳ್ ಭೀಮಪ್ಪ ಅವಧಿಯಲ್ಲಿನ 2011ರ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪಟ್ಟಿ 2014ರಲ್ಲಿ ಪ್ರಕಟವಾಯಿತು. ಇದು ದೊಡ್ಡ ಮಟ್ಟದ ಅಪವಾದವನ್ನೇ ಹೊತ್ತುಕೊಂಡಿತು. 2024ರ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯೂ ವಿವಾದಕ್ಕೆ ಸಿಲುಕಿದೆ.

ಈ ಅವಧಿಯಲ್ಲಿ ಜನತಾದಳ, ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಹೀಗೆ ಎಲ್ಲ ಪಕ್ಷಗಳು ರಾಜ್ಯವನ್ನು ಆಳಿವೆ. ಕೃಷ್ಣ ಅವರು ಜನತಾದಳ, ಕಾಂಗ್ರೆಸ್ ಅವಧಿ ಹಾಗೂ ಭೀಮಪ್ಪ ಅವರು ಜೆಡಿಎಸ್‌ನ ಅವಧಿಯಲ್ಲಿ ನೇಮಕವಾದವರು. ಹಾಲಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರನ್ನು ನೇಮಿಸಿದ್ದು ಬಿ.ಎಸ್‌.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ. ಈ ಅವಧಿಯಲ್ಲಿ ಸರ್ಕಾರ ನಡೆಸಿದವರು ತಮಗೆ ಬೇಕಾದವರು, ತಮ್ಮ ಜಾತಿಯವರು, ತಮ್ಮ ಸಮೀಪದ ಬಂಧುಗಳು, ತಮ್ಮ ಹಿತೈಷಿ ಸ್ವಾಮೀಜಿಯವರ ನೆಂಟರು, ತಮ್ಮ ಮನೆ ಕಟ್ಟಿದ ಗುತ್ತಿಗೆದಾರರ ಸಂಬಂಧಿ ಹೀಗೆ ಯಾರ್‍ಯಾರನ್ನೋ ಸದಸ್ಯರನ್ನಾಗಿ ಮಾಡಿದ್ದಾರೆ. ಅವರಲ್ಲಿ ಕೆಲವರನ್ನು ಬಳಿಕ ಅಧ್ಯಕ್ಷರಾಗಿ ಮಾಡಿದ್ದೂ ಇದೆ.

ಆಯೋಗ ಹಾಳಾಗಿ ಹೋಗಲು ಅಲ್ಲಿ ಆಡಳಿತಾಂಗಕ್ಕಿಂತ ಅಧ್ಯಕ್ಷ, ಸದಸ್ಯರೇ ಕಾರಣ ಎಂಬುದಕ್ಕೆ ಮೇಲೆ ಉಲ್ಲೇಖಿಸಲಾದ ಐದು ನೇಮಕಾತಿಗಳಲ್ಲಿ ಸಾಕಷ್ಟು ಸಾಕ್ಷ್ಯ ಸಿಗುತ್ತದೆ. ಎಚ್‌.ಎನ್‌.ಕೃಷ್ಣ ಅವರ ಅವಧಿಯ ನೇಮಕಾತಿಯಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ತನಿಖೆ ನಡೆದು, ಅವರು ಜೈಲುವಾಸವನ್ನೂ ಅನುಭವಿಸಿದರು. ಗೋನಾಳ್ ಭೀಮಪ್ಪ ಅಧ್ಯಕ್ಷರಾಗಿದ್ದು ಜೆಡಿಎಸ್ ಅವಧಿಯಲ್ಲಾದರೂ ಸದಸ್ಯರ ನೇಮಕವು 2008ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಅವಧಿಯಲ್ಲಿ ನಡೆದಿತ್ತು. 2011ರ ಹಗರಣದ ಪ್ರಮುಖ ರೂವಾರಿ ಎಂದೇ ಕುಖ್ಯಾತಿ ಪಡೆದ ಮಂಗಳಾ ಶ್ರೀಧರ್ ಅವರನ್ನು ನೇಮಕ ಮಾಡಿಸಿದ್ದು, ಆ ಕಾಲದಲ್ಲಿ ಬಿಜೆಪಿ ಕಚೇರಿಯನ್ನೇ ತಮ್ಮ ವಾಸ್ತವ್ಯದ ಗೂಡಾಗಿ ಮಾಡಿಕೊಂಡಿದ್ದ, ಇವತ್ತು ದೆಹಲಿಯಲ್ಲಿ ಕುಳಿತು ಕರ್ನಾಟಕದ ರಾಜಕೀಯವನ್ನು ಆಡಿಸುತ್ತಿರುವ ಬಿಜೆಪಿಯ ಪ್ರಭಾವಿ ನಾಯಕರು ಎಂಬುದು ರಹಸ್ಯವೇನಲ್ಲ.

2011ರ ನೇಮಕಾತಿ ಅಕ್ರಮದ ಬಗ್ಗೆ ಸಿಐಡಿ ತನಿಖೆಯನ್ನು 2013ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ನಡೆಸಿ, ನೇಮಕಾತಿ ಅಧಿಸೂಚನೆಯನ್ನೇ ರದ್ದುಪಡಿಸಿತು. 2019ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಪಟ್ಟಿಯನ್ನೇ ಸಿಂಧುಗೊಳಿಸಿತು. ಅದಕ್ಕೆ, ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ ಪ್ರಭಾವಿಯಾಗಿರುವ ಕೆಲವು ಸಚಿವರೂ ಮಧ್ಯಸ್ಥಿಕೆ ವಹಿಸಿದ್ದು ಸುಳ್ಳೇನಲ್ಲ. ಗೋನಾಳ್ ಭೀಮಪ್ಪ ಅವರನ್ನು ಪೊಲೀಸರು ಬಂಧಿಸುವ ಸನ್ನಿವೇಶ ಸೃಷ್ಟಿಯಾಗಿತ್ತು. ಆಗ, ನಡೆದ ಕಾರ್ಯಕ್ರಮವೊಂದರಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡರು, ಗೋನಾಳ್‌ಗೆ ರಕ್ಷಣೆ ನೀಡಿ, ಬಂಧಿಸದಂತೆ ನೋಡಿಕೊಳ್ಳಿ ಎಂದು ಸಲಹೆ ನೀಡಿದ್ದರು. ಅದೇ ವೇದಿಕೆಯಲ್ಲಿದ್ದ ಅಂದಿನ ಸಮಾಜ ಕಲ್ಯಾಣ ಸಚಿವ ಎಚ್‌.ಆಂಜನೇಯ ಅವರು, ಭೀಮಪ್ಪ ತಮ್ಮ ತಂಗಿಯ ಗಂಡನಾಗಿದ್ದು, ಅವರ ರಕ್ಷಣೆಗೆ ಪ್ರಯತ್ನಿಸುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ಮೊದಲ ಅವಧಿಯಲ್ಲಿ 2011ರ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಅಕ್ರಮದ ತನಿಖೆ ನಡೆಸಿದ್ದರು. ಆಯೋಗದಲ್ಲಿ ಸುಧಾರಣೆ ತರಲು ಪಿ.ಸಿ.ಹೋಟಾ ನೇತೃತ್ವದಲ್ಲಿ ಸಮಿತಿ ರಚಿಸಿ ವರದಿಯನ್ನೂ ಪಡೆದಿದ್ದರು.

ಐಎಎಸ್ ಅಧಿಕಾರಿಯಾಗಿ ಬಡ್ತಿ ಪಡೆದಿದ್ದ ಕೆ.ಶ್ಯಾಮ್ ಭಟ್ ಅವರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ನಿರ್ವಹಿಸಿದ್ದರು. ಅವರ ವಿರುದ್ಧ ಹಲವು ಆರೋಪಗಳಿದ್ದವು. ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಆರಂಭದಲ್ಲಿ ಅವರಿಗೆ ಶ್ಯಾಮ್ ಭಟ್ ಬಗ್ಗೆ ಅಂತಹ ಒಳ್ಳೆಯ ಅಭಿಪ್ರಾಯವೇನೂ ಇರಲಿಲ್ಲ. ಇದ್ದಕ್ಕಿದ್ದಂತೆ ಅವರ ಮೇಲಿನ ಭಾವನೆ ಬದಲಾಯಿತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಹುದ್ದೆ ಸಿಕ್ಕಿತು. ಕೆಪಿಎಸ್‌ಸಿಗೆ ಸುಧಾರಣೆ ತರಬೇಕೆಂಬ ಇಚ್ಛಾಶಕ್ತಿ ಪ್ರದರ್ಶಿಸಿದ್ದ ಸಿದ್ದರಾಮಯ್ಯ ಅವರು, ಶ್ಯಾಮ್ ಭಟ್ ಅವರನ್ನು ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಿಸಿದರು.

ಬಿ.ಎಸ್‌.ಯಡಿಯೂರಪ್ಪ ಸರ್ಕಾರದ ಎರಡನೇ ಅವಧಿಯಲ್ಲಿ ಅನರ್ಹರನ್ನೆಲ್ಲ ತಂದು ಕೆಪಿಎಸ್‌ಸಿಗೆ ತುರುಕಲಾಯಿತು. ಪಿ.ಸಿ.ಹೋಟಾ ಸಮಿತಿಯ ಶಿಫಾರಸಿನ ಅನುಸಾರ, ದೇಶದ ಹಲವು ರಾಜ್ಯಗಳಲ್ಲಿರುವಂತೆ ಆಯೋಗದ ಸದಸ್ಯರ ಸಂಖ್ಯೆಯನ್ನು ಇಳಿಸಬೇಕಿತ್ತು. ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿದ್ದ ಟಿ.ಎಂ.ವಿಜಯಭಾಸ್ಕರ್ ಅವರು ಸಂಖ್ಯೆಯನ್ನು 14ರಿಂದ 8ಕ್ಕೆ ಇಳಿಸುವಂತೆ ಶಿಫಾರಸು ಮಾಡಿದ್ದರು. ಆದರೆ, ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಇನ್ನೇನು ಅಧಿಕಾರ ಮುಗಿಸುವ ಹೊತ್ತಿನಲ್ಲಿ ಕೆಪಿಎಸ್‌ಸಿ ಸದಸ್ಯರ ಸಂಖ್ಯೆಯನ್ನು 16ಕ್ಕೆ ಏರಿಸಿದರು. ಅಲ್ಲದೇ, ತಮಗೆ ಬೇಕಾದ ಕೆಲವರನ್ನು ಸದಸ್ಯರಾಗಿ ನೇಮಿಸಿಯೂ ಬಿಟ್ಟರು.

ಸಿದ್ದರಾಮಯ್ಯನವರು ಎರಡನೇ ಬಾರಿ ಅಧಿಕಾರಕ್ಕೆ ಬಂದ ಬಳಿಕ ಸುಧಾರಣೆಯತ್ತ ಅಂಬೆಗಾಲು ಇಟ್ಟಿದ್ದಾರೆ. ಸದಸ್ಯರ ಸಂಖ್ಯೆಯನ್ನು ಎಂಟಕ್ಕೆ ಇಳಿಸುವ ಪ್ರಸ್ತಾವ ಸರ್ಕಾರದ ಮುಂದಿದೆ. ಏತನ್ಮಧ್ಯೆ, ಖಾಲಿಯಾದ ಏಳು ಸದಸ್ಯರ ನೇಮಕವನ್ನೂ ಮಾಡಿಸಿದ್ದಾರೆ. ಅವರಲ್ಲಿ ಒಂದಿಬ್ಬರು ಲೋಕಾಯುಕ್ತದಲ್ಲಿ ಪ್ರಕರಣವನ್ನೂ ಎದುರಿಸುತ್ತಿದ್ದರು. ಹೀಗಾಗಿ, ಅಂಬೆಗಾಲಿನ ಅಡಿಗಡಿಗೆ ಅಡೆತಡೆಯೂ ಬಿದ್ದಿದೆ.

ಸದಸ್ಯರ ಆಯ್ಕೆಗೆ ಶೋಧನಾ ಸಮಿತಿ ರಚಿಸುವಂತೆ ಪಿ.ಸಿ.ಹೋಟಾ ಸಮಿತಿ ಶಿಫಾರಸು ಮಾಡಿತ್ತು. ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಗಳ ನೇಮಕಕ್ಕೆ ಶೋಧನಾ ಸಮಿತಿ ರಚಿಸಲಾಗುತ್ತದೆ. ಹುದ್ದೆಯ ಆಕಾಂಕ್ಷಿಗಳು ಎಷ್ಟು ಚಾಲಾಕಿಗಳೆಂದರೆ, ಶೋಧನಾ ಸಮಿತಿಯ ಸದಸ್ಯರನ್ನೇ ಮೊದಲು ತಮ್ಮ ಖೆಡ್ಡಾಕ್ಕೆ ಬೀಳಿಸಿಕೊಳ್ಳುತ್ತಾರೆ. ಬಳಿಕ, ಸರ್ಕಾರದ ಪ್ರಮುಖರು, ಲೋಕಭವನದ ದಾರಿಗಳನ್ನು ಹುಡುಕಿಕೊಂಡು ಆಯಕಟ್ಟಿನ ಹುದ್ದೆಗೆ ಬಂದು ಕುಳಿತುಕೊಳ್ಳುತ್ತಾರೆ. ಭ್ರಷ್ಟಾಚಾರದ ವಿಷವರ್ತುಲವನ್ನು ತುಂಡರಿಸಬೇಕಾದರೆ ಅದಕ್ಕೆ ಬಹುದೊಡ್ಡ ಇಚ್ಛಾಶಕ್ತಿಯೇ ಬೇಕು.

ಕೆಪಿಎಸ್‌ಸಿಯನ್ನು ಶುದ್ಧಿಗೊಳಿಸಿ, ಉದ್ಯೋಗಾಕಾಂಕ್ಷಿಗಳಲ್ಲಿ ಭರವಸೆ ತುಂಬಬೇಕಾದರೆ ಸರ್ಕಾರದ ಮುಖ್ಯಸ್ಥರು, ಅದರಲ್ಲೂ ಮುಖ್ಯಮಂತ್ರಿಯಾದವರು ಈ ವಿಷಯದಲ್ಲಿ ಖಚಿತ, ಕಠಿಣ ನಿಲುವು ತೆಗೆದುಕೊಳ್ಳಬೇಕು. ಯಾವುದೇ ಮುಲಾಜಿಗೂ ಒಳಗಾಗದೇ ಪ್ರಾಮಾಣಿಕರು, ದಕ್ಷರು, ಸಮಾಜದ ಕಳಕಳಿ ಇರುವವರನ್ನು ಹುಡುಕಿ ನೇಮಕ ಮಾಡಬೇಕು. ಒಂದಾವರ್ತಿ ಇಂತಹ ಪದ್ಧತಿಗೆ ಚಾಲನೆ ನೀಡಿ, ಆಯೋಗ ಸರಿಹಾದಿಗೆ ಬಂದರೆ ಮತ್ತೆ ಅದನ್ನು ಕುಲಗೆಡಿಸುವ ಧೈರ್ಯವನ್ನು ಯಾರೂ ತೋರಲಾರರು. ಅಂತಹ ನಿಷ್ಠುರವಾದಿ ನಾಯಕರು ಈಗ ಇದ್ದಾರೆಯೇ ಎಂಬುದು ಚಿದಂಬರ ರಹಸ್ಯ. ❖

ಸ್ವಚ್ಛವಾಗಲಿ

ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು

ಅಧಿಕಾರಸ್ಥರ ಹಸ್ತಕ್ಷೇಪ ನಿಲ್ಲಲಿ

ಆಯೋಗದ ಆಡಳಿತ ಹದಗೆಡುವಲ್ಲಿ ಎಲ್ಲ ರಾಜಕೀಯ ಪಕ್ಷಗಳ ನೇತಾರರ ಪಾತ್ರವೂ ಎದ್ದುಕಾಣಿಸುತ್ತದೆ. ಅಷ್ಟು ಮಾತ್ರವಲ್ಲ; ರಾಜ್ಯ ಸರ್ಕಾರ ಮಾಡಿದ ಶಿಫಾರಸು ಆಧರಿಸಿ ನೇಮಕಾತಿ ಆದೇಶ ಹೊರಡಿಸುವುದು ರಾಜ್ಯಪಾಲರು. ಕೆಲವು ಮಸೂದೆಗಳ ತಿದ್ದುಪಡಿ, ಸರ್ಕಾರದ ನಡೆಗಳಿಗೆ ಅಡ್ಡಗಾಲು ಹಾಕಿ ಕೂರುವ ರಾಜ್ಯಪಾಲರಿಗೂ ಸಾಂವಿಧಾನಿಕ ಸಂಸ್ಥೆಯಾದ ಕೆಪಿಎಸ್‌ಸಿಗೆ ಸುಧಾರಣೆ ತರುವ ಮನಸ್ಸು ಇದ್ದಂತಿಲ್ಲ. ಅವರೂ ಕಿವಿ ಹಿಂಡುವ ಕೆಲಸ ಮಾಡುತ್ತಿಲ್ಲ.

ಕೆಪಿಎಸ್‌ಸಿಯಲ್ಲಿ ಆಮೂಲಾಗ್ರ ಬದಲಾವಣೆ ಬರಬೇಕಾದರೆ ಅಧಿಕಾರಸ್ಥ ರಾಜಕಾರಣಿಗಳ ಹಸ್ತಕ್ಷೇಪ ಖುಲ್ಲಂಖುಲ್ಲಾ ನಿಲ್ಲಬೇಕು. ಸ್ವಜಾತಿ ಬಂಧುವನ್ನೋ, ಸಚಿವರ ಹತ್ತಿರದವರನ್ನೋ ಅಥವಾ ಭಾರಿ ಮೊತ್ತದ ಹಣ ಕೊಟ್ಟವರನ್ನು ಕೆಪಿಎಸ್‌ಸಿ ಸದಸ್ಯತ್ವಕ್ಕೆ ನೇಮಕ ಮಾಡುವ ಹೀನ ಚಾಳಿ ತೊಲಗುವವರೆಗೂ ಆಯೋಗದ ಪರಿಸ್ಥಿತಿ ಸುಧಾರಿಸುವುದು ಅಸಾಧ್ಯ. ಹತ್ತಾರು ಕೋಟಿ ರೂಪಾಯಿ ಕೊಟ್ಟು ಬಂದವರು ಮಧ್ಯವರ್ತಿಗಳನ್ನೋ ಕುಟುಂಬದವರನ್ನೋ ಇಟ್ಟುಕೊಂಡು ಹುದ್ದೆಗಳನ್ನು ಮಾರಾಟಕ್ಕೆ ಇಡುವ ಅನಿವಾರ್ಯಕ್ಕೆ ಸಹಜವಾಗಿ ಸಿಲುಕುತ್ತಾರೆ. ದುಡ್ಡು ಕೊಡದೇ ಬಂದವರೇನೂ ಸುಭಗರೆನ್ನುವಂತಿಲ್ಲ. ಅವರೂ ಅಲ್ಲಿನ ವ್ಯವಸ್ಥೆಗೆ ಹೊಂದಿಕೊಳ್ಳಲು ಹೋಗಿ ಹಣದ ದಾಸರಾಗುವುದು ಸಾಮಾನ್ಯ.

ಆಯೋಗದ ಕಾಲಹರಣವೇ ಭ್ರಷ್ಟಾಚಾರದ ಅಡಿಗಲ್ಲು

ಒಡಿಶಾ, ಬಿಹಾರದಂತಹ ಹಿಂದುಳಿದ ರಾಜ್ಯಗಳ ಲೋಕಸೇವಾ ಆಯೋಗಗಳು ಒಂದು ವರ್ಷದಲ್ಲಿ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಗಳನ್ನು ಗುರುತರ ಆರೋಪಗಳಿಲ್ಲದೆ ಯಶಸ್ವಿಯಾಗಿ ಮಾಡಿ ಮುಗಿಸಿ ಅನ್ಯ ರಾಜ್ಯಗಳಿಗೆ ಮಾದರಿಯಾಗುತ್ತಿವೆ. ಲಕ್ಷಾಂತರ ಅಭ್ಯರ್ಥಿಗಳು ಬರೆಯುವ ವಿವಿಧ ರಾಜ್ಯಗಳ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿನ 5ಕ್ಕೂ ಹೆಚ್ಚು ವಿಷಯಗಳ ಮೌಲ್ಯಮಾಪನಕ್ಕೆ ತಗಲುವ ಸರಾಸರಿ ಸಮಯ 4ರಿಂದ 6 ವಾರಗಳು.

ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಪರೀಕ್ಷೆಯಲ್ಲಿ 10,000ಕ್ಕೂ ಹೆಚ್ಚು ಅಭ್ಯರ್ಥಿಗಳು ಬರೆಯುವ, ವಿವಿಧ ಐಚ್ಛಿಕ ವಿಷಯಗಳನ್ನೊಳಗೊಂಡ ಮುಖ್ಯ ಪರೀಕ್ಷೆಯ ಪತ್ರಿಕೆಗಳ ಮೌಲ್ಯಮಾಪನಕ್ಕೆ ತಗಲುವ ಸಮಯ ಸರಾಸರಿ ಎರಡರಿಂದ ಎರಡೂವರೆ ತಿಂಗಳು. ಆದರೆ, ಸಿಲಿಕಾನ್ ವ್ಯಾಲಿ ಎಂದು ಹೆಸರು ಪಡೆದು ಮಾಹಿತಿ ತಂತ್ರಜ್ಞಾನದ ಹೆಬ್ಬಾಗಿಲಾಗಿರುವ ಬೆಂಗಳೂರನ್ನು ರಾಜಧಾನಿಯನ್ನಾಗಿ ಪಡೆದಿರುವ ಕರ್ನಾಟಕದಂತಹ ಮುಂದುವರಿದ ರಾಜ್ಯದಲ್ಲಿ ಡಿಜಿಟಲ್ ಮೌಲ್ಯಮಾಪನ ಮಾಡಿಯೂ ಕಳೆದ ಮೂರು ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಗಳನ್ನು ಮುಗಿಸಲು ತೆಗೆದುಕೊಂಡಿರುವ ಸರಾಸರಿ ಸಮಯ ಎರಡೂವರೆ ವರ್ಷಗಳು. ಕರ್ನಾಟಕ ಲೋಕಸೇವಾ ಆಯೋಗವು ಎಂತಹ ಒಂದು ರೋಗಗ್ರಸ್ತ ಸಂಸ್ಥೆಯಾಗಿದೆ ಎಂದು ಸಾಬೀತುಪಡಿಸಲು ಇದಕ್ಕಿಂತ ಉತ್ತಮ ಉದಾಹರಣೆ ಬೇಕಿಲ್ಲ.

ಉದ್ದೇಶಿತ ಸಮಯಹರಣ: ಗೆಜೆಟೆಡ್ ಪ್ರೊಬೇಷನರಿ ಪರೀಕ್ಷಾ ಪ್ರಕ್ರಿಯೆಗಳನ್ನು ಮುಗಿಸಲು ಆಯೋಗ ತೆಗೆದುಕೊಳ್ಳುವ ಸಮಯ ಹಲವು ಆಯಾಮಗಳಲ್ಲಿ ಭ್ರಷ್ಟಾಚಾರಕ್ಕೆ ರಹದಾರಿಯಾಗಿದೆ. ಉದ್ದೇಶಿತ ಕಾಲಹರಣದಿಂದ ಹುದ್ದೆಗಳ ಬಿಕರಿಗೆ ಸಾಕಷ್ಟು ಸಮಯ ಲಭಿಸುತ್ತದೆ. ಈ ಸಮಯವು ಏಜೆಂಟರ ಮತ್ತು ಕೆಪಿಎಸ್‌ಸಿಯಲ್ಲಿನ ಭ್ರಷ್ಟ ಹೆಗ್ಗಣಗಳ ನಡುವಣ ಸಂಬಂಧ ಕುದುರಲು ಸಹಕಾರಿಯಾಗಿದೆ. ಇದು ಹುದ್ದೆಗಳ ಮಾರಾಟಕ್ಕೆ ಒಂದು ವ್ಯವಸ್ಥಿತ ವೇದಿಕೆಯನ್ನೊದಗಿಸಿ ಅರ್ಹ ಅಭ್ಯರ್ಥಿಗಳ ಪಾಲಿಗೆ ಮರಣಶಾಸನವಾಗಿದೆ.

ವಿದ್ಯಾರ್ಥಿಗಳ ವಲಯದಲ್ಲಂತೂ, ಈ ಕಾಲಹರಣ ಅನೇಕ ದುಗುಡಗಳಿಗೆ ಮತ್ತು ಪ್ರಮಾದಗಳಿಗೆ ಎಡೆ ಮಾಡಿಕೊಡುತ್ತದೆ. ಮೊದಲನೆಯದಾಗಿ, ಕೆಪಿಎಸ್‌ಸಿಯ ಆಂತರಿಕ ವರ್ತುಲದ ಸಂಬಂಧವಿರುವಂಥ ಹಾಗೂ ಉತ್ತಮ ಆರ್ಥಿಕ ಸ್ಥಿತಿ ಹೊಂದಿರುವಂಥ ಅಭ್ಯರ್ಥಿಗಳು ಈ ಅವಧಿಯ ನೇರ ಫಲಾನುಭವಿಗಳಾಗಿರುತ್ತಾರೆ. ಇವರ ಕಾರ್ಯಚಟುವಟಿಕೆಗಳು ಈ ಹಂತದಲ್ಲಿ ಗರಿಗೆದರುತ್ತವೆ. ಹುದ್ದೆಗಳ ಹರಾಜು ಬಾಹ್ಯ ಜಗತ್ತಿಗೆ ಅಗೋಚರವಾಗಿದ್ದರೂ ಕಾಳಸಂತೆಯಲ್ಲಿ ಎಗ್ಗಿಲ್ಲದೆ ಕೋಟಿ ರೂಪಾಯಿ ಲೆಕ್ಕದಲ್ಲಿ ನಡೆಯುತ್ತಿರುತ್ತದೆ. ಈ ಸಮಯ ಕಡಿತವಾದರೆ ಭ್ರಷ್ಟಾಚಾರ ಆದಷ್ಟು ಕಡಿಮೆಯಾಗಲಿದೆ.

ಎರಡನೆಯದಾಗಿ, ಹಲವು ವಿದ್ಯಾರ್ಥಿಗಳಿಗೆ ಸರ್ಕಾರ ನೀಡಿರುವ ಪ್ರಯತ್ನಗಳ ಸಂಖ್ಯೆ ಮುಗಿಯುವ ಮೊದಲೇ ವಯೋಮಿತಿ ಮೀರಿಹೋಗುತ್ತಿದೆ. ಇದರಿಂದ, ಯುವಜನರ ಅಮೂಲ್ಯ ಸಮಯ ಕಾಯುವುದರಲ್ಲೇ ಸಾಗಿ, ಕೊನೆಗೆ ಭ್ರಷ್ಟಾಚಾರಕ್ಕೆ ಬಲಿಯಾಗುತ್ತಿದೆ. ಮೂರನೆಯದಾಗಿ, ಅಸಂಖ್ಯ ವಿದ್ಯಾರ್ಥಿಗಳು ಬಡತನದ ಕರಾಳ ಛಾಯೆಯ ನಡುವೆಯೂ ತಮ್ಮ ಬದುಕನ್ನು ಸರ್ಕಾರಿ ಉದ್ಯೋಗಗಳ ಮೂಲಕ ಕಟ್ಟಿಕೊಳ್ಳಲು ಹಗಲು ರಾತ್ರಿ ಎನ್ನದೆ ಓದಿಕೊಳ್ಳುತ್ತಿರುತ್ತಾರೆ. ಮನೆಗೆ ಆಧಾರವಾಗಿರುವ ಇಂತಹ ಯುವಕರಿಗೆ ಉದ್ಯೋಗ ಇಲ್ಲದ ಪರಿಣಾಮವಾಗಿ ಇವರ ಕುಟುಂಬಗಳು ದಿನೇ ದಿನೇ ಮತ್ತಷ್ಟು ಬಡತನದೆಡೆಗೆ ಹೊರಳುತ್ತಿವೆ. ಈ ಬಗ್ಗೆ ಸದನದಲ್ಲಿ ಚರ್ಚೆಯಾಗಿದ್ದರೂ ಬೆಕ್ಕಿಗೆ ಗಂಟೆ ಕಟ್ಟುವುದ್ಯಾರು ಎಂಬ ಪ್ರಶ್ನೆಗೆ ಸರ್ಕಾರದ ಬಳಿ ಉತ್ತರವಿಲ್ಲ.

ಬೇಕಾಗಿದೆ 'ಗ್ಯಾರಂಟಿ'

ಯುವಕರಿಗೆ ಬೇಕಾಗಿರುವುದು ಸರ್ಕಾರದ 'ಯುವನಿಧಿ' ಗ್ಯಾರಂಟಿ ಅಲ್ಲ. ಯುವಕರ ತಾರುಣ್ಯದ ವರ್ಷಗಳು ಹಾಗೂ ಭವಿಷ್ಯವೇ ಅವರ ನಿಧಿ. ಆ ನಿಧಿಯನ್ನು ಕಾಲಹರಣ ಮತ್ತು ಭ್ರಷ್ಟಾಚಾರದ ಮೂಲಕ ಕಸಿಯುತ್ತಿರುವ ಕೆಪಿಎಸ್‌ಸಿ ಎಂಬ ಕಳ್ಳ ಸಂಸ್ಥೆಯನ್ನು ಹೆಡೆಮುರಿ ಕಟ್ಟಿ, ಶುದ್ಧೀಕರಣ ಎಂಬ ಯಾಗ ಮಾಡಿ ಕಾಯಕಲ್ಪ ಒದಗಿಸುವ ಮೂಲಕ ಪಾರದರ್ಶಕ ನೇಮಕಾತಿಯ ಗ್ಯಾರಂಟಿ ಬೇಕಾಗಿದೆ. ಯಾವುದೇ ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ನೇಮಕಾತಿ ಪರೀಕ್ಷೆಯು ಮುಗಿದ ಮೂರು ತಿಂಗಳೊಳಗೆ ಫಲಿತಾಂಶದ ಗ್ಯಾರಂಟಿ ಬೇಕಾಗಿದೆ.

ಯಾವುದೇ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯ ಮುಖ್ಯ ಪರೀಕ್ಷೆ ಮುಗಿದ ಮೂರು ತಿಂಗಳೊಳಗೆ ಸಂದರ್ಶನ ಪಟ್ಟಿಯ ಗ್ಯಾರಂಟಿ ಬೇಕಾಗಿದೆ. ಕೆಪಿಎಸ್‌ಸಿ ಸದಸ್ಯರ ಒತ್ತಡಕ್ಕೆ ಮಣಿದು ಉತ್ತಮ ಸುಧಾರಣೆ ತರಲು ಯತ್ನಿಸಿದ ಸುಬೋಧ್ ಯಾದವ್, ವಿಕಾಸ್ ಕಿಶೋರ್ ಸುರಳ್ಕರ್, ಲತಾ ಕುಮಾರಿ ಅವರಂತಹ ಉತ್ತಮ ಕಾರ್ಯದರ್ಶಿಗಳ ವರ್ಗಾವಣೆ ಮಾಡದೇ ಇರುವ ಗ್ಯಾರಂಟಿ ಬೇಕಾಗಿದೆ. ಒಂದು ಅಧಿಸೂಚನೆ ಮುಗಿಯುತ್ತಿದ್ದಂತೆ, ಮತ್ತೊಂದು ಅಧಿಸೂಚನೆಯ ಗ್ಯಾರಂಟಿ ಬೇಕಾಗಿದೆ. ಇದರ ಮೇಲೆ ಗಮನ ಹರಿಸಿ, ಇದನ್ನೆಲ್ಲ ಸರಿಪಡಿಸಲು ಇಚ್ಛಾಶಕ್ತಿ ಇರುವ ಒಂದು ಘನ ಸರ್ಕಾರವಿದೆ ಎಂಬ ಖಾತರಿ ಬೇಕಾಗಿದೆ.

–ಹೆಸರು ಹೇಳಲು ಇಚ್ಛಿಸದ ಹುದ್ದೆ ವಂಚಿತ ಅಭ್ಯರ್ಥಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಚುನಾವಣೆಯ ಹೊಸ್ತಿಲಲ್ಲಿರುವ ಅಸ್ಸಾಂನ ಚಹಾ ಎಸ್ಟೇಟ್ ಒಂದರಲ್ಲಿ ಪ್ರಧಾನಿ ಮೋದಿ ಅವರು ಸ್ಥಳೀಯ ಮಹಿಳೆಯರೊಂದಿಗೆ ಮಾತನಾಡುತ್ತಿರುವ, ಅದನ್ನು ಚಿತ್ರೀಕರಿಸುತ್ತಿರುವ ಫೋಟೊವೊಂದನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಅಸ್ಸಾಂನ ದಿಬ್ರುಗಢದ ಮನೋಹರಿ ಚಹಾ ಎಸ್ಟೇಟ್‌ನ ಚಿತ್ರವಾಗಿದ್ದು, ಇದು ಮೋದಿ ಅವರ ಪ್ರಚಾರದ ತಂತ್ರ ಎಂದು ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು.

ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಮೋದಿ ಅವರು ದಿಬ್ರುಗಢದ ಚಹಾ ಎಸ್ಟೇಟ್‌ಗೆ ಭೇಟಿ ನೀಡಿದ ಬಗ್ಗೆ ಯಾವುದೇ ವರದಿ, ಫೋಟೊ ಸಿಗಲಿಲ್ಲ. ಫೋಟೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದರ ಅಸಲಿತನದ ಬಗ್ಗೆ ಅನುಮಾನ ಬಂತು. ಉದಾಹರಣೆಗೆ, ಪ್ರಧಾನಿ ಮೋದಿ ಅವರ ಚಿತ್ರದಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದವು. ಹೀಗಾಗಿ, ಈ ಚಿತ್ರವನ್ನು ಎಐ ಪತ್ತೆ ಟೂಲ್ ಆಗಿರುವ ಹೈವ್ ಮಾಡರೇಷನ್ ಮೂಲಕ ಪರಿಶೀಲಿಸಲಾಯಿತು. ಅದು ಎಐ ಚಿತ್ರ ಎಂಬುದು ಗೊತ್ತಾಯಿತು. ಮತ್ತೊಂದು ಎಐ ಪತ್ತೆ ಟೂಲ್ ಆಗಿರುವ ವಾಸ್‌ಇಟ್‌ಎಐ ಮೂಲಕ ಪರಿಶೀಲನೆಗೆ ಒಳಪಡಿಸಿದಾಗಲೂ ಅದು ಎಐ ಮೂಲಕ ಸೃಷ್ಟಿಸಿದ ಚಿತ್ರ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪರರದ್ದನ್ನು ಆಶಿಸದೇ ಇರುವುದು ಸಂಸ್ಕಾರ

ನುಡಿ ಬೆಳಗು

ಪಿ.ಚಂದ್ರಿಕಾ

ನಾಮದೇವ ಬಹು ದೊಡ್ಡ ಸಂತ, ಅನುಭಾವಿ. ಪೂರ್ವಾಶ್ರಮದಲ್ಲಿ ದರೋಡೆಕೋರನಾಗಿದ್ದ. ತನ್ನದೇ ಗುಂಪನ್ನು ಕಟ್ಟಿಕೊಂಡು ಕಾಡಿನಲ್ಲಿ ಹೋಗಿಬರುವವರ ಮೇಲೆ ಆಕ್ರಮಣ ಮಾಡಿ ಅವರ ಹತ್ತಿರವಿದ್ದದ್ದನ್ನು ಕಸಿದುಕೊಳ್ಳುತ್ತಿದ್ದ. ಯಾರಾದರೂ ಪ್ರತಿಭಟಿಸಿದರೆ ಅಂಥವರನ್ನು ಯಾವ ಕರುಣೆಯೂ ಇಲ್ಲದೆ ಕೊಂದುಬಿಡುತ್ತಿದ್ದ.

ಕಾಡಿನಲ್ಲಿ ಜನರಿಗಾಗಿ ಕಾಯುವುದು ಸಾಕೆನ್ನಿಸಿ ಒಂದು ಊರಿಗೆ ಹೋದ. ವಿಶ್ರಮಿಸಿಕೊಳ್ಳಲು ಊರ ಹೊರಗಿನ ದೇವಾಲಯವೊಂದರ ಕಟ್ಟೆಗೆ ಒರಗಿದ. ಚಿಕ್ಕ ಪ್ರಾಯದ ತಾಯಿಯೊಬ್ಬಳು ತನ್ನ ಕಂದನನ್ನು ಕಂಕುಳಲ್ಲಿ ಇರುಕಿಸಿಕೊಂಡು ಕೈಲಿ ಪೂಜಾ ಪರಿಕರಗಳನ್ನು ಹಿಡಿದು ಬರುತ್ತಾಳೆ. ನಾಮದೇವನಿಗೆ ಆಕೆ ಯಾವುದಾದರೂ ಆಭರಣ ಧರಿಸಿದ್ದಾಳೆಯೇ, ಅದನ್ನು ತಾನು ಅಪಹರಿಸಬಹುದೇ ಎನ್ನುವ ಚಿಂತೆ. ಸುಸ್ತಾದದ್ದರಿಂದ ಆಕೆ ದೇವಸ್ಥಾನಕ್ಕೆ ಹೋಗಿಬರಲಿ ಆಮೇಲೆ ನೋಡೋಣ ಎಂದುಕೊಂಡ. ಆ ತಾಯಿ ದೇವರಿಗೆ ದೀಪವನ್ನು ಹಚ್ಚಿ ಅಳುತ್ತಾ 'ನನ್ನನ್ನು ಈ ಸ್ಥಿತಿಗೆ ಯಾಕೆ ತಂದೆ, ನನ್ನ ವಸ್ತುವನ್ನು ನನಗೆ ಉಳಿಸದೇ ಹೋದದ್ದರಿಂದ ನನ್ನ ಶಾಪ ನಿನಗೂ ತಟ್ಟುತ್ತದೆ' ಎಂದು ದೇವರನ್ನು ಕ್ರೋಧ, ಅಸಹಾಯಕತೆಯಿಂದ ಬಯ್ಯುತ್ತಿದ್ದುದು ಹೊರಗೆ ಕೂತಿದ್ದ ನಾಮದೇವನ ಕಿವಿಗೂ ಬಿತ್ತು. ಕುತೂಹಲವೆನ್ನಿಸಿತು. ಹೊರಬಂದ ಆಕೆಯನ್ನು ಕೇಳಿದ, 'ನಿನ್ನ ಶಾಪ ದೇವರಿಗೆ ತಲುಪುವುದಾ?'. 'ತಲುಪಲೇಬೇಕು ನನ್ನ ವಸ್ತುವನ್ನು ಕಸಿದುಕೊಳ್ಳುವ ಅಧಿಕಾರ ಅವನಿಗೆ ಯಾರು ಕೊಟ್ಟರು. ಪರರ ವಸ್ತುವನ್ನು ಕಸಿದುಕೊಳ್ಳುವವರು ಇದ್ದಾಗಲೂ, ಸತ್ತ ಮೇಲೂ ನರಕವನ್ನೇ ಕಾಣಬೇಕು. ಮನುಷ್ಯರಾದರೂ, ದೇವರಾದರೂ ಅಷ್ಟೇ' ಎಂದಳು ಆಕೆ. ನಾಮದೇವನಿಗೆ ತಾನು ಇನ್ನೊಬ್ಬರ ವಸ್ತುವಿಗೆ ಆಶಿಸಿ ಬಲವಂತದಿಂದ ಕಸಿದುಕೊಳ್ಳುವುದನ್ನು ನೆನೆದು ಮನಸ್ಸು ಅಲ್ಲೋಲಕಲ್ಲೋಲವಾಯಿತು. ಆದರೂ ಬಿಡದೆ, 'ತಾಯೀ ನಿನ್ನ ಕಥೆ ಏನು? ದೇವರನ್ನೇಕೆ ಬೈಯುತ್ತಿರುವಿ' ಎಂದ. 'ಯಾತ್ರೆಯಿಂದ ಬರುವಾಗ ನನ್ನ ಗಂಡನನ್ನು ದಾರಿಯಲ್ಲಿ ಆ ನಾಮದೇವ ಎನ್ನುವ ಕಳ್ಳ ಹಣ ಒಡವೆಗಾಗಿ ಪೀಡಿಸಿ ಸಾಯಿಸಿದಾಗ ನೋಡುತ್ತಾ ಕುಳಿತಿದ್ದನಲ್ಲಾ? ಅಂಥಾ ಬುದ್ಧಿಯನ್ನು ಅವನಿಗೆ ಕೊಟ್ಟನಲ್ಲಾ? ಇಂಥಾ ದೇವರನ್ನು ಬೈಯದೆ ಏನು ಮಾಡಬೇಕು' ಎನ್ನುತ್ತಾಳೆ ಆಕೆ. ನಾಮದೇವನಿಗೆ ಇನ್ನಷ್ಟು ಆಶ್ಚರ್ಯ. 'ಸರಿ ದೇವರು ಇಷ್ಟೆಲ್ಲಾ ಮಾಡಿದ. ಅವನಿಗೆ ದೀಪವನ್ನು ಯಾಕೆ ಹಚ್ಚಿದೆ?' ಎನ್ನುತ್ತಾನೆ. 'ಹೊಟ್ಟೆಯ ಬೆಂಕಿಯನ್ನು ಅವನಿಗೆ ದೀಪವಾಗಿ ಹಚ್ಚಿದೆ, ಆ ದೀಪದ ಬೆಳಕಲ್ಲಿ ಇರುವವರೆಗೂ ಅವನಿಗೆ ಅಪರಾಧಪ್ರಜ್ಞೆ ಕಾಡಬೇಕು. ತಪ್ಪು ಮಾಡಿದ ಆ ನಾಮದೇವನಿಗೆ ಸರಿಯಾದ ಶಿಕ್ಷೆಯನ್ನು ಕೊಡಬೇಕು' ಎಂದು ದುಃಖಿಸುತ್ತಾ ಆಕೆ ಹೊರಟುಹೋಗುತ್ತಾಳೆ. ನಾಮದೇವ ಖಿನ್ನನಾದ. ಇನ್ನೊಬ್ಬರ ವಸ್ತುವನ್ನು ಕಸಿದುಕೊಳ್ಳುವಾಗ, ಜೀವವನ್ನು ತೆಗೆಯುವಾಗ ತನಗೆ ಯಾಕೆ ಪಶ್ಚಾತ್ತಾಪ ಕಾಡಲಿಲ್ಲ? ಇನ್ನೊಬ್ಬರ ನೋವಿನ ಮೇಲೆ ಕಟ್ಟಿದ ತನ್ನ ಮನೆ, ಜೀವನ ಎಲ್ಲ ಕ್ಷಣಕಾಲ ನಡುಗಿ, ಇಹದಲ್ಲೂ ಪರದಲ್ಲೂ ತನಗೆ ಮುಕ್ತಿ ಇಲ್ಲ ಅನ್ನಿಸಿತು.

ಆ ತಾಯಿಯ ಆಕ್ರೋಶ, ಶಾಪ ಪದೇ ಪದೇ ಅವನನ್ನು ಕಾಡಿತು. ತನ್ನೆಲ್ಲಾ ಅನುಚರರನ್ನು ಕರೆದು ಹೇಳಿದ: 'ಇನ್ನು ಮುಂದೆ ನಾನು ಹಿಂಸೆಯನ್ನು ಮಾಡಲ್ಲ. ಪರರ ವಸ್ತುವಿಗಾಗಿ ಆಶಿಸಲ್ಲ'. ಅನುಚರರು ಕೇಳಿದರು: 'ಹಾಗಾದರೆ ಮುಂದೆ ಏನು ಮಾಡುವೆ?' 'ಭಗವಂತ ನನ್ನ ಎಚ್ಚರಿಸಿದ್ದಾನೆ. ಇದುವರೆಗೂ ನಾನು ಮಾಡಿರುವ ಪಾಪವನ್ನು ಕಳೆದುಕೊಳ್ಳುವೆ' ಎಂದು ದೇವಾಲಯದ ಕಟ್ಟೆಗೆ ಕುಳಿತು ನಾಮದೇವ ದಿನನಿತ್ಯವೂ ದೇವರಿಗಾಗಿ ಹಾಡಿದ. ಪಶ್ಚಾತ್ತಾಪದಿಂದ ಹೃದಯದ ಕೊಳೆಯನ್ನೆಲ್ಲಾ ತೊಳೆದುಕೊಂಡು ಸಂತನಾದ. ಗುರುವಿಲ್ಲದಿದ್ದರೂ ನಾಮದೇವ, ತನ್ನ ವಿವೇಕ ಮತ್ತು ಸಂಸ್ಕಾರಗಳಿಂದ ತನ್ನನ್ನು ಎತ್ತರಕ್ಕೇರಿಸಿಕೊಂಡ. ❖

ಗುಂಡಣ್ಣ

ಪದಬಂಧ 6368

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಿಂದು ಸಹಿತವಾದ ವರ್ಣ (4)
3.ಈ ಪರಿಯಾಗಿ, ಎಲ್ಲವನ್ನೂ ತ್ಯಜಿಸುವಿಕೆ (4)
5.ಮಣಭಾರದ ಹೆಣವನ್ನು ಸಾಗಿಸಿದ ಸ್ಮಶಾನ (3)
7.ಪದಾತಿಯವನ ಬಳಿಯಿರುವ ಗಂಡ (2)
8.ನಡೆದ ಅಥವಾ ಕಲ್ಪಿತ ಸಂಗತಿ (2)
11.ಅಸಮವಲ್ಲದ್ದು ಉಲ್ಟಾ ಆಗಿದೆ (2)
13.ಸಂದೇಹ ಹೀಗೆ ಬಂದಿದೆ (2)
14.ವಿರಳವಾಗಿ ಕಾಣುತ್ತಿರುವ ರಕ್ತ (3)
16.ಬರಿದಾದ ಕೈ (4)
17.ಈ ರೀತಿ ಕಡೆಗಣಿಸುವಿಕೆ (4)

ಮೇಲಿಂದ ಕೆಳಕ್ಕೆ
1.ಅಳತೆಗೆ ಮೀರಿದ ಸ್ಥಿತಿ (4)
2.ಉಲ್ಟಾ ಕಾಣುತ್ತಿರುವ ವೃಕ್ಷ (2)
3.ಪಯಣದಲ್ಲಿ ಕಟ್ಟದ ಬಾಜಿ (2)
4.ಈಕೆ ಪತಿವ್ರತೆ (3)
6.ಸರಸದ ಮಾತುಕತೆ (3)
7.ಶ್ರೇಷ್ಠವಾದ ನೆಲೆಯಿದು (4)
9.ಹೊಗಳಿಕೆಯ ವಿರುದ್ಧ ಪದ (4)
10.ಚಾವಟ ಇಲ್ಲಿದೆ (3)
12.ಉತ್ತರದ ಕಡೆಯವರ ಸೋಪು (4)
13.ಪಾರ್ವತಿಯ ಇನ್ನೊಂದು ಹೆಸರು (3)
14.ತಿರುವು ಮುರುವಾಗಿರುವ ಮಡಿಕೆ (2)
15.ತರಗತಿಯಲ್ಲಿರುವ ಸಮೂಹ (2)



6367ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಮಾಸ 5.ಖಂಡಗ್ರಹಣ
6.ಪರಾತ 7.ವಾಚನ
8.ವಾಗ್ಗೇಯಕಾರ 9.ಸಮಾಧಿ
10.ಸುದೈವ 13.ಆಹ್ಲಾದಕರ
14.ಸಸ್ತಾ

ಮೇಲಿಂದ ಕೆಳಕ್ಕೆ:
1.ಪರಿತಾಪ 2.ನಿಗ್ರಹ
4.ಸಮಾಧಾನ 5.ಖಂಡಿತವಾದಿ
7.ವಾರಸುದಾರ 9.ಸಮುಲ್ಲಾಸ
11.ವರ್ಷಋತು 12.ಕದನ

ಸುಡೊಕು 6751

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3		6		2		4	
6	9	2				8		
			3		9		1	
4		8			5		2	
				1		4		7
2		5	4				6	
	5		8		3			
7		3				6		5
	8		7		6		3	

6750 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಏಪ್ರಿಲ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಸಪ್ತಮಿ ಗಂ. 21-20 ನಕ್ಷತ್ರ: ಮೂಲ ಗಂ 8-49 ಯೋಗ: ಪರಿಘ ಗಂ. 17-58 ಕರಣ: ವಿಷ್ಟಿ ಗಂ 8-13 ಮೀನ ಮಾಸದ 26 ನೇ ದಿನ. ಮಳೆ ನಕ್ಷತ್ರ : ರೇವತಿ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 , ಸೂರ್ಯೋದಯ : 06-25 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 20 ಶವ್ವಾಲ್, ಅದೃಷ್ಟ ಸಂಖ್ಯೆ : 3, 7

ಮೇಷ: ಅನವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಕೆಟ್ಟ ಆಲೋಚನೆಯನ್ನು ತೆಗೆದುಹಾಕಿ. ಕಷ್ಟದ ದಿನಗಳು ದೂರಾಗಿ ಸುಖ ನೆಮ್ಮದಿಯ ಭಾವವನ್ನು ಕಾಣಲಿದ್ದೀರಿ. ಪ್ರವಾಸಿ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ.

ವೃಷಭ: ಆತ್ಮಾವಲೋಕನ ಮಾಡಿಕೊಳ್ಳುವುದರಿಂದ ಅನೇಕ ಪ್ರಶ್ನೆಗಳಿಗೆ ಉತ್ತರ ದೊರಕಲಿದೆ. ವ್ಯವಹರಿಸುವ ವ್ಯಕ್ತಿಯ ಪೂರ್ವಾಪರ ತಿಳಿದಿರುವುದು ಉತ್ತಮ. ಷೇರು ಬಂಡವಾಳಗಳನ್ನು ಹೆಚ್ಚಿಸಿಕೊಳ್ಳುವಿರಿ.

ಮಿಥುನ: ವಿಭಿನ್ನ ಜನರನ್ನು ಭೇಟಿಯಾಗಲಿರುವುದರಿಂದ ವೃತ್ತಿ ಬದುಕು ಹಾಗೂ ಸಾಮಾಜಿಕ ಬದುಕಿನಲ್ಲಿ ಬದಲಾವಣೆಯ ಗಾಳಿ ಬೀಸಲಿದೆ. ಧೈರ್ಯದಿಂದ ಕಾರ್ಯಪ್ರವೃತ್ತರಾದಲ್ಲಿ ಇಷ್ಟಾರ್ಥ ಸಿದ್ಧಿಸಲಿದೆ.

ಕರ್ಕಾಟಕ: ನಾನಾ ಬಗೆಯ ಚಿಂತನೆಗಳು ಕಾರ್ಯರೂಪಕ್ಕೆ ಬರಲಿವೆ. ಆದರೆ ಆಕಸ್ಮಿಕವಾಗಿ ಮಾಡುವ ಕೆಲಸದಿಂದ ಧರ್ಮಸಂಕಟದಲ್ಲಿ ಸಿಲುಕಲಿದ್ದೀರಿ. ಮಕ್ಕಳಿಗಾಗಿ ವಸ್ತುಗಳನ್ನು ಖರೀದಿಸುವಿರಿ.

ಸಿಂಹ: ಬದುಕಿನ ಸಾರ ತಿಳಿಯುವುದು ಉತ್ತಮ ವಿಚಾರ. ಕುಟುಂಬದ ಹಲವಾರು ತಾಪತ್ರಯಗಳಿಗೆ ಊರಿನ ಪ್ರಾಜ್ಞರಿಂದ ಪರಿಹಾರವನ್ನು ಪಡೆದುಕೊಳ್ಳುವಿರಿ.

ಕನ್ಯಾ: ಪಾಲುದಾರರ ಜತೆಗಿನ ವ್ಯವಹಾರಗಳಲ್ಲಿ ಅತಿಯಾದ ಪಾರದರ್ಶಕತೆ ಅಪಾಯವನ್ನು ತಂದೊಡ್ಡಬಹುದು. ಮನೋಭಿಲಾಷೆಯಂತೆ ಸಂಘ ಸಂಸ್ಥೆಗಳ ಅಧಿಕಾರ ಪ್ರಾಪ್ತಿ. ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು.

ತುಲಾ: ಮನೆಯಲ್ಲಿನ ಹಿರಿಯ ನಾಗರಿಕರ ವಿಚಾರವಾಗಿ ಸಣ್ಣಪುಟ್ಟ ವಿಚಾರಗಳಲ್ಲೂ ನಿಗಾವಹಿಸಿ. ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಅವಕಾಶ ಸಿಗಲಿದೆ.

ವೃಶ್ಚಿಕ: ಸಂಘ ಸಂಸ್ಥೆಗಳ ವಿಚಾರವನ್ನು ಮುಕ್ತವಾಗಿ ಚರ್ಚಿಸಿ ನಂತರದಲ್ಲಿ ಕೆಲಸಗಳನ್ನು ಕಾರ್ಯರೂಪಕ್ಕೆ ತನ್ನಿ. ಅನವಶ್ಯಕವಾಗಿ ಎಳೆದುಕೊಳ್ಳುವ ಚಿಂತೆಯಿಂದ ಆರೋಗ್ಯದಲ್ಲಿ ಏರುಪೇರು ಕಂಡುಬರಲಿದೆ.

ಧನು: ನಿಮ್ಮ ಮಾತನ್ನು ಪ್ರಸ್ತುತ ಪಡಿಸುವಾಗ ಅದ್ಭುತ ವಾಗ್ಝರಿ ಎಲ್ಲರನ್ನೂ ನಿಮ್ಮ ಮಾತಿನಲ್ಲಿ ಹಿಡಿದು ನಿಲ್ಲಿಸುತ್ತದೆ. ನೂತನ ಯೋಜನೆಗಳಿಗೆ ಹಣಕಾಸಿನ ಕೊರತೆ ಇರುವುದಿಲ್ಲ.

ಮಕರ: ಚೋರ ಬಾಧೆ ಇರುವ ಕಾರಣದಿಂದ ದೊಡ್ಡ ಮಟ್ಟದ ಹಣ ಅಥವಾ ಬೆಲೆ ಬಾಳುವ ವಸ್ತುಗಳನ್ನು ಹಿಡಿದುಕೊಂಡು ಸಂಚರಿಸುವುದು ಸರಿಯಲ್ಲ. ಉರಿಯುತ್ತಿರುವಂಥ ಬೆಂಕಿಗೆ ಶತ್ರುಗಳು ತುಪ್ಪ ಸುರಿಯಬಹುದು.

ಕುಂಭ: ಗೊಂದಲಗಳಿಗೆ ಒಳಗಾಗದೇ ನಿಲುವು ಸ್ಪಷ್ಟಪಡಿಸಿಕೊಂಡಲ್ಲಿ ಗೆಲುವು ನಿಮ್ಮದಾಗಲಿದೆ. ಬುದ್ಧಿವಂತಿಕೆಯಿಂದ ಕೂಡಿರುವ ಕಾರ್ಯವೈಖರಿ ನಿಮ್ಮದಾಗಿರುತ್ತದೆ.

ಮೀನ: ಹಿಂತಿರುಗಿ ಬರಬೇಕಿದ್ದ ಹಣಕ್ಕೆ ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳಿ. ಪ್ರೀತಿ ಪಾತ್ರರಿಂದ ತಾತ್ಕಾಲಿಕವಾಗಿ ದೂರವಾಗುವ ಸಂಭವವಿದೆ. ತಂದೆಯಿಂದ ವಾಹನ ಅಥವಾ ವಸ್ತ್ರಾಭರಣ ಪ್ರಾಪ್ತಿಯಾಗಲಿದೆ.

ಷೇರುಪೇಟೆ ವಹಿವಾಟು

74,616 ಹಿಂದಿನ ಅಂತ್ಯ	2946
77,562 ಇಂದಿನ ಅಂತ್ಯ	

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,123
ಇಂದಿನ ಅಂತ್ಯ:	23,997
ದಿನದ ಗರಿಷ್ಠ:	24,025
	873

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹465
12 ಕ್ಕೆ	₹72
ಮೈಸೂರು: 100 ಕ್ಕೆ	₹475

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹228
ಆರ್‌ಎಸ್‌ಎಸ್-5	₹221
ಗುಡ್ ಲಾಟ್	₹200

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹444-731
ದ್ವಿತಳಿ (ಬಿ.ವಿ)	₹466-840

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23000
ಎಸಿ	₹13700
ಆರ್‌ಪಿ	₹17900
ಆರ್‌ಸಿ	₹9600

ಮುಂಬೈ ಖಾದ್ಯ ತೈಲ (10 ಕೆ.ಜಿಗೆ) (ಆವರಣದಲ್ಲಿ ಕಳೆದ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1750 (1750)
ಸೋಯಾ (ರಿಫೈನ್ಡ್)	₹1540 (1550)
ಸೂರ್ಯಕಾಂತಿ (ರಿಫೈನ್ಡ್)	₹1700 (1700)
ಪಾಮೋಲಿನ್	₹1480 (1510)

ಕದನ ವಿರಾಮ: ಷೇರುಪೇಟೆಯಲ್ಲಿ ಸಂಭ್ರಮ

ಷೇರುಪೇಟೆ ಹೂಡಿಕೆದಾರರ ಸಂಪತ್ತು ₹16.25 ಲಕ್ಷ ಕೋಟಿ ಹೆಚ್ಚಳ

ಮುಂಬೈ (ಪಿಟಿಐ): ಇರಾನ್ ಮತ್ತು ಅಮೆರಿಕ ಎರಡು ವಾರಗಳ ಕದನ ವಿರಾಮ ಘೋಷಿಸಿದ ನಂತರದಲ್ಲಿ ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸರಿಸುಮಾರು ಶೇಕಡ 15ರಷ್ಟು ಇಳಿಕೆ ಕಂಡಿತು. ಇದರ ಪರಿಣಾಮವಾಗಿ ಭಾರತದಲ್ಲಿ ಹಾಗೂ ಜಗತ್ತಿನ ಇತರೆಡೆಗಳಲ್ಲಿ ಷೇರುಪೇಟೆಗಳಲ್ಲಿ ಬುಧವಾರ ಭರ್ಜರಿ ವಹಿವಾಟು ನಡೆಯಿತು.

ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಲು ಆರ್‌ಬಿಐ ನಿರ್ಧರಿಸಿದ್ದುದು, ಎಲ್ಲ ವಲಯಗಳ ಷೇರುಗಳ ಖರೀದಿ ಜೋರಾಗಿ ನಡೆದಿದ್ದು ಹಾಗೂ ಅಮೆರಿಕದ ಡಾಲರ್ ಎದುರು ರೂಪಾಯಿ ಬಲವರ್ಧನೆ ಕೂಡ ಷೇರುಪೇಟೆಗಳಲ್ಲಿ ಉತ್ತಮ ವಹಿವಾಟು ನಡೆಯಲು ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

> **ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆರ್‌ಬಿಐ ತೀರ್ಮಾನಿಸಿರುವುದು ಷೇರುಪೇಟೆಗಳ ಪಾಲಿಗೆ ಪೂರಕ ಎಂದು ಹೂಡಿಕೆದಾರರು ಭಾವಿಸಿದ್ದಾರೆ**
>
> **ಅಜಿತ್ ಮಿಶ್ರಾ,** ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಹಿರಿಯ ಉಪಾಧ್ಯಕ್ಷ

ಬುಧವಾರದ ವಹಿವಾಟಿನಲ್ಲಿ ಷೇರುಪೇಟೆ ಹೂಡಿಕೆದಾರರ ಸಂಪತ್ತು ₹16.25 ಲಕ್ಷದಷ್ಟು ಹೆಚ್ಚಳ ಆಗಿದೆ.

ಭಾರತದ ಷೇರುಪೇಟೆಗಳ ಪ್ರಮುಖ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸರಿಸುಮಾರು ಶೇ 4ರವರೆಗೆ ಏರಿಕೆ ದಾಖಲಿಸಿವೆ.

ವಲಯವಾರು ಜಿಗಿತ



ಸತತ ಐದನೆಯ ವಹಿವಾಟಿನ ದಿನವೂ ಏರಿಕೆ ಕಂಡ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ಬುಧವಾರ ಒಟ್ಟು 2,946 ಅಂಶ (ಶೇ 3.95ರಷ್ಟು) ಜಿಗಿಯಿತು. 50 ಕಂಪನಿಗಳ ಪ್ರಾತಿನಿಧ್ಯವಿರುವ ನಿಫ್ಟಿ-50 ಸೂಚ್ಯಂಕವು 873 ಅಂಶ (ಶೇ 3.78ರಷ್ಟು) ಜಿಗಿಯಿತು.

ಸೆನ್ಸೆಕ್ಸ್‌ನಲ್ಲಿ ಇಂಟರ್‌ಗ್ಲೋಬ್ ಏವಿಯೇಷನ್, ಲಾರ್ಸನ್ ಆ್ಯಂಡ್ ಟೂಬ್ರೊ, ಬಜಾಜ್ ಫೈನಾನ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಕ್ಸಿಸ್ ಬ್ಯಾಂಕ್, ಮಾರುತಿ ಸುಜುಕಿ ಕಂಪನಿಯ ಷೇರುಗಳು ಹೆಚ್ಚು ಏರಿಕೆ ಕಂಡವು. ವರದಿ ಸಿದ್ಧಪಡಿಸುವ ಹೊತ್ತಿಗೆ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 91.79 ಡಾಲರ್ ಆಗಿತ್ತು.

ಕದನ ವಿರಾಮದ ಸುದ್ದಿ ಬಿತ್ತರವಾದ ನಂತರದಲ್ಲಿ ಏಷ್ಯಾದ ಇತರೆಡೆಗಳಲ್ಲಿಯೂ ತೇಜಿ ವಹಿವಾಟು ನಡೆದಿದೆ.

'ಕದನ ವಿರಾಮದ ಘೋಷಣೆಯು ಭೀತಿಯನ್ನು ಬಹುಮಟ್ಟಿಗೆ ತಗ್ಗಿಸಿತು... ಭಾರತದಲ್ಲಿ ಅಸ್ಥಿರತೆಯ ಸೂಚ್ಯಂಕವು ಶೇ 20ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಡಿಮೆ ಆಗಿದೆ' ಎಂದು ಎನ್ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್. ಹೇಳಿದ್ದಾರೆ.

'ಎರಡು ವಾರಗಳ ಕದನ ವಿರಾಮದ ಅವಧಿಯಲ್ಲಿ ಹೊರ್ಮುಜ್ ಜಲಸಂಧಿಯ ಮೂಲಕ ಹಡಗುಗಳಿಗೆ ಸುರಕ್ಷಿತವಾಗಿ ಸಾಗಲು ಅವಕಾಶ ಮಾಡಿಕೊಡುವ ಸೂಚನೆಯನ್ನು ಇರಾನ್ ನೀಡಿದೆ. ಹೀಗಾಗಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ತೀವ್ರವಾಗಿ ಇಳಿದಿದೆ' ಎಂದು ತಿಳಿಸಿದ್ದಾರೆ.

'ಮಧ್ಯಂತರ ಕ್ರಮವಾಗಿ ಜಾರಿಗೆ ಬಂದಿರುವ ಕದನ ವಿರಾಮವು ಪ್ರಾದೇಶಿಕ ಸ್ಥಿರತೆ ಕಡೆಗಿನ ಒಂದು ಹೆಜ್ಜೆ ಎಂಬಂತಿದೆ. ಹೊರ್ಮುಜ್ ಜಲಸಂಧಿಯು ಮತ್ತೆ ಮುಕ್ತ ಆಗುತ್ತಿರುವುದರಿಂದಾಗಿ ಭಾರತಕ್ಕೆ ತಕ್ಷಣವೇ ಪ್ರಯೋಜನ ಆಗಲಿದೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬೆಳ್ಳಿ ದರ ₹11 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಎರಡು ವಾರಗಳ ಕದನ ವಿರಾಮದ ಘೋಷಣೆಯಿಂದ ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಬುಧವಾರ ಏರಿಕೆ ಕಂಡಿದೆ. ಇದರ ಪರಿಣಾಮ ದೇಶದ ಚಿನಿವಾರ ಪೇಟೆಯಲ್ಲೂ ಕಂಡು ಬಂದಿದ್ದು, ಈ ಲೋಹಗಳ ಬೆಲೆಯಲ್ಲಿ ಹೆಚ್ಚಳವಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹11 ಸಾವಿರ ಏರಿಕೆಯಾಗಿ, ₹2.51 ಲಕ್ಷದಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹3,200 ಹೆಚ್ಚಳವಾಗಿ, ₹1,56,400ಕ್ಕೆ ತಲುಪಿದೆ.

ಸುದ್ದಿ 2 ನಿಮಿಷ

ರಸಗೊಬ್ಬರ ಸಬ್ಸಿಡಿಗೆ ₹41,534 ಕೋಟಿ

ನವದೆಹಲಿ: ಮುಂಗಾರು ಹಂಗಾಮಿನಲ್ಲಿ ಫಾಸ್ಫೇಟ್ ಹಾಗೂ ಪೊಟ್ಯಾಸಿಕ್ ರಸಗೊಬ್ಬರಗಳಿಗೆ ₹41,534 ಕೋಟಿ ಸಬ್ಸಿಡಿ ನೀಡಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸಬ್ಸಿಡಿ ಪ್ರಮಾಣವು ಕಳೆದ ವರ್ಷಕ್ಕಿಂತ ಶೇ 12ರಷ್ಟು ಹೆಚ್ಚಾಗಿದೆ.

ಜೂನ್ ತಿಂಗಳಲ್ಲಿ ನೈರುತ್ಯ ಮುಂಗಾರು ಪ್ರವೇಶದೊಂದಿಗೆ ನಾಟಿ ಕೆಲಸಗಳು ಆರಂಭವಾಗಲಿವೆ. '2025ರ ಮುಂಗಾರು ಋತುವಿಗೆ ಹೋಲಿಸಿದರೆ ಸಬ್ಸಿಡಿ ಮೊತ್ತ ₹4,317 ಕೋಟಿ ಹೆಚ್ಚಳ ಆಗಿದೆ' ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

ಸಂಪುಟದ ಇತರ ತೀರ್ಮಾನಗಳು:

- ರಾಜಸ್ಥಾನದ ಜೈಪುರ ಮೆಟ್ರೊ ಎರಡನೇ ಹಂತಕ್ಕೆ ಅನುಮೋದನೆ. ಯೋಜನಾ ಮೊತ್ತ ₹13,037 ಕೋಟಿ

- ಅರುಣಾಚಲ ಪ್ರದೇಶದ ಅಂಜಾವ್ ಜಿಲ್ಲೆಯಲ್ಲಿ 1,200 ಮೆಗಾವಾಟ್ ಕಲೈ-II ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ₹14,105 ಕೋಟಿ ಹೂಡಿಕೆ ಪ್ರಸ್ತಾವನೆಗೆ ಅನುಮೋದನೆ
- ಅರುಣಾಚಲ ಪ್ರದೇಶದ ಕಮ್ಲೆ, ಕ್ರಾದಾಡಿ ಮತ್ತು ಕುರುಂಗ್ ಕುಮೆ ಜಿಲ್ಲೆಗಳಲ್ಲಿ ₹26,069 ಕೋಟಿ ವೆಚ್ಚದಲ್ಲಿ 1,720 ಮೆಗಾವಾಟ್ ಸಾಮರ್ಥ್ಯದ ಕಮಲಾ ಜಲ ವಿದ್ಯುತ್ ಯೋಜನೆ ಕಾರ್ಯಗತಕ್ಕೆ ಒಪ್ಪಿಗೆ

ಶ್ರೀರಾಮ್ ಫೈನಾನ್ಸ್‌ನ ಶೇ 20ರಷ್ಟು ಷೇರು ಖರೀದಿಸಿದ ಎಂಯುಎಫ್‌ಜಿ

ಬೆಂಗಳೂರು: ದೇಶದ ಬ್ಯಾಂಕೇತರ ಹಣಕಾಸು ಕಂಪನಿಗಳಲ್ಲಿ (ಎನ್‌ಬಿಎಫ್‌ಸಿ) ಒಂದಾಗಿರುವ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್‌ನಲ್ಲಿ ಶೇ 20ರಷ್ಟು ಷೇರು ಪಾಲನ್ನು ಜಪಾನ್‌ನ ಎಂಯುಎಫ್‌ಜಿ ಬ್ಯಾಂಕ್ ಬುಧವಾರ ಖರೀದಿಸಿದೆ.

ಪ್ರತಿ ಷೇರಿಗೆ ₹840.93ರಂತೆ ಒಟ್ಟು 47.11 ಕೋಟಿ ಈಕ್ವಿಟಿ ಷೇರುಗಳನ್ನು ಖರೀದಿಸಲಾಗಿದೆ. ಈ ವ್ಯವಹಾರದ ಒಟ್ಟು ಮೊತ್ತವು ಸುಮಾರು ₹39,618 ಕೋಟಿಗಳಾಗಿದೆ ಎಂದು ಶ್ರೀರಾಮ್ ಫೈನಾನ್ಸ್ ಲಿಮಿಟೆಡ್ ಪ್ರಕಟಣೆಯಲ್ಲಿ ತಿಳಿಸಿದೆ.

ಇದು ದೇಶದ ಹಣಕಾಸು ಸೇವೆಗಳ ಕ್ಷೇತ್ರದಲ್ಲಿ ನಡೆದ ಅತಿ ದೊಡ್ಡ ಅಂತರರಾಷ್ಟ್ರೀಯ ಹೂಡಿಕೆಗಳಲ್ಲಿ ಒಂದಾಗಿದೆ.

ಎಂಎಸ್‌ಎಂಇ ವಲಯ ಹಾಗೂ ರಿಟೇಲ್ ವಲಯದಲ್ಲಿ ಬೆಳವಣಿಗೆಗೆ ಇರುವ ಅವಕಾಶಗಳನ್ನು ಗಮನಿಸಿ ಈ ಹೂಡಿಕೆ ಮಾಡಲಾಗಿದೆ ಎಂದು ಎಂಯುಎಫ್‌ಜಿ ಹೇಳಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಚಿರಸ್ಮರಣೆ



ಎಸ್. ಜಾನ್ ಸಲ್ಡಾನಾ

(ಬನಶಂಕರಿ 3ನೇ ಹಂತ)

ಡಿಸೆಂಬರ್ 23, 1932 - ಏಪ್ರಿಲ್ 6, 2026

ಅಂತ್ಯಕ್ರಿಯೆ:

9ನೇ ಏಪ್ರಿಲ್ 2026 | ಬೆಳಿಗ್ಗೆ 11:00 ಗಂಟೆಗೆ

ಕ್ರಿಸ್ತು ಪ್ರಭಾಲಯ ಚರ್ಚ್, ಜಯನಗರ 4ನೇ ಟಿ ಬ್ಲಾಕ್, ಬೆಂಗಳೂರು.

ಸಮಾಧಿ ಕ್ರಿಯೆ:

ಸೇಂಟ್ ಪ್ಯಾಟ್ರಿಕ್ ಸಮಾಧಿ ಭೂಮಿ ಗೇಟ್ ಸಂಖ್ಯೆ 6, ಹೊಸೂರು ರಸ್ತೆ, ಬೆಂಗಳೂರು

ದುಃಖತಪ್ತ

ಪತ್ನಿ - ಎವೆಲಿನ್ ಸಲ್ಡಾನಾ, ಮಕ್ಕಳು, ಮೊಮ್ಮಕ್ಕಳು ಮತ್ತು ಮರಿಮೊಮ್ಮಕ್ಕಳು

ಮುಂಬೈ ಧಾರಣೆ (ಶೇಂಗಾ) 08-04-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1760 (1760)
ಒಂದು ವಾರದ ಡೆಲಿವರಿ	1755 (1755)
ಪಾಮ್ ವಾರದ ಡೆಲಿವರಿ	1478 (1508)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1590)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,000 (1,46,400)
ಬೆಳ್ಳಿ ಕೆ.ಜಿಗೆ	2,44,000 (2,29,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹32200-32200
ಚಳ್ಳಕೆರೆ	₹20000-20000
ದಾವಣಗೆರೆ	₹12200-12800

ರೆಪೊ ದರ ಯಥಾಸ್ಥಿತಿ

ಮುಂಬೈ (ಪಿಟಿಐ): ಹಣದುಬ್ಬರ ಪ್ರಮಾಣವು ಕಡಿಮೆ ಮಟ್ಟದಲ್ಲಿ ಇರುವ ಕಾರಣದಿಂದಾಗಿ ದೇಶದಲ್ಲಿ ಬಡ್ಡಿ ದರವು ಕೂಡ ದೀರ್ಘಾವಧಿಗೆ ಕಡಿಮೆ ಮಟ್ಟದಲ್ಲಿಯೇ ಇರಲಿದೆ ಎಂಬ ವಿಶ್ವಾಸವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ವ್ಯಕ್ತಪಡಿಸಿದ್ದಾರೆ.

ಸಂಜಯ್ ಮಲ್ಹೋತ್ರಾ

ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆ ನಂತರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರೆಪೊ ದರವನ್ನು ಯಥಾಸ್ಥಿತಿಯಲ್ಲಿ (ಶೇ 5.25ರಷ್ಟು) ಉಳಿಸಿಕೊಳ್ಳುವ ತೀರ್ಮಾನವನ್ನು ಎಂಪಿಸಿ ತೆಗೆದುಕೊಂಡಿದೆ. ಇದರಿಂದಾಗಿ ಗೃಹಸಾಲ, ವಾಹನ ಸಾಲ ಸೇರಿದಂತೆ ವಿವಿಧ ಬಗೆಯ ಸಾಲಗಳ ಮೇಲಿನ ಬಡ್ಡಿ ದರವು ಸದ್ಯಕ್ಕೆ ಯಥಾಸ್ಥಿತಿಯಲ್ಲಿ ಮುಂದುವರಿಯುವ ನಿರೀಕ್ಷೆ ಇದೆ.

ಪಶ್ಚಿಮ ಏಷ್ಯಾದಲ್ಲಿನ ಬಿಗುವಿನ ಪರಿಸ್ಥಿತಿಯ ಕಾರಣದಿಂದಾಗಿ, ಹಣಕಾಸು ನೀತಿಯ ವಿಚಾರವಾಗಿ ಎಚ್ಚರಿಕೆಯಿಂದ ಕಾದುನೋಡುವ ತಂತ್ರವನ್ನು ಆರ್‌ಬಿಐ ಅನುಸರಿಸಿದೆ.

'ಸರ್ಕಾರ, ಆರ್‌ಬಿಐ ಹಾಗೂ ಇತರ ಹಲವು ಸಂಸ್ಥೆಗಳು ಕೈಗೊಂಡ ಕ್ರಮಗಳ ಪರಿಣಾಮವಾಗಿ ಅರ್ಥವ್ಯವಸ್ಥೆಯ ಮೂಲಭೂತ ಅಂಶಗಳು ಗಟ್ಟಿಯಾಗಿವೆ. ಹೀಗಾಗಿ ಇವು ಒಂದೆಡೆ ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ನೆರವಾಗುತ್ತಿವೆ, ಮತ್ತೊಂದೆಡೆ ಬೆಲೆ ಏರಿಕೆಯ ಮೇಲೆ ನಿಯಂತ್ರಣವನ್ನೂ ಇರಿಸಿವೆ' ಎಂದು ಮಲ್ಹೋತ್ರಾ ತಿಳಿಸಿದ್ದಾರೆ.

'ಹೀಗಾಗಿ, ಅಲ್ಪಾವಧಿಯಿಂದ ಮಧ್ಯಮಾವಧಿಗೆ ನಾವು ಕಡಿಮೆ ಪ್ರಮಾಣದ ಬಡ್ಡಿ ದರವನ್ನು ಹೊಂದಿರಲು ಅವಕಾಶ ಇದೆ' ಎಂದು ಅವರು ಹೇಳಿದ್ದಾರೆ.

ಇದುವರೆಗೆ ಆರ್‌ಬಿಐ ರೆಪೊ ದರವನ್ನು ಶೇ 1.25ರಷ್ಟು ತಗ್ಗಿಸಿದೆ. ಬ್ಯಾಂಕ್‌ಗಳು ಸಾಲದ ವಿಚಾರದಲ್ಲಿ ಇದರಲ್ಲಿ ಶೇ 0.90ರಷ್ಟನ್ನು ಗ್ರಾಹಕರಿಗೆ ವರ್ಗಾವಣೆ ಮಾಡಿವೆ ಎಂದು ಮಲ್ಹೋತ್ರಾ ಹೇಳಿದ್ದಾರೆ.

ಜಿಡಿಪಿ ಶೇ 6.9: ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 6.9ರಷ್ಟು ಇರುವ ನಿರೀಕ್ಷೆ ಇದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. 2025-26ನೆಯ ಸಾಲಿಗೆ ಸಂಬಂಧಿಸಿದ ಅಂದಾಜು ಆಗಿರುವ ಶೇ 7.6ಕ್ಕೆ ಹೋಲಿಸಿದರೆ ಈ ಬಾರಿಯ ಅಂದಾಜು ಕಡಿಮೆ ಇದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಸಮಸ್ಯೆ ಕಂಡಿಲ್ಲ: ಆರ್‌ಬಿಐ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮೇಲ್ವಿಚಾರಣೆಯ ಸಂದರ್ಭದಲ್ಲಿ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಗಳು ಕಂಡುಬಂದಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಅಧ್ಯಕ್ಷ ಸ್ಥಾನಕ್ಕೆ ಅತನು ಚಕ್ರವರ್ತಿ ದಿಢೀರನೆ ರಾಜೀನಾಮೆ ನೀಡಿದ್ದ ವಿಚಾರದ ಕುರಿತು ಪತ್ರಕರ್ತರು ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು 'ಬ್ಯಾಂಕ್‌ನ ಸಭೆಗಳ ವಿವರಗಳನ್ನು ಕೂಡ ಪರಿಶೀಲಿಸಲಾಗಿದೆ. ಅಲ್ಲಿ ಗಂಭೀರವಾದ ಯಾವುದೇ ಸಮಸ್ಯೆಗಳು ಕಂಡುಬಂದಿಲ್ಲ' ಎಂದಿದ್ದಾರೆ.

'ಎಚ್‌ಡಿಎಫ್‌ಸಿ ಬ್ಯಾಂಕ್ ದೇಶದ ವ್ಯವಸ್ಥೆಯ ಪಾಲಿಗೆ ಮಹತ್ವದ ಬ್ಯಾಂಕ್ ಆಗಿದೆ. ಅಲ್ಲಿ ಹಣಕಾಸಿನ ಸ್ಥಿತಿ ಚೆನ್ನಾಗಿದೆ, ವೃತ್ತಿಪರವಾದ ಆಡಳಿತ ಮಂಡಳಿಯು ಅಲ್ಲಿದೆ. ಕಾಲಕಾಲಕ್ಕೆ ನಾವು ನಡೆಸುವ ಪರಿಶೀಲನೆಗಳ ಪ್ರಕಾರ ಅಲ್ಲಿ ಗಂಭೀರವಾದ ಸಮಸ್ಯೆಗಳು ಯಾವುದೂ ಇಲ್ಲ' ಎಂದು ಆರ್‌ಬಿಐ ಈ ಹಿಂದೆ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿತ್ತು.

ಅಡಿಕೆ ಧಾರಣೆ

ಪುತ್ತೂರು				ಸಿದ್ದಾಪುರ	
ಕೋಕ	20000-34500	ಕೋಕ	17509-34009	ಬಿಳಿಗೋಟು	30099-39306
ಹೊಸತು	30000-50000	ಫ್ಯಾಕ್ಟರಿ	12099-28829	ಚಾಲಿ	38500-49509
ಹಳತು	50000-55500	ಹಳೆಚಾಲಿ	47089-50800	ಕೋಕ	13000-34799
ಕುಮಟಾ		**ಶಿವಮೊಗ್ಗ**		ಕೆಂಪುಗೋಟು	30619-38699
ಬೆಟ್ಟೆ	38501-41119	ಸರಕು	55699-75550	ರಾಶಿ	46299-54099
ಚಾಲಿ	43999-49519	ಬೆಟ್ಟೆ	51000-60099	ತಟ್ಟಿಬೆಟ್ಟೆ	42869-50209
ಚಿಪ್ಪು	32569-38019	ರಾಶಿ	45129-55619		
		ಗೊರಬಲು	19000-40499		

TRAVEL CORNER

Orchid TRAVEL & TOURS ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್

ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.

ಬ್ಯೂಟಿಫುಲ್ ಬಾಲಿ

Bali 6 Days Tour (Indonesia Special)

8 ದಿನಗಳ ಮುಕ್ತಿನಾಥ-ನೇಪಾಳ ವಿಶೇಷ

13 ದಿನಗಳ ಚಾರಧಾಮ್ ಯಾತ್ರೆ

14 ದಿನಗಳ ಕೈಲಾಸ ಮಾನಸ ಸರೋವರ ಯಾತ್ರೆ

14 Days Kailasa Manasa Sarovar Yathra

For Bookings contact :

9900080793 / 9900093615 / 9880079588

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

Walk-in

ತಕ್ಷಣ ನೇಮಕಾತಿ! ಕಂಪನಿ: ಕೊಲ್‌ಮನ್ ಸರ್ವಿಸಸ್ ಸ್ಥಳ: ಮಲ್ಲೇಶ್ವರಂ ಶೈಕ್ಷಣಿಕ ಅರ್ಹತೆ: ಕನಿಷ್ಠ 10ನೇ ತರಗತಿ ಪಾಸ್ ಹಾಗೂ ಹೆಚ್ಚಿನವರು ಖಾಲಿ ಹುದ್ದೆಗಳು: ಟೆಲಿಕಾಲರ್ ಸಂಬಳ: Rs.15,000 + ಆಕರ್ಷಕ ಪ್ರೋತ್ಸಾಹ ಧನ ಫೀಲ್ಡ್ ಎಕ್ಸಿಕ್ಯೂಟಿವ್ ಸಂಬಳ: Rs.20,000 + ಆಕರ್ಷಕ ಪ್ರೋತ್ಸಾಹ ಧನ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸ್ನೇಹಾ–7019616511 ಹರೀಶ್ – 9066648367 ಯೋಗೇಶ್–9620123125 ಸತೀಶ್ – 8747855804

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ

ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ

ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ

ಟೀಚರ್ಸ್ ಟ್ರೈನಿಂಗ್ ಕೋರ್ಸ್

ಪ್ರೈಮರಿ ಟೀಚರ್ಸ್ ಟ್ರೈನಿಂಗ್ [PTT]

Diploma in Computer Teachers Training Course

DIPLOMA IN COMPUTER DATA ENTRY OPERATOR

6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]

ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ

ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ

Empanelled & Recognised by Govt. of India & Karnataka

The RCSS

Mob. 9008419955, 9901520055, 9449198555

Email: info@thercss.co, Web: www.thercss.com

ಕದನ ವಿರಾಮದ ಬಳಿಕವೂ ಕಾರ್ಯಾಚರಣೆ

ಇರಾನ್ ತೈಲ ಘಟಕದ ಮೇಲೆ ದಾಳಿ

ಟೆಹರಾನ್ (ಎಎಫ್‌ಪಿ/ ರಾಯಿಟರ್ಸ್): 'ಇರಾನ್‌ನ ಲವಾನ್ ದ್ವೀಪದಲ್ಲಿರುವ ತೈಲ ಸಂಸ್ಕರಣಾ ಘಟಕದ ಮೇಲೆ ಬುಧವಾರ ವೈಮಾನಿಕ ದಾಳಿ ನಡೆದಿದ್ದು, ಇದಾದ ಕೆಲವು ಗಂಟೆಗಳ ನಂತರ ಕುವೈತ್ ಮತ್ತು ಅರಬ್ ಒಕ್ಕೂಟದ ಮೇಲೆ ಇರಾನ್ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿದೆ' ಎಂದು ಸರ್ಕಾರಿ ಸ್ವಾಮ್ಯದ ದೂರದರ್ಶನ ಐಆರ್‌ಐಬಿ ವರದಿ ಮಾಡಿದೆ.

ಮಂಗಳವಾರ ತಡರಾತ್ರಿ ಕದನ ವಿರಾಮ ಒಪ್ಪಂದ ಘೋಷಿಸಿದ ನಂತರ ಇರಾನ್ ದ್ವೀಪದಲ್ಲಿರುವ ಲವನ್ ತೈಲ ಸಂಸ್ಕರಣಾಗಾರದ ಮೇಲೆ ಬುಧವಾರ ಬೆಳಿಗ್ಗೆ ದಾಳಿ ನಡೆದಿದೆ. ಅದೃಷ್ಟವಶಾತ್, ತೈಲ ಸಂಸ್ಕರಣಾಗಾರದಲ್ಲಿದ್ದ ನೌಕರರನ್ನು ಸ್ಥಳಾಂತರಿಸಿದ್ದರಿಂದ, ದಾಳಿಯಿಂದಾಗಿ ಯಾವುದೇ ಸಾವುನೋವುಗಳು ವರದಿಯಾಗಿಲ್ಲ.

'ಸುರಕ್ಷತಾ ಮತ್ತು ಅಗ್ನಿಶಾಮಕ ತಂಡಗಳು ಬೆಂಕಿಯನ್ನು ನಂದಿಸುತ್ತಿವೆ. ತೈಲ ಸಂಸ್ಕರಣಾ ಘಟಕಕ್ಕೆ ಇನ್ನಷ್ಟು ರಕ್ಷಣೆ ನೀಡುವ ಕಾರ್ಯದಲ್ಲಿ ತೊಡಗಿವೆ' ಎಂದು ರಾಷ್ಟ್ರೀಯ ಇರಾನ್ ತೈಲ ಸಂಸ್ಕರಣಾ ಮತ್ತು ವಿತರಣಾ ಕಂಪನಿಯ ಹೇಳಿರುವುದನ್ನು ಉಲ್ಲೇಖಿಸಿ ಐಆರ್‌ಐಬಿ ವರದಿ ಮಾಡಿದೆ.

ತೈಲ ಘಟಕಗಳ ಮೇಲಿನ ಈ ದಾಳಿಯಲ್ಲಿ ಇಸ್ರೇಲ್‌ನ ಸೇನೆ ಭಾಗಿಯಾಗಿದೆಯೇ ಎಂಬ ಪ್ರಶ್ನೆಗೆ 'ಇಲ್ಲ, (ನಾವು) ಭಾಗಿಯಾಗಿಲ್ಲ' ಎಂದು ಇಸ್ರೇಲ್ ಸೇನಾ ವಕ್ತಾರ ಲೆಫ್ಟಿನೆಂಟ್ ಕರ್ನಲ್ ನಡಾವ್ ಶೊಶಾನಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕೊಲ್ಲಿಯ ಸಣ್ಣ ದ್ವೀಪದಲ್ಲಿರುವ ಲವಾನ್ ತೈಲ ಸಂಸ್ಕರಣಾಗಾರ, ಸುತ್ತಮುತ್ತಲಿನ ತೈಲ ಕ್ಷೇತ್ರಗಳಿಂದ ಹೊರತೆಗೆಯಲಾದ ಕಚ್ಚಾ ತೈಲವನ್ನು ಸಂಸ್ಕರಿಸುತ್ತದೆ. ಇರಾನ್‌ಗೆ ರಫ್ತು ಗುಣಮಟ್ಟದ ತೈಲವನ್ನು ಪೂರೈಸುತ್ತದೆ' ಎಂದು ಯುಎಸ್ ಎನರ್ಜಿ ಇನ್ಫರ್ಮೇಷನ್ ಅಡ್ಮಿನಿಸ್ಟ್ರೇಷನ್ (ಇಐಎ) ತಿಳಿಸಿದೆ.

ಕದನ ವಿರಾಮ: ತಾತ್ಕಾಲಿಕ ಸಮಾಧಾನ

ಒಂದನೇ ಪುಟದಿಂದ...

'ಮಂಗಳವಾರ ರಾತ್ರಿ 8 ಗಂಟೆ (ಅಮೆರಿಕ ಕಾಲಮಾನ) ಒಳಗಾಗಿ ಕದನ ವಿರಾಮಕ್ಕೆ ಒಪ್ಪಬೇಕು ಹಾಗೂ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಸಮ್ಮತಿಸದಿದ್ದಲ್ಲಿ ಇರಾನ್‌ನ ನಾಗರಿಕತೆಯನ್ನೇ ನಾಶ ಮಾಡಲಾಗುವುದು' ಎಂದು ಟ್ರಂಪ್ ಬೆದರಿಕೆ ಹಾಕಿದ್ದರು.

ದಾಳಿ-ಪ್ರತಿದಾಳಿ: ಮೂರು ದೇಶಗಳು ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸುವ ಕುರಿತು ಘೋಷಣೆಗಳು ಹೊರಬಿದ್ದರೂ, ಇಸ್ರೇಲ್ ಪಡೆಗಳು ದೇಶದ ವಿವಿಧೆಡೆ ಬುಧವಾರ ದಾಳಿ ನಡೆಸಿವೆ ಎಂದು ಇರಾನ್ ಅಧಿಕಾರಿಗಳು ಹೇಳಿದ್ದಾರೆ.

ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್ ಮೇಲೆ ದಾಳಿ ನಡೆಸಿದೆ.

> **ಇರಾನ್ ಮೇಲಿನ ದಾಳಿಗಳನ್ನು ನಿಲ್ಲಿಸಿದಲ್ಲಿ ನಮ್ಮ ಸಶಸ್ತ್ರ ಪಡೆಗಳು ಕೂಡ ತಮ್ಮ ಕಾರ್ಯಾಚರಣೆ ಸ್ಥಗಿತಗೊಳಿಸಲಿವೆ. ಇರಾನ್ ಸೇನೆಯ ಸಮನ್ವಯದೊಂದಿಗೆ ಮುಂದಿನ ಎರಡು ವಾರ ಹೊರ್ಮುಜ್ ಜಲಸಂಧಿ ಸಂಚಾರಕ್ಕೆ ಮುಕ್ತವಾಗಿರಲಿದೆ**
>
> **ಸೈಯದ್ ಅಬ್ಬಾಸ್ ಅರಾಗ್ಚಿ**, ಇರಾನ್ ವಿದೇಶಾಂಗ ಸಚಿವ

> **ಈ ಕದನ ವಿರಾಮದಿಂದ ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ಸಂಚಾರ ಸುಗಮವಾಗಲಿದೆ. ವಾಣಿಜ್ಯ ಚಟುವಟಿಕೆಗಳು ಸುಗಮವಾಗಿ ನಡೆಯಲಿವೆ ಎಂದು ಭಾರತ ನಿರೀಕ್ಷಿಸುತ್ತದೆ**
>
> **ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ**

ಇರಾನ್‌ನ ಪ್ರಸ್ತಾವಗಳು

ಒಂದನೇ ಪುಟದಿಂದ...

6. ಇರಾನ್ ಮೇಲೆ ವಿವಿಧ ರೀತಿಯ ನಿರ್ಬಂಧಗಳನ್ನು ವಿಧಿಸುವುದಕ್ಕೆ ಸಂಬಂಧಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಕೈಗೊಂಡಿರುವ ಎಲ್ಲ ನಿರ್ಣಯಗಳನ್ನು ರದ್ದುಪಡಿಸಬೇಕು
7. ಇರಾನ್ ಕೈಗೊಂಡಿರುವ ಪರಮಾಣು ಕಾರ್ಯಕ್ರಮಗಳಿಗೆ ಸಂಬಂಧಿಸಿ ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ (ಐಎಇಎ) ಕೈಗೊಂಡಿರುವ ಎಲ್ಲ ನಿರ್ಣಯಗಳನ್ನು ರದ್ದು ಮಾಡಬೇಕು
8. ಯುದ್ಧ ಶುರುವಾದ ನಂತರ ಇರಾನ್‌ನಲ್ಲಿ ಉಂಟಾಗಿರುವ ಹಾನಿಗೆ ಸಂಬಂಧಿಸಿ ಪರಿಹಾರ ನೀಡಬೇಕು
9. ಕೊಲ್ಲಿ ರಾಷ್ಟ್ರಗಳಲ್ಲಿ ಅಮೆರಿಕ ನಿಯೋಜನೆ ಮಾಡಿರುವ ಸಶಸ್ತ್ರ ಪಡೆಗಳನ್ನು ಹಿಂಪಡೆಯಬೇಕು
10. ಲೆಬನಾನ್‌ನಲ್ಲಿರುವ ಇಸ್ಲಾಮಿಕ್ ರೆಸಿಸ್ಟನ್ಸ್ ಸೇರಿ ಎಲ್ಲ ಗುಂಪುಗಳ ವಿರುದ್ಧ ನಡೆಸುತ್ತಿರುವ ಯುದ್ಧ/ಸೇನಾ ಕಾರ್ಯಾಚರಣೆಗಳನ್ನು ನಿಲ್ಲಿಸಬೇಕು

ಒಪ್ಪಂದಕ್ಕೆ ಕಾರಣವಾದ ಅಂಶಗಳು

- ಇರಾನ್ ಮೇಲೆ ಭೀಕರ ದಾಳಿ ನಡೆಸುವ ಸಂಬಂಧ ತಾನು ವಿಧಿಸಿದ್ದ ಗಡುವಿಗೂ ಒಂದೂವರೆ ಗಂಟೆಗೂ ಮೊದಲು ಕದನ ವಿರಾಮ ಕುರಿತ ಪ್ರಸ್ತಾವಕ್ಕೆ ಡೊನಾಲ್ಡ್ ಟ್ರಂಪ್ ಸಮ್ಮತಿ
- ಇರಾನ್ ಮೇಲೆ ದಾಳಿ ನಡೆಸುವುದಕ್ಕೆ ಸೇನಾ ಪಡೆಗಳನ್ನು ಕಳುಹಿಸುವುದನ್ನು ತಡೆಹಿಡಿಯಬೇಕು ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್, ಫೀಲ್ಡ್ ಮಾರ್ಷಲ್ ಅಸೀಮ್ ಮುನಿರ್ ಮನವಿ
- ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ತಕ್ಷಣದಿಂದಲೇ ಹಾಗೂ ಸಂಪೂರ್ಣವಾಗಿ ಮುಕ್ತಗೊಳಿಸಬೇಕು. ಹಡಗುಗಳ ಸಂಚಾರಕ್ಕೆ ಭದ್ರತೆ ಖಾತ್ರಿಪಡಿಸಬೇಕು. ಈ ಷರತ್ತಿಗೆ ಒಪ್ಪಿದಲ್ಲಿ ಇರಾನ್ ಮೇಲೆ ನಡೆಸುವ ದಾಳಿಗೆ ಎರಡು ವಾರ ನಿಲ್ಲಿಸಲಾಗುವುದು ಎಂಬ ಷರತ್ತು ವಿಧಿಸಿದ ಅಮೆರಿಕ
- ಇರಾನ್ ಮೇಲೆ ಬಾಂಬ್ ಹಾಕುವುದು ಹಾಗೂ ವಾಯು ದಾಳಿ ನಡೆಸುವುದನ್ನು ಎರಡು ವಾರಗಳ ಮಟ್ಟಿಗೆ ಸ್ಥಗಿತಗೊಳಿಸಲು ಒಪ್ಪಿಗೆ. ಇದು ಎರಡೂ ಕಡೆಯವರ ಒಪ್ಪಿಗೆ ಇರುವ ಕದನ ವಿರಾಮ

'ಹಡಗುಗಳು ಸಾಗಲು ಬೆದರಿಕೆ'

ಲಂಡನ್ / ಬೀಜಿಂಗ್ (ರಾಯಿಟರ್ಸ್/ ಪಿಟಿಐ): ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಕದನ ವಿರಾಮಕ್ಕೆ ಸಮ್ಮತಿಸಿದ್ದರೂ ಹಡಗುಗಳು ಸಾಗುವುದಕ್ಕೆ ಹೊರ್ಮುಜ್ ಜಲಸಂಧಿ ಇನ್ನೂ ಮುಕ್ತವಾಗಿಲ್ಲ ಎಂದು ಹಲವು ಶಿಪ್ಪಿಂಗ್ ಕಂಪನಿ ಮೂಲಗಳು ಬುಧವಾರ ಹೇಳಿವೆ.

'ಇರಾನ್ ಅನುಮತಿ ಇಲ್ಲದೇ ಈ ಜಲಮಾರ್ಗದ ಮೂಲಕ ಸಾಗುವ ಹಡಗುಗಳನ್ನು ಗುರಿಯಾಗಿಸಿ ದಾಳಿ ಮಾಡಿ, ಅವುಗಳನ್ನು ನಾಶ ಮಾಡಲಾಗುವುದು ಎಂದು ಇರಾನ್ ನೌಕಾಪಡೆ ಬೆದರಿಕೆ ಒಡ್ಡುತ್ತಿದೆ' ಎಂದೂ ತಿಳಿಸಿವೆ.

ಬುಧವಾರ ಮೂರು ಹಡಗುಗಳು ಮಾತ್ರ ಹೊರ್ಮುಜ್ ಜಲಸಂಧಿ ಮೂಲಕ ಸಾಗಿವೆ.

ಶಾಂತಿ ಮಾತುಕತೆ ಮೇಲೆ ಅವಲಂಬಿತ: 'ಭವಿಷ್ಯದಲ್ಲಿಯೂ ಈ ಜಲಮಾರ್ಗವನ್ನು ಮುಕ್ತವಾಗಿರಿಸುವ ವಿಚಾರವು ಅಮೆರಿಕದ ಜೊತೆ ನಡೆಯುವ ಶಾಂತಿ ಮಾತುಕತೆಯ ಫಲಿತಾಂಶವನ್ನು ಅವಲಂಬಿಸಿದೆ' ಎಂದು ಚೀನಾದಲ್ಲಿನ ಇರಾನ್ ರಾಯಭಾರಿ ಅಬ್ದುಲ್ ರೆಜಾ ರಹಮಾನಿ ಫಜ್ಲಿ ಬುಧವಾರ ಹೇಳಿದ್ದಾರೆ.

'ಸ್ವಾಗತಾರ್ಹ ಹೆಜ್ಜೆ'

ಅಮೆರಿಕ ಮತ್ತು ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮವನ್ನು ಭಾರತ ಸ್ವಾಗತಿಸಿದೆ.

'ಪಶ್ಚಿಮ ಏಷ್ಯಾದಲ್ಲಿ ಶಾಶ್ವತವಾಗಿ ಶಾಂತಿ ನೆಲಸಬೇಕು. ಇದಕ್ಕಾಗಿ ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗಗಳ ಮೂಲಕ ಪ್ರಯತ್ನಗಳನ್ನು ಮುಂದುವರಿಸಬೇಕು' ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. 'ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಜಾಗತಿಕವಾಗಿ ಇಂಧನ ಪೂರೈಕೆ ಹಾಗೂ ವಾಣಿಜ್ಯ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ. ಇದರಿಂದ ಜನರು ತೊಂದರೆ ಅನುಭವಿಸುವಂತಾಗಿದೆ' ಎಂದು ಹೇಳಿದೆ.

'ಯುದ್ಧ ಮುಕ್ತಾಯದ ಸೂಚನೆಯಲ್ಲ'

ಅಮೆರಿಕ-ಇಸ್ರೇಲ್ ವಿರುದ್ಧದ ಯುದ್ಧಕ್ಕೆ ಸಂಬಂಧಿಸಿ ತಾತ್ಕಾಲಿಕ ವಿರಾಮಕ್ಕೆ ಇರಾನ್ ಒಪ್ಪಿದ್ದರೂ ಎಚ್ಚರಿಕೆಯ ಪ್ರತಿಕ್ರಿಯೆ ನೀಡಿದೆ. 'ಕದನ ವಿರಾಮಕ್ಕೆ ಇರಾನ್ ಒಪ್ಪಿಕೊಂಡಿದ್ದರೂ ಇದು ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಮುಕ್ತಾಯಗೊಂಡಿದೆ ಎಂಬುದನ್ನು ಸೂಚಿಸುವುದಿಲ್ಲ' ಎಂದು ಇರಾನ್‌ನ ರಾಷ್ಟ್ರೀಯ ಭದ್ರತಾ ಮಂಡಳಿ ಹೇಳಿದೆ. 'ಕದನ ವಿರಾಮ ಸಂದರ್ಭದಲ್ಲಿ ಶತ್ರು ಪಾಳಯ ಸಣ್ಣ ಪ್ರಮಾದ ಎಸಗಿದರೂ ಅದಕ್ಕೆ ನಮ್ಮ ಪಡೆಗಳು ತಕ್ಕ ಉತ್ತರ ನೀಡುತ್ತವೆ' ಎಂದು ಇರಾನ್ ಎಚ್ಚರಿಸಿದೆ.

ಲೆಬನಾನ್: 112 ಸಾವು

ಬೈರೂತ್/ಜೆರುಸಲೇಂ (ಎಎಫ್‌ಪಿ): ಬೈರೂತ್ ಸೇರಿದಂತೆ ಲೆಬನಾನ್‌ನ ಹಲವೆಡೆ ಇಸ್ರೇಲ್ ತನ್ನ ದಾಳಿಯನ್ನು ಬುಧವಾರ ತೀವ್ರಗೊಳಿಸಿದೆ. 'ಎಚ್ಚರಿಕೆಯನ್ನೂ ನೀಡದೆ ನಗರದ ವಸತಿ ಪ್ರದೇಶ, ವಾಣಿಜ್ಯ ಕಟ್ಟಡಗಳ ಮೇಲೆ ದಾಳಿ ನಡೆಸಲಾಗಿದ್ದು, 112 ಮಂದಿ ಮೃತಪಟ್ಟಿದ್ದು 700 ಮಂದಿ ಗಾಯಗೊಂಡಿದ್ದಾರೆ' ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ನಗರದ ಅಲ್ಲಲ್ಲಿ ದಟ್ಟ ಹೊಗೆ ಮುಗಿಲು ಮುಟ್ಟುತ್ತಿತ್ತು. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾದಾಗಿನಿಂದಲೂ ಇಷ್ಟೊಂದು ಹಿಂಸಾತ್ಮಕ ರೀತಿಯ ದಾಳಿಯನ್ನು ಇಸ್ರೇಲ್ ನಡೆಸಿರಲಿಲ್ಲ.

ಇರಾನ್ ಮತ್ತು ಅಮೆರಿಕ ಮಧ್ಯೆ ಕದನ ವಿರಾಮ ಘೋಷಣೆಯಾಗಿದೆ. ಇದನ್ನು ಇಸ್ರೇಲ್ ಪ್ರಧಾನಿ ನೇತನ್ಯಾಹು ಅವರು ಸ್ವಾಗತಿಸಿದ್ದರು. ಆದರೆ, ಲೆಬನಾನ್ ಮೇಲಿನ ನಮ್ಮ ದಾಳಿಯು ಮುಂದುವರಿಯಲಿದೆ ಎಂದಿದ್ದರು. ಕದನ ವಿರಾಮ ಘೋಷಣೆಯಾದ ಬಳಿಕ ಹಿಜ್ಬುಲ್ಲಾ ಸಂಘಟನೆಯು ಇಸ್ರೇಲ್ ಮೇಲೆ ದಾಳಿ ನಡೆಸಿಲ್ಲ ಮತ್ತು 'ನಾವು ಐತಿಹಾಸಿಕ ಜಯ'ಕ್ಕೆ ಹತ್ತಿರದಲ್ಲಿದ್ದೇವೆ' ಎಂದು ಹೇಳಿಕೆ ನೀಡಿತ್ತು.

ಹಿಜ್ಬುಲ್ಲಾ ಹಿಡಿತದಲ್ಲಿರುವ ಲೆಬನಾನ್‌ನ ಗಡಿಯಿಂದ 40 ಕಿ.ಮೀ ದೂರದಲ್ಲಿ ವಾಸಿಸುವ ಜನರಿಗೆ ಸ್ಥಳಾಂತರಗೊಳ್ಳುವಂತೆ ಇಸ್ರೇಲ್ ಎಚ್ಚರಿಕೆ ನೀಡಿತ್ತು. 'ಲೆಬನಾನ್‌ನಲ್ಲಿ ನಮ್ಮ ಯುದ್ಧ ಮುಂದುವರಿದಿದೆ' ಎಂದೂ ಹೇಳಿತ್ತು. ಇತ್ತೀಚಿನ ವಾರಗಳಲ್ಲಿ ಇಸ್ರೇಲ್ ದಾಳಿಯಿಂದಾಗಿ ಲೆಬನಾನ್‌ನಲ್ಲಿ 1,500 ಜನ ಮೃತಪಟ್ಟಿದ್ದಾರೆ.

ಹಿಜ್ಬುಲ್ಲಾ ಗುರಿಯಾಗಿಸಿ ಇಸ್ರೇಲ್ ದಾಳಿ

'ಹಿಜ್ಬುಲ್ಲಾ ಸಂಘಟನೆಯ ನೂರಾರು ಸದಸ್ಯರನ್ನು ಗುರಿಯಾಗಿಸಿ ಲೆಬನಾನ್ ನಾದ್ಯಂತ ಇರುವ ಅವರ 100 ಕಮಾಂಡ್ ಕೇಂದ್ರಗಳ ಮೇಲೆ 10 ನಿಮಿಷಗಳಲ್ಲಿ ದಾಳಿ ನಡೆಸಿದ್ದೇವೆ' ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕ್ಯಾಟ್ಜ್ ಹೇಳಿದರು.

'ಆಪರೇಷನ್ ಬೀಪರ್ಸ್'ಗೂ ದೊಡ್ಡಮಟ್ಟದ ದಾಳಿಯನ್ನು ಹಿಜ್ಬುಲ್ಲಾ ಸದಸ್ಯರನ್ನು ಗುರಿಯಾಗಿಸಿ ನಾವು ನಡೆಸಿದ್ದೇವೆ. ಇರಾನ್‌ನ ಪರವಾಗಿ ನಮ್ಮ ಮೇಲೆ ದಾಳಿ ನಡೆಸಿದ್ದಕ್ಕಾಗಿ ನೀವು ಬೆಲೆ ತೆರುತ್ತೀರಿ ಎಂದು ನಾವು ನಯೀಮ್ ಕಾಸಿಂಗೆ (ಹಿಜ್ಬುಲ್ಲಾ ಮುಖ್ಯಸ್ಥ) ಮೊದಲೇ ಎಚ್ಚರಿಕೆ ನೀಡಿದ್ದೇವು. ಇವತ್ತು ನಾವು ದಾಳಿ ನಡೆಸಿದ್ದೇವೆ' ಎಂದರು.

'ಸಾತ್ವಿಕ್' ಬ್ರ್ಯಾಂಡ್ ಖರೀದಿಸಿದ 'ಸೈಕಲ್ ಪ್ಯೂರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗರಬತ್ತಿ ಮಾರುಕಟ್ಟೆಯಲ್ಲಿ ಮುಂಚೂಣಿ ಕಂಪನಿಯಾಗಿರುವ ಸೈಕಲ್ ಪ್ಯೂರ್, ಪೂಜಾ ಸಾಮಗ್ರಿಗಳ ಕಂಪನಿ 'ಸಾತ್ವಿಕ್'ಅನ್ನು ಸ್ವಾಧೀನಪಡಿಸಿಕೊಂಡಿದೆ.

ಈ ಸ್ವಾಧೀನದ ಮೂಲಕ, ಡಿಜಿಟಲ್ ಲೋಕದಲ್ಲಿ 'ಸಾತ್ವಿಕ್' ಬ್ರ್ಯಾಂಡ್ ಹೊಂದಿರುವ ಪ್ರಾಬಲ್ಯವನ್ನು ಬಳಸಿಕೊಳ್ಳಲು, ಪೂಜಾ ಸಾಮಗ್ರಿಗಳಿಗೆ ಇರುವ ಬೇಡಿಕೆಗೆ ಸ್ಪಂದಿಸಲು ಸಾಧ್ಯವಾಗಲಿದೆ ಎಂದು ಸೈಕಲ್ ಪ್ಯೂರ್ ಕಂಪನಿ ಹೇಳಿದೆ.

ಸ್ವಾಧೀನದ ಕುರಿತ ಮಾಹಿತಿಯನ್ನು ಸೈಕಲ್ ಪ್ಯೂರ್ ಅಗರಬತ್ತಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಹಂಚಿಕೊಂಡರು.

'ಹೊಸ ಸ್ವಾಧೀನವು ನಮಗೆ ಉತ್ಕೃಷ್ಟವಾದ ಉತ್ಪನ್ನಗಳನ್ನು ಗ್ರಾಹಕರಿಗೆ ಒದಗಿಸಲು, ಬಹಳ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಡಿಜಿಟಲ್ ಮಾರುಕಟ್ಟೆಯಲ್ಲಿ ನಮ್ಮ ಬೆಳವಣಿಗೆಯನ್ನು ಹೆಚ್ಚು ಮಾಡಲು ನೆರವಾಗುತ್ತದೆ. ಅಲ್ಲದೆ, ಸಂಪ್ರದಾಯವನ್ನು ಉಳಿಸಿಕೊಂಡು ಹೊಸತನವನ್ನು ಒಪ್ಪಿಕೊಳ್ಳಲು ಕೂಡ ಇದು ನಮಗೆ ಸಹಾಯ ಮಾಡುತ್ತದೆ' ಎಂದು ಅರ್ಜುನ್ ಅವರು ತಿಳಿಸಿದರು.

ಸ್ವಾಧೀನದ ನಂತರವೂ 'ಸಾತ್ವಿಕ್' ಬ್ರ್ಯಾಂಡ್‌ನ ಅಸ್ತಿತ್ವ ಉಳಿದುಕೊಳ್ಳುತ್ತದೆ. ಅದರ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ವಿನೋದ್ ಬನ್ಸಲ್ ಅವರೇ ಕಂಪನಿಯನ್ನು ಮುನ್ನಡೆಸಲಿದ್ದಾರೆ ಎಂದು ಅರ್ಜುನ್ ಸ್ಪಷ್ಟಪಡಿಸಿದರು.

ಕಂಪನಿಯ ಪೂಜಾ ಸಾಮಗ್ರಿಗಳ ಮಾರಾಟ ಪ್ರಮಾಣವು ಕ್ವಿಕ್-ಕಾಮರ್ಸ್ ವೇದಿಕೆಗಳಲ್ಲಿ ಬಹಳ ವೇಗದ ಬೆಳವಣಿಗೆ ಕಾಣುತ್ತಿದೆ ಎಂದು ಅರ್ಜುನ್ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅಮೆರಿಕ-ಇರಾನ್ ಕದನ ವಿರಾಮಕ್ಕೆ ಪಾಕಿಸ್ತಾನ ಮಧ್ಯಸ್ಥಿಕೆ: ಭಾರತಕ್ಕೆ ರಾಜತಾಂತ್ರಿಕ ಹಿನ್ನಡೆಯೇ?

ಹೌದು ಗೊತ್ತಿಲ್ಲ ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಭಾರತೀಯರಿಗೆ ಸೂಚನೆ

ದುಬೈ (ಪಿಟಿಐ): ಇರಾನ್‌ನಲ್ಲಿರುವ ಭಾರತೀಯರು ತಕ್ಷಣ ನಿರ್ಗಮಿಸುವಂತೆ ಭಾರತವು ಬುಧವಾರ ಸೂಚಿಸಿದೆ.

ಟೆಹರಾನ್‌ನಲ್ಲಿರುವ ತನ್ನ ರಾಯಭಾರ ಕಚೇರಿ ಸೂಚಿಸಿದ ಮಾರ್ಗದಲ್ಲಿ ತೆರಳಬೇಕು ಎಂದು ಸಲಹೆ ನೀಡಿದೆ.

ರಾಯಭಾರ ಕಚೇರಿ ಜತೆ ಸಮಾಲೋಚನೆ ಕೈಗೊಳ್ಳದೆ ಅಂತರರಾಷ್ಟ್ರೀಯ ಗಡಿಗಳನ್ನು ದಾಟುವ ಪ್ರಯತ್ನಗಳನ್ನು ಮಾಡದಂತೆ ಟೆಹ್ರಾನ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಮಾರ್ಗಸೂಚಿಯಲ್ಲಿ ತಿಳಿಸಿದೆ.

ಜೆರಾಕ್ಸ್ ತೆಗೆದ ಧನಂಜಯ

ಶ್ರೀನಿಧಿ, ಧನಂಜಯ

ನಿರ್ದೇಶಕ ತರುಣ್ ಸುಧೀರ್ ನಿರ್ಮಾಣದ ‘ರಾಕ್ಷಸ’ ವೆಬ್‌ಸರಣಿ ಬೆನ್ನಲ್ಲೇ ನಟ ಧನಂಜಯ ನಿರ್ಮಾಣದ ‘ಜೆರಾಕ್ಸ್’ ಎಂಬ ವೆಬ್‌ಸರಣಿ ಜೀ5ನಲ್ಲಿ ಶೀಘ್ರದಲ್ಲೇ ಪ್ರಸಾರವಾಗಲಿದೆ.

ಡಾಲಿ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಸರಣಿಯನ್ನು ‘ಬ್ಲಿಂಕ್’ ಖ್ಯಾತಿಯ ಶ್ರೀನಿಧಿ ಬೆಂಗಳೂರು ನಿರ್ದೇಶಿಸಿದ್ದಾರೆ. ಇದು ಧನಂಜಯ ನಿರ್ಮಾಣ ಮಾಡುತ್ತಿರುವ ಮೊದಲ ವೆಬ್‌ಸರಣಿಯಾಗಿದ್ದು, ಫ್ಯಾಂಟಸಿ ಕಾಮಿಡಿ ಥ್ರಿಲ್ಲರ್ ಜಾನರ್‌ನಲ್ಲಿ ಈ ಸರಣಿ ಮೂಡಿಬಂದಿದೆ. ಸರಣಿಯ ಇನ್ನಷ್ಟು ಮಾಹಿತಿಯನ್ನು ಶೀಘ್ರದಲ್ಲೇ ನೀಡಲಾಗುವುದು ಎಂದಿದೆ ತಂಡ.

‘ಒಟಿಟಿ ವೇದಿಕೆಯಲ್ಲಿ ಇದುವರೆಗೆ ನಾನು ನಿರ್ಮಾಣ ಮಾಡಿರಲಿಲ್ಲ. ಈ ದಿಕ್ಕಿನಲ್ಲಿ ಕೆಲವು ಸಮಯದಿಂದ ಪ್ರಯತ್ನಿಸುತ್ತಿದ್ದೆ. ಸರಿಯಾದ ಕಥೆ ಮತ್ತು ಸೂಕ್ತ ವೇದಿಕೆಯಿಗಾಗಿ ಕಾಯುತ್ತಿದ್ದೆ. ಆಗ ನನಗೆ ‘ಜೆರಾಕ್ಸ್’ ಕಥೆ ಸಿಕ್ಕಿತು. ಹೊಸ ಪ್ರತಿಭೆಗಳಿಗೆ ಅವಕಾಶ ನೀಡಬೇಕೆಂಬ ನನ್ನ ಆಶಯಕ್ಕೂ ಇದು ಸೂಕ್ತವಾಗಿದೆ’ ಎಂದಿದ್ದಾರೆ ಧನಂಜಯ.

‘ವದಂತಿಗಳಿಗೆ ಕಿವಿಗೊಡಬೇಡಿ’



ಜೂನಿಯರ್ ಎನ್‌ಟಿಆರ್

ಪ್ರಶಾಂತ್ ನೀಲ್

ಜೂನಿಯರ್ ಎನ್‌ಟಿಆರ್ ಹಾಗೂ ಪ್ರಶಾಂತ್ ನೀಲ್ ಕಾಂಬಿನೇಷನ್‌ನಲ್ಲಿ ಅದ್ದೂರಿ ಚಿತ್ರವೊಂದು ಸಿದ್ಧಗೊಳ್ಳುತ್ತಿರುವುದು ಗೊತ್ತೇ ಇದೆ. ಸಿನಿಮಾ ಚಿತ್ರೀಕರಣ ಮುಂದೂಡಿಕೆ, ಸ್ಥಗಿತ, ಬಿಡುಗಡೆ ಮೊದಲಾದ ವಿಷಯಗಳ ಕುರಿತು ಯಾವುದೇ ವದಂತಿಗಳಿಗೆ ಕಿಬಿಗೊಡಬೇಡಿ ಎಂದು ಚಿತ್ರ ನಿರ್ಮಾಣ ಸಂಸ್ಥೆಯಾದ ಮೈತ್ರಿ ಮೂವಿ ಮೇಕರ್ಸ್ ಅಭಿಮಾನಿಗಳಲ್ಲಿ ಮನವಿ ಮಾಡಿಕೊಂಡಿದೆ.

‘ಕೆಜಿಎಫ್’ ಖ್ಯಾತಿಯ ಪ್ರಶಾಂತ್ ನೀಲ್ ‘ಸಲಾರ್’ ಬಳಿಕ ಕೈಗೆತ್ತಿಕೊಂಡ ಚಿತ್ರವಿದು. ಈ ಸಿನಿಮಾದ ಮುಂದಿನ ಹಂತದ ಚಿತ್ರೀಕರಣ ವಿಳಂಬವಾಗುತ್ತಿದೆ ಎಂದು ವದಂತಿ ಹಬ್ಬಿತ್ತು. ಚಿತ್ರೀಕರಣದ ದಿನಾಂಕ ಸಮಸ್ಯೆಯಿಂದ ಮಲಯಾಳ ನಟ ಟೋವಿನೋ ಥಾಮಸ್ ಚಿತ್ರತಂಡದಿಂದ ಹೊರಬಂದಿದ್ದಾರೆ ಎನ್ನಲಾಗಿತ್ತು.

ಇದರ ಬೆನ್ನಲ್ಲೇ ನಿರ್ಮಾಣ ಸಂಸ್ಥೆ ಅಧಿಕೃತ ಪ್ರಕಟಣೆ ಹೊರಡಿಸಿದ್ದು, ಮುಂದಿನ ಹಂತದ ಚಿತ್ರೀಕರಣಕ್ಕೆ ಆಲೋಚಿಸುತ್ತಿರುವ ಅಥವಾ ಚಿತ್ರೀಕರಣವನ್ನು ರದ್ದುಗೊಳಿಸಿರುವ ಸುದ್ದಿಯಲ್ಲಿ ಯಾವುದೇ ಹುರುಳಿಲ್ಲ. ಈ ಮೊದಲಿನ ಯೋಜನೆಯಂತೆ ಸಿನಿಮಾ ಚಿತ್ರೀಕರಣ ನಡೆಯುತ್ತಿದೆ. ಮುಂದಿನ ಹಂತದ ಸಿದ್ಧತೆಗಾಗಿ ಸಣ್ಣ ವಿರಾಮವನ್ನು ನೀಡಿದ್ದೇವೆ. ಹೀಗಾಗಿ ಸಿನಿಮಾ ಕುರಿತಾದ ತಪ್ಪು ಮಾಹಿತಿಗಳನ್ನು ನಂಬಬೇಡಿ ಮತ್ತು ಹಂಚಿಕೊಳ್ಳಬೇಡಿ. ನಿರ್ಮಾಣ ಸಂಸ್ಥೆಯ ಅಧಿಕೃತ ಮಾಹಿತಿಗಳನ್ನು ಮಾತ್ರ ಅನುಸರಿಸಿ ಎಂದು ಮೈತ್ರಿಮೇಕರ್ಸ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಜೂನಿಯರ್ ಎನ್‌ಟಿಆರ್ ಹಾಗೂ ಪ್ರಶಾಂತ್ ನೀಲ್ ಜೋಡಿಯ ಸಿನಿಮಾ ಸಾಕಷ್ಟು ನಿರೀಕ್ಷೆ ಹುಟ್ಟಿಸಿದೆ. ಕುಮಟಾದ ಕಡಲ ಕಿನಾರೆಯಲ್ಲಿ ಸೆಟ್ ಹಾಕಿ ಚಿತ್ರದ ಒಂದಷ್ಟು ಭಾಗ ಚಿತ್ರೀಕರಿಸಲಾಗಿದೆ. ‘ಕಾಂತಾರ–1’ ಖ್ಯಾತಿಯ ರುಕ್ಮಿಣಿ ವಸಂತ್ ಚಿತ್ರದ ನಾಯಕಿ. ಬಾಲಿವುಡ್‌ನ ಅನಿಲ್ ಕಪೂರ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಈಗಾಗಲೇ ಅರ್ಧದಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಮುಂದಿನ ವರ್ಷ ಚಿತ್ರ ತೆರೆಗೆ ಬರುವ ನಿರೀಕ್ಷೆಯಿದೆ.

ಅಟ್ಲಿ ಸಿನಿಮಾದಲ್ಲಿ ‘ರಾಕಾ’ ಅಲ್ಲು



ಅಲ್ಲು ಅರ್ಜುನ್

‘ಪುಷ್ಪ’ ಸರಣಿ ಬೆನ್ನಲ್ಲೇ ‘ರಾಕಾ’ ಆಗಿ ತೆರೆ ಮೇಲೆ ಬರಲಿದ್ದಾರೆ ನಟ ಅಲ್ಲು ಅರ್ಜುನ್. ಖ್ಯಾತ ನಿರ್ದೇಶಕ ಅಟ್ಲಿ ಆ್ಯಕ್ಷನ್ ಕಟ್ ಹೇಳುತ್ತಿರುವ ಹೊಸ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆಯಾಗಿದ್ದು, ಅಲ್ಲು ಅರ್ಜುನ್ ಭಿನ್ನವಾದ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ.

ಅಲ್ಲು ಜನ್ಮದಿನದಂದು 9 ಭಾಷೆಗಳಲ್ಲಿ ಈ ಪೋಸ್ಟರ್ ರಿಲೀಸ್ ಆಗಿದ್ದು, ಪ್ಯಾನ್ ಇಂಡಿಯಾ ಸಿನಿಮಾ ಸೂಚನೆಯನ್ನು ನೀಡಿದೆ. ಇದು ಅಲ್ಲು ಅರ್ಜುನ್ ನಟನೆಯ 22ನೇ ಸಿನಿಮಾವಾಗಿದ್ದು, ಅಟ್ಲಿಯ 6ನೇ ಸಿನಿಮಾ. ಸಿನಿಮಾದಲ್ಲಿ ಅಲ್ಲು ಅರ್ಜುನ್ ಜೊತೆ ದೀಪಿಕಾ ಪಡುಕೋಣೆ ನಟಿಸುತ್ತಿದ್ದಾರೆ. ದೊಡ್ಡ ಬಜೆಟ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾದಲ್ಲಿ ಪೌರಾಣಿಕ ಸ್ಪರ್ಶವಿದ್ದು, ಅದ್ದೂರಿಯಾದ ಆ್ಯಕ್ಷನ್ ದೃಶ್ಯಗಳು, ಭಾವನಾತ್ಮಕವಾದ ಕಥಾಹಂದರ ಹಾಗೂ ಉತ್ಕೃಷ್ಟವಾದ ವಿಎಫ್‌ಎಕ್ಸ್ ಇರಲಿದೆ ಎಂದು ಚಿತ್ರತಂಡ ತಿಳಿಸಿದೆ.

ಸೈಂಟಿಫಿಕ್ ಫಿಕ್ಷನ್ ಆ್ಯಕ್ಷನ್ ಜಾನರ್‌ನ ಈ ಸಿನಿಮಾವನ್ನು ಸನ್ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿದೆ. ಇದು ಅಟ್ಲಿ ಹಾಗೂ ಅಲ್ಲು ಕಾಂಬಿನೇಷನ್‌ನಲ್ಲಿ ಬರುತ್ತಿರುವ ಮೊದಲ ಸಿನಿಮಾವಾಗಿದ್ದು, ಚಿತ್ರದ ವಿಎಫ್‌ಎಕ್ಸ್ ಕೆಲಸವನ್ನು ಅಮೆರಿಕದ ಲೋಲ ವಿಎಫ್‌ಎಕ್ಸ್ ಕಂಪನಿ ಸೇರಿದಂತೆ ಹಲವು ಸ್ಟುಡಿಯೊಗಳು ಮಾಡುತ್ತಿವೆ. ಸಿನಿಮಾದಲ್ಲಿ ಅಲ್ಲು ಅರ್ಜುನ್ ನಾಲ್ಕು ಭಿನ್ನ ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದು, ಎರಡು ಸಮಾನಾಂತರ ಜಗತ್ತಿನಲ್ಲಿ ನಡೆಯುವ ಕಥೆ ಹೊಂದಿದೆ ಎನ್ನಲಾಗಿದೆ.

ಇಡಿಯಟ್ ಆದ ರಾಣಾ

ನಿರ್ದೇಶಕ ಜೋಗಿ ಪ್ರೇಮ್ ಚಿತ್ರರಂಗದಲ್ಲಿ ಹೊಸಬರಿಗೆ ಬೆನ್ನೆಲುಬಾಗಿ ನಿಲ್ಲುವ ಉದ್ದೇಶದಿಂದ ಕೆಲ ದಿನಗಳ ಹಿಂದೆ ‘ಫೀನಿಕ್ಸ್ ಪ್ರೇಮ್ಸ್ ಸ್ಟುಡಿಯೋಸ್’ ಆರಂಭಿಸಿದ್ದರು. ಈ ಸಂಸ್ಥೆಯ ಮೊದಲ ಸಿನಿಮಾ ಶೀರ್ಷಿಕೆ ಅನಾವರಣಗೊಂಡಿದ್ದು, ‘ಇಡಿಯಟ್’ ಆಗಿ ರಾಣಾ ಕಾಣಿಸಿಕೊಳ್ಳಲಿದ್ದಾರೆ.

ಪ್ರೇಮ್ ಅವರ ಗರಡಿಯಲ್ಲಿ ಪಳಗಿರುವ ಮಂಜುನಾಥ್ ಬಿ.ಎಸ್. ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ‘ನಾನು ಪ್ರೇಮ್ ಅವರ ಜತೆಯಲ್ಲಿ ಹಲವು ವರ್ಷಗಳಿಂದ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿದ್ದೇನೆ. ಹೀಗಾಗಿ ಪ್ರೇಮ್ ಹಾಗೂ ರಕ್ಷಿತಾ ಅವರ ನಿರ್ಮಾಣ ಸಂಸ್ಥೆಯ ಮೊದಲ ಸಿನಿಮಾವನ್ನು ನನಗೆ ನೀಡಿದ್ದಾರೆ. ನಿರ್ದೇಶಕನಾಗಿ ನನಗೆ ಇದು ಮೊದಲ ಸಿನಿಮಾ. ಇದೊಂದು ಕಾಮಿಡಿ, ಆ್ಯಕ್ಷನ್ ಜಾನರ್‌ನಲ್ಲಿದೆ. ರಾಣಾಗೆ ಅತ್ಯಂತ ಸೂಕ್ತವಾಗುವ ಕಥೆ. ಶೀಘ್ರದಲ್ಲಿಯೇ ಚಿತ್ರೀಕರಣ ಪ್ರಾರಂಭವಾಗಲಿದೆ’ ಎಂದರು ನಿರ್ದೇಶಕ.

ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ, ರೋಮಿಯೋ ಸಂಗೀತ ಚಿತ್ರಕ್ಕೆ ಇರಲಿದೆ.

ಫೆಂಗ್‌ಗೆ ಆಘಾತ ನೀಡಿದ ಆಯುಷ್

ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಪಿ.ವಿ.ಸಿಂಧು, ಪ್ರಣಯ್ ಮುನ್ನಡೆ

ಭಾರತದ ಆಯುಷ್ ಶೆಟ್ಟಿ

ನಿಂಗ್ಬೊ (ಚೀನಾ), (ಪಿಟಿಐ): ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಲಿನ್ ಶಿ ಫೆಂಗ್ ಅವರಿಗೆ ಬುಧವಾರ ಆಘಾತ ನೀಡಿದ ಭಾರತದ ಆಯುಷ್ ಶೆಟ್ಟಿ, ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತನ್ನು ಪ್ರವೇಶಿಸಿದರು. ಎಚ್.ಎಸ್.ಪ್ರಣಯ್ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಅನುಭವಿ ಪಿ.ವಿ.ಸಿಂಧು ಸಹ ಗೆಲುವಿನೊಡನೆ ಅಭಿಯಾನ ಆರಂಭಿಸಿದರು.

ವಿಶ್ವ ಕ್ರಮಾಂಕದಲ್ಲಿ 25ನೇ ಸ್ಥಾನದಲ್ಲಿರುವ ಆಯುಷ್ 21–13, 21–16 ರಿಂದ ಚೀನಾದ ಲಿನ್ ಅವರನ್ನು 51 ನಿಮಿಷಗಳಲ್ಲಿ ಪರಾಭವಗೊಳಿಸಿದರು.

ಐದನೇ ಶ್ರೇಯಾಂಕದ ಲಿನ್ 4–1 ಆರಂಭಿಕ ಮುನ್ನಡೆ ಸಾಧಿಸಿದರು. ಆದರೆ 7–7ರಲ್ಲಿ ಸಮ ಮಾಡಿಕೊಂಡ ನಂತರ ಆಯುಷ್ ನಿಧಾನವಾಗಿ ಹಿಡಿತ ಪಡೆಯತೊಡಗಿ ಮೊದಲ ಗೇಮ್ ಪಡೆದರು. ಬದಿಗಳ ಬದಲಾವಣೆಯ ನಂತರ ಚೀನಾದ ಆಟಗಾರ 4–1 ಹಾಗೂ ನಂತರ 12–9 ರಲ್ಲಿ ಮುನ್ನಡೆ ಗಳಿಸಿದ್ದರು. ಆದರೆ ಈ ಹಂತದಲ್ಲಿ ಸತತವಾಗಿ ಆರು ಪಾಯಿಂಟ್ಸ್ ಪಡೆದ ಆಯುಷ್ ಮೇಲುಗೈ ಸಾಧಿಸಿ 18–13ರಲ್ಲಿ ಮುನ್ನಡೆ ಗಳಿಸಿದರು. ಲಿನ್ ಹಿನ್ನಡೆಯನ್ನು 16–18ಕ್ಕೆ ಇಳಿಸಿದರೂ ಆಯುಷ್ ಗೆಲುವನ್ನು ತಡೆಯಲಾಗಲಿಲ್ಲ.

ಎಚ್.ಎಸ್.ಪ್ರಣಯ್ 24–22, 21–12 ರಿಂದ ವಿಯೆಟ್ನಾಮಿನ ನೂಯೆನ್ ಹಯ್ ಅವರನ್ನು ಸೋಲಿಸಿದರು.

ಸಿಂಧು 15–21, 21–11, 21–19 ರಿಂದ ಮಲೇಷ್ಯಾದ ವಾಂಗ್ ಲಿಂಗ್ ಚಿಂಗ್ ಅವರನ್ನು ಪರಾಭವಗೊಳಿಸಿದರು. ಭಾರತದ ಆಟಗಾರ್ತಿ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ವಾಂಗ್ ಝಿ ಇ (ಚೀನಾ) ಅವರನ್ನು ಎದುರಿಸಲಿದ್ದಾರೆ. ಈ ಹಿಂದೆ ಇವರಿಬ್ಬರು ಆರು ಬಾರಿ ಮುಖಾಮುಖಿಯಾಗಿದ್ದು 3–3 ಸೋಲು–ಗೆಲುವಿನ ದಾಖಲೆ ಹೊಂದಿದ್ದಾರೆ.

ಲಕ್ಷ್ಯ ನಿರ್ಗಮನ: ಆಲ್ ಇಂಗ್ಲೆಂಡ್ ಟೂರ್ನಿಯ ರನ್ನರ್ ಅಪ್ ಲಕ್ಷ್ಯ ಸೇನ್ ಅವರು ತಮಗಿಂತ ಕೆಳ ಕ್ರಮಾಂಕದ ಆಟಗಾರ, ಹಾಂಗ್‌ಕಾಂಗ್‌ನ ಲೀ ಚಿಯುಕ್ ಇಯು ಅವರಿಗೆ 12–21, 19–21ರಲ್ಲಿ ಮಣಿದರು.

ಸಿಂಗಪುರದ ಲ್ಹೊ ಕೀನ್ ಯು 18–21, 21–9, 21–11 ರಿಂದ ವಿಶ್ವದ ಮಾಜಿ ನಂಬರ್ ವನ್ ಆಟಗಾರ ಕಿದಂಬಿ ಶ್ರೀಕಾಂತ್ ಅವರನ್ನು ಸೋಲಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ತನ್ವಿ ಶರ್ಮಾ ಮತ್ತು ಮಾಳವಿಕಾ ಬನ್ಸೋಡ್ ಅವರು ಕ್ರಮವಾಗಿ ಮಲೇಷ್ಯಾದ ಲೆಟ್ಶಾನಾ ಕರುಪಥೆವನ್ ಮತ್ತು ಥಾಯ್ಲೆಂಡ್‌ನ ಬುಸಾನನ್ ಒಂಗ್ಬಮ್‌ರುಂಗ್ಫಾನ್ ಅವರೆದುರು ಸೋಲನುಭವಿಸಿದರು.

ಅಲ್ಲಾರಂಡ ತಂಡಕ್ಕೆ ಭರ್ಜರಿ ಜಯ

ನಾಪೋಕ್ಲು (ಕೊಡಗು ಜಿಲ್ಲೆ): ಅಲ್ಲಾರಂಡ ತಂಡವು ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಬುಧವಾರ 6–0ಯಿಂದ ಬಲ್ಲನಮಾಡ ತಂಡವನ್ನು ಮಣಿಸಿತು.

ಕನ್ನಿಗಂಡ ತಂಡವು ಬೊಳ್ತಂಡ ವಿರುದ್ಧ 6-0ಯಿಂದ; ಮುಂಡೋಟಿರ ತಂಡ ಮೋಟನಾಳಿರ ವಿರುದ್ಧ 4-1ರಿಂದ; ಬೇಪಡಿಯಂಡ ತಂಡವು ಕೇಕಡ ವಿರುದ್ಧ 5-0ಯಿಂದ; ಶಿವಚಾಳಿಯಂಡ ತಂಡವು ಕಾವಡಿಚಂಡ ವಿರುದ್ಧ 2-0ಯಿಂದ; ಚೆರಿಯಪಂಡ ತಂಡವು ಮಾಳೆಯಂಡ ವಿರುದ್ಧ 4-3 ಯಿಂದ; ಚಪ್ಪಂಡ ತಂಡವು ಕಟ್ಟೇರ ವಿರುದ್ಧ 5–4ರಿಂದ; ಕಾಳಿಮಾಡ ತಂಡ ಚೇರಂಡ ವಿರುದ್ಧ 3-1 ರಿಂದ ಜಯ ಸಾಧಿಸಿದವು.

ಬಾದುಮಂಡ ತಂಡವು ಚಂಗೇಟಿರ ವಿರುದ್ಧ 5-0ಯಿಂದ; ಚಿಮ್ಮಣಮಾಡ ತಂಡವು ಅಲ್ಲಂಡ ವಿರುದ್ಧ 5-0ಯಿಂದ; ಅಲ್ಲಪಂಡ ತಂಡವು ಚೆಟ್ರುಮಾಡ ವಿರುದ್ಧ 3-0ಯಿಂದ; ಕಾಡ್ಯಮಾಡ ತಂಡವು ಮದ್ರಿರ ವಿರುದ್ಧ 4-0 ಯಿಂದ; ಮುಕ್ಕಾಟಿರ ತಂಡವು ಕೋಲುಮಾದಂಡ ವಿರುದ್ಧ 6-4ಯಿಂದ; ಮಣವಟ್ಟೀರ ತಂಡವು ಕೀತಿಯಂಡ ವಿರುದ್ಧ 6-0ಯಿಂದ; ಕಾಂಡೇರ ತಂಡವು ಕೊಟ್ಟುಕತ್ತೀರ ವಿರುದ್ಧ 5–0ಯಿಂದ ಗೆಲವು ಸಾಧಿಸಿದವು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ವಿಐಟಿ ಚೆನ್ನೈ ಕ್ಯಾಂಪಸ್‌ನಲ್ಲಿ ಯೂನಿವರ್ಸಿಟಿ ದಿನಾಚರಣೆ

ವಿಐಟಿ ಯೂನಿವರ್ಸಿಟಿ ದಿನಾಚರಣೆಯಲ್ಲಿ ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಬೆಂಗಳೂರು: ವೆಲ್ಲೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಮಂಗಳವಾರ ಯೂನಿವರ್ಸಿಟಿ ದಿನಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಆಚರಿಸಿತು. ಶೈಕ್ಷಣಿಕ ಸಾಧನೆ ಮತ್ತು ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಯನ್ನು ಗೌರವಿಸುವ ಈ ಸಮಾರಂಭದಲ್ಲಿ ಪ್ರಮುಖ ಗಣ್ಯರು ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಇಂಡಿಯನ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿನೋದ್ ಕುಮಾರ್ ಮಾತನಾಡಿ, ‘ವೇಗವಾಗಿ ಬದಲಾಗುತ್ತಿರುವ ಜಗತ್ತಿಗೆ ವಿದ್ಯಾರ್ಥಿಗಳು ಸನ್ನದ್ಧರಾಗಬೇಕು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಾವು ಸದಾ ಗ್ರಾಹಕರ ಜೀವನವನ್ನು ಹೇಗೆ ಸುಲಭಗೊಳಿಸಬಹುದು ಎಂದು ಆಲೋಚಿಸುತ್ತೇವೆ. ಇದೇ ಗುಣ ನಿಮಗೂ ಅನ್ವಯಿಸುತ್ತದೆ. ಪರಸ್ಪರರ ಜೀವನವನ್ನು ಸರಳಗೊಳಿಸುವ ಸಂಶೋಧನೆಗಳತ್ತ ಗಮನಹರಿಸಿ. ಜ್ಞಾನವು ನಿಮ್ಮನ್ನು ಒಂದು ಹಂತದವರೆಗೆ ಕರೆದೊಯ್ಯುತ್ತದೆ. ಆದರೆ ಅಲ್ಲಿಂದ ಮುಂದೆ ನಿಮ್ಮ ಯಶಸ್ಸನ್ನು ನಿರ್ಧರಿಸುವುದು ನಿಮ್ಮ ನಡತೆ ಮತ್ತು ವ್ಯಕ್ತಿತ್ವ’ ಎಂದರು.

ಗೌರವಾನ್ವಿತ ಅತಿಥಿಯಾಗಿದ್ದ ಮೇಜರ್ ವೈಭವ್ ಚೌರಾಸಿಯಾ ಮಾತನಾಡಿ, ‘ಯಾವುದೇ ಸಂದರ್ಭದಲ್ಲಿ ನಿಮ್ಮ ಮೇಲೆ ನಿಮಗೆ ಸಂಶಯ ಬೇಡ. ಸೋಲುಗಳು ಎದುರಾಗಬಹುದು, ಆದರೆ ಛಲ ಬಿಡದೆ ಪ್ರಯತ್ನಿಸಬೇಕು. ನಿಮ್ಮ ಸುತ್ತಮುತ್ತಲಿನ ಧನಾತ್ಮಕ ಅಂಶಗಳಿಂದ ಸ್ಫೂರ್ತಿ ಪಡೆಯಿರಿ’ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಐಟಿ ಸ್ಥಾಪಕ ಮತ್ತು ಕುಲಾಧಿಪತಿ ಡಾ.ಜಿ.ವಿಶ್ವನಾಥನ್ ಮಾತನಾಡಿದರು.

ಸಮಾರಂಭದಲ್ಲಿ ವಿಐಟಿ ಉಪಾಧ್ಯಕ್ಷ ಡಾ.ಜಿ.ವಿ. ಸೆಲ್ವಂ, ಪ್ರೊ-ವೈಸ್ ಚಾನ್ಸಲರ್ ಪ್ರೊ.ಟಿ. ತ್ಯಾಗರಾಜನ್, ವಿಐಟಿ ಚೆನ್ನೈ ನಿರ್ದೇಶಕ ಪ್ರೊ.ಕೆ.ಸತ್ಯನಾರಾಯಣನ್ ಮತ್ತು ಹೆಚ್ಚುವರಿ ರಿಜಿಸ್ಟ್ರಾರ್ ಪ್ರೊ.ಪಿ.ಕೆ. ಮನೋಹರನ್ ಉಪಸ್ಥಿತರಿದ್ದರು.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಭಾರತದ ಶೂಟರ್‌ಗಳಿಗೆ ನಿರಾಶೆ

ಮುಕೇಶ್

ಗ್ರೆನೆಡಾ (ಸ್ಪೇನ್, ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಪಿಸ್ತೂಲ್/ರೈಫಲ್ ವಿಶ್ವಕಪ್ ಟೂರ್ನಿಯ ಪುರುಷರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬುಧವಾರ ನಿರಾಶೆ ಅನುಭವಿಸಿದರು. ಉದಯೋನ್ಮುಖ ಶೂಟರ್ ಮುಕೇಶ್ ನೆಲವಲ್ಲಿ, ಆಕಾಶ್ ಭಾರದ್ವಾಜ್, ಉಜ್ವಲ್ ಮಲಿಕ್ ಹಾಗೂ ಪ್ರಮೋದ್ ಅವರು ಫೈನಲ್ ಸುತ್ತಿಗೂ ಅರ್ಹತೆ ಪಡೆದುಕೊಳ್ಳಲಿಲ್ಲ.

10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯ ಮಿಶ್ರ ತಂಡ ವಿಭಾಗದಲ್ಲಿ ವಿಶ್ವದಾಖಲೆ ಸಹಿತವಾಗಿ ಮಂಗಳವಾರ ಸ್ವರ್ಣ ಜಯಿಸಿದ್ದ ಮುಕೇಶ್ ಅವರು ಪುರುಷರ ವಿಭಾಗದ ಅರ್ಹತಾ ಸುತ್ತಿನಲ್ಲಿ 579 ಅಂಕಗಳೊಂದಿಗೆ 14ನೇ ಸ್ಥಾನ ಪಡೆದರು.

ಆಕಾಶ್ (580 ಅಂಕ) ಗಮನಾರ್ಹ ಪ್ರದರ್ಶನ ತೋರಿದರಾದರೂ ಅವರು ರ್‍ಯಾಂಕಿಂಗ್ ಅಂಕ ಗಳಿಸುವ ಉದ್ದೇಶದಿಂದಷ್ಟೇ ಸ್ಪರ್ಧಿಸಿದ್ದರು. ಅವರು ಹತ್ತನೇ ಸ್ಥಾನ ಪಡೆದರು. ಉಜ್ವಲ್ 577 ಪಾಯಿಂಟ್ಸ್‌ಗಳೊಡನೆ 22ನೇ ಸ್ಥಾನ ಪಡೆದರು.

ಪ್ರಮೋದ್ ಆರು ಸುತ್ತುಗಳಿದ್ದ ಸ್ಪರ್ಧೆಯಲ್ಲಿ 574 ಅಂಕ ಸಂಪಾದಿಸಿ, 39ನೇ ಸ್ಥಾನ ಪಡೆದರು.

ಮಹಿಳೆಯರ 25 ಮೀ. ಪಿಸ್ತೂಲ್‌ನ ಮೊದಲ ಹಂತದ ಸ್ಪರ್ಧೆಗಳು ಬುಧವಾರ ನಡೆದವು. ಒಲಿಂಪಿಯನ್ ರಿದಮ್ ಸಂಗ್ವಾನ್ (292 ಅಂಕ) ಹಾಗೂ ದಿವ್ಯಾ ಟಿ. (291 ಅಂಕ) ಅವರು ಸದ್ಯ ಆರು ಮತ್ತು ಎಂಟನೇ ಸ್ಥಾನದಲ್ಲಿ ಇದ್ದಾರೆ. ಕಣದಲ್ಲಿದ್ದ ಭಾರತದ ಮತ್ತೊಬ್ಬ ಶೂಟರ್ ಸಿಮ್ರನ್‌ಪ್ರೀತ್ ಕೌರ್ ಬ್ರಾರ್ (282 ಅಂಕ) 45ನೇ ಸ್ಥಾನದಲ್ಲಿದ್ದಾರೆ.

ಗುರುವಾರ ಎರಡನೇ ಹಂತದಲ್ಲಿ ಮೂರು ಸುತ್ತಿನ ‘ರ್‍ಯಾಪಿಡ್’ ಸ್ಪರ್ಧೆ ನಡೆಯಲಿದ್ದು, ಅಂತಿಮವಾಗಿ ಅಗ್ರ 8 ಸ್ಥಾನ ಪಡೆಯುವ ಶೂಟರ್‌ಗಳು ಫೈನಲ್ ಸುತ್ತಿಗೆ ಅರ್ಹತೆ ಪಡೆಯಲಿದ್ದಾರೆ.

ಪುರಿ ಜಗನ್ನಾಥನ ಭಂಡಾರದ 2ನೇ ಹಂತದ ಪರಿಶೀಲನೆ ಆರಂಭ

ಪುರಿ (ಪಿಟಿಐ): ಪುರಿ ಜಗನ್ನಾಥ ದೇವಾಲಯದ ‘ರತ್ನ ಭಂಡಾರ’ದ ಎರಡನೇ ಹಂತದ ಪರಿಶೀಲನೆ ಕಾರ್ಯ ಬುಧವಾರ ಪ್ರಾರಂಭವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇವಕರು, ರತ್ನಶಾಸ್ತ್ರಜ್ಞರು ಮತ್ತು ಅಕ್ಕಸಾಲಿಗರ ತಂಡವು ಬೆಳಿಗ್ಗೆ 11.30ಕ್ಕೆ ರತ್ನ ಭಂಡಾರ ಸಮಿತಿಯ ಅಧ್ಯಕ್ಷ ನ್ಯಾಯಮೂರ್ತಿ ವಿಶ್ವನಾಥ ರಥ ಮತ್ತು ಶ್ರೀ ಜಗನ್ನಾಥ ದೇವಾಲಯದ ಆಡಳಿತ ಮಂಡಳಿಯ ಮುಖ್ಯ ಆಡಳಿತಾಧಿಕಾರಿ ಅರವಿಂದ ಪಧಿ ಅವರೊಂದಿಗೆ ದೇವಾಲಯದ ಖಜಾನೆಯನ್ನು ಪ್ರವೇಶಿಸಿತು.

ದೇವತೆಗಳ ನಿತ್ಯಬಳಕೆಯ ಆಭರಣಗಳ ಪರಿಶೀಲನೆ ಕಾರ್ಯವು ಮಾರ್ಚ್ 25ರಂದು ಆರಂಭವಾಗಿತ್ತು. ಕಳೆದ 48 ವರ್ಷಗಳಲ್ಲೇ ಮೊದಲ ಬಾರಿಗೆ ನಡೆಯುತ್ತಿರುವ ಪ್ರಕ್ರಿಯೆ ಇದಾಗಿದೆ.

‘ಮೊದಲ ಹಂತದಲ್ಲಿ, ಪಾರದರ್ಶಕತೆಯನ್ನು ಖಚಿತಪಡಿಸಲು ಸಂಪೂರ್ಣ ಪ್ರಕ್ರಿಯೆಯ ವಿಡಿಯೊಗ್ರಫಿ, ಛಾಯಾಗ್ರಹಣ ಮತ್ತು ತ್ರಿಡಿ ಮ್ಯಾಪಿಂಗ್ ಮಾಡಲಾಗುತ್ತಿದೆ’ ಎಂದು ಅರವಿಂದ ಪಧಿ ಹೇಳಿದ್ದಾರೆ.

‘ಪ್ರಸ್ತುತ ಹಂತದ ಪರಿಶೀಲನೆ ಏಪ್ರಿಲ್ 11ರವರೆಗೆ ನಡೆಯಲಿದೆ. ನಂತರದ ಹಂತವು ಏಪ್ರಿಲ್ 13 ಮತ್ತು ಏಪ್ರಿಲ್ 16ರಿಂದ 18ರ ವರೆಗೆ ನಡೆಯಲಿದೆ. ದೇವಾಲಯದ ಆಚರಣೆಗಳು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯಲಿದ್ದು, ಭದ್ರತಾ ಕಾರಣಗಳಿಗಾಗಿ ಭಕ್ತರು ಹೊರಗಿನ ಬ್ಯಾರಿಕೇಡ್‌ನಿಂದ ದರ್ಶನ ಪಡೆಯಬಹುದು’ ಎಂದು ಅವರು ಹೇಳಿದ್ದಾರೆ.

1978ರ ಪಟ್ಟಿಯ ಪ್ರಕಾರ, ದೇವಾಲಯದ ಖಜಾನೆಯು 111 ವಸ್ತುಗಳನ್ನು ಹೊಂದಿದ್ದು, ಅವುಗಳಲ್ಲಿ 78 ಚಿನ್ನ ಮಿಶ್ರಿತ ಮತ್ತು 33 ಬೆಳ್ಳಿ ಮಿಶ್ರಿತ ಆಭರಣಗಳು ಇವೆ.

ಭಾರತಕ್ಕೆ ಮಣಿದ ನ್ಯೂಜಿಲೆಂಡ್

ಬಿಲ್ಲಿ ಜೀನ್ ಕಿಂಗ್ ಕಪ್ ಟೆನಿಸ್: ವೈಷ್ಣವಿ, ಸಹಜಾಗೆ ಜಯ

ಭಾರತದ ವೈಷ್ಣವಿ ಅಡ್ಕರ್ ಚಿತ್ರ: ಡಿಎಸ್‌ಎಲ್‌ಟಿಎ

ನವದೆಹಲಿ (ಪಿಟಿಐ): ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್ ಮತ್ತು ಸಹಜಾ ಯಮಲಪಲ್ಲಿ ಅವರು ಬುಧವಾರ ಸಿಂಗಲ್ಸ್ ಪಂದ್ಯಗಳಲ್ಲಿ ನ್ಯೂಜಿಲೆಂಡ್‌ನ ಎದುರಾಳಿಗಳನ್ನು ನೇರ ಸೆಟ್‌ಗಳಿಂದ ಸೋಲಿಸಿದರು. ಆ ಮೂಲಕ ಬಿಲ್ಲಿ ಜೀನ್ ಕಿಂಗ್ ಕಪ್ ಏಷ್ಯಾ ಒಷಾನಿಯಾ ಐ ಗುಂಪಿನ ಪಂದ್ಯದಲ್ಲಿ ಭಾರತ 3–0 ಯಿಂದ ಗೆಲುವು ಸಾಧಿಸಲು ನೆರವಾದರು.

ವೈಷ್ಣವಿ ಮತ್ತು ಸಹಜಾ ಅವರು ಮಳೆಯಿಂದ ಪೀಡಿತವಾಗಿದ್ದ ಥಾಯ್ಲೆಂಡ್ ಎದುರಿನ ಮೊದಲ ಪಂದ್ಯದಲ್ಲಿ ಅನುಭವಿಸಿದ ನಿರಾಸೆಯನ್ನು ಮರೆಯುವಂತೆ ಎರಡನೇ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದರು.

ಮೊದಲ ಸಿಂಗಲ್ಸ್ ಆಡಿದ 21 ವರ್ಷ ವಯಸ್ಸಿನ ವೈಷ್ಣವಿ ಅವರು ಹೊಡೆತಗಳ ಮೇಲೆ ಉತ್ತಮ ನಿಯಂತ್ರಣ ಸಾಧಿಸಿ 6–2, 6–4 ರಿಂದ ಐಶಿ ದಾಸ್ ಅವರನ್ನು ಸೋಲಿಸಿದರು. ಈ ಪಂದ್ಯ ಒಂದೂವರೆ ಗಂಟೆ ನಡೆಯಿತು. ವಿಶ್ವ ಕ್ರಮಾಂಕದಲ್ಲಿ 384ನೇ ಸ್ಥಾನದಲ್ಲಿರುವ ಸಹಜಾ ಅವರು 6–1, 6–3 ರಿಂದ ವೆಲೆಂಟಿನಾ ಇವಾನೋವ್ ಅವರನ್ನು ಹಿಮ್ಮೆಟ್ಟಿಸಿ ಭಾರತದ ಗೆಲುವನ್ನು ಖಚಿತಪಡಿಸಿದರು.

ಡಬಲ್ಸ್ ಪಂದ್ಯದಲ್ಲಿ ರುತುಜಾ ಭೋಸಲೆ ಮತ್ತು ಅಂಕಿತಾ ರೈನಾ ಅವರು 6–4, 6–2 ರಿಂದ ನ್ಯೂಜಿಲೆಂಡ್‌ನ ಮೋನಿಖ್ ಬಾರಿ ಮತ್ತು ಎರಿನ್ ರೂಟ್ಲಿಫ್ ಜೋಡಿಯನ್ನು ಸೋಲಿಸಿದರು. ಎರಿನ್ ವಿಶ್ವ ಕ್ರಮಾಂಕದಲ್ಲಿ 11ನೇ ಮತ್ತು ಮೋನಿಕ್ 338ನೇ ಸ್ಥಾನ ಹೊಂದಿದ್ದಾರೆ.

ಥಾಯ್ಲೆಂಡ್‌ಗೆ ಜಯ: ಇದಕ್ಕೆ ಮೊದಲು, ಮಂಗಳವಾರ ಮಳೆಯಿಂದ ಅಪೂರ್ಣಗೊಂಡಿದ್ದ ಪಂದ್ಯ ಮುಂದುವರಿಸಿದ ಭಾರತ 1–2 ರಿಂದ ಥಾಯ್ಲೆಂಡ್ ತಂಡದ ಎದುರು ಸೋಲನುಭವಿಸಿತು.

25 ವರ್ಷ ವಯಸ್ಸಿನ ಸಹಜಾ ಎರಡನೇ ಸಿಂಗಲ್ಸ್‌ನಲ್ಲಿ 4–6, 6–1, 4–6 ರಲ್ಲಿ 449ನೇ ಕ್ರಮಾಂಕದ ಪಟ್ಚಾರಿನ್ ಅವರಿಗೆ ಮಣಿದರು. ಈ ಪಂದ್ಯ 2 ಗಂಟೆ 25 ನಿಮಿಷ ನಡೆಯಿತು. ಮಂಗಳವಾರ ಮೊದಲ ಸಿಂಗಲ್ಸ್‌ನಲ್ಲಿ ವೈಷ್ಣವಿ 1–6, 3–6ರಲ್ಲಿ ಥಾಯ್ಲೆಂಡ್‌ನ ಅಂಚಿಸಾ ಚಂತಾ ಅವರಿಗೆ ನೇರ ಸೆಟ್‌ಗಳಲ್ಲಿ ಮಣಿದಿದ್ದರು.

2–0 ಹಿನ್ನಡೆಯಲ್ಲಿದ್ದ ಭಾರತ ತಂಡಕ್ಕೆ ರುತುಜಾ– ಅಂಕಿತಾ ಜೋಡಿ 6–3, 6– 4 ಯಿಂದ ಥಸಾಪೊರ್ನ್ ನಾಕ್ಲೊ– ಪಿಯಾಂಗ್‌ತರ್ನ್ ಪ್ಲಿಪುಯೆಚ್ ಜೋಡಿಯನ್ನು 71 ನಿಮಿಷಗಳಲ್ಲಿ ಹಿಮ್ಮೆಟ್ಟಿಸಿ ಗೆಲುವು ತಂದುಕೊಟ್ಟರು.

ತೈವಾನ್ ವಿರುದ್ಧ ಭಾರತಕ್ಕೆ ಜಯ

ಗೋಲು ಗಳಿಸಿದ ಶಿವಾನಿ ದೇವಿ

ಪಥುಮ್ ಥಾನಿ (ಥಾಯ್ಲೆಂಡ್), (ಪಿಟಿಐ): ಭಾರತ ಮಹಿಳೆಯರ ತಂಡ, ಎಎಫ್‌ಸಿ 20 ವರ್ಷದೊಳಗಿನವರ ಮಹಿಳಾ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿ ಸಿ ಗುಂಪಿನ ಅಂತಿಮ ಪಂದ್ಯದಲ್ಲಿ ಬುಧವಾರ 3–1 ಗೋಲುಗಳಿಂದ ತೈವಾನ್ ತಂಡವನ್ನು ಸೋಲಿಸಿತು. ಇದರಿಂದ ನಾಕೌಟ್ ತಲುಪುವ ಭಾರತದ ಆಸೆ ಜೀವಂತವಾಗಿ ಉಳಿದಿದೆ.

ಭಾರತದ ಪರ ಭೂಮಿಕಾ ದೇವಿ ಖುಮುಕ್‌ಚಾಮ್ (26ನೇ ನಿಮಿಷ), ಶಿವಾನಿ ದೇವಿ ನೊಂಗ್‌ಮೀಕಾಪಾಮ್ (32 ಮತ್ತು 87ನೇ ನಿಮಿಷ) ಅವರು ಗೋಲು ಗಳಿಸಿದರು. ತೈವಾನ್ ಪರ ಸಬ್‌ಸ್ಟಿಟ್ಯೂಟ್ ಆಟಗಾರ್ತಿ ಕಾವೊ ಸಿನ್ (90 + 3) ಅವರು ಗೋಲು ಗಳಿಸಿದರು.

ಇದು ಭಾರತ ತಂಡಕ್ಕೆ ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ಟೂರ್ನಿಯಲ್ಲಿ 2004ರ ನಂತರ ದಕ್ಕಿದ ಮೊದಲ ಗೆಲುವಾಗಿದೆ. ಭಾರತ ಸಿ ಗುಂಪಿನಲ್ಲಿ 3 ಪಂದ್ಯಗಳಿಂದ 3 ಪಾಯಿಂಟ್ಸ್ ಗಳಿಸಿದೆ. ಆದರೆ ಭಾರತ ನಾಕೌಟ್ ಆಸೆ ಜೋರ್ಡಾನ್– ಉಜ್ಬೇಕಿಸ್ತಾನ ನಡುವಣ ‘ಬಿ’ ಪಂದ್ಯದ ಭವಿಷ್ಯ ಅವಲಂಬಿಸಿದೆ.

ಪ್ರಸಿದ್ಧ 'ಮ್ಯಾಜಿಕ್'; ಟೈಟನ್ಸ್‌ಗೆ ಮೊದಲ ಜಯ

ಗಿಲ್, ಬಟ್ಲರ್, ವಾಷಿಂಗ್ಟನ್ ಅರ್ಧಶತಕ ರಾಹುಲ್, ಮಿಲ್ಲರ್ ಆಟಕ್ಕೆ ಒಲಿಯದ ಜಯ

ನವದೆಹಲಿ (ಪಿಟಿಐ): ಕನ್ನಡಿಗ ಪ್ರಸಿದ್ಧ ಕೃಷ್ಣ (52ಕ್ಕೆ2) ಅವರು ಪಂದ್ಯದ ಕೊನೆಯ ಓವರ್‌ನಲ್ಲಿ 'ಮ್ಯಾಜಿಕ್' ಮಾಡಿದರು. ಅದರಿಂದಾಗಿ, ಗುಜರಾತ್ ಟೈಟನ್ಸ್ ತಂಡವು ಬುಧವಾರ 1 ರನ್ ಅಂತರದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ 211 ರನ್ ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಕೆ.ಎಲ್.ರಾಹುಲ್ (92; 52ಎ) ಹಾಗೂ ಪಥುಮ್ ನಿಸಾಂಕ (41; 24ಎ) ಉತ್ತಮ ಆರಂಭ ಒದಗಿಸಿದರು. ದಕ್ಷಿಣ ಆಫ್ರಿಕಾದ ಸ್ಫೋಟಕ ಬ್ಯಾಟರ್ ಡೇವಿಡ್ ಮಿಲ್ಲರ್ ಗಾಯಗೊಂಡು ನಿವೃತ್ತಿಯಾದರೂ, ಮತ್ತೆ ಬ್ಯಾಟಿಂಗ್‌ಗೆ ಇಳಿದು ಅಬ್ಬರಿಸಿದರು. ಮೊಹಮ್ಮದ್ ಸಿರಾಜ್ ಎಸೆದ ಇನಿಂಗ್ಸ್‌ನ19ನೇ ಓವರ್‌ನಲ್ಲಿ 23 ರನ್ ಸೂರೆಮಾಡಿದರು.

ಡೆಲ್ಲಿ ಗೆಲುವಿಗೆ ಕೊನೆಯ ಓವರ್‌ನಲ್ಲಿ 13 ರನ್ ಬೇಕಿತ್ತು. ವಿಪ್ರಜ್ ನಿಗಮ್ ಹಾಗೂ 'ಚೇಸ್ ಮಾಸ್ಟರ್' ಮಿಲ್ಲರ್ ಕ್ರೀಸ್‌ನಲ್ಲಿದ್ದರು. ಮೊದಲ ಎಸೆತವನ್ನು ಬೌಂಡರಿಗೆ ಅಟ್ಟಿದ ವಿಪ್ರಜ್, ಎರಡನೇ ಎಸೆತದಲ್ಲಿ ಶುಭಮನ್ ಗಿಲ್‌ಗೆ ಕ್ಯಾಚ್ ಆದರು. ಕ್ರೀಸ್‌ಗೆ ಬಂದ ಕುಲದೀಪ್ ಯಾದವ್ ಮೂರನೇ ಎಸೆತದಲ್ಲಿ ಸಿಂಗಲ್ ತೆಗೆದುಕೊಂಡರು. ಓವರ್‌ನ ನಾಲ್ಕನೇ ಎಸೆತದಲ್ಲಿ ಭರ್ಜರಿ ಸಿಕ್ಸರ್ ಸಿಡಿಸಿದ 'ಕಿಲ್ಲರ್' ಮಿಲ್ಲರ್ ಡೆಲ್ಲಿ ತಂಡಕ್ಕೆ ಗೆಲುವು ಹತ್ತಿರವಾಗಿಸಿದರು.

ಕೊನೆಯ ಎರಡು ಎಸೆತಗಳಲ್ಲಿ 2 ರನ್‌ಗಳಷ್ಟೇ ಬೇಕಿದ್ದವು. ಐದನೇ ಎಸೆತದಲ್ಲಿ ಸಿಂಗಲ್ ತೆಗೆದುಕೊಳ್ಳಲು ಮಿಲ್ಲರ್ ನಿರಾಕರಿಸಿದರು. ಆದರೆ, ಅದು ತಂಡಕ್ಕೆ ಮುಳುವೂ ಆಯಿತು. ಪ್ರಸಿದ್ಧ ಎಸೆದ ಕೊನೆಯ ಎಸೆತದಲ್ಲಿ ರನ್ ಗಳಿಸಲು ಮಿಲ್ಲರ್ ವಿಫಲರಾದರು. ಚೆಂಡು ನೇರವಾಗಿ ವಿಕೆಟ್‌ಕೀಪರ್ ಬಟ್ಲರ್ ಕೈಸೇರಿತು. 'ಬೈ' ರನ್‌ಗಾಗಿ ಯತ್ನಿಸಿದ ಕುಲದೀಪ್ ರನೌಟ್ ಆದರು. ಅಕ್ಷರ್ ಪಟೇಲ್ ಪಡೆ 8 ವಿಕೆಟ್‌ಗೆ 209 ರನ್‌ಗಳಿಸಿ, ಓವರ್ ಪೂರೈಸಿತು.

ಅಫ್ಗಾನಿಸ್ತಾನದ ಸ್ಪಿನ್ನರ್ ರಶೀದ್ ಖಾನ್ (17ಕ್ಕೆ3) ಡೆಲ್ಲಿ ತಂಡದ ಪ್ರಮುಖ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಕಳೆದೆರಡು ಪಂದ್ಯಗಳಲ್ಲಿ ಮಿಂಚಿದ್ದ 'ಇಂಪ್ಯಾಕ್ಟ್ ಸಬ್‌ಸ್ಟಿಟ್ಯೂಟ್' ಸಮೀರ್ ರಿಜ್ವಿ ಅವರು ರಶೀದ್ ಅವರಿಗೆ ವಿಕೆಟ್ ಒಪ್ಪಿಸಿದರು.

ಇದಕ್ಕೆ ಮೊದಲು, ಲಯಕ್ಕೆ ಮರಳಿದ ಜೋಸ್ ಬಟ್ಲರ್ (52; 27ಎ) ಹಾಗೂ ನಾಯಕ ಶುಭಮನ್ ಗಿಲ್ (70; 45ಎ) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಟೈಟನ್ಸ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 210 ರನ್‌ಗಳಿಸಿತು.

ಪ್ರಸಿದ್ಧ ಕೃಷ್ಣ (ಬಲ) ಅವರನ್ನು ರಶೀದ್ ಖಾನ್ ಅಭಿನಂದಿಸಿದರು ಪಿಟಿಐ ಚಿತ್ರ

ಟಾಸ್ ಗೆದ್ದ ಆತಿಥೇಯ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೂರನೇ ಓವರ್‌ನಲ್ಲಿ ಸಾಯಿ ಸುದರ್ಶನ್ ವಿಕೆಟ್ ಗಳಿಸಿದ ಮುಕೇಶ್ ಕುಮಾರ್ ಸಂಭ್ರಮಿಸಿದರು. ಆಗ ಇನ್ನೊಂದು ಬದಿಯಲ್ಲಿದ್ದ ಶುಭಮನ್ ಗಿಲ್ ಅವರೊಂದಿಗೆ ಸೇರಿಕೊಂಡ ಬಟ್ಲರ್ ತಮ್ಮ ಹಳೆಯ ವೈಭವಕ್ಕೆ ಮರಳಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 60 ರನ್ ಸೇರಿಸಿದರು.

ಇಂಗ್ಲೆಂಡ್ ವಿಕೆಟ್‌ಕೀಪರ್–ಬ್ಯಾಟರ್ ಬಟ್ಲರ್ ಅವರು ಈಚೆಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಫಾರ್ಮ್ ಕೊರತೆ ಅನುಭವಿಸಿದ್ದರು. ಈ ಟೂರ್ನಿಯ ಆರಂಭಿಕ ಪಂದ್ಯಗಳಲ್ಲಿಯೂ ಅವರು ಆಟಕ್ಕೆ ಕುದುರಿರಲಿಲ್ಲ. ಆದರೆ ಈ ಪಂದ್ಯದಲ್ಲಿ ಪುಟಿದೆದ್ದರು. 27 ಎಸೆತಗಳಲ್ಲಿ 52 ರನ್ ಹೊಡೆದರು. 3 ಬೌಂಡರಿ, 5 ಸಿಕ್ಸರ್ ಬಾರಿಸಿದರು.

ಗಿಲ್ ಜೊತೆಗೂಡಿದ ವಾಷಿಂಗ್ಟನ್ ಸುಂದರ್ (55; 32ಎ) ಅವರು ಕೂಡ ಬೌಲರ್‌ಗಳನ್ನು ದಂಡಿಸಿದರು.

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್: 4 ವಿಕೆಟ್‌ಗೆ 210 (20 ಓವರುಗಳಲ್ಲಿ)
ಸುದರ್ಶನ್ ಬಿ ಮುಕೇಶ್ 12 (7ಎ, 4x2)
ಗಿಲ್ ಸಿ ರಾಣಾ ಬಿ ಎನ್‌ಗಿಡಿ 70 (45ಎ, 4x4, 6x5)
ಬಟ್ಲರ್ ಬಿ ಕುಲದೀಪ್ 52 (27ಎ, 4x3, 6x5)
ಸುಂದರ್ ಸಿ ರಾಣಾ ಬಿ ಮುಕೇಶ್ 55 (32ಎ, 4x6, 6x2)
ಗ್ಲೆನ್ ಫಿಲಿಪ್ಸ್ ಔಟಾಗದೇ 14 (9ಎ, 4x1, 6x1)
ರಾಹುಲ್ ತೆವಾಟಿಯಾ ಔಟಾಗದೇ 1 (1ಎ)
ಇತರೆ: 6 (ನೋಬಾಲ್ 1, ವೈಡ್ 5)
ವಿಕೆಟ್ ಪತನ: 1–19 (ಸಾಯಿ ಸುದರ್ಶನ್, 2.1), 2–79 (ಜೋಸ್ ಬಟ್ಲರ್, 7.3), 3–183 (ಶುಭಮನ್ ಗಿಲ್, 17.3), 4–205 (ವಾಷಿಂಗ್ಟನ್ ಸುಂದರ್, 19.3).
ಬೌಲಿಂಗ್: ಮುಕೇಶ್ ಕುಮಾರ್ 4–0–55–2; ಲುಂಗಿ ಎನ್‌ಗಿಡಿ 4–0–24–1; ಅಕ್ಷರ್ ಪಟೇಲ್ 3–0–32–0; ಕುಲದೀಪ್ ಯಾದವ್ 4–0–42–1; ಟಿ.ನಟರಾಜನ್ 4–0–34–0; ವಿಪ್ರಜ್ ನಿಗಮ್ 1–0–23–0
ಡೆಲ್ಲಿ ಕ್ಯಾಪಿಟಲ್ಸ್: 8 ವಿಕೆಟ್‌ಗೆ 209 (20 ಓವರುಗಳಲ್ಲಿ)
ಪಥುಮ್ ಸಿ ತೆವಾಟಿಯಾ ಬಿ ಪ್ರಸಿದ್ಧ 41 (24ಎ, 4x6, 6x1)
ರಾಹುಲ್ ಸಿ ಬಟ್ಲರ್ ಬಿ ಸಿರಾಜ್ 92 (52ಎ, 4x11, 6x4)
ನಿತೀಶ್ ಸಿ ಸಾಯಿ ಬಿ ರಶೀದ್ 5 (6ಎ, 4x1)
ರಿಜ್ವಿ ಬಿ ರಶೀದ್ 0 (1ಎ)
ಡೇವಿಡ್ ಮಿಲ್ಲರ್ ಔಟಾಗದೇ 41 (20ಎ, 4x3, 6x3)
ಅಕ್ಷರ್ ಸಿ ಫಿಲಿಪ್ಸ್ ಬಿ ರಶೀದ್ 2 (3ಎ)
ಸ್ಟಬ್ಸ್ ರನೌಟ್ ಸಾಯಿ 7 (6ಎ)
ವಿಪ್ರಜ್ ಸಿ ಗಿಲ್ ಬಿ ಪ್ರಸಿದ್ಧ 12 (7ಎ, 4x2)
ಕುಲದೀಪ್ ರನೌಟ್ ಬಟ್ಲರ್ 1 (1ಎ)
ಇತರೆ: 8 (ವೈಡ್ 8)
ವಿಕೆಟ್ ಪತನ: 1–76 (ಪಥುಮ್ ನಿಸಾಂಕ, 8.1), 2–101 (ನಿತೀಶ್ ರಾಣಾ, 9.5), 3–101 (ಸಮೀರ್ ರಿಜ್ವಿ, 9.6), 4–134 (ಅಕ್ಷರ್ ಪಟೇಲ್, 13.6), 5–160 (ಟ್ರಿಸ್ಟನ್ ಸ್ಟಬ್ಸ್, 16.4), 6–166 (ಕೆ.ಎಲ್. ರಾಹುಲ್, 16.6), 7–202 (ವಿಪ್ರಜ್ ನಿಗಮ್, 19.2), 8–209 (ಕುಲದೀಪ್ ಯಾದವ್, 19.6)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–52–1; ಕಗಿಸೊ ರಬಾಡ 4–0–32–0, ರಶೀದ್ ಖಾನ್ 4–0–17–3; ಅಶೋಕ್ ಶರ್ಮಾ 3–0–45–0; ಪ್ರಸಿದ್ಧ ಕೃಷ್ಣ 4–0–52–2; ವಾಷಿಂಗ್ಟನ್ ಸುಂದರ್ 1–0–11–0
ಪಂದ್ಯದ ಆಟಗಾರ: ರಶೀದ್ ಖಾನ್.

ಅಮೂಲ್ ಚಕಿತಗೊಳಿಸುವ ಒಂದು ಲಕ್ಷ ಕೋಟಿ ರೂಪಾಯಿ ವಹಿವಾಟು ಮಾಡಿದೆ !

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಆರ್	3	3	0	0	6	2.403
ಪಿಬಿಕೆಎಸ್	3	2	0	1	5	0.637
ಆರ್‌ಸಿಬಿ	2	2	0	0	4	2.501
ಡಿಸಿ	3	2	1	0	4	0.811
ಎಸ್‌ಆರ್‌ಎಚ್	3	1	2	0	2	0.275
ಜಿಟಿ	3	1	2	0	2	-0.270
ಎಲ್‌ಎಸ್‌ಜಿ	2	1	1	0	2	- 0.542
ಎಂಐ	3	1	2	0	2	-0.715
ಕೆಕೆಆರ್	3	0	2	1	1	-1.964
ಸಿಎಸ್‌ಕೆ	3	0	3	0	0	-2.517

ಆರೇಂಜ್ ಕ್ಯಾಪ್–ಯಶಸ್ವಿ ಜೈಸ್ವಾಲ್, ಆರ್‌ಆರ್ (170 ರನ್)
ಪರ್ಪಲ್ ಕ್ಯಾಪ್–ರವಿ ಬಿಷ್ಣೋಯಿ, ಆರ್‌ಆರ್ (7 ವಿಕೆಟ್)

ಬೂಮ್ರಾ ಎಸೆತದಲ್ಲೂ ವೈಭವ್ ಸಿಕ್ಸರ್

ವೈಭವ್

ಗುವಾಹಟಿ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ವಿಶ್ವದ ಅಗ್ರಗಣ್ಯ ಬೌಲರ್ ಆಗಿದ್ದಾರೆ. ಮಂಗಳವಾರ ಬರ್ಸಾಪರ ಕ್ರೀಡಾಂಗಣದಲ್ಲಿ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಡುವ 15ರ ಪೋರ ವೈಭವ್ ಸೂರ್ಯವಂಶಿ ಅವರು ಮುಂಬೈ ಇಂಡಿಯನ್ಸ್ ತಂಡದ ಬೂಮ್ರಾ ಅವರನ್ನು ಯಾವ ರೀತಿ ಎದುರಿಸುತ್ತಾರೆ ಎಂಬ ಕುತೂಹಲ ಮೂಡಿತ್ತು.

ಏಕೆಂದರೆ; ಕಳೆದೆರಡು ವರ್ಷಗಳಿಂದ ವೈಭವ್ ತಮ್ಮ ಅಬ್ಬರದ ಬ್ಯಾಟಿಂಗ್ ಮೂಲಕ ಗಮನ ಸೆಳೆದಿದ್ದಾರೆ. ಆದ್ದರಿಂದ ಇವರಿಬ್ಬರ ಮುಖಾಮುಖಿಯು ಪಂದ್ಯಕ್ಕಿಂತ ಮೊದಲು ಬಹಳಷ್ಟು ಕುತೂಹಲಕ್ಕೆ ಕಾರಣವಾಗಿತ್ತು. ಇದರಲ್ಲಿ ವೈಭವ್ ಕೈಮೇಲಾಯಿತು!

ಹೌದು; ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಬೂಮ್ರಾ ಬೌಲಿಂಗ್ ಆರಂಭಿಸಿದರು. ಪ್ರತಿ ಗಂಟೆಗೆ 131 ಕಿ.ಮೀ ವೇಗದಲ್ಲಿ ಮಧ್ಯದ ಹಾಗೂ ಲೆಗ್ ಸ್ಟಿಕ್ ಗುರಿಯಾಗಿಟ್ಟುಕೊಂಡು ಬಂದ ಮೊದಲ ಎಸೆತವನ್ನು ವೈಭವ್ ಅವರು ಮಿಡ್ ಆನ್ ಮೇಲೆ ಸಿಕ್ಸರ್‌ಗೆತ್ತಿದರು. ನಾಲ್ಕನೇ ಎಸೆತಕ್ಕೂ ಪ್ರೇಕ್ಷಕರ ಗ್ಯಾಲರಿಯತ್ತ ದಾರಿ ತೋರಿಸಿದರು. ಅವರ ಈ ಆಟವು ಕ್ರಿಕೆಟ್ ಪ್ರೇಮಿಗಳ ಮನದಲ್ಲಿ ಅಚ್ಚೊತ್ತಿತು. ನಾನ್‌ಸ್ಟ್ರೈಕರ್ ಬದಿಯಲ್ಲಿದ್ದ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಕೂಡ ಪ್ರಭಾವಿತರಾಗಿದ್ದಾರೆ.

'ಅವರ (ಬೂಮ್ರಾ) ಮೊದಲ ಎಸೆತವನ್ನೇ ವೈಭವ್ ಸಿಕ್ಸರ್ ಹೊಡೆದರು. ಆಗ ನಿನ್ನ ನೈಜ ಹೊಡೆತಗಳನ್ನು ಪ್ರಯೋಗಿಸುತ್ತಿರು ಎಂದು ಹುರಿದುಂಬಿಸಿದೆ. ಬೂಮ್ರಾ ಅವರು ದಿಗ್ಗಜ ಬೌಲರ್. ಅವರ ಎಸೆತಗಳಲ್ಲಿಯೂ ರನ್‌ಗಳನ್ನು ಗಳಿಸಿದಾಗ ವೈಭವ್ ಅವರಿಗಷ್ಟೆ ಅಲ್ಲ, ಉಳಿದ ಬ್ಯಾಟರ್‌ಗಳ ಆತ್ಮವಿಶ್ವಾಸವೂ ಹೆಚ್ಚುತ್ತದೆ. ಬೂಮ್ರಾ ಅವರ ಎಸೆತಗಳನ್ನು ಉತ್ತಮವಾಗಿ ಆಡಿದ ನಂತರ ಉಳಿದೆಲ್ಲ ಬೌಲರ್‌ಗಳ ಎಸೆತಗಳು ಸುಲಭವವೆನಿಸುತ್ತವೆ' ಎಂದು ಯಶಸ್ವಿ ಹೇಳಿದರು.

ಯಶಸ್ವಿ 32 ಎಸೆತಗಳಲ್ಲಿ 10 ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳಿದ್ದ ಅಜೇಯ 77 ರನ್ ಗಳಿಸಿದರು. ವೈಭವ್ 14 ಎಸೆತಗಳಲ್ಲಿ 39 ರನ್ ಹೊಡೆದರು. ಮಳೆಯಿಂದಾಗಿ ವಿಳಂಬವಾಗಿ ಆರಂಭವಾದ ಪಂದ್ಯದಲ್ಲಿ ನಿಗದಿ ಪಡಿಸಲಾಗಿದ್ದ 11 ಓವರ್‌ಗಳಲ್ಲಿ ರಾಜಸ್ಥಾನ ತಂಡವು 3 ವಿಕೆಟ್‌ಗಳಿಗೆ 150 ರನ್ ಗಳಿಸಿತು. ಅದಕ್ಕುತ್ತರವಾಗಿ ಮುಂಬೈ ತಂಡವು 11 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 123 ರನ್‌ಗಳಿಸಿತು.

ಗೆಲುವಿನ ಓಟ ಮುಂದುವರಿಸುವತ್ತ ರಿಷಭ್ ಪಂತ್ ಪಡೆಯ ಚಿತ್ತ

ಕೋಲ್ಕತ್ತಕ್ಕೆ ಮೊದಲ ಜಯದ ಕನಸು

ಕೋಲ್ಕತ್ತ (ಪಿಟಿಐ): ಐಪಿಎಲ್ ಟೂರ್ನಿಯಲ್ಲಿ ಮೊದಲ ಗೆಲುವಿನ ಕನಸು ಕಾಣುತ್ತಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಗುರುವಾರ ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಅಮೋಘ ಲಯದಲ್ಲಿರುವ ವೇಗಿ ಮೊಹಮ್ಮದ್ ಶಮಿ ಅವರ ಬಿರುಗಾಳಿ ದಾಳಿಯನ್ನು ಕೋಲ್ಕತ್ತ ತಂಡದ ಬ್ಯಾಟರ್‌ಗಳು ಎದುರಿಸಬೇಕಿದೆ.

ಈಚೆಗೆ ಸನ್‌ರೈಸರ್ಸ್ ಹೈದರಾಬಾದ್ ಎದುರು ನಡೆದಿದ್ದ ಪಂದ್ಯದಲ್ಲಿ ಶಮಿ 9 ರನ್‌ಗಳಿಗೆ 2 ವಿಕೆಟ್ ಗಳಿಸಿದ್ದರು. ಅವರು ಆ ಪಂದ್ಯದಲ್ಲಿ ಆರಂಭಿಕ ಜೋಡಿ ಅಭಿಷೇಕ್ ಶರ್ಮಾ ಮತ್ತು ಟ್ರಾವಿಸ್ ಹೆಡ್ ಅವರ ವಿಕೆಟ್ ಗಳಿಸಿದ್ದರು. ಶಮಿ ತಮ್ಮ 'ತವರು ಅಂಗಳ'ವಾದ ಈಡನ್ ಗಾರ್ಡನ್‌ನಲ್ಲಿ ಮತ್ತಷ್ಟು ಪ್ರಭಾವಿಯಾಗುವ ನಿರೀಕ್ಷೆಗಳು ಈಗ ಗರಿಗೆದರಿವೆ.

ಸೋಮವಾರ ಇಲ್ಲಿ ನಡೆದಿದ್ದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ವೇಗಿ ಝೇವಿಯರ್ ಬಾರ್ಟ್‌ಲೆಟ್ ಅವರು ಅಮೋಘ ಬೌಲಿಂಗ್ ಮಾಡಿದ್ದರು. ಫಿನ್ ಅಲೆನ್ ಮತ್ತು ಕ್ಯಾಮರಾನ್ ಗ್ರೀನ್ ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದರು. ಆದರೆ ಮಳೆ ಸುರಿದ ಕಾರಣ ಪಂದ್ಯ ರದ್ದಾಗಿ ಉಭಯ ತಂಡಗಳಿಗೂ ತಲಾ ಒಂದು ಅಂಕ ನೀಡಲಾಗಿತ್ತು. ಬುಧವಾರ ಮತ್ತು ಗುರುವಾರ ಸಂಜೆಯೂ ಮಳೆ ಬರುವ ಸಾಧ್ಯತೆಗಳಿವೆ ಎಂದು ಹೇಳಲಾಗಿದೆ.

ಮೊಹಮ್ಮದ್ ಶಮಿ

ಅಜಿಂಕ್ಯ ರಹಾನೆ ನಾಯಕತ್ವದ ಕೋಲ್ಕತ್ತ ತಂಡಕ್ಕೆ ಟೂರ್ನಿಯಲ್ಲಿ ಇದು ನಾಲ್ಕನೇ ಪಂದ್ಯವಾಗಿದ್ದು ಜಯದ ಖಾತೆ ತೆರೆಯುವತ್ತ ಚಿತ್ತ ನೆಟ್ಟಿದೆ. ರಿಂಕು ಸಿಂಗ್, ರೋವ್ಮನ್ ಪೊವೆಲ್, ಗ್ರೀನ್, ಅಲೆನ್, ಟಿಮ್ ಸೀಫರ್ಟ್, ರಾಹುಲ್ ತ್ರಿಪಾಠಿ ಹಾಗೂ ರಚಿನ್ ರವೀಂದ್ರ ಅವರು ಬ್ಯಾಟಿಂಗ್‌ನಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿಲ್ಲ. ಇದರಿಂದಾಗಿ ತಂಡವು ಹಿನ್ನಡೆ ಅನುಭವಿಸುತ್ತಿದೆ. ಬೌಲಿಂಗ್‌ನಲ್ಲಿಯೂ ಸ್ಪಿನ್ನರ್ ವರುಣ್ ಚಕ್ರವರ್ತಿ ಹಾಗೂ ಸುನಿಲ್ ನಾರಾಯಣ್ ಅವರ ಸ್ಪಿನ್ ಮೋಡಿ ನಡೆಯುತ್ತಿಲ್ಲ. ಈ ಲೋಪಗಳನ್ನು ಸರಿಪಡಿಸಿಕೊಂಡು ಕಣಕ್ಕಿಳಿಯುವ ಒತ್ತಡ ತಂಡಕ್ಕೆ ಇದೆ.

ರಿಷಭ್ ಪಂತ್ ನಾಯಕತ್ವದ ಲಖನೌ ತಂಡವು ಆಡಿರುವ ಎರಡು ಪಂದ್ಯಗಳಲ್ಲಿ ಒಂದು ಸೋತು, ಇನ್ನೊಂದರಲ್ಲಿ ಜಯಿಸಿದೆ. ನಾಲ್ಕು ದಿನಗಳ ಹಿಂದೆ ಸನ್‌ರೈಸರ್ಸ್ ಹೈದರಾಬಾದ್ ಎದುರು ಗೆದ್ದಿರುವ ಲಖನೌ ತಂಡವು ಭರ್ತಿ ಆತ್ಮವಿಶ್ವಾಸದಲ್ಲಿದೆ. ರಿಷಭ್ ಅರ್ಧಶತಕ ಹೊಡೆದಿದ್ದರು. ಅದರಿಂದಾಗಿ ತಂಡದ ಮಧ್ಯಮ ಕ್ರಮಾಂಕಕ್ಕೆ ಹೆಚ್ಚಿನ ಬಲ ಬಂದಂತಾಗಿದೆ. ಮಿಚೆಲ್ ಮಾರ್ಷ್, ಏಡನ್ ಮರ್ಕರಂ, ನಿಕೊಲಸ್ ಪೂರನ್, ಅಬ್ದುಲ್ ಸಮದ್, ಆಯುಷ್ ಬಡೋನಿ ಅವರು ತಮ್ಮ ಲಯಕ್ಕೆ ಮರಳಿದರೆ ರನ್ ಹೊಳೆ ಹರಿಯುವುದು ಖಚಿತ.

ಶಮಿ, ಆವೇಶ್ ಖಾನ್, ಎನ್ರಿಚ್ ನಾಕಿಯಾ ಅವರು ಇರುವ ಬೌಲಿಂಗ್ ವಿಭಾಗವು ಬಲಾಢ್ಯವಾಗಿದೆ. ಪವರ್ ಪ್ಲೇನಲ್ಲಿ ವಿಕೆಟ್‌ಗಳನ್ನು ಕಬಳಿಸುವ ಶಮಿ ಸಾಮರ್ಥ್ಯವೇ ತಂಡಕ್ಕೆ ಮುಖ್ಯ ಶಕ್ತಿಯಾಗಿದೆ.

ಇಂದಿನ ಪಂದ್ಯ

ಕೋಲ್ಕತ್ತ ನೈಟ್ ರೈಡರ್ಸ್ V/s ಲಖನೌ ಸೂಪರ್ ಜೈಂಟ್ಸ್
ತಾಣ: ಕೋಲ್ಕತ್ತ,
ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಬಲಾಬಲ

ಒಟ್ಟು ಪಂದ್ಯ 6
ಲಖನೌ ಗೆಲುವು 4
ಕೋಲ್ಕತ್ತ ಜಯ 2

ಕುಸ್ತಿ: ಬೆಳ್ಳಿ ಜಯಿಸಿದ ನಿತೇಶ್

ನವದೆಹಲಿ (ಪಿಟಿಐ): ಭಾರತದ ಗ್ರೀಕೊ–ರೋಮನ್ ಕುಸ್ತಿಪಟುಗಳು ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಒಂದು ಬೆಳ್ಳಿ ಹಾಗೂ ಎರಡು ಕಂಚಿನ ಪದಕ ಗೆದ್ದರು.

ಅನುಭವಿ ಪೈಲ್ವಾನ್ ನಿತೇಶ್ ಸಿವಾಚ್ ಅವರು ಪುರುಷರ 97 ಕೆ.ಜಿ. ವಿಭಾಗದಲ್ಲಿ ರಜತ ಜಯಿಸಿದರು. ಸಚಿನ್ ಹಾಗೂ ಪ್ರಿನ್ಸ್ ಕಂಚಿನ ಪದಕ ಜಯಿಸಿದರು.

ನಿತೇಶ್ ಅವರು ಫೈನಲ್‌ನಲ್ಲಿ 1–7ರಿಂದ ಇರಾನ್‌ನ ಮೊಹಮ್ಮದಾದಿ ಮೊಹಮ್ಮದ್‌ಹದಿ ಸರವಿ ವಿರುದ್ಧ ಪರಾಭವಗೊಂಡರು. ಅದರೊಂದಿಗೆ ಸರವಿ ಅವರು ಸತತ ಎರಡನೇ ಬಾರಿಗೆ ಸ್ವರ್ಣ ತಮ್ಮದಾಗಿಸಿಕೊಂಡರು.

ಪುರುಷರ 67 ಕೆ.ಜಿ. ವಿಭಾಗದ ಕಂಚಿನ ಪದಕಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಸಚಿನ್ 6–5ರಿಂದ ಉಜ್ಬೇಕಿಸ್ತಾನದ ಅಬ್ದುಮಲಿಕ್ ಅಮಿನೊವ್ ವಿರುದ್ಧ ರೋಚಕ ಜಯ ಸಾಧಿಸಿದರು.

ಬೆಳ್ಳಿ ಪದಕ ಜಯಿಸಿದ ನಿತೇಶ್ 'ಎಕ್ಸ್' ಚಿತ್ರ

ಪ್ರಿನ್ಸ್ ಅವರು ಪುರುಷರ 82 ಕೆ.ಜಿ. ವಿಭಾಗದಲ್ಲಿ 10–1ರಿಂದ ತುರ್ಕ್‌ಮೆನಿಸ್ತಾನದ ದೀದರ್ ಅಮನ್ನಝುರೊವ್ ಅವರನ್ನು ಮಣಿಸಿ, ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಭಾರತದ ಆರ್. ವೈಶಾಲಿ

ಜಂಟಿ ಅಗ್ರಸ್ಥಾನಕ್ಕೆ ಏರಿದ ವೈಶಾಲಿ

ಪಾಫೋಸ್ (ಪಿಟಿಐ): ವಿಶ್ವಕಪ್ ವಿಜೇತೆ ಹಾಗೂ ಸ್ವದೇಶದ ಆಟಗಾರ್ತಿ ದಿವ್ಯಾ ದೇಶಮುಖ್ ಅವರನ್ನು ಬುಧವಾರ ಸೋಲಿಸಿದ ಭಾರತದ ವೈಶಾಲಿ ಆರ್. ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನ ನಂತರ ಚೀನಾದ ಝು ಜಿನೆರ್ ಜೊತೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ವೈಶಾಲಿ ಮತ್ತು ಜಿನೆರ್ ತಲಾ 5.5 ಅಂಕ ಗಳಿಸಿದ್ದಾರೆ. ಜಿನೆರ್ ಒಂಬತ್ತನೇ ಸುತ್ತಿನಲ್ಲಿ ರಷ್ಯಾದ ಕ್ಯಾತರಿನಾ ಲಾಗ್ನೊ (4.5) ಅವರನ್ನು ಮಣಿಸಿದರು.

ಅನ್ನಾ ಮುಝಿಚುಕ್ (5) ಮತ್ತು ತಾನ್ ಝೊಂಗ್‌ಇ (3) ನಡುವಣ ಪಂದ್ಯ ಡ್ರಾ ಆಯಿತು. ಕಜಾಕಸ್ತಾನದ ಬಿಬಿಸಾರ ಅಸುನ್ಬಯೇವಾ (5) ಮತ್ತು ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (4) ನಡುವಣ ಆಟವೂ ಡ್ರಾ ಆಯಿತು.

ಓಪನ್ ವಿಭಾಗದಲ್ಲಿ ಉಜ್ಬೇಕಿಸ್ತಾನದ ಆಟಗಾರ ಜಾವೊಖಿರ್ ಸಿಂದರೋವ್ (7) ಅವರು ಮುನ್ನಡೆ ಕಾಪಾಡಿಕೊಂಡಿದ್ದಾರೆ. ಅವರು ಜರ್ಮನಿಯ ಬ್ಲೂಬಾಮ್ ಮಥಾಯಿಸ್ (4) ಜೊತೆ ಡ್ರಾ ಮಾಡಿಕೊಂಡರು. ಭಾರತದ ಪ್ರಜ್ಞಾನಂದ (4) ಮತ್ತು ಚೀನಾದ ವೀ ಯಿ (4) ನಡುವಣ ಸೆಣಸಾಟ ಸಹ ಡ್ರಾ ಆಯಿತು. ಆದರೆ ಅಮೆರಿಕದ ಫ್ಯಾಬಿಯಾನೊ ಕರುವಾನ (4.5) ಅವರನ್ನು ಸೋಲಿಸಿದ ಡಚ್ ಆಟಗಾರ ಅನಿಶ್ ಗಿರಿ 5.5 ಅಂಕಗಳೊಂದಿಗೆ ಎರಡನೇ ಸ್ಥಾನಕ್ಕೇರಿದರು. ಈ ಹಿಂದಿನ ಸುತ್ತಿನಲ್ಲಿ ಅವರು ಪ್ರಜ್ಞಾನಂದ ವಿರುದ್ಧ ಜಯಗಳಿಸಿದ್ದರು.

ಈ ಟೂರ್ನಿ ಗೆಲ್ಲುವ ಆಟಗಾರ ವಿಶ್ವ ಚಾಂಪಿಯನ್ ಪಟ್ಟಕ್ಕಾಗಿ ಹಾಲಿ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಚಾಲೆಂಜರ್ ಆಗಲಿದ್ದಾರೆ.